ಅಧಿಕಾರದ ಪ್ರಶ್ನೆಗಳು



ಇಂಗ್ಲಿಷ್ ಮೂಲ : ವಿವಿಧ ಲೇಖಕರು

ಭಾವಾನುವಾದ : ಕೇಶವ ಶರ್ಮ ಕೆ.

ಅಧಿಕಾರದ ಪ್ರಶ್ನೆಗಳು

ಇಂಗ್ಲಿಷ್ ಮೂಲ : ವಿವಿಧ ಲೇಖಕರು

ಭಾವಾನುವಾದ : ಕೇಶವ ಶರ್ಮ ಕೆ.

ಪ್ರಗತಿ ಪ್ರಕಾಶನ

Adhikarada Prashnegalu

Translated by: Keshava sharma K.
Shantinagara 1St Cross, Near Chowdamma Temple
B.R. Project, Bhadravati Taluk
Shivamoga Dist - 574115
Mob: 94487 30611

Inner Pages: Maplitho
Size: 1/8th Demmy
First impression: 2025
Pages: 192+iv = 196
Price: ₹ 240
Printed at: Sri Vinayaka Printers
Mysore - 570 004
ISBN: 978-81-979088-2-8

ಅಧಿಕಾರದ ಪ್ರಶ್ನೆಗಳು

ಅನುವಾದಕರು: ಕೇಶವ ಶರ್ಮ ಕೆ.
ಮೊ. ೯೪೪೮೭ ೩೦೬೧೧

ಮೊದಲನೇ ಮುದ್ರಣ: ೨೦೨೫
ಪುಟಗಳು: ೧೯೨+iv = ೧೯೬
ಬೆಲೆ: ₹ ೨೪೦
ಮುಖಪುಟ ವಿನ್ಯಾಸ: ಪ್ರಗತಿ ಗ್ರಾಫಿಕ್ಸ್
ಮುದ್ರಣ: ಶ್ರೀ ವಿನಾಯಕ ಪ್ರಿಂಟರ್ಸ್,
ಮೈಸೂರು-೫೭೦ ೦೦೪

Published by
Pragathi Prakashana
Upstair, No.2406, 2407/K-1
1st Cross, Hosabandikeri
K.R.Mohalla, Mysore-570 004
Ph: 0821-4287558

ಪ್ರಕಾಶಕರು
ಪ್ರಗತಿ ಪ್ರಕಾಶನ
ಮಹಡಿ, ನಂ.೨೪೦೬, ೨೪೦೭/ಕೆ-೧
೧ನೇ ಕ್ರಾಸ್, ಹೊಸಬಂಡಿಕೇರಿ
ಕೆ.ಆರ್.ಮೊಹಲ್ಲಾ, ಮೈಸೂರು- ೫೭೦ ೦೦೪
ಫೋ: ೦೮೨೧-೪೨೮೭೫೫೮

ಲೇಖಕರ ಮಾತು

ಜ್ಞಾನ ಮತ್ತು ಸತ್ಯವನ್ನು ಕುರಿತು ಪಶ್ಚಿಮದ ಅನೇಕ ತತ್ವಜ್ಞಾನಿಗಳು ಬೇರೆ ಬೇರೆ ರೀತಿಯಲ್ಲಿ ಮಾತಾಡಿದ್ದಾರೆ. ಸಾಕ್ರೇಟಿಸ್ ಜ್ಞಾನವನ್ನು ಅತ್ಯಂತ ಅಂತಿಮವಾದ ಒಂದು ಸ್ವರೂಪವೆಂದು ಹೇಳುತ್ತಾನೆ. ಅದು ಪರಮೋಚ್ಚವಾದ ಒಂದು ಸ್ಥಿತಿಯೂ ಹೌದು ಎನ್ನುವುದು ಅವನ ಅಭಿಪ್ರಾಯ. ವಿವೇಕ, ಸತ್ಯ ಮತ್ತು ಜ್ಞಾನಕ್ಕೆ ಅವನ ವಾದದದಲ್ಲಿ ಮಹತ್ವದ ಜಾಗವೂ ಇದೆ. ಜ್ಞಾನವನ್ನು ಫುಕೋ ತತ್ವಜ್ಞಾನದ ಹಿನ್ನೆಲೆಯಲ್ಲಿ ವಿವರಿಸುತ್ತಾನೆ. ಅದು ಶಾಸ್ತ್ರದ ತಿಳುವಳಿಕೆಯೂ ಹೌದು. ಅದಕ್ಕೆ ಅವನು ಶಾಸ್ತ್ರೀಯತೆಯ ರೂಪವನ್ನು ಕೊಡುತ್ತಾನೆ. ಅದರಲ್ಲಿ ಚರಿತ್ರೆಯ ಚಿಂತನೆಗಳು ಕೂಡಾ ಇದೆ. ಅವನು ಈ ಪರಿಕಲ್ಪನೆಯನ್ನು ವಿವರಿಸುವಾಗ ಸಂಕಥನ, ಶಾಸ್ತ್ರದ ಭಾಗಗಳು, ಹೇಳಿಕೆಗಳು, ಪ್ರಾಕ್ತನ ಶಾಸ್ತ್ರ, ಧನಾತ್ಮಕ ಚಿಂತನೆಗಳು, ವಸ್ತುನಿಷ್ಟ ಮತ್ತು ವಿಷಯ ನಿಷ್ಟ ಧೋರಣೆಗಳನ್ನು ಕೂಡಾ ಗಮನಿಸಿದ್ದಾನೆ. ಕಾಂಟ್, ಹೆಗೆಲ್, ನೀಶೆ, ಹೈಡೆಗಾರ್, ಮುಂತಾದ ತತ್ವಜ್ಞಾನಿಗಳನ್ನು ಕೂಡಾ ಅವನು ಚರ್ಚೆ ಮಾಡಿದ್ದಾನೆ. ಜ್ಞಾನಕ್ಕೆ ಒಂದು ವಂಶಾವಳಿ ಎನ್ನುವುದು ಇರುತ್ತದೆ. ಅದರ ಜೊತೆಗೆ ಅದು ಪ್ರಾಕ್ತನವಾದ್ದು ಎಂದು ಅವನ ಅಭಿಪ್ರಾಯವಾಗಿದೆ. 1970ರಲ್ಲಿ ಇದರ ಚರ್ಚೆಯನ್ನು ಅವನು ಮಾಡಿದ್ದಾನೆ. ಬರ್ತ್ ಆಫ್ ಕ್ಲಿನಿಕ್, (1963) ಆರ್ಕಿಯಾಲಜಿ ಆಪ್ ನಾಲೆಜ್ (1969) ದ ಆರ್ಡರ್ ಆಫ್ ಥಿಂಗ್ಸ್ (1966) ಕೃತಿಗಳಲ್ಲಿ ಜ್ಞಾನದ ಚರ್ಚೆಗಳು ಬರುತ್ತವೆ. 1971ರಲ್ಲಿ ಅವನು ನೀಶೆ, ಜೀನಿಯಾಲಜಿ, ಹಿಸ್ಟ್ರಿ ಎನ್ನುವ ಲೇಖನವನ್ನೂ ಬರೆದಿದ್ದಾನೆ. ಆಲೋಚನೆಗೆ ಒಂದು ಚರಿತ್ರೆಯು ಇರುತ್ತದೆ ಎನ್ನುವುದು ಫುಕೋನ ವಾದ. ಜ್ಞಾನವನ್ನು ಅವನು ಈ ದೃಷ್ಟಿಯಿಂದ ನೋಡುತ್ತಾನೆ. ಜ್ಞಾನವನ್ನು ಅವನು ಮರು ಪರಿಶೀಲನೆ ಮಾಡುತ್ತಾನೆ. ಅದರ ಜೊತೆಗೆ ಜಾನಕ್ಕೆ ಒಂದು ನಿಯಮವು ಇದೆಯೆನ್ನುವುದು ಅವನ ಅಭಿಪ್ರಾಯ. ಜ್ಞಾನವು ವಿಷಯವನ್ನು ಅರ್ಥ ಮಾಡಿಕೊಳ್ಳಲು ಸಹಾಯವನ್ನು ಮಾಡುತ್ತದೆ. ಜ್ಞಾನಕ್ಕೆ ಒಂದು ವಂಶಾವಳಿಯು ಇರುತ್ತದೆ. ಇದನ್ನು ಅವನು ಚರಿತ್ರೆ ಮತ್ತು ತತ್ವಜ್ಞಾನದ ಹಿನ್ನೆಲೆಯಿಂದ ವಿವರಿಸುತ್ತಾನೆ. ಆಲೋಚನೆ ಎನ್ನುವುದು ಕೂಡಾ ಒಂದು ರಚನೆಯು ಆಗಿದೆ ಎನ್ನುವುದು ಅವನ ಅಭಿಪ್ರಾಯ. ಇದನ್ನು ವಿವರಿಸುವಾಗ ಅವನು ಫ್ರೆಂಚ್ ಪರಂಪರೆಯಲ್ಲಿ ಬಳಕೆಯಾದ ಅನಲ್ ಎನ್ನುವುದನ್ನು ಬಳಸಿಕೊಳ್ಳುತ್ತಾನೆ. ಅದು ಒಂದು ಆಲೋಚನೆಯ ಪರಂಪರೆ. ಅವನ ವಾದಗಳನ್ನು ಇಲ್ಲಿ ಅನುವಾದ ಮಾಡಿದ್ದೇನೆ.

ಜಿಜೆಕ್ ಸಮಕಾಲೀನ ಅತ್ಯಂತ ಮಹತ್ವದ ತತ್ವಜ್ಞಾನಿ ಅವನ ಬಗ್ಗೆ ಹೇಳುವಾಗ ಕೆಲವರು ಅವನನ್ನು ಕಟುವಾಗಿ ಟೀಕೆಯನ್ನು ಕೂಡಾ ಮಾಡಿದ್ದಾರೆ. ಅವನ ಪ್ಯಾರಲಕ್ಸ್‌ವ್ಯೂ ಅತ್ಯಂತ ಮಹತ್ವದ ಕೃತಿ. ಅದನ್ನು ನಾನು ಸ್ಥಾನಾಂತರ ದೃಷ್ಟಿಕೋನಗಳು ಎನ್ನುವ ಹೆಸರಿನಲ್ಲಿ ಪ್ರಕಟ ಮಾಡಿದ್ದೇನೆ. ಅವನ ಕೃತಿಗಳು ಅತ್ಯಂತ ಕಠಿಣ. ಸಾವಿರಾರು ಪುಟಗಳನ್ನು ಅವನು ಬರೆದಿದ್ದಾನೆ. 1949ರಲ್ಲಿ ಹುಟ್ಟಿದ. ದ ಸಬ್ಲೈಮ್, ಪಾರಲಕ್ಸ್ ವ್ಯೂ, ವಯೊಲೆನ್ಸ್, ಲಕಾನ್, ಲೆಸ್ ದೇನ್ ನಥಿಂಗ್, ಅವನ ಮಹತ್ವದ ಕೃತಿಗಳು, ನವ ಮಾರ್ಕ್ಸ್‌ವಾದವು ಅವನ ಆಸಕ್ತಿಯ ಕ್ಷೇತ್ರ. ಮನೋವಿಜ್ಞಾನವನ್ನು ಕೂಡಾ ಬಳಸಿಕೊಳ್ಳುತ್ತಾನೆ.

ಗ್ರಾಮ್ಷಿ ಇಟಲಿಯವನು ಅವನ ಪ್ರಿಸನ್ ನೋಟ್ ಬುಕ್ ಅತ್ಯಂತ ಮಹತ್ವದ ಕೃತಿ. ಜೇಮ್ಸನ್ ಮಾರ್ಕ್ಸ್‌ವಾದಿ ಚಿಂತಕ ಅವನ ಲೇಖನವೂ ಇಲ್ಲಿ ಸೇರಿದೆ.

ಜ್ಞಾನ ಕುರಿತಾಗಿ ಇವರೆಲ್ಲಾ ಬರದುದನ್ನು ಇಲ್ಲಿ ಅನುವಾದ ಮಾಡಿದ್ದೇನೆ. ಆದರೆ ನನಗೆ ಮಿತಿಗಳೂ ಇವೆ. ಕನ್ನಡದ ವಿದ್ಯಾರ್ಥಿ ನಾನು. ನನ್ನ ಗ್ರಹಿಕೆಯು ಈ ಕಾರಣದಿಂದ ಮಿತಿಗೆ ಒಳಪಟ್ಟಿದೆ.

ನನಗೆ ಇಂಗ್ಲೀಷಿನಲ್ಲಿ ಸಹಜವಾಗಿಯೇ ಸಂಪೂರ್ಣ ಹಿಡಿತವಿಲ್ಲ. ನನ್ನ ಗ್ರಹಿಕೆಯ ಮಿತಿಯನ್ನು ಓದುಗರು ಮನ್ನಿಸುತ್ತಾರೆ ಎಂದು ಭಾವಿಸುತ್ತೇನೆ.

ಕೆ.ವಿ.ಯನ್, ಫಣಿರಾಜ್, ಮೇಟಿ ಮಲ್ಲಿಕಾರ್ಜುನ, ಅವಿನಾಶ್, ಕಲ್ಗುಡಿ, ಬರಗೂರು, ಆರ್. ಜಿ.ಹಳ್ಳಿ, ಎಚ್.ಎಲ್ ಪುಷ್ಪ, ಮಾಲಗತ್ತಿ, ಡಾ.ಭಂಡಾರಿಯವರಿಗೆ, ಪ್ರಕಟಿಸುತ್ತಿರುವ ಪ್ರಗತಿ ಪ್ರಕಾಶನಕ್ಕೆ ಕರಡು ತಿದ್ದಿದ ಡಾ. ಪಾಂಡುರಂಗ ಮತ್ತು ಕುಸುಮರಿಗೆ, ಸಬಿತ, ನಹುಷ, ನಿಯತಿಯರಿಗೆ, ಮುಖಪುಟವನ್ನು ರಚಿಸಿದ ಪ್ರಗತಿ ಗ್ರಾಫಿಕ್ಸ್‌ರವರಿಗೆ ಅಂದವಾಗಿ ಮುದ್ರಿಸಿದ ಶ್ರೀ ವಿನಾಯಕ ಪ್ರಿಂಟರ್ಸ್‌ರವರಿಗೆ ಓದುವ ನಿಮಗೆ ವಂದನೆಗಳು.

– ಕೇಶವ ಶರ್ಮ. ಕೆ

ಪರಿವಿಡಿ

1. ಜ್ಞಾನ ಮತ್ತು ಸತ್ಯ – ಫುಕೋ

ಈವತ್ತು ಯಾವುದು ನಮ್ಮ ಸಂಸ್ಕೃತಿ ಮತ್ತು ಅದರ ಅಧ್ಯಯನದ ಮೇಲೆ ಪ್ರಭಾವವನ್ನು ಬೀರಿದೆ ಎನ್ನುವುದನ್ನು ಮೊದಲು ನೋಡಬೇಕು. ಯಾವುದು ಈವತ್ತು ನಮಗೆ ಹೆಚ್ಚು ಉಪಯುಕ್ತವಾಗಿದೆ ಎನ್ನುವುದು ನಮಗೆ ಪ್ರಶ್ನೆಯೂ ಹೌದು. ನಮಗೆ ಈವತ್ತು ವಿಜ್ಞಾನ ಮತ್ತು ಮಾನವಿಕಗಳ ನಡುವೆ ಇರುವ ಮಹತ್ವದ ಕಂದರವಿದೆ. ಯಾವುದು ಈವತ್ತು ವಸ್ತುನಿಷ್ಠವಾದ ವಿಜ್ಞಾನವಾಗಿದೆ ಹಾಗೂ ಅದರ ಸ್ವರೂಪವೇನು ಎನ್ನುವುದರ ಬಗ್ಗೆ ನಮಗೆ ದ್ವಂದ್ವಗಳು ಇವೆ. ಒಂದು ಕಡೆಯಿಂದ ನಾವು ವಸ್ತುನಿಷ್ಠವಾಗಿ ನೋಡುತ್ತೇವೆ. ಅದರ ಬಗ್ಗೆ ನಮಗೆ ಯಾವುದೇ ಪೂರ್ವಾಗ್ರಹಗಳು ಇಲ್ಲವೆಂದು ಹೇಳುತ್ತೇವೆ. ಮತ್ತೊಂದು ಕಡೆಯಿಂದ ನಾವು ಪ್ರಮೇಯಗಳನ್ನು ರಚನೆ ಮಾಡುವಾಗ ಭಾವನಾತ್ಮಕವಾದ ನೆಲೆಯನ್ನು ಮಾತ್ರವೇ ಹೇಳುತ್ತೇವೆ. ಆಧುನಿಕೋತ್ತರವಾದಿಗಳು ಜ್ಞಾನವನ್ನು ಇಬ್ಬಗೆಯಲ್ಲಿ ನಿರೂಪಿಸುತ್ತಾರೆ. ಅವರು ಜ್ಞಾನವನ್ನು ಒಂದು ಕಡೆಯಿಂದ ಸಂವಾದಿ ಎಂದು ಹೇಳುತ್ತಾರೆ ಮತ್ತೊಂದು ಕಡೆಯಿಂದ ಅದನ್ನು ವೈಜ್ಞಾನಿಕ ಒಳನೋಟದಲ್ಲಿ ನೋಡಲು ಯತ್ನವನ್ನು ಮಾಡುತ್ತಾರೆ. ತಾತ್ವಿಕ ಮತ್ತು ರಾಜಕೀಯವಾದ ಗ್ರಹಿಕೆಯು ಹೇಗೆ ಮುಖ್ಯವಾಗುತ್ತದೆ ಎಂದು ನಿರೂಪಿಸುತ್ತಾರೆ. ಸತ್ಯ ಮತ್ತು ಅದರ ವೈರುದ್ಧ್ಯಗಳು ಅವರಿಗೆ ಹೆಚ್ಚು ಮುಖ್ಯವಾಗುತ್ತದೆ. ಅವರು ಅದನ್ನು ನೋಡುವಾಗ ಸಂಸ್ಕೃತಿಯ ಪ್ರಶ್ನೆಯನ್ನು ಮುಂದೆ ಮಾಡುತ್ತಾರೆ. ಅವರಿಗೆ ಅದು ಹೆಚ್ಚು ಮುಖ್ಯವಾಗಿದೆ. ಸಂಸ್ಕೃತಿಯ ಪ್ರಶ್ನೆಯು ಆಧುನಿಕೋತ್ತರವಾದಿಗಳಿಗೆ ವಿಷಯ ನಿಷ್ಟವಾದ ಒಂದು ನಿಲುವು ಹೌದು. ಜ್ಞಾನ ಮತ್ತು ಸಂಸ್ಕೃತಿಯ ಪ್ರಶ್ನೆಯು ಅವರಿಗೆ ಹೆಚ್ಚು ನಿರ್ದಿಷ್ಟವಾದ ಹಾಗೆ ಕಾಣಿಸುವುದಿಲ್ಲ. ಜ್ಞಾನ, ಸಂಸ್ಕೃತಿ ವಸ್ತುನಿಷ್ಟತೆಯು ಹೇಗೆ ಮುಖ್ಯವಾಗುತ್ತದೆ ಎಂದು ಅವರು ಪರಿಶೀಲನೆ ಮಾಡುತ್ತಾರೆ. ಆದರೆ ಇರುವ ಪ್ರಶ್ನೆಗಳು ಬೇರೆಯಿದೆ. ಜ್ಞಾನವನ್ನು ಸಂಸ್ಥೆಗಳು ಉತ್ಪಾದನೆ ಮಾಡುವುದು ಸಂಸ್ಕೃತಿಯ ದೃಷ್ಟಿಯಲ್ಲಿ ಅತ್ಯಂತ ಮುಖ್ಯ. ಆದರೆ ಇಲ್ಲಿ ಜ್ಞಾನ ಎನ್ನುವುದು

ಯಾವ ಮಾನದಂಡವನ್ನು ಇಟ್ಟುಕೊಳ್ಳುತ್ತದೆ ಎನ್ನುವುದು ಕೂಡಾ ಗಮನಾರ್ಹ. ಇಲ್ಲಿ ಅಡರ್ನೊ ಮುಂತಾದವರು ಹೇಳಿದ ಮಾತನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಅವರು ವಿಶ್ವಾತ್ಮಕವಾದ ಜ್ಞಾನಮಾದರಿಗಳು ಎನ್ನುವುದು ಇದೆ. ಅದನ್ನು ಬಿಡಲಾಗುವುದಿಲ್ಲ ಎನ್ನುತ್ತಾರೆ. ಇಲ್ಲಿ ಒಂದು ಸಂಗತಿಯನ್ನು ಹೇಳಬೇಕಾಗುತ್ತದೆ. ನಾವು ಬೇರೆ ಭಾಷೆಯು ಗೊತ್ತಿಲ್ಲವಾದರೆ ಹೇಗೆ ವರ್ತಿಸುತ್ತೇವೆ? ಗೊತ್ತಿಲ್ಲ. ಇದೇ ಸಮಸ್ಯೆಯು ನಮ್ಮ ಜ್ಞಾನದಲ್ಲಿ ಉಂಟಾಗುತ್ತದೆ. ನಮಗೆ ಗೊತ್ತಿರುವುದನ್ನು ನಾವು ನಮಗೆ ತಿಳಿದ ವಿಷಯದಲ್ಲಿ ಹೇಳುತ್ತೇವೆ. ನಮಗೆ ಗೊತ್ತಿರುವುದು ಅಷ್ಟು ಮಾತ್ರವೆ. ಅದನ್ನು ಹೇಳುತ್ತೇವೆ. ಸತ್ಯ ಮತ್ತು ಸುಳ್ಳು ಎನ್ನುವುದು ಹೇಗೆ ಇರುತ್ತದೆ ಎಂದರೆ ಒಂದು ಗೆರೆಯ ಥರ. ಯಾವುದನ್ನು ನಾವು ಸತ್ಯ ಮತ್ತು ಅದರ ಮೌಲ್ಯವೆಂದು ಹೇಳುತ್ತೇವೆ? ಸತ್ಯ ಮತ್ತು ಅದರ ಮೌಲ್ಯಗಳು ನಮಗೆ ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಥರ ಇರುತ್ತದೆ. ಸತ್ಯದ ಪ್ರಮಾಣಗಳು ಬೇರೆಯಾಗುತ್ತವೆ. ಸತ್ಯವನ್ನು ಆದರೆ ಸತ್ಯವು ಇಲ್ಲವೇ ಇಲ್ಲವೆಂದು ಹೇಳಲು ಆಗುವುದೂ ಇಲ್ಲ. ಈವತ್ತು ನಾವು ಹೇಳುತ್ತಿರುವ ಸತ್ಯೋತ್ತರ ಅಂದರೆ ಏನು? ಸತ್ಯವನ್ನು ನಾವು ನಮಗೆ ಬೇಕಾದಂತೆ ತಿರುಗಿಸುತ್ತಿದ್ದೇವೆ ಎಂದು ಅರ್ಥ. ಹಾಗೆ ನೋಡಿದರೆ ಸತ್ಯ ಎನ್ನುವುದು ನಮಗೆ ಅಸೈದ್ಧಾಂತಿಕವಾದ ಪ್ರಶ್ನೆಯು ಅಲ್ಲ. ದೇಹವು ಇರುವುದು ಸತ್ಯ. ಮನಸ್ಸು ಇರುವುದೂ ಸತ್ಯ. ಸರಿಯಾದ ಜ್ಞಾನವು ನಮಗೆ ಇಲ್ಲವಾದರೆ ಮಾತ್ರವೇ ನಾವು ಅದನ್ನೂ ಅನುಮಾನಿಸುತ್ತೇವೆ. ಸಂಸ್ಕೃತಿ ಮತ್ತು ಅದರ ಅಧ್ಯಯನಗಳು ಹೇಗೆ ಈವತ್ತು ದೇಹವನ್ನು ಒಂದು ಮಾನದಂಡವಾಗಿಸಿಕೊಂಡಿದೆ ಎಂದೂ ನೋಡಬೇಕಾಗುತ್ತದೆ. ನಮಗೆ ಶರೀರವಿದೆ. ಅದರ ಶಾಸ್ತ್ರವೂ ಇದೆ. ನಮ್ಮ ವಸಾಹತೋತ್ತರ ಅಧ್ಯಯನಗಳು ಇಟ್ಟುಕೊಂಡ ಮಾನದಂಡವನ್ನು ಯಾಕೆ ಮರುಪರಿಶೀಲಿಸಬೇಕು ಎನ್ನುವುದನ್ನೂ ಇಲ್ಲಿ ಗಮನಿಸುವುದು ಅತ್ಯಂತ ಅವಶ್ಯಕ. ವಸಾಹತೀಕರಣ ಮತ್ತು ಅದರ ಸಂವಾದಗಳು ಪ್ರಾರಂಭವಾಗುವುದೇ ವಸಾಹತು ಮತ್ತು ಅದರ ಅಧಿಕಾರದ ಚರ್ಚೆಯಿಂದ. ಆದರೆ ಅದು ವಿಶ್ವಾತ್ಮಕವಾದ ಕೆಲವು ಲಕ್ಷಣಗಳನ್ನು ಬಿಡುತ್ತದೆ. ಹೇಗೆ ಕಾಲೋನಿಗಳು ಉಂಟಾಗುತ್ತವೆ ಎನ್ನುವುದನ್ನು ಬೇರೆ ರೀತಿಯ ಮಂಡಿಸಲು ಸಾಧ್ಯವಿದೆ. ಇಲ್ಲಿ ಕಾಲೋನಿಗಳು ಮತ್ತು ಅವುಗಳ ನಿರ್ಮಾಣವೇ ಪ್ರಶ್ನೆ. ಗಂಡು ಹೆಣ್ಣನ್ನು ಕಾಲೋನಿ ಮಾಡುವುದು, ಮೇಲುವರ್ಗವು ಕೆಳವರ್ಗವನ್ನು ಕಾಲೋನಿ ಮಾಡುವುದು ಸಮಸ್ಯೆಯೂ ಆಗುತ್ತದೆ. ಈ ನಿಲುವುಗಳನ್ನು ನಾವು ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಅದಕ್ಕೆ ಒಂದು ತಾತ್ವಿಕವಾದ ಆಯಾಮವೂ ಇದೆ. ಅದು ಅಧಿಕಾರ ಮತ್ತು ಅವುಗಳ ರೂಪಾಂತರದಲ್ಲಿ ಇದೆ.

ಇದನ್ನು ಅಂದರೆ ವಸಾಹತು ಅಧ್ಯಯನವನ್ನು ನಾವು ಈಗ ಬರೀ ಒಂದು ರೂಪದಲ್ಲಿ ನೋಡಲು ಆಗುವುದೂ ಇಲ್ಲ. ಯಾಕೆ ಅತ್ಯಂತ ವೇಗವಾಗಿ ನಮ್ಮ ದೇಹ ಮತ್ತು ಅದರ ಸ್ವರೂಪವು ಬದಲಾಯಿತು ಮತ್ತು ಇದ್ದಕ್ಕಿದ್ದಂತೆ ಯಾವುದು

ನಮ್ಮನ್ನು ಬದಲಿಸಿದೆ ಮುಂತಾದವುಗಳನ್ನು ನೋಡಬೇಕಾಗುತ್ತದೆ. ಭಾರತವು ಅತ್ಯಂತ ಪವಿತ್ರವಾಗಿತ್ತು ಮತ್ತು ಅದನ್ನು ಬ್ರಿಟೀಷರು ಹಾಳು ಮಾಡಿದರೆಂದು ಹೇಳುವುದು ಸೂಕ್ತವಲ್ಲ. ಅದನ್ನು ಬೇರೆ ಥರ ನೋಡಬೇಕಾಗುತ್ತದೆ.

ಸೂಡೋ ಸ್ತ್ರೀವಾದವು ತನ್ನ ವಾದವನ್ನು ಮಂಡಿಸುವಾಗ ತಳೆಯುವ ನಿಲುವನ್ನು ಈ ದೃಷ್ಟಿಯಿಂದಲೇ ಪ್ರಶ್ನೆ ಮಾಡಬೇಕಾಗುತ್ತದೆ. ಅದು ತಪ್ಪು ಹೆಜ್ಜೆಯನ್ನು ಇಟ್ಟಿದೆ. ಒಂದು ಹಂತದಲ್ಲಿ ಜೀವ ವಿಜ್ಞಾನವು ಉಳಿದ ವಿಜ್ಞಾನಕ್ಕಿಂತ ಬೇರೆಯಾದ ನಿಲುವನ್ನು ತಳೆಯಿತು. ಅದು ಗಣಿತ ಮತ್ತು ಭೌತಶಾಸ್ತ್ರವನ್ನು ಹೊರತುಪಡಿಸಿದ ಆಲೋಚನೆಯೂ ಆಗಿತ್ತು. ಅಂದರೆ ಗಣಿತವನ್ನು ನೋಡಿದ ಥರ ಜೀವ ವಿಜ್ಞಾನವನ್ನು ನೋಡುವುದು ಸಾಧ್ಯವಿರಲಿಲ್ಲ, ಆದರೆ ಇಲ್ಲಿನ ಪ್ರಶ್ನೆಯೆಂದರೆ ಜೀವ ವಿಜ್ಞಾನವನ್ನು ಒಂದು ಹಂತದಲ್ಲಿ ಒಂದು ವಿವರಣೆಯಾಗಿ ನೋಡಲಾಯಿತು. ಆದರೆ ಅದು ವಿಕಾಸವನ್ನು ನೋಡಿದ ಮತ್ತು ಅದನ್ನು ಗ್ರಹಿಸಿದ ಕ್ರಮದಲ್ಲಿಯೇ ಶಾಸ್ತ್ರಭಾಗದ ಸಮಸ್ಯೆಯು ಇದೆ ಎಂದು ಹೇಳಲಾಯಿತು. ಪ್ರಾಣಿಗಳು ಮತ್ತು ಮನುಷ್ಯರು ಎನ್ನುವ ವ್ಯತ್ಯಾಸವನ್ನು ಮಾಡುವಾಗ ಸಮಸ್ಯೆಯು ಬಂದಿತು. ವಿಕಾಸಕ್ಕೂ ನಾಗರಿಕತೆಗೂ ಯಾವ ಸಂಬಂಧವು ಇದೆ ಎಂದು ವಿಶ್ಲೇಷಣೆ ಮಾಡುವಾಗ ಸೋತಿತು ಎಂದು ಹೇಳುತ್ತಾರೆ. ವಿಶ್ವ ಮತ್ತು ಮನುಷ್ಯ ವರ್ಗಕ್ಕೆ ಯಾವ ಸಂಬಂಧ ಇದೆ ಎನ್ನುವುದೂ ತತ್ವದ ಪ್ರಶ್ನೆ. ಆದರೆ ಇದನ್ನು ನೋಡುವಾಗ ಕೆಲವರು ಮಾತ್ರವೇ ವಿಶ್ವಾತ್ಮಕತೆ ಮತ್ತು ಮನುಷ್ಯರು ಎಂದು ಮಾತಾಡಿದರು. ದೇಹ ಮತ್ತು ವಿಕಾಸವನ್ನು ಹೇಗೆ ನೋಡಲಾಗುತ್ತದೆ ಎನ್ನುವುದು ಮುಖ್ಯ. ವಿಕಾಸ ಮತ್ತು ಲಾಜಿಕ್ ಎನ್ನುವುದೂ ಇಲ್ಲಿ ಮುಖ್ಯವಾಯಿತು. ಆದರೆ ಈ ತರ್ಕವನ್ನು ಮಂಡಿಸುವುದು ಹೇಗೆ ಎನ್ನುವುದು ಅತ್ಯಂತ ಮುಖ್ಯ. (ವಾಲ್ಟರ್ ಫ್ರೀಡ್ಮನ್ 2007 ಕ್ರಿಟಿಕ್ ಆಫ್ ಥಿಯರಿ ಆಫ್ ಎವ್ಯೂಲುಷನ್ ಪುಟ 5) ಯಾವ ಅಂಶವನ್ನು ಗಮನಿಸಲಾಗುತ್ತಿತ್ತೋ ಅದರದ್ದೇ ಆದ ಸಮಸ್ಯೆಗಳೂ ಇದ್ದವು. ಅದು ಬೇರೆ ಪ್ರಶ್ನೆ. ಆದರೆ ತರ್ಕ ಮತ್ತು ಗಣಿತ ಬಿಟ್ಟು ನಡೆದ ಅಧ್ಯಯನವು ಇದು. ಡಾರ್ವಿನ್ನನ ನಿಲುವು ಸರಿಯಾಗಿರಲಿಲ್ಲವೆಂದು ಫ್ರೀಡ್ಮನ್ ಹೇಳುತ್ತಾನೆ ಒಂದು ಪೂರ್ವಾಗ್ರಹವು ಕೆಲಸವನ್ನು ಮಾಡಿದೆ ಎಂದು ಅವನ ಅಭಿಪ್ರಾಯವಾಗಿದೆ. ಡಾರ್ವಿನ್ ಯಾವುದೇ ಅಂಕಿ ಅಂಶಗಳನ್ನು ತೆಗೆದು ಕೊಂಡಿಲ್ಲವೆನ್ನುವುದು ಮತ್ತೊಂದು ನಿಲುವು.

ಹಾಗಿದ್ದರೆ ಯಾರು ಈ ಯಜಮಾನ ರೂಪದ ಸೂಚಕರು ಎಂದು ಯೋಚಿಸುವುದು ಇಲ್ಲಿ ಸೂಕ್ತ. ಇದೇ ಪ್ರಶ್ನೆಯನ್ನು ಹೀಗೆ ಕೇಳಬೇಕು: ಈ ಯಜಮಾನ ಅಂದರೆ ಯಾರು? ಏನು ಈ ಯಜಮಾನರ ಕಥನಗಳು? ಲಕಾನ್ ಒಂದು ಅರ್ಥದಲ್ಲಿ ಅತ್ಯಂತ ಕನಿಷ್ಟವಾದ ಅಂತರವು ಕೆಲವು ಮಾನದಂಡವನ್ನು ಇಟ್ಟುಕೊಳ್ಳುತ್ತದೆ ಎಂದು ಹೇಳುತ್ತಾನೆ ಅವನು ಅಂತರವನ್ನು ಗುಣ ಎನ್ನುವ ಅರ್ಥದಲ್ಲಿಯೂ ಬಳಸುತ್ತಾನೆ. ಇದರ ಕುರಿತು ಒಂದು ಉದಾಹರಣೆಯನ್ನು

ಕೊಡಬಹುದು: ಪರೀಕ್ಷೆಯಲ್ಲಿ ನಾವು ವಿದ್ಯಾರ್ಥಿಗಳಿಗೆ ಅವರನ್ನು ಪರೀಕ್ಷೆ ಮಾಡಲು ಕೆಲವು ಪ್ರಶ್ನೆಗಳನ್ನು ಕೊಡುತ್ತೇವೆ. ಅದಕ್ಕೆ ನಾವು ಸರಿಯಾದ ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ. ಪ್ರಶ್ನೆಯನ್ನು ಕೊಟ್ಟ ನಮಗೆ ಅದರ ಉತ್ತರವೂ ಗೊತ್ತಿರುತ್ತದೆ. ಆದರೆ ವಿದ್ಯಾರ್ಥಿಯು ಕೊಡುವ ಉತ್ತರವು ಬೇರೆ ರೀತಿಯಲ್ಲಿಯೂ ಇರಬಹುದು. ಅಂದರೆ ಅವನು ಕೊಡುವ ಉತ್ತರವು ನಾವು ಗ್ರಹಿಸಿದ ಉತ್ತರದ ಹತ್ತಿರವಿದ್ದರೆ ಅದಕ್ಕೆ ನಾವು ಅಂಕವನ್ನು ಕೊಡುತ್ತೇವೆ. ಇಲ್ಲಿ ಯಾವುದನ್ನು ಮಾನದಂಡವನ್ನು ಮಾಡುತ್ತೇವೆ? ಪ್ರಶ್ನೆ ಮತ್ತು ಅದರ ಉತ್ತರವು ಒಂದು ಸಾಂಕೇತಿಕ ವಿಧಾನವೂ ಆಗಿದೆ. ಪ್ರಶ್ನೆ ಮತ್ತು ಉತ್ತರ ಎನ್ನುವುದು ನಮಗೆ ಅಂತರವನ್ನು ಹೇಳುತ್ತದೆ. ಇದರಲ್ಲಿ ಯಾವುದು ನಿಜವಾದ ಮಾನದಂಡವು ಆಗಿದೆ ಎನ್ನುವುದು ಮಾತ್ರವೇ ಪ್ರಶ್ನೆಯು ಆಗುತ್ತದೆ. ಪ್ರಶ್ನೆ ಮತ್ತು ಉತ್ತರವು ಒಂದು ಮಧ್ಯೆ ಒಂದು ಅವಕಾಶವನ್ನು ಮಾಡುತ್ತದೆ. ಉತ್ತರ ಬರೆದವನು ಮತ್ತು ಪ್ರಶ್ನೆ ಕೇಳಿದವರ ನಡುವೆ ಇದು ಆಗುತ್ತದೆ. ಇದನ್ನು ಇನ್ನೊಂದು ಥರ ನೋಡಬಹುದು: ಪ್ರಜಾಪ್ರಭುತ್ವದಲ್ಲಿ ಮತದಾನ ಒಂದು ಲಾಟರಿಯು ಇದ್ದಂತೆ. ನಾವು ಮತವನ್ನು ಹಾಕಿದ್ದೇವೆ. ಆದರೆ ಮತವನ್ನು ಚಲಾಯಿಸದ ನಾವು ಮತ ಚಲಾಯಿಸಿದ ಅಭ್ಯರ್ಥಿಯು ಗೆಲ್ಲುತ್ತಾನೆ ಎಂದು ಹೇಳಲು ಬರುವುದಿಲ್ಲ. ಯಾರು ಗೆಲ್ಲುತ್ತಾರೆ ಎಂದು ಭಾವಿಸಲು ಸಾಧ್ಯವಿಲ್ಲ. ಅಭ್ಯರ್ಥಿಗಳಲ್ಲಿ ಅತ್ಯಂತ ಕಡಿಮೆ ಅಂತರವೂ ಇರಲು ಸಾಧ್ಯ. ಇದನ್ನು ನಾವು ಖಾಲಿಯಾದ ಜಾಗವೆಂದೂ ಕರೆಯಬಹುದು. ಮಧ್ಯೆ ಒಂದು ಶೂನ್ಯತೆಯು ಇರುತ್ತದೆ.

ಹಿಂದೆ ಇದ್ದ ಸಮಾಜ ಮತ್ತು ಈವತ್ತು ಇರುವ ಸಮಾಜದ ನಡುವೆ ವ್ಯತ್ಯಾಸಗಳಿವೆ. ಆಧುನಿಕ ಸಮಾಜವು ದೈವ ಅಥವಾ ರಾಜ ಕೇಂದ್ರಿತವಲ್ಲ. ಈವತ್ತು ನಮಗೆ ವಿವಿಧ ರೀತಿಯ ಅಸ್ತಿತ್ವಗಳು ಇವೆ. ಆದ್ದರಿಂದ ಜನರು ಮತ್ತು ಅವರ ಸ್ವಭಾವಗಳು ಆಧುನಿಕ ಜಗತ್ತಿನಲ್ಲಿ ಬೇರೆಯಾಗಿದೆ. ಅದನ್ನು ಈವತ್ತು ಭಿನ್ನವಾದ ಹೆಸರಿನಿಂದ ಕರೆಯುತ್ತೇವೆ. ನಮಗೆ ಈವತ್ತು ಬೇರೆ ಬೇರೆ ರೂಪಗಳು ಮತ್ತು ಸ್ವಾತಂತ್ರ್ಯಗಳು ಇವೆ. ನಮಗೆ ಇರುವ ಬಾಹ್ಯವೂ ಹಿಂದೆ ಇದ್ದವರಿಗೆ ಇದ್ದ ಬಾಹ್ಯವೂ ಭಿನ್ನವಾಗಿದೆ. ನಮಗೆ ಇರುವ ಆಧುನಿಕ ವ್ಯವಸ್ಥೆಗಳು ಈ ದೃಷ್ಟಿಯಿಂದ ಬೇರೆಯಾಗಿವೆ. ನಮ್ಮ ಸಾರ್ವಜನಿಕವಾದ ಅಸ್ತಿತ್ವವು ಹಿಂದೆ ಇದ್ದ ಜನರ ಸಾರ್ವಜನಿಕವಾದ ಅಸ್ತಿತ್ವವು ಬೇರೆಯಾಗಿದೆ. ಇಲ್ಲಿ ನಾವು ಮತ್ತೊಂದು ವಿಚಾರವನ್ನು ಹೇಳಬೇಕಾಗಿದೆ. ನಮಗೆ ಈಗ ಬಹಳ ಬೇಗನೆ ಬೇರೆ ಬೇರೆ ಸೌಲಭ್ಯಗಳು ಸಿಗುತ್ತವೆ. ಬೆಂಕಿ ಪೆಟ್ಟಿಗೆಯನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು: ಒಲೆಯನ್ನು ಈವತ್ತು ನಾವು ಲೈಟರ್ ಬಳಸುತ್ತಾ ಉರಿಸುವುದು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ವಾಸ ಮಾಡುತ್ತಿರುವ ನಾವು ಈವತ್ತು ಸಾರ್ವಜನಿಕವಾಗಿ ಅಭಿಪ್ರಾಯವನ್ನು ಹೇಳುವ ಸ್ವಾತಂತ್ರ್ಯವು ಇದೆ. ಅದರ ಜೊತೆಗೆ ನಮಗೆ ಮತವನ್ನು ಚಲಾಯಿಸುತ್ತೇವೆ. ನಾವು ಈವತ್ತು ನಮಗೆ ಬೇಕಾದ ಆಚರಣೆಯನ್ನು ಆಚರಿಸಬಲ್ಲೆವು. ಆದ್ದರಿಂದ ನಮ್ಮ ಸಾರ್ವಜನಿಕವಾದ

ಅಸ್ತಿತ್ವ ಮತ್ತು ಅದರ ಮಾದರಿಗಳು ಬೇರೆಯಾಗುತ್ತದೆ. ಪ್ರಜಾಪ್ರಭುತ್ವ ಮತ್ತು ಅದರ ತಾತ್ವಿಕ ದೃಷ್ಟಿಕೋನವು ಬೇರೆಯಾಗಿದೆ ಎಂದು ಲೆಪಾರ್ಟ್ ಹೇಳುತ್ತಾನೆ. ಆಧುನಿಕ ಜಗತ್ತು ಮತ್ತು ಅದರ ಸ್ವಾತಂತ್ರ್ಯದ ಪರಿಕಲ್ಪನೆಯು ಬೇರೆಯಾಗಿದೆ. ಈವತ್ತು ನಾವು ಮಾನವ ಹಕ್ಕುಗಳು ಕುರಿತು ಚೆನ್ನಾಗಿ ಮಾತಾಡಬಲ್ಲೆವು. ಅವನು ಹತ್ತೊಂಬತ್ತನೆಯ ಶತಮಾನದ ಅನಂತರ ಉಂಟಾದ ಬದಲಾವಣೆಯನ್ನು ಹೇಳುತ್ತಾನೆ. ಹತ್ತೊಂಬತ್ತನೆಯ ಶತಮಾನದ ಅನಂತರ ಸಂಕಥನಗಳು ಮತ್ತು ಅದರ ಮಾದರಿಗಳು ಬದಲಾದವು ಎಂದು ವಿವರಿಸುತ್ತಾನೆ. ಹೊಸ ಸಮಾಜ ಮತ್ತು ಅದರ ಪ್ರಾತಿನಿಧಿಕತೆಯು ಹೇಗೆ ಬದಲಾಯಿತು ಎಂದು ಮನು ಹೇಳುತ್ತಾನೆ. ಕಾನೂನು ಮತ್ತು ಅದರ ಆಯಾಮಗಳು ಹೇಗೆ ವ್ಯತ್ಯಾಸವಾದವು ಎಂದೂ ವಿವರಿಸುತ್ತಾನೆ. ಕಾನೂನು ಬದಲಾಯಿತು. ಅದರ ಜೊತೆಗೆ ನಮಗೆ ಜ್ಞಾನ ಮತ್ತು ಅದರ ರೂಪಗಳೂ ಭಿನ್ನವಾದವು. ಅಧಿಕಾರ ಎನ್ನುವುದು ಪ್ರಜಾಪ್ರಭುತ್ವದಲ್ಲಿ ಎರಡು ಥರ. ಒಂದು ಸಂವಾದಿಯಾದದ್ದು. ಮತ್ತೊಂದು ಸಂವಿಧಾನಾತ್ಮಕವಾದದ್ದು. ಪ್ರಜಾಪ್ರಭುತ್ವದಲ್ಲಿ ಅಧಿಕಾರವು ನಡೆಸುವ ಸಂಕಥನಗಳು ಭಿನ್ನವಾದದ್ದು ಎಂದು ಅವನು ಪ್ರತಿಪಾದಿಸುತ್ತಾನೆ. (ಕ್ಲಾಡೆ ಲೆಫಾರ್ಟ್ 1986 ದಿ ಪೊಲಿಟಿಕಲ್ ಫಾರ್ಮ್ ಆಫ್ ಮೊಡರ್ನ್ ಸೊಸೈಟಿ ಎಂ.ಐಟಿ ಪ್ರೆಸ್‌ಪುಟ 299) ಲಿಯೋಸ್ಟ್ರಾಸ್ ಕೂಡಾ ಚರಿತ್ರೆ, ಮನುಷ್ಯನ ಹಕ್ಕುಗಳು ಮತ್ತು ರಾಜಕಾರಣವನ್ನು ಕುರಿತು ಹೇಳುತ್ತಾನೆ. ಹಾಗೆ ನೋಡಿದರೆ ರಾಜಕಾರಣ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಹೇಗೆ ರಾಜಕಾರಣ ಮಾಡಲಾಗಿದೆ ಎಂದೂ ವಿವರಿಸುತ್ತಾನೆ. ಲೆಫಾರ್ಡ್ ಮತ್ತೊಂದು ಮಾತನ್ನು ಹೇಳುತ್ತಾನೆ. ಅವನ ಪ್ರಕಾರ ಮನುಷ್ಯ ಮತ್ತು ಅವನ ಹಕ್ಕುಗಳು ಹೇಗೆ ರಾಜಕೀಯವಾಗಿದೆ ಎಂದು ನೋಡಬೇಕಾಗುತ್ತದೆ. ಆದರೆ ಕೆಲವು ವಿಚಾರಗಳಿಗೆ ಚರಿತ್ರೆಯ ಆಯಾಮವೂ ಇದೆ ಎನ್ನುವುದು ಸ್ಪಷ್ಟ. ನಮ್ಮ ಹಿಂದಿನವರು ನಂಬಿದ ವಿವರಗಳು ಬೇರೆ ಇವೆ. ಅವರು ಆಚರಣೆಗಳನ್ನು ನಂಬಿದರು ದೇವರನ್ನು ಪೂಜೆ ಮಾಡಿದರು. ಅದೃಷ್ಟವಿದ್ದರೆ ನಮಗೆ ಒಳ್ಳೆಯುದಾಗುತ್ತದೆ ಎಂದು ತಿಳಿದುಕೊಂಡರು. ದೇವರು ಮತ್ತು ಅವನ ಯಜಮಾನಿಕೆಯನ್ನು ಮನುಷ್ಯರು ಅಂಗೀಕರಿಸಿದ್ದನ್ನು ಹೆಗೆಲ್ ಕೂಡಾ ಹೇಳಿದ್ದಾನೆ. ದೇವರು ಮತ್ತು ಅವನ ಯಜಮಾನಿಕೆಯು ಒಂದು ಥರವಿರುತ್ತದೆ. ಆದರೆ ಪ್ರಭುತ್ವ ಮತ್ತು ಅದರ ಸ್ವರೂಪವು ಬೇರೆ ಥರ ಇರುತ್ತದೆ.

ಈ ಮೊದಲು ಹೇಳಿದಂತೆ ಯಜಮಾನರು ನಾವು ಕೊಡುವ ಕಾಣಿಕೆಯನ್ನು ಸ್ವೀಕಾರ ಮಾಡುತ್ತಾರೆ. ಕಾಣಿಕೆಯನ್ನು ಅರ್ಪಿಸುವವರು ನಾವು. ದೇವರು ನಾವು ಕೊಟ್ಟ ಕಾಣಿಕೆಯನ್ನು ಸ್ವೀಕಾರ ಮಾಡುತ್ತಾನೆ. ಆದರೆ ಅವನು ನಮ್ಮ ಜೊತೆಗೆ ವಸ್ತುಗಳನ್ನು ವಿನಿಮಯ ಮಾಡಲಾರ. ಕಾಣಿಕೆ ಎನ್ನುವುದು ನಮಗೆ ಏಕಮುಖವಾದದ್ದು.

ಬಂಡವಾಳವಾದ ಮತ್ತು ಅದರ ಕೆಲವು ಆಟಗಳನ್ನು ನಾವು ಇಲ್ಲಿ ಹೇಳಬೇಕಾಗುತ್ತದೆ. ಅದು ಮಾರುಕಟ್ಟೆಯಲ್ಲಿ ಕೆಲವು ಆಟಗಳನ್ನು ಆಡುತ್ತದೆ. ನಾವು ಕೊಡುವ ಹಣ ಮತ್ತು ಅದು ಕೊಡುವ ವಸ್ತುಗಳ ನಡುವೆ ಸರಿಯಾದ ರೂಪವು ಇಲ್ಲವಾಗಿದೆ. ಒಂದು ಪ್ಲಾಸ್ಟಿಕ್ ಕೊಡಕ್ಕೆ ಅದು ಮಾಡುವ ವೆಚ್ಚವು ನಲುವತ್ತು ರೂಪಾಯಿ ಇದ್ದರೆ ನಾವು ಅದಕ್ಕೆ ಕೊಡುವ ಹಣ ನೂರಿಪ್ಪತು ರೂಪಾಯಿಗಳು. ಆದರೆ ಮೇಲಿಂದ ಮೇಲೆ ನಾವು ನೋಡಿದರೆ ನಮಗೆ ಇದರ ವ್ಯತ್ಯಾಸವು ತಿಳಿಯುತ್ತದೆ. ನಾವು ಹಣವನ್ನು ಕೊಟ್ಟಿದ್ದಕ್ಕೆ ಅವರು ನಮಗೆ ಕೊಡವನ್ನು ಕೊಡುತ್ತಾರೆ. ಆದರೆ ಇಲ್ಲಿ ನಮಗೆ ಕೊಡವು ಸಿಕ್ಕಿತು ಎನ್ನುವ ಭಾವನೆಗಳು ಬರುತ್ತದೆ. ಅದರಿಂದ ನಾವು ತೃಪ್ತಿಯನ್ನು ಹೊಂದುತ್ತೇವೆ. ಆದರೆ ಇಲ್ಲಿ ವಿನಿಮಯಕ್ಕೆ ಒಂದು ಮುಖವಾಡವು ಇರುತ್ತದೆ. ಇದರಲ್ಲಿ ಇನ್ನೊಂದು ಸಂಗತಿಯು ಇದೆ. ಹಣವು ಇಲ್ಲಿ ವಿನಿಮಯವಾಗುತ್ತದೆ. ಅದರ ಜೊತೆಗೆ ಇದರಲ್ಲಿ ಸಮಾಜ ಮತ್ತು ಅದರ ಸಂಬಂಧವು ಭಿನ್ನವಾಗುತ್ತದೆ. ಆದರೆ ಇಲ್ಲಿ ಯಜಮಾನ ಮತ್ತು ಅವನ ಸಂಕೇತಗಳು ಭಿನ್ನವಾಗಿರುತ್ತವೆ.

ಲಕಾನ್ ವಾದವನ್ನು ನಾವು ಇಲ್ಲಿ ನಾವು ಮತ್ತೊಮ್ಮೆ ಯೋಚನೆ ಮಾಡಬೇಕಾಗಿದೆ. ಅವನು ವಿಷಯನಿಷ್ಟವಾದ ಸಂಬಂಧಗಳನ್ನು ಹೇಳುತ್ತಾನೆ. ಇದನ್ನು ಇನ್ನೊಂದು ವಿವರದ ಮೂಲಕವೂ ಹೇಳಬಹುದು: ಒಬ್ಬ ವ್ಯಕ್ತಿಯು ಸೂಳೆಯ ಹತ್ತಿರ ಹೋಗುತ್ತಾನೆ ಎಂದು ಭಾವಿಸಿಕೊಳ್ಳೋಣ. ಅಲ್ಲಿ ಅವನು ಲೈಂಗಿಕವಾದ ಸುಖವನ್ನು ಪಡೆಯುತ್ತಾನೆ. ಅದಕ್ಕೆ ಪ್ರತಿಯಾಗಿ ಅವನು ಹಣವನ್ನು ಕೊಡುತ್ತಾನೆ. ಇಲ್ಲಿ ಬೇರೆ ಯಾವ ಸಂಬಂಧವೂ ಇಲ್ಲ. ಭಾವನೆಗಳು ಇಲ್ಲಿ ಮುಖ್ಯವಲ್ಲ. ಅವಳಿಗೆ ಇವನು ಯಾರು ಎಂದು ತಿಳಿದಿಲ್ಲ. ಇವನಿಗೆ ಅವಳು ಯಾರು ಎಂದೂ ಗೊತ್ತಿಲ್ಲ. ಹಣವು ಮಾತ್ರವೇ ಇಲ್ಲಿ ಹೆಚ್ಚು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಮಾಸ್ ವಿನಿಮಯವನ್ನು ಮೂರು ತರಹವೆಂದು ಹೇಳುತ್ತಾನೆ. ಮೂರು ರೀತಿಯ ಗುಣಗಳಿವೆ ಎನ್ನುತ್ತಾನೆ. ಒಂದು ಕೊಡುವುದು ಮತ್ತೊಂದು ಸ್ವೀಕರಿಸುವುದು ಮೂರನೆಯದು ಹಿಂತಿರುಗಿಸುವುದು. ಇವುಗಳು ಬೇರೆ ಬೇರೆ ಅಂಶಗಳನ್ನು ಹೊಂದಿರುತ್ತವೆ. ಇವುಗಳಿಗೆ ಹೊಂದಿಕೆಯು ಆಗುವಂತೆ ರಚನೆಗಳೂ ಇರುತ್ತವೆ. ಅವನು ಅದನ್ನು ಅಸ್ತಿತ್ವದಲ್ಲಿ ಇರುವ ರಚನೆಗಳು ಎಂದು ಕರೆಯುತ್ತಾನೆ. ಇವುಗಳಿಗೆ ಸಂಬಂಧಪಟ್ಟಂತೆ ನಮಗೆ ಅಭಿವ್ಯಕ್ತಿಗಳು ಇರುತ್ತವೆ. (ವಿವರಗಳಿಗೆ ನೋಡಿ: ಲೆವಿಸ್ಟ್ರಾಸ್ 1987 ಇಂಟ್ರೊಡಕ್ಷನ್ ಇಂಟು ದ ವರ್ಕ್ಸ್ ಆಫ್ ಮಾರ್ಸೆಲ್ ಮಾಸ್ 20–30 ರೂತ್ಲೆಜ್ ಅಂಡ್ ಕೆಗನ್ ಪಾಲ್ ಲಂಡನ್) ಆದರೆ ಪರಸ್ಪರ ವಿನಿಮಯ ಎನ್ನುವುದು ನಮಗೆ ಪರಸ್ಪರ ನಾವು ಕೊಡುವ ಮತ್ತು ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಹೇಳುತ್ತದೆ. ನಾವು ಇನ್ನೊಬ್ಬರಿಗೆ

ಏನಾದರೂ ಕೊಟ್ಟರೆ ನಾವು ಅವರಿಂದ ಇನ್ನೊಂದನ್ನು ನಿರೀಕ್ಷೆ ಮಾಡುತ್ತೇವೆ. ಕೆಲವು ಸಂಪ್ರದಾಯಗಳು ಇದನ್ನು ಹೇಳುತ್ತವೆ ಎಂದು ಅವನು ಮತ್ತೊಂದು ಕಡೆಗೆ ವಿವರಿಸುತ್ತಾನೆ. ನೇರವಾಗಿ ಹಣವನ್ನು ಸಂದಾಯ ಮಾಡುವ ಕ್ರಮ ಮತ್ತು ಹಣವನ್ನು ವಿನಿಮಯ ಮಾಡುವ ಕ್ರಮ ಎರಡಕ್ಕೂ ವ್ಯತ್ಯಾಸವಿದೆ. ಹಣವನ್ನು ನಾವು ಕೊಟ್ಟು ಯಾವುದಾದರೂ ಒಂದು ವಸ್ತುವನ್ನು ತೆಗೆದುಕೊಳ್ಳುವಾಗ ಅದರ ರೂಪವು ಒಂದು ರೀತಿಯಲ್ಲಿ ಇರುತ್ತದೆ. ಇದನ್ನು ಒಂದು ಥರ ನೋಡುತ್ತೇವೆ. ಒಂದು ವಸ್ತುವನ್ನು ಕೊಟ್ಟು ಮತ್ತೊಂದು ವಸ್ತುವನ್ನು ತೆಗೆದುಕೊಳ್ಳುವ ಕ್ರಮದಲ್ಲಿ ನಮ್ಮ ನಿರೀಕ್ಷೆಗಳು ಬೇರೆಯಿರುತ್ತವೆ. ವಸ್ತು ಮತ್ತು ಅದರಿಂದ ಪಡೆಯುವ ತೃಪ್ತಿಯು ಒಂದು ಬಗೆಯದು. ಒಂದು ವಸ್ತುವಿಗೆ ನಾವು ಮೂರು ವಸ್ತುಗಳನ್ನು ಪಡೆಯುವ ಕನಸನ್ನು ಹೊಂದಿರುತ್ತೇವೆ. ಆದರೆ ಒಂದು ವಸ್ತುವನ್ನು ಮಾತ್ರವೇ ಉಚಿತವಾಗಿ ಪಡೆಯುತ್ತೇವೆ. ಇಲ್ಲಿ ಸಂಬಂಧವು ಸಂಕಥನದ ರೂಪದಲ್ಲಿ ಇರುತ್ತದೆ ಎಂದು ಅವನ ಅಭಿಪ್ರಾಯ. ಸಾಮಾಜಿಕ ಸಂಬಂಧದಲ್ಲಿ ನಾವು ಕೊಡುವುದು ಒಂದು ಕ್ರಮ. ಇದರಲ್ಲಿ ಕೊಡುವುದು ಅಂದರೆ ಅದರಲ್ಲಿ ಒಂದು ಸಂಬಂಧದ ರೂಪವು ಇರುತ್ತದೆ. ಇನ್ನೊಂದು ಅನ್ಯರಿಂದ ಸ್ವೀಕರಿಸಿಕೊಳ್ಳುವುದು ಮತ್ತೊಂದು ಕ್ರಮ. ಕೊಡುವುದು ಮತ್ತು ತೆಗೆದುಕೊಳ್ಳುವುದು ಸಮಾಜದಲ್ಲಿ ಮತ್ತೊಂದು ರೂಪದ ಸಂಬಂಧವನ್ನು ಹೇಳುತ್ತದೆ. (ಮಾರ್ಸೆಲ್ ಮೌಸ್ 2002 ದ ಗಿಫ್ಟ್ ರೂತ್ಲೆಜ್ ಲಂಡನ್) ಅವನು ಕೊಡುವುದರಲ್ಲಿ ಮತ್ತು ತೆಗೆದುಕೊಳ್ಳುವುದರಲ್ಲಿ ಕೆಲವು ರೀತಿಯ ಸಂಬಂಧಗಳಿರುತ್ತವೆ ಎಂದು ಹೇಳುವಾಗ ಕೆಲವು ಸಾಕ್ಷ್ಯವನ್ನು ಕೊಡುತ್ತಿದ್ದಾನೆ ಎನ್ನುವುದೂ ಅತ್ಯಂತ ಮುಖ್ಯ. ಹೇಗೆ ಇವುಗಳು ಬೇರೆ ಬೇರೆ ಜನಾಂಗದಲ್ಲಿ ಬೇರೆ ಬೇರೆ ಥರ ಇರುತ್ತದೆ ಎಂದೂ ಅವನು ನೋಡುತ್ತಾನೆ. ಕೊಡುಗೆಗಳು ಬೇರೆ ಬೇರೆ ರೂಪದಲ್ಲಿ ಇರುತ್ತವೆ. ಕೊಡುಗೆಗಳು ಸ್ಥಿರವಾದ ರೂಪ ಅಥವಾ ಚರವಾದ ರೂಪದಲ್ಲಿಯೂ ಇರಲು ಸಾಧ್ಯ. (ಅದೇ; ಪುಟ 41, 28.) ವಿನಿಮಯ ಎನ್ನುವುದು ಕೆಲವು ನಿಯಮವನ್ನು ಹೊಂದಿರುತ್ತದೆ. ಕೊಡುಗೆ ಎನ್ನುವುದನ್ನು ನಾವು ಬೇರೆ ಬೇರೆ ಜನಾಂಗಗಳಲ್ಲಿ ಬೇರೆ ಬೇರೆ ಥರ ಇರುತ್ತದೆ ಎಂದೂ ಗ್ರಹಿಸಬೇಕಾಗುತ್ತದೆ ಎನ್ನುವುದು ಅವನ ವಾದವಾಗಿದೆ. ಅವನು ಯಾವುದು ಸಂದರ್ಭ ಎಂದು ನೋಡುವುದು ಅಗತ್ಯವೆಂದು ತಿಳಿಯುತ್ತಾನೆ. ಯಾವಾಗ ನಾವು ಔತಣವನ್ನು ಕೊಡುತ್ತೇವೆ ಮತ್ತು ಅದರ ಕಾರಣಗಳು ಯಾವುದು ಇರುತ್ತದೆ ಎನ್ನುವುದು ಅತ್ಯಂತ ಮುಖ್ಯ. ಆದರೆ ಇಲ್ಲಿ ಅವನು ಕಾನೂನು ಮತ್ತು ಅದರ ಸ್ವರೂಪವು ಅತ್ಯಂತ ಮುಖ್ಯ. ಕೊಡುಗೆಗಳು ಆರ್ಥಿಕ, ಕಾನೂನಾತ್ಮಕ, ನೈತಿಕ ಮುಂತಾದ ಅಂಶವನ್ನು ಹೊಂದಿರುತ್ತದೆ ಎಂದು ಅವನ ಅಭಿಪ್ರಾಯುವಾಗಿದೆ. (ಅದೇ ಪುಟ. 30)

ನಾವು ಯಾವುದನ್ನು ಉಡುಗೊರೆ ಎಂದು ಹೇಳುತ್ತೇವೆಯೋ ಅದರ ರೂಪಗಳು ಮನಸ್ಸಿಗೂ ಅನ್ವಯವಾಗುತ್ತವೆ. ಹಾಗೆ ನೋಡಿದರೆ ನಮಗೆ

ಲೆವಿಸ್ಟ್ರಾಸ್ ಹೇಳುವ ವಾದಗಳು ಅತ್ಯಂತ ಮುಖ್ಯವಾಗುತ್ತವೆ. ಅವನು ಇಂಥದನ್ನು ಗಮನಿಸಿಕೊಂಡು ಪರಸ್ಪರ ವಿನಿಮಯ ಎನ್ನುವುದು ಹೇಗೆ ಸಂಬಂಧಗಳನ್ನು ಬೆಸೆಯುತ್ತವೆ ಎಂದು ಸ್ಪಷ್ಟ ಮಾಡುತ್ತಾನೆ. ವಿನಿಮಯವು ಕೂಡಾ ನಿರ್ದಿಷ್ಟವಾದ ಮೌಲ್ಯವನ್ನು ಹೊಂದಿರುತ್ತದೆ. ಒಂದು ಸಾಮಾನ್ಯವಾದ ಸಂಬಂಧ ಮತ್ತು ಅದರ ಒಳಗೆ ನಡೆಯುವ ವಿನಿಮಯವನ್ನು ಲೆವಿಸ್ಟ್ರಾಸ್ ಹೇಳುತ್ತಾನೆ. ಮದುವೆ ಮತ್ತು ವಿನಿಮಯದ ಸಂಗತಿಗಳು ಅವನಿಗೆ ಮುಖ್ಯವಾಗುತ್ತದೆ. ಅರ್ಥಶಾಸ್ತ್ರ ಮತ್ತು ಅದರ ಕೌಶಲವನ್ನು ಹೇಳುವಾಗ ಪಿಯರೆ ಬೌರ್ಡಿಯು ಒಂದು ಮಾತನ್ನು ಹೇಳುತ್ತಾನೆ. ಮೌಲ್ಯಗಳು ಹೇಗೆ ಒಂದು ಸಮಾಜದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದು ಅವನ ನಿಲುವೂ ಹೌದು. ಕಾರ್ಮಿಕ ಮತ್ತು ಅವನ ಶಕ್ತಿಗೂ ಅವನು ಮಾಡುವ ಕೆಲಸಕ್ಕೂ ಅವನ ದೇಹದ ಶ್ರಮದ ಮೌಲ್ಯಕ್ಕೂ ಒಂದು ಸಂಬಂಧವು ಇರುತ್ತದೆ. ಅವನು ಸಾಂಸ್ಕೃತಿಕ ಬಂಡವಾಳವಾದವನ್ನು ಹೇಳುತ್ತಾನೆ. ನಮ್ಮ ಮಾನವಿಕ ಅಧ್ಯಯನಗಳು ಈವತ್ತು ಯಾವ ರೀತಿಯಲ್ಲಿ ಇದೆ ಎಂದು ವಿವರಿಸುವಾಗ ಬೇರೆ ಬೇರೆ ರೀತಿಯ ಬಂಡವಾಳಗಳು ಇರುತ್ತವೆ ಎಂದು ಹೇಳುತ್ತಾನೆ ಅದಕ್ಕೆ ಒಂದು ತರ್ಕವೂ ಇರುತ್ತದೆ. ಮಧ್ಯವರ್ತಿಗಳೂ ಇರುತ್ತಾರೆ. ಅದಕ್ಕೆ ಅನುಗುಣವಾದ ಅಧ್ಯಯನಗಳು ನಡೆಯುತ್ತವೆ ಎಂದು ವಿವರಿಸುತ್ತಾನೆ. (ದಿ ಪಿಯರೆ ಬೌರ್ಡಿಯು ಲಾಜಿಕ್ ಆಫ್ ಪ್ರಾಕ್ಟೀಸ್) ಮೌಲ್ಯವನ್ನು ನಾವು ನಿರ್ಧರಿಸುವಾಗ ಅನೇಕ ಸರ್ತಿ ಶ್ರಮವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. (ಅವನದೇ ಕೃತಿ : ಡಿಸ್ಟಿಂಕ್ಷನ್) ಆದರೆ ಶೈಕ್ಷಣಿಕ ವಲಯವು ಹೇಗೆ ಒಂದು ವಲಯವನ್ನು ಸೃಷ್ಟಿ ಮಾಡುತ್ತದೆ ಎಂದೂ ಅವನು ಹೇಳುತ್ತಾನೆ. (ಬೌರ್ಡಿಯು – 1996 ಡಿಸ್ಟಿಂಕ್ಷನ್ ಪುಟ 24 ರೂತ್ಲೆಜ್) ಶೈಕ್ಷಣಿಕ ವಲಯವು ಹೇಗೆ ಇರುತ್ತದೆ ಮತ್ತು ಅದರ ಪರಿಣಾಮವು ಹೇಗೆ ಅಭಿರುಚಿಯ ಮೇಲೆ ಪ್ರಭಾವವನ್ನು ಬೀರುತ್ತದೆ ಎನ್ನುವುದು ಅವನ ಪ್ರಧಾನವಾದ ಚರ್ಚೆ. ಶೈಕ್ಷಣಿಕ ವಲಯದಲ್ಲಿ ಸೆಕ್ಷನ್‌ಗಳು, ಶಿಸ್ತುಗಳು ಮತ್ತು ವಿಶೇಷವಾದ ಅಧ್ಯಯನಗಳು ನಮಗೆ ಬೇರೆ ಸೂಚನೆಗಳನ್ನು ಕೊಡುತ್ತದೆ ಎನ್ನುವುದು ಅವನ ವಾದವಾಗಿದೆ. ಅದರ ಜೊತೆಗೆ ಅವನು ಇವುಗಳು ಹೇಗೆ ಒಂದು ಸಾಮಾನ್ಯವಾದ ಸಂಸ್ಕೃತಿಯನ್ನು ರೂಪಿಸುತ್ತದೆ ಎಂದೂ ವಿವರಿಸುತ್ತಾನೆ. ಶಿಕ್ಷಣ ಸಂಸ್ಥೆಯಲ್ಲಿ ಕೆಲವನ್ನು ಸಾಮಾನ್ಯವಾದ ರೂಪ ಎಂದು ಭಾವಿಸುತ್ತೇವೆ. ಮತ್ತೆ ಕೆಲವನ್ನು ಪಠ್ಯೇತರ ಚಟುವಟಿಕೆ ಎಂದು ಹೇಳುತ್ತೇವೆ. ಅದರಲ್ಲಿ ಹಾಡು, ಕುಣಿತ, ಕವಿತೆಯನ್ನು ಓದುವುದು ಮುಂತಾದವುಗಳು ನಡೆಯುತ್ತವೆ. ಆದ್ದರಿಂದ ಅನೇಕವನ್ನು ಅದು ಅಳತೆ ಮಾಡುವುದೇ ಬೇರೆ ಥರ. ಅವನು ಹೇಳುವ ಹಾಗೆ ಕೆಲವು ತಾರ್ಕಿಕವಾದ ವರ್ಗೀಕರಣವವನ್ನು ಇಟ್ಟುಕೊಂಡಿರುತ್ತದೆ. ನಮಗೆ ಇರುವ ಅಭಿರುಚಿಯು ನಮ್ಮ ವರ್ಗವನ್ನು ಹೇಳುತ್ತದೆ. ಅಭಿರುಚಿಯನ್ನು ಅಧಿಕೃತ ಮಾಡುವುದು ಯಾವ ರೀತಿಯಲ್ಲಿ ಇರುತ್ತದೆ ಎಂದೂ ಅವನು ಹೇಳುತ್ತಾನೆ. ಕೆಲವು

ಅಭಿರುಚಿಗಳನ್ನು ನಾವು ಅಧಿಕೃತವೆಂದು ಕೆಲವನ್ನು ಕನಿಷ್ಠವೆಂದೂ ಭಾವಿಸುತ್ತೇವೆ. ಆಹಾರ ಮತ್ತು ಅದರ ಸ್ವಾದಿಷ್ಟತೆಯ ಪ್ರಶ್ನೆಯು ವರ್ಗಕ್ಕೆ ಅನುಸಾರವಾಗಿ ಭಿನ್ನವಾಗುತ್ತದೆ. ಯಜಮಾನಿಕೆ ಮತ್ತು ಅದರ ಜೀವನಕ್ರಮವನ್ನು ನಾವು ಅವರು ಬಳಸುವ ಪೀಠೋಪಕರಣದಲ್ಲಿಯೂ ನೋಡಬಹುದು. ಅದರ ಸಾಧ್ಯತೆಯು ಹೆಚ್ಚು ಇದೆ ಎಂದು ಅವನು ಪ್ರತಿಪಾದಿಸುತ್ತಾನೆ. (ಅದೇ ಪುಟ 456)

ಸಾಹಿಲಿನ್ ಮಾತ್ರ ಅವನು ನಿಲುವನ್ನು ಒಪ್ಪುವುದಿಲ್ಲ. ಅವನ ಅಭಿಪ್ರಾಯವು ಬೇರೆಯಿದೆ. ಕೊಡುವುದು ಮತ್ತು ತೆಗೆದುಕೊಳ್ಳುವುದು ಎನ್ನುವುದಕ್ಕೆ ಬೇರೆ ಬೇರೆ ಅರ್ಥವು ಇದೆ ಎಂದು ಅವನ ಅಭಿಪ್ರಾಯವು ಆಗಿದೆ. ಆರ್ಥಿಕತೆ ಮತ್ತು ಅದರ ಸ್ವರೂಪವು ಇಲ್ಲಿ ಬೇರೆ ರೂಪವನ್ನು ಪಡೆಯುತ್ತದೆ ಎನ್ನುವುದು ಅವನ ನಿಲುವು. ಅರ್ಥಶಾಸ್ತ್ರಕ್ಕಿಂತ ಮೊದಲು ಇದ್ದ ಸಂಗತಿಗಳು ಹೇಗೆ ಅರ್ಥಶಾಸ್ತ್ರವು ಬಂದಾಗ ಬದಲಾಯಿತು ಎನ್ನುವುದು ಅವನ ಚರ್ಚೆಯ ಕೇಂದ್ರವಾಗಿದೆ. ಅವನು ವಿನಿಮಯ ಎನ್ನುವುದು ಮೂಲಭೂತವಾಗಿ ಬೇರೆ ಅರ್ಥವನ್ನು ಪಡೆಯುತ್ತದೆ ಎಂದು ಹೇಳುತ್ತಾನೆ. ಇದನ್ನು ಅವನು ಅನುತ್ಪಾದಕ ಖರ್ಚು ಎಂದು ಕರೆಯುತ್ತಾನೆ. ಯಜಮಾನನು ಆಳಿಗೆ ಯಾವುದಾದರೂ ಒಂದು ವಸ್ತುವನ್ನು ಕೊಟ್ಟರೆ ಅದರಲ್ಲಿ ಇರುವ ಮೌಲ್ಯವು ಬೇರೆ. ಒಬ್ಬ ವ್ಯಕ್ತಿಯು ಉಡುಗೊರೆಯನ್ನು ತನಗಿಂತ ಮೇಲಿನವರಿಗೆ ಅದಕ್ಕೆ ಬೇರೆ ಅರ್ಥವೂ ಇರುತ್ತದೆ. ಆಳಿಗೆ ಕೊಡುವಾಗ ಅದರಲ್ಲಿ ತನ್ನ ಕೆಲಸವನ್ನು ಅವನು ಮಾಡಿದ್ದಾನೆ ಎನ್ನುವುದು ಮಾತ್ರವೇ ಮುಖ್ಯವಾಗುತ್ತದೆ. ತನಗಿಂತ ಮೇಲೆ ಇರುವವರಿಗೆ ಯಾವುದನ್ನಾದರೂ ಕೊಟ್ಟರೆ ಅದರಲ್ಲಿ ಇರುವ ಅರ್ಥವು ಬೇರೆ. ಅದರ ಮೌಲ್ಯವೂ ಭಿನ್ನವಾಗುತ್ತದೆ.

1. ಕ್ಲಾಡೆ ಲೆಫಾರ್ಟ್ 1986 ದ ಪೊಲಿಟಿಕಲ್ ಫಾರಂ ಆಫ್ ಮಾಡರ್ನ್ ಸೊಸೈಟಿ ಎಂ.ಐ.ಜಿ. ಪ್ರೆಸ್
2. ಲೆವಿಸ್ಟ್ರಾಸ್ 1987 ಇಂಟ್ರೊಡಕ್ಷನ್ ಇಂಟು ದ ಆಪ್ ಮಾರ್ಸೆಲ್ ಮಾಸ್ ರೂತ್ಲೆಜ್ ಅಂಡ್ ಕೆಗೆನ್ ಪಾಲ್.
3. ಮಾರ್ಸೆಲ್ ಮೌಸ್ 2022 ದ ಗಿಫ್ಟ್ ರೂತ್ಲೆಜ್ ಲಂಡನ್.
4. ಪಿಯರೆ ಬೌರ್ದಿರ್ವ 1996. ಡಿಸ್ಟಿಂಕ್ಷನ್.

2. ಯಜಮಾನ ಸೂತಕವಲ್ಲ – ಅವನು ಸೂಚಕ

ಯಜಮಾನನ್ನು ನಾವು ಸೂತಕ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಅವನು ದೊಡ್ಡ ಸೂಚಕನಾಗಿದ್ದಾನೆ. ಅವನಿಗೆ ಹೆಚ್ಚು ಘನತೆಯಿದೆ. ಅವನನ್ನು ನಾವು ನೋಡುವುದು ನಾವು ಬೇರೆ ಥರ. ಯಾರು ಯಜಮಾನ ಸೂಚಕ ಎಂದು ಇದ್ದಾನೆಯೋ ಅವನ ಚಹರೆಯನ್ನು ನಾವು ಆಳಿಗೆ ಹೋಲಿಸುವುದೂ ಇಲ್ಲ. ಚೋಮನದುಡಿಯನ್ನು ಮತ್ತೊಮ್ಮೆ ತೆಗೆದುಕೊಳ್ಳಬಹುದು: ಸಂಕಪ್ಪಯ್ಯ ಸೂಚಕ. ಅವನು ಹೇಳುವ ಕೆಲಸವನ್ನು ಮಾಡುವುದು ಮಾತ್ರವೇ ಸೂಚಿತನಾದ ಚೋಮನ ಕೆಲಸ. ಇಲ್ಲಿ ಒಂದು ಅಲಿಖಿತವಾದ ಒಪ್ಪಂದವು ಕೆಲಸವನ್ನು ಮಾಡುತ್ತದೆ. ಅಲಿಖಿತವಾದ ಕಾನೂನು ಇಲ್ಲಿ ಒಪ್ಪಂದ ಥರ ಕೆಲಸವನ್ನು ಮಾಡುತ್ತದೆ. ಅದರ ಸ್ವರೂಪವನ್ನು ನಾವು ಮೊದಲೇ ನಿರ್ಧಾರ ಮಾಡಲು ಆಗುವುದಿಲ್ಲ. ಇದು ಹೊಸಗನ್ನಡದ ಸುದ್ಧಿಯು ಆಯಿತು. ಆದರೆ ಹಳೆಗನ್ನಡದಲ್ಲಿ ಇದಕ್ಕಿಂತ ಭಿನ್ನವಾದ ರೂಪವನ್ನು ನಾವು ನೋಡುತ್ತೇವೆ. ಆಳುಗಳ ಚಿತ್ರಣವು ಆಜ್ಞೆಯನ್ನು ಪಾಲಿಸುವುದನ್ನು ಮಾತ್ರವೇ ಹೇಳುತ್ತವೆ. ಆಜ್ಞೆ ಮತ್ತು ಅದರ ಸ್ವರೂಪವನ್ನು ಅತ್ಯಂತ ವಿನಯದಿಂದ ಸ್ವೀಕರಿಸುವ ಅನೇಕ ರೀತಿಯ ಆಳುಗಳು ನಮಗೆ ಹಳೆಗನ್ನಡ ಕಾವ್ಯದಲ್ಲಿ ಸಿಗುತ್ತಾರೆ. ಆದರೆ ಹಳೆಗನ್ನಡದಲ್ಲಿ ಬರುವ ರಾಜರು ಹೇಗಿದ್ದಾರೆ ಎಂದು ನೋಡಬೇಕು. ಅವರು ಉದಾತ್ತವಾದ ನಿಲುವನ್ನು ಹೊಂದಿದ್ದಾರೆ. ಅದರಲ್ಲಿಯೂ ಆದಿಪುರಾಣದಂಥಾ ಕಾವ್ಯಗಳು ಭವ್ಯತೆಯನ್ನು ಬೇರೆ ಬೇರೆ ಥರ ನಿರೂಪಿಸುತ್ತವೆ. ಭವ್ಯತೆಯು ಸಣ್ಣತನವನ್ನು ಮೀರಿ ಬೆಳೆಯುತ್ತದೆ. ಅದನ್ನೇ ಕುವೆಂಪು ಭವ್ಯತಾಮೀಮಾಂಸೆಯಲ್ಲಿ ವಿವರಿಸಿದ್ದು. ಎ.ಸಿ.ಬ್ರಾಡ್ಲೆಯು ಇದನ್ನು ಭವ್ಯತೆಯ ಪರಿಕಲ್ಪನೆಯಲ್ಲಿ ಹೇಳುತ್ತಾನೆ. ಆದರೆ ಅವನ ನಿಲುವು ಅರೆ ಹೆಗೆಲಿಯನ್ ದೃಷ್ಟಿಕೋನವನ್ನು ಹೊಂದಿದೆ ಎಂದು ವಿಮರ್ಶಕರು ಹೇಳುತ್ತಾರೆ. ಅದು ಬೇರೆ ಪ್ರಶ್ನೆ. ಅದನ್ನು ನಾವು ಈಗ ವಿಶ್ಲೇಷಣೆ ಮಾಡಬೇಕಾಗಿಯೂ ಇಲ್ಲ. ಬ್ರಾಡ್ಲೆಯು ಶೇಕ್ಸ್‌ಪಿಯರ್ ಕುರಿತು ಹೇಳುವಾಗ ಅವನು ಒಬ್ಬ ಕಲಾವಿದ. ಅವನು ಲೌಕಿಕವನ್ನು ಮೀರಿದವನು. ದೊಡ್ಡ ತತ್ವಜ್ಞಾನಿ. ಬಹುದೊಡ್ಡದಾದ ಬೌದ್ಧಿಕವಾದ ನಡವಳಿಕೆಯು ಅವನಲ್ಲಿ ಕಾಣಿಸುತ್ತದೆ. ಅವನು ಹೇಳುವುದು ಮನುಷ್ಯ ಮತ್ತು ಅವನ ಎತ್ತರವನ್ನು.

ಅದರ ಜೊತೆಗೆ ಅವನು ಮನುಷ್ಯನ ಆತ್ಮ ಮತ್ತು ಅದರ ಶಕ್ತಿಯು ಏನು ಎಂದೂ ಹೇಳುತ್ತಾನೆ. ಮನುಷ್ಯನ ಆತ್ಮಕ್ಕೆ ಇರುವ ಶೀತಲತೆ ಮತ್ತು ಅವನ ಆತ್ಮಕ್ಕೆ ಇರುವ ಗಡುಸುತನವು ಒಂದು ಮುಖ್ಯವಾದ ಚಿತ್ರವೂ ಆಗಿದೆ. ಆತ್ಮದ ಔನ್ನತ್ಯ ಮತ್ತು ಅದರ ಚಹರೆಗಳು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಶೇಕ್ಸ್‌ಪಿಯರ್ ಹೇಳುತ್ತಾನೆ. ಅವನ ಟೆಂಪೆಸ್ಟ್ ನಾಟಕದಲ್ಲಿ ಇದು ಎದ್ದು ಕಾಣಿಸುತ್ತದೆ. ಅದರಲ್ಲಿ ಅಧಿಕಾರ ಮತ್ತು ಅದರ ಎತ್ತರವೂ ನಮಗೆ ಸಿಗುತ್ತದೆ ಎಂದು ಅವನು ಪ್ರತಿಪಾದಿಸುತ್ತಾನೆ. ಆದರೆ ಶೇಕ್ಸ್‌ಪಿಯರ್ ಮತ್ತೊಂದು ಸಂಗತಿಯನ್ನು ವಿವರಿಸುತ್ತಾನೆ. ಇದಕ್ಕಿಂತ ಭಿನ್ನವಾದ ಚಿತ್ರವು ನಮಗೆ ಅವನ ಕಾಮಿಡಿಗಳಲ್ಲಿ ಸಿಗುತ್ತದೆ. ಅದನ್ನು ನಾವು ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ.

ದುರಂತ ನಾಟಕಗಳು ನಮಗೆ ದುರಂತದ ವಿಶಿಷ್ಟತೆಯನ್ನು ವ್ಯಕ್ತಿಯ ಉದಾತ್ತತೆಯನ್ನು ಹೇಳಿದರೆ ಹಾಸ್ಯ ಮತ್ತು ವಿಡಂಬನೆಯ ನಾಟಕಗಳು ಮತ್ತು ಅವುಗಳ ಸ್ವರೂಪವು ಮತ್ತೊಂದು ರೀತಿಯಲ್ಲಿ ಇರುತ್ತವೆ. ವಿಡಂಬನೆಗಳು ಜೀವನವನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಉದಾತ್ತದ್ದು ಅಲ್ಲವೆನ್ನುವುದು ಇಲ್ಲಿ ಉಲ್ಲೇಖನೀಯ. ಉದಾತ್ತವಾದುದು ವಿಡಂಬನೆಯಲ್ಲಿ ಭಿನ್ನವಾದ ಒಂದು ರೂಪವನ್ನು ಪಡೆಯುತ್ತದೆ. ಶೇಕ್ಸ್‌ಪಿಯರ್ ಜೂಲಿಯಸ್ ಸೀಸರ್ ನಾಟಕದಲ್ಲಿ ಹೇಳುವುದು ಅರಸು ಮನೆತನವನ್ನು. ಅದರ ಕತೆಯೂ ಅತ್ಯಂತ ವಿಶಾಲವಾದ ಚೌಕಟ್ಟನ್ನು ಹೊಂದಿರುತ್ತದೆ. ಕದನಗಳು ಸಂಚು ಮತ್ತು ವಿದ್ರೋಹಗಳು ಹೇಗೆ ಕೆಲಸವನ್ನು ನಿರ್ವಹಿಸುತ್ತವೆ ಎಂದು ಅದರಲ್ಲಿ ಅವನು ಹೇಳುತ್ತಾನೆ. ಕೆಲವು ಅಂಚಿಗೆ ಸರಿಸಲಾದ ಪಾತ್ರಗಳನ್ನು ನಾವು ಅದರಲ್ಲಿ ಕಾಣುತ್ತೇವೆ. ಅವನ ಟ್ರೋಲಿಯಸ್ ಮತ್ತೊಂದು ಸಂಗತಿಯನ್ನು ಹೇಳುತ್ತದೆ. ಅದರಲ್ಲಿ ವಿನೋದವಿದೆ. ಅದರಲ್ಲಿ ವ್ಯಂಗ್ಯವೂ ಇದೆ. ಹಾಗೆಯೇ ಅದರಲ್ಲಿ ಕದನಗಳು ಬರುತ್ತವೆ. ಅತ್ಯಂತ ಸಂಕೀರ್ಣವಾದ ನಾಟಕಗಳಲ್ಲಿ ಅದು ಒಂದು ಎಂದು ಹೇಳುತ್ತಾರೆ. ಟ್ರೋಯಿಲಸ್ ನಾಟಕದಲ್ಲಿ ಅಖಿಲಸ್ ಮತ್ತು ಹೆಕ್ಟರ್, ಪ್ರಿಯಾಂ ಮತ್ತು ಅಗೆಮೆಮ್ನಾನ್ ಸಂಬಂಧದ ಜೊತೆಗೆ ಇದರಲ್ಲಿ ಬೇರೆ ಬೇರೆ ಪಾತ್ರಗಳೂ ಬರುತ್ತವೆ. ಟ್ರೋಲಿಯಸ್ ಮತ್ತು ಕ್ರಿಸ್ಸಿಡಾರ ಪ್ರೇಮವು ಅತ್ಯಂತ ಮುಖ್ಯವಾಗುತ್ತದೆ. ಇದರಲ್ಲಿ ಪಲ್ಲಟಗಳು ಮತ್ತು ಆಗುವ ಅನೇಕ ಸಂಗತಿಗಳು ಆಧುನಿಕೋತ್ತರದ ನಿಲುವನ್ನು ಹೊಂದುತ್ತದೆ ಎಂದೂ ಅನೇಕರು ಹೇಳುತ್ತಾರೆ. ಕತೆಯು ಗ್ರೀಕಿನ ಮೂಲವನ್ನು ಹೇಳುತ್ತದೆ, ಆದರೆ ಇದರಲ್ಲಿ ಅರಸೊತ್ತಿಗೆ ಮತ್ತು ಅದರ ಪಲ್ಲಟಗಳು ನಮಗೆ ಎದ್ದು ಕಾಣುತ್ತವೆ. ದುರಂತವೂ ಇಲ್ಲಿ ನಮಗೆ ಒಂದು ಕರುಣೆಯನ್ನು ಸೂಚಿಸಲು ಬೇಕಾದ ಅವಕಾಶವನ್ನು ಕೊಡುತ್ತದೆ. ಗ್ರೀಕಿನ ಹಳೆಯ ಮೌಲ್ಯಗಳು ಶೇಕ್ಸ್‌ಪಿಯರಿನ ಹತ್ತಿರ ಬರುವಾಗ ಪಲ್ಲಟವು ಆಗುತ್ತದೆ. ನಾಶವಾಗುವುದು ಇಲ್ಲಿ ಒಂದು ಮುಖ್ಯವಾದ ಭಿತ್ತಿಯೂ ಹೌದು.

ಶ್ರೇಣೀಕರಣದಲ್ಲಿ ವ್ಯಕ್ತಿಯು ಎಲ್ಲಿ ನಿಲ್ಲುತ್ತಾನೆ ಎನ್ನುವುದೂ ಇದರ ಪ್ರಮುಖವಾದ ನೆಲೆಯೂ ಹೌದು. ಹಾಗೆ ನೋಡಿದರೆ ಒಬ್ಬ ವ್ಯಕ್ತಿಯು ತನ್ನ ಘನತೆಯನ್ನು ಕಳೆದುಕೊಳ್ಳುವುದು ಇಲ್ಲಿ ಪ್ರಧಾನವಾಗುತ್ತದೆ. ಅಷ್ಟೇ ಅಲ್ಲ; ಇದರಲ್ಲಿ ಸಾಂಪ್ರದಾಯಿಕ ಮೌಲ್ಯಗಳ ಮರು ಸ್ಥಾಪನೆಯು ಅತ್ಯಂತ ಮುಖ್ಯವಾದ ಆಶಯವೂ ಹೌದು. ಸಮಾಜ ಮತ್ತು ಅದರ ಶ್ರೇಣೀಕರಣಗಳು ಹೇಗೆ ಕೆಲಸವನ್ನು ಮಾಡುತ್ತವೆ ಎನ್ನುವುದು ಇದರಿಂದ ತಿಳಿಯುತ್ತದೆ. ನಿಯಮ ಮತ್ತು ಮೌಲ್ಯಗಳ ಮೀರುವಿಕೆಯು ಹೇಗೆ ಇರುತ್ತದೆ ಎನ್ನುವುದು ಅತ್ಯಂತ ಮುಖ್ಯ. ಮದುವೆ ಮತ್ತು ಅದರ ನೈತಿಕತೆ ಹಾಗೂ ಮೌಲ್ಯಗಳನ್ನು ಈ ನಾಟಕವು ನಮಗೆ ತಿಳಿಸುತ್ತದೆ. ಯಾವುದು ಹೊರಗೆ ಇರುತ್ತದೆ ಮತ್ತು ಯಾವುದನ್ನು ನಾವು ಸ್ವೀಕರಿಸಬೇಕು ಎನ್ನುವುದು ಇಲ್ಲಿ ಪ್ರಶ್ನೆ. ಇದರಲ್ಲಿ ಇನ್ನೊಂದು ವ್ಯಂಗ್ಯವು ಇದೆ. ಯಾವುದು ನಿಯಮ ಮತ್ತು ಯಾವುದು ನಮಗೆ ನಿಯಮವು ಆಗುವುದಿಲ್ಲವೆಂದು ಇಡೀ ನಾಟಕವು ನಮಗೆ ತಿಳಿಸುತ್ತದೆ. ಹುಡುಗಿ ಮತ್ತು ಅವಳ ಚಂಚಲತೆಯು ಹೇಗೆ ಇರುತ್ತದೆ ಮತ್ತು ಅದರ ಸ್ವರೂಪವು ಹೇಗೆ ಇರುತ್ತದೆ ಎಂದು ನಾಟಕವು ಹೇಳುತ್ತದೆ. ಪ್ರಣಯ ಮತ್ತು ಅದು ಕುರಿತಾಗಿ ಮನುಷ್ಯನಿಗೆ ಇರುವ ಆಸಕ್ತಿಯನ್ನು ಕೂಡಾ ನಾಟಕವು ನಮಗೆ ಹೇಳುತ್ತದೆ.

ಮನುಷ್ಯ ಮತ್ತು ಅವನ ಘನತೆಯನ್ನು ನೋಡುವ ಕೃತಿಗಳನ್ನು ನಾವು ಗಮನಿಸಬೇಕಾಗುತ್ತದೆ. ಯಾವುದು ನಿಜವಾದ ಕಾನೂನು ಮತ್ತು ಯಾವುದನ್ನು ನಾವು ಅನುಸರಿಸಬೇಕು ಎನ್ನುವುದು ಇಲ್ಲಿ ಗಮನಾರ್ಹ. ವಾಸ್ತವವಾಗಿ ಯುಲಿಸಿಸ್ ಪುರಾಣವು ಗ್ರೀಕಿನದು. ಅದರಲ್ಲಿ ಬಹಳ ಮುಖ್ಯವಾದದ್ದು ಆದರೆ ಘನತೆಯು ಇರುವುದು ಯಾವುದರಲ್ಲಿ ಎನ್ನುವ ಮೂಲಭೂತವಾದ ಪ್ರಶ್ನೆಯನ್ನು ಯುಲಿಸಿಸ್ ಕೇಳುತ್ತದೆ. ಅದರ ಜೊತೆಗೆ ಅದು ಮನುಷ್ಯ ಮತ್ತು ಅವನ ಸ್ವಭಾವವನ್ನು ಹೇಳುತ್ತದೆ. ಆದಿಪುರಾಣವು ನಮಗೆ ಮತ್ತೊಂದು ವಿಧವಾದ ಮನುಷ್ಯರ ಸ್ವಭಾವ ಮತ್ತು ಅದರಿಂದ ಮುಕ್ತವಾಗಬೇಕಾದ ಕ್ರಮವನ್ನು ಹೇಳುತ್ತವೆ. ಜೀವನ್ಮುಕ್ತವಾಗುವುದು ಎಂದರೆ ಅದು ಒಂದು ಮನೋಸ್ಥಿತಿಯು ಆಗಿದೆ. ಜನರು ಮುಕ್ತವಾಗಬೇಕಾದರೆ ಅನೇಕವನ್ನು ಸಾಧಿಸಬೇಕಾಗಿದೆ. ಅವನು ಜಿತೇಂದ್ರಿಯನಾಗುವುದು ಮಾತ್ರವೇ ಅಲ್ಲ, ಮನುಷ್ಯನು ತ್ಯಾಗದಿಂದ ಅನೇಕವನ್ನು ಸಾಧಿಸುವುದು. ಸತ್ಯ, ಧರ್ಮ, ದಯೆ, ತ್ಯಾಗ ಹೇಗೆ ಜನರಿಗೆ ಅಗತ್ಯ ಎನ್ನುವುದನ್ನು ಆದಿಪುರಾಣವು ನಮಗೆ ಹೇಳುತ್ತದೆ. ಬಾಹುಬಲಿಯು ತ್ಯಾಗದಿಂದ ಉದಾತ್ತನಾಗುತ್ತಾನೆ ಎನ್ನುವುದು ನಿಜ. ಇಲ್ಲಿ ತ್ಯಾಗವು ಯಾಕೆ ಮುಖ್ಯವಾಗುತ್ತದೆ ಎಂದು ನೋಡಬೇಕು. ಅದು ಇದ್ದಕ್ಕಿದ್ದಂತೆ ಬಂದ ಮೌಲ್ಯವಲ್ಲ. ಅದಕ್ಕೆ ಒಂದು ಚರಿತ್ರೆಯು ಇದೆ. ಭರತ ಮತ್ತು ಬಾಹುಬಲಿಯರ ಸಂಬಂಧ ಮತ್ತು ಅದರ ಸ್ವರೂಪವು ಇಲ್ಲಿ ಮುಖ್ಯವಾಗುತ್ತದೆ. ಭರತ ಮತ್ತು ಬಾಹುಬಲಿಯರ ನಡುವೆ ನಡೆಯುವ ಹೋರಾಟವನ್ನು ಕವಿಯು

ಅತ್ಯಂತ ವಿಶಿಷ್ಟವಾಗಿ ನಿರೂಪಿಸುತ್ತಾನೆ. ಸಂಘರ್ಷವು ಅತ್ಯಂತ ನಿರ್ಣಾಯಕವಾದ ಮೇಲೆಯೇ ಬರುವುದು ಧರೆಯ ಅಗತ್ಯವೇ ಇಲ್ಲ ಎಂದು. ಒಂದು ಏರಿಳಿತವೂ ಇಲ್ಲಿದೆ. ಅಣ್ಣ ದೊಡ್ಡವನು. ಅವನು ಬಿಟ್ಟದ್ದು ತನಗೆ ಎನ್ನುವುದು ಒಂದು ಅಲಿಖಿತವಾದ ಕಾನೂನು ಕೂಡಾ ಆಗಿದೆ. ಇದನ್ನು ಮೀರುವುದು ಸರಿಯೇ ಎನ್ನುವುದು ಅತ್ಯಂತ ಸೂಕ್ತವಾದ ಪ್ರಶ್ನೆಯೂ ಹೌದು. ಅದನ್ನು ಬಾಹುಬಲಿಯು ಮಾತಿನಲ್ಲಿಯೂ ಹೇಳುತ್ತಾನೆ. ಯಾವುದು ಮೇಲು ಮತ್ತು ಯಾವುದು ಕನಿಷ್ಟವಾದದ್ದು ಎನ್ನುವುದೂ ಇಲ್ಲಿ ಬರುತ್ತದೆ. ನಾಯಕ ನಾಯಕನೇ ಆಗದೆ ಇದ್ದು ಮತ್ತೆ ಯಾವುದೋ ಒಂದು ಅಂಶವು ಉನ್ನತಿಗೆ ಬರುತ್ತದೆ. ಮೌಲ್ಯವು ಮುಂದೆ ಬಂದು ನಾಯಕನು ಹಿಂದೆ ಉಳಿಯುತ್ತಾನೆ. ಮೋಕ್ಷಗಾಮಿಯಾಗುವುದು ಜೀವನದ ಅತ್ಯಂತ ಪರಮೋಚ್ಛವಾದ ಆದರ್ಶವೂ ಹೌದು. ಬಾಹುಬಲಿಯು ಸ್ಥಳವನ್ನು ಬಿಡುವುದೂ ಅತ್ಯಂತ ಮುಖ್ಯವಾದ ತಿರುವನ್ನು ಪಡೆಯುತ್ತದೆ. ಅದು ಜೀವನದ ಸರಿಯಾದ ಕ್ರಮವೂ ಆಗುತ್ತದೆ. ರಾಜ್ಯವು ಬೇಕೆ ಎನ್ನುವುದು ಇಲ್ಲಿಯ ಪ್ರಶ್ನೆ. ಆದರೆ ಆದಿಪುರಾಣದ ತಾತ್ವಿಕತೆಯು ಇಲ್ಲಿಗೆ ಮುಗಿಯುವುದೂ ಇಲ್ಲ. ಅದು ಮುಂದುವರಿಯುತ್ತದೆ. ರಾಜಕೀಯ ಮತ್ತು ಅದರ ಸ್ವರೂಪವು ಹೇಗೆ ಇದೆ ಮತ್ತು ಅದನ್ನು ಯಾವುದು ಮುರಿಯುತ್ತದೆ ಎನ್ನುವುದು ಇಲ್ಲಿಯ ಪ್ರಶ್ನೆಯೂ ಆಗುತ್ತದೆ. ರಾಜ್ಯ ಮತ್ತು ನೀತಿಯನ್ನು ಬಾಹುಬಲಿಯು ನಿರಾಕರಿಸುತ್ತಾನೆ. ಬ್ರಿಟೀಷರು ಬರುವ ಮೊದಲು ನಮ್ಮ ರಾಜಕೀಯ ವ್ಯವಸ್ಥೆಯು ಹೇಗೆ ಇತ್ತು ಎಂಬುದನ್ನು ಇದು ಹೇಳುತ್ತದೆ. ಇಡೀ ಆದಿಪುರಾಣವನ್ನು ಓದಿದರೆ ನಮಗೆ ಬೇರೆ ಭಾವವೂ ಬರುತ್ತದೆ. ಇದರಲ್ಲಿ ಲಾಲಿತ್ಯವಿದೆ. ಸಂಯೋಗವಿದೆ. ಛಿದ್ರೀಕರಣವೂ ಇದೆ. ಮತಗಳ ಸಂಘರ್ಷಗಳೂ ಇವೆ. ಮನುಷ್ಯನ ಸಣ್ಣತನವೂ ಇದೆ.

1. ಲಕಾನ್. ಸೆಮಿನಾರ್.

3. ದೊಡ್ಡ ಯಜಮಾನ್ಯ

ಲಕಾನ್ ಸಿದ್ಧಾಂತದಲ್ಲಿ ಅನ್ಯ ಎನ್ನುವುದಕ್ಕೆ ಅತ್ಯಂತ ವಿಶಿಷ್ಟವಾದ ಅರ್ಥವಿದೆ. ಅದನ್ನು ಅವನು ಒಂದು ಆದರ್ಶವಾದ ಅನ್ಯವೆಂದು ಹೇಳುತ್ತಾನೆ. ಅನ್ಯವೆಂದರೆ ಅದರ ರೂಪವು ಬೇರೆಯೆಂದು ನಾವು ತಿಳಿಯಬಹುದು. ಆದರೆ ಲಕಾನ್ ಅದನ್ನು ಇನ್ನೊಂದು ಅರ್ಥದಲ್ಲಿ ಹೇಳುತ್ತಾನೆ. ಅದು ಕಲ್ಪಿತ ಮತ್ತು ಅದರಲ್ಲಿ ಒಂದು ಭ್ರಮೆಯು ಇರುತ್ತದೆ ಎಂದು ಲಕಾನ್ ಭಾವಿಸುತ್ತಾನೆ. ಲಕಾನ್ ಅನ್ಯ ಎನ್ನುವುದನ್ನು ಭಾಷೆಗೆ ಮತ್ತು ಇತರ ಕಾನೂನುಗಳಿಗೂ ಅನ್ವಯವನ್ನು ಮಾಡುತ್ತಾನೆ. ನಮ್ಮನ್ನು ಯಾವುದೆಲ್ಲಾ ಆಳುತ್ತದೆ ಎಂದು ಹೇಳುವಾಗ ಪೋಲೀಸರು, ರಾಜ ಮುಂತಾದವರು ನಮ್ಮ ಕಣ್ಣಿಗೆ ಕಾಣಿಸದೇ ಹೋದರೂ ಅವರು ನಮ್ಮನ್ನು ಬೇರೆ ಬೇರೆ ಥರ ನಿಯಂತ್ರಣ ಮಾಡುತ್ತಾರೆ ಎನ್ನುತ್ತಾನೆ. ಎರಡನೆಯದಾಗಿ ಇಲ್ಲಿ ಒಂದು ವಿಶ್ವಾತ್ಮಕವಾದ ನ್ಯಾಯವು ಇರುತ್ತದೆ. ಅವನು ಕಲ್ಪನೆ ಮತ್ತು ಪ್ರತಿಮೆಗಳ ನಡುವೆ ವ್ಯತ್ಯಾಸವು ಇದೆ ಎಂದು ಭಾವಿಸುತ್ತಾನೆ. ಅದು ವಿಷಯನಿಷ್ಟವಾದ ಒಂದು ಸಂಗತಿ. ಯಾವುದೋ ಒಂದು ನಮ್ಮನ್ನು ನಿಯಂತ್ರಣ ಮಾಡುತ್ತದೆ ಎಂದು ನಾವು ಭಾವಿಸಿಕೊಂಡಿರುತ್ತೇವೆ. ಅದರಲ್ಲಿ ಬೇರೆ ಬೇರೆ ರೂಪಗಳಿರುತ್ತವೆ. ನಮ್ಮ ಬಯಕೆಗಳು, ಆಸೆಗಳು, ಕನಸುಗಳು, ನಿಯಮಗಳು, ಸಂಬಂಧಗಳು ಹೇಗೆ ಅನ್ಯವಾಗಿರುತ್ತವೆ ಮತ್ತು ಅವುಗಳು ಹೇಗೆ ನಮ್ಮನ್ನು ನಿಯಂತ್ರಿಸುತ್ತವೆ ಎಂದು ಹೇಳುವಾಗ ಅದನ್ನು ಅವನು ಮತ್ತೊಂದು ಅನ್ಯವೆಂದು ಗುರುತಿಸುತ್ತಾನೆ. ಹಾಗೆ ನೋಡಿದರೆ ನಮಗೆ ಬೇರೆ ಬೇರೆ ನಿಯಂತ್ರಣಗಳು ಇರುತ್ತವೆ ಮತ್ತು ಅದರ ಸ್ವರೂಪಗಳು ಹೇಗೆ ಇರುತ್ತವೆ ಎಂದು ಅವನು ವಿವರಿಸುತ್ತಾನೆ. ಹಾಗೆಂದು ಇವು ನಿಜವಾಗಿಯೂ ನಮಗೆ ದೈಹಿಕವಾಗಿ ಕಾಣಿಸುತ್ತದೆ ಎಂದು ಹೇಳಲು ಬರುವುದಿಲ್ಲ. ಉದಾಹರಣೆಗೆ ನಮಗೆ ಇರುವ ಮಾಟ, ಮಂತ್ರಗಳ ಭಯ. ಇವುಗಳು ಅತ್ಯಂತ ವಿಚಿತ್ರವಾಗಿರುತ್ತವೆ. ಆದರೆ ಅವು ನಮ್ಮನ್ನು ನಿಯಂತ್ರಿಸುವುದು ನಿಜ. ಬ್ರಾಹ್ಮಣರಲ್ಲಿ ತಂದೆ, ಅಜ್ಜ ಮತ್ತು ಮುತ್ತಜ್ಜರಿಗೆ ಪಿಂಡವನ್ನು ಬಿಡುತ್ತಾರೆ. ಒಂದು ವೇಳೆ ಪಿಂಡ ಪ್ರಧಾನವನ್ನು ಮಾಡದೇ ಹೋದರೆ ಅವರಿಗೆ ಸ್ವರ್ಗವು ಸಿಗುವುದೂ ಇಲ್ಲ. ಸತ್ತವರಿಗೆ ತಿಲೋದಕವನ್ನು ಬಿಡುವುದು ಎಂದು ಹೇಳುತ್ತಾರೆ. ಇದನ್ನು ಕನ್ನಡದಲ್ಲಿ ಎಳ್ಳು

ನೀರು ಎಂದು ಕರೆಯುತ್ತಾರೆ. ಕ್ರಿಶ್ಚಿಯಾನಿಟಿಯಲ್ಲಿಯೂ ಪವಿತ್ರವಾದ ಆತ್ಮ ಎನ್ನುವ ಕಲ್ಪನೆಯು ಇದೆ. ಅದು ಕೂಡಾ ನಮಗೆ ಇನ್ನೊಂದು ದೊಡ್ಡ ಜನ ಎನ್ನುವುದನ್ನು ಮತ್ತೊಂದು ರೀತಿಯಲ್ಲಿ ಹೇಳುತ್ತದೆ.

ಪವಿತ್ರ ಎನ್ನುವುದು ನಮಗೆ ಆತ್ಮ ಮತ್ತು ದೇವರ ಮಧ್ಯದ ಒಂದು ಸಂಬಂಧವೂ ಹೌದು. ಆದ್ದರಿಂದ ಕ್ರಿಶ್ಚಿಯಾನಿಟಿಯಲ್ಲಿ ದೇವರು ಮತ್ತು ಮನುಷ್ಯರ ಸಂಬಂಧಗಳಲ್ಲಿ ತಾರತಮ್ಯವೂ ಇದೆ. ಅದರಲ್ಲಿಯೂ ಪ್ರೇತ ಮತ್ತು ದೆವ್ವಗಳ ಕುರಿತು ಬರುತ್ತದೆ. ಅದರಲ್ಲಿ ಒಂದು ಪರಿಕಲ್ಪನೆಯು ನಮಗೆ ಅತ್ಯಂತ ಅಗತ್ಯ. ಹೋಲಿ ಗೋಸ್ಟ್ (ಪವಿತ್ರ ದೆವ್ವ?) ಅದರಲ್ಲಿ ಮೂರನೆಯದು. ಅದನ್ನೇ ಲಕಾನ್ ಹೇಳುತ್ತಾನೆ. ಮೂರನೆಯದು ನಮ್ಮನ್ನು ಕಾಡುತ್ತದೆ. ವಾಸ್ತವವಾಗಿ ಅದು ಸಂಕೇತವೂ ಹೌದು. ದೇವರು ತಂದೆ, ನಾವು ಮಕ್ಕಳು ಮತ್ತು ನಾವೇ ದೇವರಾಗುವುದು ಎನ್ನುವುದೇ ಇಲ್ಲಿ ಅತ್ಯಂತ ಮಹತ್ವದ್ದು. ಹಳೆಯ ಇಂಗ್ಲೀಷಿನಲ್ಲಿ ಗಸ್ಟ್ ಎನ್ನುವ ಪದವು ಇದೆ. ಅದರಿಂದ ಗೋಸ್ಟ್ ಎಂದು ಬಂತು. ಸತ್ತವನ ಶಕ್ತಿಯು ಗೋಸ್ಟ್ ಆಗುತ್ತದೆ ಎಂದು ಜನರು ನಂಬುತ್ತಾರೆ. ಅದು ಒಂದು ವ್ಯಂಗ್ಯವೂ ಹೌದು. ಆದರೆ ಕಾಂಟ್ ಇದನ್ನು ಒಂದು ಕರುಣಾಜನಕವಾದ ಸ್ಥಿತಿಯೆಂದು ಹೇಳುತ್ತಾನೆ. ಮನುಷ್ಯ ಮತ್ತು ದೇವರ ಮಧ್ಯೆ ಇದು ಇರುತ್ತದೆ. ಆದರೆ ದೆವ್ವಕ್ಕೆ ಅಥವಾ ಪ್ರೇತಕ್ಕೆ ಯಾವುದೇ ದೇಹವು ಇಲ್ಲ. ಆದರೆ ಪ್ರೇತಕ್ಕೆ ಒಂದು ಶಕ್ತಿಯು ಇದೆ. ಅದನ್ನು ಜನರು ಕೇಡು ಎಂದೂ ಭಾವಿಸುತ್ತಾರೆ. ಆದರೆ ಹೋಲಿ ಸ್ಪಿರಿಟ್ ಅಂದರೆ ಪವಿತ್ರವಾದ ಆತ್ಮ.

ನಮಗೆ ಇಲ್ಲಿ ಜಿಜೆಕ್ ಕೊಡುವ ಉದಾಹರಣೆಯು ಅತ್ಯಂತ ಮಹತ್ವದ್ದು. ಅವನು ಹೇಳುತ್ತಾನೆ: ಒಂದು ಚಿತ್ರವು ಇದೆ. ಆ ಚಿತ್ರ ಚೌಕಟ್ಟಿನ ಒಳಗೆ ಇರುತ್ತದೆ. ಚೌಕಟ್ಟಿನ ಹೊರಗೆ ಮತ್ತೊಂದು ಅಂಶವು ಇರುತ್ತದೆ. ಚೌಕಟ್ಟಿನಿಂದ ಆಚೆಗೆ ಇರುವುದನ್ನು ನಾವು ಇಲ್ಲವೇ ಇಲ್ಲ ಎಂದು ಹೇಳುವುದು ಅಸಾಧ್ಯ. ಮತ್ತೊಂದು ಚೌಕಟ್ಟಿನಲ್ಲಿ ಮತ್ತೊಂದು ಚಿತ್ರವೂ ಇರುತ್ತದೆ. ಆದರೆ ಅವುಗಳ ನಡುವೆ ಇರುವ ಅವಕಾಶವು ಮೂರನೆಯದು. ಅದನ್ನು ಮೂರನೆಯದು ಎಂದು ಹೇಳಿದರೂ ಅದುವೇ ಪ್ರಧಾನವಲ್ಲ. ಅದರಲ್ಲಿ ಇರುವ ಖಾಲಿಯಾದ ಒಂದು ಜಾಗವನ್ನು ಮಾತ್ರವೇ ಅತ್ಯಂತ ಮುಖ್ಯ ಎಂದು ಆಧುನಿಕೋತ್ತರವಾದಿಗಳು ಹೇಳುತ್ತಾರೆ. ಆಧುನಿಕೋತ್ತರವಾದಿಗಳ ಅತ್ಯಂತ ಮುಖ್ಯವಾದ ಸಮಸ್ಯೆ ಕೂಡಾ ಇದುವೇ ಆಗಿದೆ. ಎರಡು ಚಿತ್ರಗಳ ನಡುವೆ ಇರುವ ಜಾಗವನ್ನು ಮಾತ್ರವೇ ಇಟ್ಟುಕೊಂಡು ಒಂದು ಸಂಸ್ಕೃತಿಯನ್ನು ನಾವು ಅಧ್ಯಯನ ಮಾಡಲು ಆಗುತ್ತದೆಯೇ ಎಂದು ಜಿಜೆಕ್ ಕೇಳುತ್ತಾನೆ. ಆದರೆ ಇಲ್ಲಿ ಯಾವುದು ಖಾಲಿಯಾಗಿದೆಯೋ ಅದನ್ನು ನಾವು ವಿವರಿಸುವುದಾದರೂ ಹೇಗೆ ಎನ್ನುವುದು ನಮ್ಮ ಮುಂದೆ ಪ್ರಶ್ನೆ. ಎರಡು ಚೌಕಟ್ಟಿನ ನಡುವೆ ಏನಿದೆ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆ. ಇದನ್ನು ಹೀಗೆಯೂ ನಾವು

ಕೇಳಬಹುದು: ಎರಡು ಚಿತ್ರಗಳು ಚೌಕಟ್ಟಿನಲ್ಲಿ ಅರ್ಥಪೂರ್ಣವಾಗಿರುತ್ತದೆ. ಆದರೆ ಅವುಗಳ ಮಧ್ಯೆ ಅವಕಾಶವೂ ಇದೆ. ಅದನ್ನು ಗ್ರಹಿಸುವುದು ಮತ್ತು ಅದನ್ನು ನಾವು ಅರ್ಥವಿಸಿಕೊಳ್ಳುವುದು ನಮಗೆ ವಿಶಿಷ್ಟ ಅನುಭವ.. ಅದು ವಿಷಯನಿಷ್ಠವೂ ಆಗುವ ಸಾಧ್ಯತೆಗಳು ಇರುತ್ತವೆ. ನಮಗೆ ಒಮ್ಮೊಮ್ಮೆ ಈ ನಿಲುವು ಬೇಕಾಗಬಹುದು: ಆದರೆ ನಿಜವಾದ ಸಾಮಾಜಿಕ ಜೀವನದಲ್ಲಿ ಈ ಅವಕಾಶವನ್ನು ಹೇಗೆ ಗುರುತಿಸುತ್ತೇವೆ ಎನ್ನುವುದೂ ಅಷ್ಟೇ ಮುಖ್ಯ. ಇದನ್ನು ಬರ್ಗ್‌ಸನ್ ಹೇಳುವಾಗ 'ನಮಗೆ ಒಂದು ಭೌತಿಕವಾದ ಅವಶ್ಯಕತೆ ಮತ್ತು ಅದರ ಬಗ್ಗೆ ಒಂದು ನಿಷ್ಠತೆಯು ಇರಬೇಕಾಗುತ್ತದೆ' ಎಂದು ಹೇಳುತ್ತಾನೆ.

ಯಾವುದನ್ನು ನಾವೂ ಈವತ್ತು ಮತ್ತೊಂದು ಯಜಮಾನಿಕೆ ಎಂದು ಕರೆಯುತ್ತೇವೆಯೋ ಅದು ಒಮ್ಮೊಮ್ಮೆ ನಮಗೆ ಕಾಣಿಸುವುದೂ ಇಲ್ಲ. ಆದರೆ ಅದು ಇರುತ್ತದೆ. ಅಲ್ತೂಸರ್ ಇಲ್ಲಿ ಪ್ರಭುತ್ವ ಎನ್ನುವುದು ಹೇಗೆ ಬೇರೆ ಬೇರೆ ಪರಿಕರವನ್ನು ಬಳಸುತ್ತದೆ ಹೇಳುತ್ತಾನೆ. ನಾವು ಅದನ್ನು ಗುರುತಿಸುವುದು ಅತ್ಯಂತ ಅಗತ್ಯ. ನಾವು ಕಾನೂನು ಎನ್ನುವುದನ್ನು ಎಷ್ಟು ವಿಧೇಯರಾಗಿ ಅನುಸರಿಸುತ್ತೇವೆ ಎನ್ನುವುದಷ್ಟೇ ಪ್ರಭುತ್ವಕ್ಕೆ ಮುಖ್ಯವಾಗುತ್ತದೆ. ಆದರೆ ವಿನಯ ಎನ್ನುವುದು ಒಂದು ವಿಶಿಷ್ಟವಾದ ಪರಿಭಾಷೆ. ವಿನಯ ಎನ್ನುವುದು ಅನೇಕ ಸಂದರ್ಭದಲ್ಲಿ ಅಗತ್ಯವೇ ಇರುವುದಿಲ್ಲ. ಯಾವುದು ನಮಗೆ ತಾರ್ಕಿಕವಾದ ವಿನಯವು ಆಗುತ್ತದೆ ಎನ್ನುವುದು ಮಾತ್ರವೇ ಇಲ್ಲಿ ಗಮನಾರ್ಹವಾಗುತ್ತದೆ ಸರಕಾರದ ಮಧ್ಯವರ್ತಿಯಾದ ಪೋಲೀಸರಿಗೆ ನಾವು ವಿಧೇಯರಾಗಿ ಇರಬೇಕೆಂದು ಸರಕಾರವು ಬಯಸುತ್ತದೆ. ನಮಗೆ ಇರುವ ಅತ್ಯಂತ ದೊಡ್ಡದಾದ ಸಮಸ್ಯೆ ಎಂದರೆ ಯಾವ ಅನ್ಯಕ್ಕೆ ಮಾತ್ರವೇ ವಿಧೇಯರಾಗಿ ಇರಬೇಕೆನ್ನುವುದು ಮಾತ್ರವೇ. ಇದರ ತಂತ್ರಗಾರಿಕೆಯು ಬೇರೆಯಿರುತ್ತದೆ. ನಮಗೆ ಇರುವ ಸಮಸ್ಯೆಯೆಂದರೆ ನಾವು ಯಾವ ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು ಎನ್ನುವುದು ನಮಗೆ ಗೊತ್ತಿರುವುದೂ ಇಲ್ಲ. ತನ್ನನ್ನು ತಾನೇ ನಂಬದೇ ಇರುವವನು ಇನ್ನೊಬ್ಬರನ್ನು ನಂಬುತ್ತಾನೆ. ಇದು ನಮಗೆ ಇರುವ ಸಮಸ್ಯೆಯೂ ಆಗಿದೆ. ನಮಗೆ ನಾವು ಏನು ಮಾಡುತ್ತಿದ್ದೇವೆ ಎನ್ನುವುದೂ ಗೊತ್ತಿಲ್ಲದೇ ಹೋದಾಗ ಅನ್ಯವನ್ನು ನಂಬುತ್ತೇವೆ. ಅದು ನಮಗೆ ಅನ್ಯವಾಗಿರುವುದು ಅತ್ಯಂತ ಮುಖ್ಯ. ಯಾರಾದರೂ ನಮಗೆ ಒಂದು ನಿರ್ದಿಷ್ಟವಾದ ಸಲಹೆಯನ್ನು ಕೊಡುತ್ತಾರೆ ಎಂದಾದರೆ ಅವರು ನಮಗೆ ಉಪದೇಶವನ್ನು ಕೊಡುತ್ತಾರೆ ಎಂದು ಅರ್ಥವಾಗುತ್ತದೆ. ಉಪದೇಶವು ಒಂದು ಅರ್ಥದಲ್ಲಿ ಅನ್ಯ.

ಮತ್ತೊಂದು ಅರ್ಥದಲ್ಲಿ ಅದು ನಮ್ಮ ಮೇಲೆ ಯಜಮಾನಿಕೆಯನ್ನು ವಹಿಸುತ್ತದೆ ಎಂದೂ ಆಗುತ್ತದೆ. ಆದರೆ ಯಾವುದೇ ಸಂದೇಶ, ಉಪದೇಶ ಮತ್ತು ಸಲಹೆಗಳು ನಮಗೆ ಯಾವತ್ತು ಬರುತ್ತದೆ ಎಂದರೆ ನಾವು ದುರ್ಬಲರಾಗಿದ್ದಾಗ

ಮಾತ್ರ. ನಾವು ಇನ್ನೊಬ್ಬರ ಹತ್ತಿರ ಸಲಹೆಯನ್ನು ಕೇಳುತ್ತೇವೆ ಎಂದರೆ ನಮ್ಮ ನೋವನ್ನು ಇನ್ನೊಬ್ಬರಿಗೆ ವರ್ಗಾಂತರ ಮಾಡುತ್ತೇವೆ ಎಂದು ಅರ್ಥ. ಇದನ್ನು ಒಂದು ಚಲನೆ ಎನ್ನುವ ಅರ್ಥದಲ್ಲಿ ಹೆಗೆಲ್ ಹೇಳುತ್ತಾನೆ. ಎಷ್ಟೋ ಸರ್ತಿ ಇದು ಅನ್ಯರಿಗೆ ವರ್ಗಾವಣೆಯು ಆಗುತ್ತದೆ ಎಂದಾದರೆ ಅದರ ಅರ್ಥವು ಬೇರೆಯಾಗುತ್ತದೆ. ನಮ್ಮ ಸಮಸ್ಯೆಯನ್ನು ಇನ್ನೊಬ್ಬರಿಗೆ ವರ್ಗಾವಣೆ ಮಾಡುವುದು ಒಂದು ಥರ. ವಿಷಯ ಮತ್ತು ಅದರ ವರ್ಗಾಂತರವು ಬೇರೆ ಬೇರೆ ಕಾರಣಗಳ ಮೂಲಕ ನಡೆಯುತ್ತದೆ. ನಾವು ನಮ್ಮ ಸಮಸ್ಯೆಯನ್ನು ಇನ್ನೊಬ್ಬರಿಗೆ ವರ್ಗಾವಣೆ ಮಾಡುವಾಗ ಅದರಲ್ಲಿ ಸಮಸ್ಯೆಯು ಇನ್ನೊಬ್ಬರಿಗೆ ಹೋಗುತ್ತದೆ ಮಾತ್ರವೇ ಅಲ್ಲ; ಅವರು ಅದನ್ನು ಯೋಚಿಸಲು ಶುರು ಮಾಡುತ್ತಾರೆ. ಇದರಲ್ಲಿ ಸಮಸ್ಯೆ ಎನ್ನುವುದು ದ್ವಿಗುಣವಾಗುತ್ತದೆ. ಇದರ ಲೆಕ್ಕಾಚಾರವನ್ನು ನಾವು ನೋಡಬೇಕು. ಯಾವಾಗ ಇದು ಉನ್ಮಾದದಿಂದ ಮನೋವಿಕಲತೆಯ ಕಡೆಗೆ ಹೋಗುತ್ತದೆಯೋ ಆಗ ಅದರ ಅರ್ಥವೂ ಬೇರೆಯಾಗುತ್ತದೆ. ನಾವು ಇನ್ನೊಬ್ಬರ ಸಮಸ್ಯೆಯನ್ನು ನೋಡಿಕೊಂಡು ಅದನ್ನು ಸಂತೋಷ ಪಡಲು ಪ್ರಾರಂಭ ಮಾಡಿದರೆ ಈ ಸಮಸ್ಯೆಯು ಉಂಟಾಗುತ್ತದೆ. ನಾವು ನಮ್ಮ ಸಮಸ್ಯೆಯನ್ನು ಇನ್ನೊಬ್ಬರಿಗೆ ಹೇಳಿದರೆ ಆಗ ಅದರ ಸಮಸ್ಯೆ ಮತ್ತು ಅದರ ಒತ್ತಡಗಳು ನಮಗೆ ತಗ್ಗುತ್ತವೆ. ಆದರೆ ನಾವು ಬಿಡುಗಡೆ ಹೊಂದುತ್ತೇವೆ. ಇನ್ನೊಬ್ಬರು ಅದನ್ನು ಹೊರುತ್ತಾರೆ. ಯಾವುದು ನಮ್ಮ ಮಧ್ಯೆ ಒಂದು ಯಾಜಮಾನ್ಯವನ್ನು ವಹಿಸುತ್ತದೆಯೋ ಅದು ತನ್ನ ಅಧಿಕಾರವನ್ನು ಭಿನ್ನವಾಗಿಯೂ ಉಳಿಸಿಕೊಳ್ಳುತ್ತದೆ. ಆದರೆ ಇಲ್ಲಿ ಅದು ನೇರವಾಗಿದ್ದರೂ ನಮಗೆ ಅದು ಪ್ರಭುತ್ವದ ಮಧ್ಯವರ್ತಿ ಎಂದು ತಿಳಿಯುವುದೂ ಇಲ್ಲ. ಈಗ ಮತ್ತೆ ಮೊದಲ ಮಾತಿಗೆ ನಾವು ಬರಬಹುದು: ನಮಗೆ ಮೂರನೆಯಾದ ಒಂದು ಯಜಮಾನಿಕೆಯು ನಮ್ಮನ್ನು ನಿಯಂತ್ರಣ ಮಾಡುತ್ತದೆ. ಅದು ಸಮಸ್ಯೆ. ಅದು ನಮಗೆ ಒಂದು ಪ್ರೇತದಂತೆ ಕಂಡರೂ ಆಶ್ಚರ್ಯವಿಲ್ಲ.

1. ಜಿಜೆಕ್ – ಪ್ಯಾರಲಕ್ಸ್‌ವ್ಯೂ.

4. ಮತ್ತೆ ಮಾರ್ಕ್ಸ್‌ವಾದದ ಸಮರ್ಥನೆ

1980ರ ವೇಳೆಗೆ ಹೇಗೆ ಮಾರ್ಕ್ಸ್ ತನ್ನ ರಾಜಕೀಯ ಅರ್ಥಶಾಸ್ತ್ರವನ್ನು ಸಮರ್ಥಿಸಿದ ಎಂದು ಅಲ್ತೂಸರ್ ಹೇಳುತ್ತಾನೆ (ಫಾರ್ ಮಾರ್ಕ್ಸ್) ವಾಸ್ತವವಾಗಿ ಆಧುನಿಕ ಚಿಂತನೆಗಳಲ್ಲಿ ಒಂದಾದ ಮಾರ್ಕ್ಸ್‌ವಾದವನ್ನು ಅಲ್ಲಗಳೆಯುವುದು ಸುಲಭವಿರಬಹುದು ಮತ್ತು ಅದನ್ನು ವಿರೋಧಿಸಲು ಆಧುನಿಕೋತ್ತರವಾದವು ಯತ್ನ ಮಾಡುತ್ತಿರುವುದು ನಿಜವೂ ಹೌದು. ಆದರೆ ಮಾರ್ಕ್ಸ್ ಹೇಳುವ ಅತ್ಯಂತ ವೈಜ್ಞಾನಿಕವಾದ ರಾಜಕೀಯ ಅರ್ಥಶಾಸ್ತ್ರವನ್ನು ವಿರೋಧಿಸುವುದು ನಿಜಕ್ಕೂ ಅತ್ಯಂತ ಕಷ್ಟ. ಎರಡು ಸಂಗತಿಗಳು ಅದರಲ್ಲಿ ಅತ್ಯಂತ ಮುಖ್ಯವಾಗಿವೆ. ಒಂದು ನಿಜವಾದ ಜೀವನ ಮತ್ತು ಅದರ ಪಲ್ಲಟ. ಮತ್ತೊಂದು ಅದರ ನಿರ್ದಿಷ್ಟವಾದ ಗುರಿಗಳು. ಚರಿತ್ರೆ ಮತ್ತು ಅದರ ಬದಲಾವಣೆಯಲ್ಲಿ ಹೇಗೆ ಮನುಷ್ಯರ ಸಾಮಾನ್ಯವಾದ ಜ್ಞಾನವು ಕೆಲಸವನ್ನು ಮಾಡುತ್ತದೆ. ಮತ್ತು ಅದರ ಪರಿಣಾಮವು ಯಾವುದು ಎನ್ನುವುದು ಅತ್ಯಂತ ಮುಖ್ಯವೆಂದು ಮಾರ್ಕ್ಸ್ ಪರಿಗಣಿಸುತ್ತಾನೆ. ಮನುಷ್ಯನು ತನ್ನ ಚಟುವಟಿಕೆಯಿಂದ ನಿಸರ್ಗವನ್ನು ಬದಲಾವಣೆ ಮಾಡುತ್ತಾನೆ. ಮನುಷ್ಯ ಮತ್ತು ನಿಸರ್ಗವನ್ನು ಚರಿತ್ರೆಯು ಬದಲು ಮಾಡುತ್ತದೆ. ಹಾಗೂ ಚರಿತ್ರೆಯನ್ನು ಸಮಾಜವು ಬದಲು ಮಾಡುತ್ತದೆ. ಈ ದೃಷ್ಟಿಯಿಂದ ಕಾರ್ಮಿಕರು ಮತ್ತು ಅವರ ಶಕ್ತಿಯು ಅತ್ಯಂತ ಮಹತ್ವದ್ದು. ಒಂದು ಅರ್ಥದಲ್ಲಿ ಕಾರ್ಮಿಕರು ಮತ್ತು ಅವರ ಶಕ್ತಿಯೇ ಸಮಾಜದ ಸಂಪನ್ಮೂಲ.

ಕಾರ್ಮಿಕರು ಸಮಾಜವನ್ನು ಕಟ್ಟುತ್ತಾರೆ ಹಾಗೂ ಅದನ್ನು ವಿಶ್ವಾತ್ಮಕ ಮಾಡುತ್ತಾರೆ. ಆದರೆ ಯಾವಾಗ ಬಂಡವಾಳವಾದವು ಬರುತ್ತದೆಯೋ ಆಗ ಅದರ ಅರ್ಥವು ಬೇರೆಯಾಗುತ್ತದೆ. ಬಂಡವಾಳವಾದವು ಕಾರ್ಮಿಕರು ಮತ್ತು ಅವರ ಶಕ್ತಿಯನ್ನು ಛಿದ್ರಮಾಡುತ್ತದೆ. ಮಾರುಕಟ್ಟೆಯಲ್ಲಿ ಕಾರ್ಮಿಕರು ಮತ್ತು ಅವರ ಶಕ್ತಿಯನ್ನು ದೂರಮಾಡಿ ಸ್ವಾರ್ಥಕ್ಕಾಗಿ ತನ್ನ ಲಾಭವನ್ನು ಮಾತ್ರವೇ ಗುರಿಮಾಡುತ್ತದೆ. ಇದರಿಂದ ಉತ್ಪಾದನೆ ಮತ್ತು ಅದರ ಸಂಬಂಧಗಳ ಸ್ವರೂಪವು ಬೇರೆಯಾಗುತ್ತದೆ. ಬಂಡವಾಳವಾದವು ಒಂದು ಹಂತದಲ್ಲಿ ಸ್ವಂತಿಕೆ ಮತ್ತು ಅದರ ಅರಿವನ್ನು ಮಾತ್ರವೇ ಹೇಳುತ್ತದೆ. ಆದ್ದರಿಂದಲೇ ಈವತ್ತು ನಾವು ಮತ್ತೆ ಮಾರ್ಕ್ಸ್‌ವಾದವನ್ನು ಓದಬೇಕಾಗಿದೆ.

ಬಂಡವಾಳವಾದ ಮತ್ತು ಅದರ ವಿಕಾಸವು ಆಗಿರುವುದಂತೂ ನಿಜ. ಅನಗತ್ಯವಾಗಿ ವಿಕಾಸವಾದವನ್ನು ತಿರುಚುವ ಮತ್ತು ತನಗೆ ಬೇಕಾದಂತೆ ವ್ಯಾಖ್ಯಾನ ಮಾಡುವ ವಿಚಾರಗಳು ನಮಗೆ ಈಗ ಬೇಕಾಗಿಲ್ಲ. ಮಾರ್ಕ್ಸ್; ಹೊಕೆಮಾರ್ ನಮಗೆ ಬೇರೆ ತಿಳುವಳಿಕೆಯನ್ನು ಕೊಡುತ್ತಾನೆ. ಬಂಡವಾಳವಾದ ಮತ್ತು ಅದರ ರಚನೆಯಲ್ಲಿಯೇ ಅನೇಕ ವೈರುಧ್ಯಗಳು ಇವೆ. ಅವನು ತಾಂತ್ರಿಕವಾದ ಯಜಮಾನಿಕೆಯನ್ನು ನೋಡುತ್ತಾನೆ. ಅವನ ಪ್ರಕಾರ ಆಧುನಿಕ ಜಗತ್ತಿನಲ್ಲಿ ಕಾರ್ಮಿಕರು ಮತ್ತು ಅವರ ಸ್ವರೂಪವು ಬದಲಾಗಿದೆ. ತಾಂತ್ರಿಕತೆಯು ಹೆಚ್ಚು ಮುಂಚೂಣಿಗೆ ಬಂದಾಗ ಜನರು ಮತ್ತು ಅವರ ಭಾವನೆಗಳು ಬದಲಾಗುತ್ತವೆ.

ಹೈಡೆಗಾರ್ ಕೂಡಾ ಒಂದು ವಾದವನ್ನು ಮಂಡಿಸುತ್ತಾನೆ. ಅವನು ಪುನರುಜ್ಜೀವನ ಮತ್ತು ಅದರ ತಾಂತ್ರಿಕತೆಯನ್ನು ಇಟ್ಟುಕೊಂಡು ಹೇಳುತ್ತಾನೆ. ಪರಿಕರ ಕೇಂದ್ರಿತವಾದ ಕಾರಣಗಳು ಹೇಗೆ ಯಜಮಾನಿಕೆಯನ್ನು ವಹಿಸುತ್ತವೆ ಎನ್ನುವುದು ಅವನ ಮುಖ್ಯವಾದ ಕಾಳಜಿಯೂ ಆಗಿದೆ. ಆದರೆ ಯಾವುದನ್ನು ಈವತ್ತು ನಾವು ಬಂಡವಾಳೋತ್ತರವೆಂದು ಹೇಳುತ್ತೇವೆಯೋ ಅದರಲ್ಲಿಯೂ ಕಾರ್ಮಿಕರು ಇದ್ದಾರೆ ಎನ್ನುವುದನ್ನು ಮರೆಯಲಾಗುವುದೂ ಇಲ್ಲ. ಪಲ್ಲಟಗೊಳ್ಳುತ್ತಿರುವ ಸಂದರ್ಭದಲ್ಲಿ ಕಾರ್ಮಿಕರು ಹೇಗೆ ಇದ್ದಾರೆ ಎಂದು ನೋಡಬೇಕಾಗಿದೆ. ಮಾರುಕಟ್ಟೆ ಮತ್ತು ಬಂಡವಾಳ ಹೂಡುವಿಕೆಯು ಹೇಗೆ ಬೇರೆ ಬೇರೆ ರೂಪಗಳನ್ನು ಪಡೆದುಕೊಂಡಿವೆಯೋ ಅದೇ ರೀತಿಯಲ್ಲಿ ಬೇರೆ ಬೇರೆ ರೂಪಾಂತರಗಳು ಕಾರ್ಮಿಕ ವರ್ಗದಲ್ಲಿಯೂ ಆಗಿದೆ ಎನ್ನುವುದು ಸ್ಪಷ್ಟ. ಆದ್ದರಿಂದ ಬಿಡುಗಡೆ ಎನ್ನುವುದು ಈಗ ಬೇರೆ ಅರ್ಥವನ್ನು ಪಡೆದುಕೊಂಡಿವೆ. ಈಗ ನಮ್ಮ ಎದುರು ಇರುವುದು ಹೊಸ ರೀತಿಯ ಸಾಮಾಜಿಕ ಸಂಬಂಧ. ಮನುಷ್ಯ ಮತ್ತು ಅವನು ಒಂದು ಇತಿಹಾಸದಲ್ಲಿ ಪರಿಕರವಾಗುವುದು ಒಂದು ಥರ. ಅವನೇ ಪರಿಕರವನ್ನು ಸೃಷ್ಟಿ ಮಾಡಿಕೊಂಡು ತನಗೆ ಬೇಕಾದ್ದನ್ನು ರೂಪಿಸುವುದು ಮತ್ತೊಂದು ಥರ. ಆದರೆ ಇಲ್ಲಿ ಬೇರೆ ನಡೆಯುತ್ತದೆ. ಇದನ್ನು ಅಡರ್ನೊ ಮತ್ತು ಹೊರ್ಕೆಮಾರ್ ಹೇಳುವುದು ಮತ್ತೊಂದು ರೀತಿಯಲ್ಲಿ. ಅವರು ಹೇಳುವುದು ಪುನರುಜ್ಜೀವನ ಮತ್ತು ಅದರ ಅನಂತರ ವ್ಯಾಪಕವಾದ ವ್ಯತ್ಯಾಸವು ಆಯಿತು. ಪರಿಕರ ಕೇಂದ್ರಿತವಾದ ಬದಲಾವಣೆಯು ನಮ್ಮನ್ನು ವ್ಯತ್ಯಾಸ ಮಾಡಿತು ಎಂದು ಹೇಳುತ್ತಾರೆ. ಬಂಡವಾಳವಾದ ಮತ್ತು ಸಮಾಜವಾದ ಎರಡೂ ಪರಿಕರವನ್ನು ಒಪ್ಪುತ್ತವೆ. ಆದರೆ ಪರಿಕರ ಮತ್ತು ಅದರ ಕಾರಣಗಳನ್ನು ವಿಶ್ಲೇಷಣೆಯನ್ನು ಮಾಡುವಾಗ ಮಾತ್ರವೇ ಬೇರೆಯಾಗುತ್ತವೆ. ಉತ್ಪಾದನೆಯಲ್ಲಿ ಕಾರ್ಮಿಕರು ಮತ್ತು ಅವರ ಪಾತ್ರದ ನಿರ್ವಹಣೆಯನ್ನು ನೋಡುವಾಗ ಅವರು ಬೇರೆಯಾಗುತ್ತಾರೆ. ತಾಂತ್ರಿಕತೆ ಮತ್ತು ಅದರ ಯಜಮಾನಿಕೆಯನ್ನು ಕುರಿತು ಹೇಳುವಾಗ ಹೈಡೆಗಾರ್

ಕೂಡಾ ಅಧಿಕಾರ, ನಮ್ಮ ಶಕ್ತಿ, ಹಾಗೂ ಪುನರುತ್ಪಾದನೆಯನ್ನು ಪ್ರಸ್ತಾಪಿಸಿದ್ದಾನೆ. ಎನ್ನುವುದು ಇಲ್ಲಿ ಮುಖ್ಯವಾಗಿ ನಾವು ನೋಡಬೇಕಾಗಿದೆ. ಬಂಡವಾಳವಾದ ಮತ್ತು ಪುನರ್ ಉತ್ಪಾದನೆ ಎನ್ನುವುದು ಹೇಗೆ ನಮಗೆ ಅಗತ್ಯವಾಗುತ್ತದೆ ಎನ್ನುವುದು ನಮ್ಮ ಮುಂದೆ ಇರುವ ಪ್ರಶ್ನೆಯು ಅಲ್ಲ. ಅದರ ಬದಲು ನಾವು ನೋಡಬೇಕಾದದ್ದು ಅದು ಮನುಷ್ಯರನ್ನು ಹೇಗೆ ಗ್ರಹಿಸುತ್ತದೆ ಎನ್ನುವುದನ್ನು ಮಾತ್ರವೇ. ಬಂಡವಾಳವಾದ ಎನ್ನುವುದು ವಿಸ್ತರಣೆಯು ಆಗುವಾಗ ಅದು ಕೆಲವನ್ನು ಹೆಚ್ಚು ಚಾಲ್ತಿಗೆ ತರುತ್ತದೆ. ಅದರ ಗುರಿಯು ಬೇರೆಯಿರುತ್ತದೆ. ಮಾರ್ಕ್ಸ್ ಇದನ್ನು ಒಂದು ಶಾಸ್ತ್ರಭಾಗದ ವಿಚ್ಛೇದ ಎಂದು ಹೇಳುತ್ತಾನೆ. ಅವನು ಸ್ವಯಂಸಾಕ್ಷ್ಯ ಮತ್ತು ನಿಜವಾದ ಜೀವನಕ್ರಮ ಎನ್ನುವುದನ್ನು ವಿವರಿಸಿದ್ದಾನೆ (ಜರ್ಮನ್ ಈಡಿಯಾಲಜಿ) ಒಂದು ನಿರ್ದಿಷ್ಟವಾದ ಸಾಮಾಜಿಕ ಸನ್ನಿವೇಶ ಮತ್ತು ಉತ್ಪಾದನೆ ಎನ್ನುವುದು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಮಾರ್ಕ್ಸ್ ವಿವರಿಸುತ್ತಾನೆ.

ಮನುಷ್ಯನಿಗೆ ಒಂದು ಕಲ್ಪನೆಯ ಶಕ್ತಿಯು ಇದೆ. ಅದರ ಮೂಲಕ ಅವನು ಉತ್ಪಾದನೆಯನ್ನು ಮಾಡುತ್ತಾನೆ. ಪ್ರಜ್ಞೆಯ ಕಾರಣಕ್ಕೆ ವ್ಯಕ್ತಿಯು ಪ್ರಾಣಿಗಿಂತ ಬೇರೆಯಾಗುತ್ತಾನೆ. ಅವನು ದೇಹವನ್ನು ಬಳಸಿಕೊಂಡು ಉತ್ಪಾದನೆಯನ್ನು ಮಾಡುತ್ತಾನೆ. ಮತ್ತೊಂದು ಪ್ರಶ್ನೆಯು ಬರುತ್ತದೆ. ನಾವು ಸ್ವರ್ಗದಿಂದ ಭೂಮಿಗೆ ಬಂದಿದ್ದೇವೆ ಎನ್ನುವುದಕ್ಕಿಂತ ಹೆಚ್ಚಾಗಿ ನಾವು ಭೂಮಿಯನ್ನು ಸ್ವರ್ಗ ಮಾಡಬೇಕಾಗುತ್ತದೆ. ನಮ್ಮ ಭೌತಿಕವಾದ ಅಗತ್ಯಗಳು ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾಗಿವೆ. ನೀತಿ, ಧರ್ಮ, ಆಧ್ಯಾತ್ಮ ಎನ್ನುವುದು ನಮಗೆ ಈ ದೃಷ್ಟಿಯಿಂದ ಅನಂತರದ ಪ್ರಶ್ನೆಗಳು ಮಾತ್ರವೇ ಆಗಿರುತ್ತವೆ. ನಮ್ಮ ಆಲೋಚನೆ ಮತ್ತು ನಮ್ಮ ಉತ್ಪಾದನೆಗೆ ಈ ದೃಷ್ಟಿಯಿಂದ ಸಂಬಂಧವೂ ಇದೆ. ಇದನ್ನು ರಾಜಕೀಯ ಅರ್ಥಶಾಸ್ತ್ರವು ಹೇಳುತ್ತದೆ. ಆದ್ದರಿಂದ ನಾವು ತತ್ವಜ್ಞಾನದ ಜೊತೆಗೆ ಯಾವ ಸಂವಹನವನ್ನು ಹೊಂದಿರಬೇಕು ಎನ್ನುವುದು ಮಾತ್ರವೇ ಇಲ್ಲಿ ಮುಖ್ಯ. ಅದು ಲೈಂಗಿಕ ಸಂಗಾತಿಯು ಇಲ್ಲದ ಬರೀ ಮುಷ್ಟಿ ಮೈಥುನದ ರೀತಿಯಲ್ಲಿ ಇರಬಾರದು ಎಂದು ಜಿಜೆಕ್ ಹೇಳುತ್ತಾನೆ. ಉತ್ಪಾದನೆ ಮತ್ತು ಅದರ ಸತ್ಯಗಳು ಮಾತ್ರವೇ ಮಾರ್ಕ್ಸ್‌ಗೆ ಹೆಚ್ಚು ಮುಖ್ಯವಾಗುತ್ತದೆ. ನಿಜವಾದ ಉತ್ಪಾದನೆ ಮತ್ತು ಅದರ ಸ್ವರೂಪವನ್ನು ಮಾರ್ಕ್ಸ್ ಹೆಚ್ಚು ಒತ್ತುಕೊಟ್ಟು ನೋಡಿದ್ದಾನೆ. ಆದರ್ಶ ಕೇಂದ್ರಿತವಾದ ತತ್ವಜ್ಞಾನವನ್ನು ಮಾರ್ಕ್ಸ್ ಅಷ್ಟು ಒಪ್ಪುವುದಿಲ್ಲ. ಅದನ್ನು ಅವನು ಭಾವನಾವಾದಿ ಎಂದು ಹೇಳುತ್ತಾನೆ. ಯಾವುದೇ ಧಾರ್ಮಿಕತೆಯು ತನ್ನ ಮಟ್ಟಿಗೆ ಉತ್ಪಾದನಾ ಶಕ್ತಿಯನ್ನು ಹೊಂದಿಲ್ಲ ಎಂದು ಅವನು ಭಾವಿಸುತ್ತಾನೆ. ಆರ್ಥಿಕತೆ ಎನ್ನುವುದು ಭೂಮಿಗೆ ಸಂಬಂಧಪಟ್ಟಿದೆ ಎಂದು ಅವನು ಹೇಳುತ್ತಾನೆ ವಸ್ತು ಮತ್ತು ಅದರ ವಿಶ್ಲೇಷಣೆಗೆ ಮಾರ್ಕ್ಸ್ ಆದ್ಯತೆಯನ್ನು ಕೊಡುತ್ತಾನೆ. ಆದರೆ ಮಾರ್ಕ್ಸ್ ಮತ್ತೊಂದು

ಮಾತನ್ನು ಕ್ಯಾಪಿಟಲ್ ಕೃತಿಯಲ್ಲಿ ಹೇಳುತ್ತಾನೆ: ವಸ್ತುವಿನ ಉಪಯೋಗದ ಮೌಲ್ಯ ಮತ್ತು ವಿನಿಮಯದ ಮೌಲ್ಯ. ಇದುವೇ ಅನಂತರ ಬಂಡವಾಳವಾದದಲ್ಲಿ ಹೆಚ್ಚು ಸಂಕೀರ್ಣವಾಯಿತು. ಉಪಯೋಗ ಮತ್ತು ವಿನಿಮಯ ಎನ್ನುವುದು ತಾರತಮ್ಯಕ್ಕೆ ಗುರಿಯಾಯಿತು. ಮನುಷ್ಯ ಮತ್ತು ಅವನ ಕ್ರಿಯೆ ಅಥವಾ ಕೌಶಲವು ಉಪಯೋಗತಾ ಮೌಲ್ಯವನ್ನು ಹೇಳುತ್ತದೆ. ಅದು ನಮಗೆ ಅಗತ್ಯವಾಗಿದೆ. ಮನುಷ್ಯ ಮತ್ತು ನಿಸರ್ಗ ಎರಡೂ ಸಂಬಂಧವು ಇದರ ಮೂಲಕವೇ ವ್ಯಕ್ತವಾಗುತ್ತವೆ. ಮನುಷ್ಯ ಮತ್ತು ಅವನ ಪರಿಸರದ ನಡುವೆ ಸಂಬಂಧವಿದೆ. ಒಂದು ವಿನಿಮಯವೂ ಇದೆ.

ನಿಸರ್ಗವು ನಮ್ಮ ಅಸ್ತಿತ್ವದ ಮೇಲೆ ಪ್ರಭಾವವನ್ನು ಬೀರುತ್ತದೆ ಮತ್ತು ಕೆಲವೊಮ್ಮೆ ನಿಸರ್ಗದ ರೂಪವನ್ನು ನಾವು ವ್ಯತ್ಯಾಸ ಮಾಡುತ್ತೇವೆ. ಮನುಷ್ಯ ಮತ್ತು ಅವನ ಶಕ್ತಿಯು ಒಂದು ಕಡೆಗೆ ಇರುತ್ತದೆ ಮತ್ತೊಂದು ಕಡೆಗೆ ನಿಸರ್ಗವು ಇರುತ್ತದೆ. ಭತ್ತವನ್ನು ಬೆಳೆಯುವುದನ್ನು ಮನುಷ್ಯನು ನಿಸರ್ಗದಿಂದ ಕಲಿತುಕೊಂಡ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಯಾವಾಗ ಭತ್ತದಿಂದ ನಾವು ರೊಟ್ಟಿ ಮಾಡಿಕೊಂಡು ಸುಡಲು ಕಲಿತೆವೋ ಆಗ ನಮ್ಮ ಕೌಶಲವು ಭಿನ್ನವಾಯಿತು. ಸಮಾಜ ಮತ್ತು ಸನ್ನಿವೇಶವು ನಮಗೆ ಅನೇಕವನ್ನು ಕಲಿಸುತ್ತದೆ. ಆದರೆ ನಾವು ಈ ಕೆಲಸಕ್ಕೆ ಬೇರೆಯವರನ್ನು ಅದರಲ್ಲಿಯೂ ಮುಖ್ಯವಾಗಿ ಗುಲಾಮರಿಂದ ಅದನ್ನು ಮಾಡಿಸಲು ಪ್ರಾರಂಭ ಮಾಡಿದೆವೋ ಆಗ ಅದರ ಸ್ವರೂಪವು ಬೇರೆಯಾಯಿತು. ಇನ್ನೊಬ್ಬರ ಕ್ರಿಯೆ ಅದರ ಲಾಭ ನಮಗೆ. ಯಾವಾಗ ಉಪಯೋಗದ ಮೌಲ್ಯವು ಒಂದು ರೀತಿಯಾಗಿದ್ದು; ಅದರ ಸ್ವರೂಪವು ಇನ್ನೊಂದು ಥರವಾಯಿತೋ ಆಗ ಅದರ ಅರ್ಥವು ಬೇರೆಯಾಯಿತು. ಇವುಗಳು ಸ್ವಲ್ಪ ಬದಲಾವಣೆ ಆದರೂ ಅನೇಕ ವ್ಯತ್ಯಾಸಗಳು ಆಗುತ್ತವೆ.

ಸಾಮಾಜಿಕ ಉತ್ಪನ್ನ ವಿನಿಮಯದ ಉತ್ಪನ್ನವಾಗಿ ಪಲ್ಲಟವಾಗುತ್ತವೆ. ಅದರ ಮೂಲಕವೇ ಕಾರ್ಮಿಕರನ್ನು ಪರಕೀಯರನ್ನಾಗಿ ಮಾಡಲಾಗುತ್ತದೆ. ಆದರೆ ಇವುಗಳು ತಾತ್ವಿಕ ಪ್ರಶ್ನೆಗಳೂ ಆಗಿರುತ್ತವೆ. ಸಾಮಾಜಿಕ ಮತ್ತು ಚಾರಿತ್ರಿಕ ಸನ್ನಿವೇಶದ ಹಿನ್ನೆಲೆಯಿಂದ ಇದನ್ನು ನೋಡಬೇಕಾಗುತ್ತದೆ. ಆದರೆ ಈ ಪ್ರಕ್ರಿಯೆಗಳು ಸುಮ್ಮನೆ ನಡೆಯುವುದೂ ಇಲ್ಲ ಎಂದು ಮಾರ್ಕ್ಸ್ ಹೇಳುತ್ತಾನೆ. ಕೆಲವು ವಿಚಾರಗಳು ಒಂದು ಸಾಮಾನ್ಯವಾದ ಬುದ್ಧಿವಂತಿಕೆಯಿಂದ ನಡೆಯುತ್ತದೆ ಎಂದು ಮಾರ್ಕ್ಸ್ ಹೇಳುತ್ತಾನೆ. ಸಾಮಾನ್ಯವಾದ ಬುದ್ಧಿವಂತಿಕೆಯು ಕೆಲವನ್ನು ಪ್ರಾರಂಭಿಸುತ್ತದೆ. ಉತ್ಪಾದನೆಯನ್ನು ರೂಪಿಸುತ್ತದೆ. ಅವುಗಳು ಸಮಾಜ ಮತ್ತು ಚರಿತ್ರೆಯ ಅಗತ್ಯವೂ ಆಗಿರುತ್ತದೆ. ಯಾವುದೇ ವಸ್ತುವು ನಮಗೆ ಒಂದು ನಿರ್ದಿಷ್ಟವಾದ ಸಾಮಾಜಿಕ ಸಂಬಂಧವನ್ನು ಹೇಳುತ್ತದೆ ಎನ್ನುವುದನ್ನು ಮಾರ್ಕ್ಸ್ ಅಲ್ಲಗಳೆಯುವುದೂ ಇಲ್ಲ ಸಾಮಾಜಿಕ ಚಟುವಟಿಕೆ ಮತ್ತು ಅದರ ಸ್ವರೂಪಕ್ಕೂ ಉತ್ಪಾದನೆಗೂ ಒಂದು ಸಂಬಂಧವಿದೆ.

ಅದುವೇ ನಮಗೆ ವಿಶ್ವಾತ್ಮಕವಾದ ಗ್ರಹಿಕೆಗೆ ಕಾರಣವಾಗುತ್ತದೆ ಎಂದು ಅವನು ಹೇಳುತ್ತಾನೆ. ವಸ್ತು ಮತ್ತು ಅದರ ಜೊತೆಗೆ ನಾವು ಸ್ಥಾಪಿಸುವ ಸಂಬಂಧವು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಶ್ರಮ ಮತ್ತು ಅದರ ಬೆಲೆಯು ಒಂದು ರೀತಿಯಲ್ಲಿ ಇರುತ್ತದೆ. ಆದರೆ ಹಣವನ್ನು ಲೆಕ್ಕ ಹಾಕುವುದು ಹೇಗೆ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆ.

ಲಕಾನ್ ಅದನ್ನು ಕಲ್ಪಿತ, ಸಾಂಕೇತಿಕ ಮತ್ತು ವಾಸ್ತವ ಎಂದು ಹೇಳುತ್ತಾನೆ. ಹಣವನ್ನು ವಿಮರ್ಶೆ ಮಾಡುವಾಗ ಅದರ ಕಾರ್ಯವನ್ನು ಮಾರ್ಕ್ಸ್ ಕೂಡಾ ಹೇಳುತ್ತಾನೆ. ಅವನ ಪ್ರಕಾರ ಹಣವು ನಮಗೆ ಅಗತ್ಯವಾಗುವುದು ವಸ್ತು ಮತ್ತು ಅದರ ಮೌಲ್ಯಕ್ಕೆ ಅನುಸಾರವಾಗಿ.

ಮಾರ್ಕ್ಸ್ ವಸ್ತು ಮತ್ತು ಅದರ ಮೌಲ್ಯವನ್ನು ಒಂದು ಮಾನದಂಡವಾಗಿ ನೋಡುತ್ತಾನೆ. ವಸ್ತು ಮತ್ತು ಅದರ ಮೌಲ್ಯವು ನಿಗದಿಯಾಗುವುದು ಒಂದು ಕಲ್ಪನೆಯ ಮೂಲಕವೂ ಹೌದು. ಬ್ಯಾಂಕಿನ ನೋಟುಗಳು ನಮಗೆ ಪ್ರಾತಿನಿಧಿಕವಾದ ಒಂದು ರೂಪವು ಮಾತ್ರವೇ ಆಗಿರುತ್ತದೆ. ಅದರ ಅಗತ್ಯವಿರುವುದು ನಮಗೆ ಕೊಡುವುದಕ್ಕೆ ಮತ್ತು ತೆಗೆದುಕೊಳ್ಳುವುದಕ್ಕೆ ಮಾತ್ರವೇ ಎಂದು ಅರ್ಥಮಾಡಿಕೊಳ್ಳುವುದು ಈ ಸನ್ನಿವೇಶದಲ್ಲಿ ಅಗತ್ಯವಿದೆ. ಮಾರ್ಕ್ಸ್ ನಿಜವಾದ ಮನುಷ್ಯರು ಮತ್ತು ಹಣವನ್ನು ಕುರಿತು ಹೇಳುವಾಗ ಅದರ ಸಾಮಾಜಿಕ ಅಗತ್ಯವನ್ನು ಮಾತ್ರವೇ ಹೇಳುತ್ತಾನೆ. ಉತ್ಪಾದನೆ ಮತ್ತು ಅದರ ಸ್ವರೂಪವನ್ನು ಮಾರ್ಕ್ಸ್ ಮತ್ತು ಏಂಗಲ್ಸರು ಚರ್ಚೆ ಮಾಡಿದ್ದು ಮತ್ತೊಂದು ಕೃತಿಯಲ್ಲಿ. ಅದು ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವವನ್ನು ಹೇಳುತ್ತದೆ. ಭೌತಿಕವಾದ ಉತ್ಪಾದನೆ ಮತ್ತು ರಕ್ತ ಸಂಬಂಧಗಳು ಹೇಗಾದವು ಅದಕ್ಕೂ ಸಾಮಾಜಿಕ ಸ್ವರೂಪಕ್ಕೂ ಏನು ಕೊಂಡಿಗಳು ಇವೆ ಎಂದು ಅವನು ವಿವರಿಸುತ್ತಾನೆ. ಜೀವನ ಮತ್ತು ಉತ್ಪಾದನೆಗೆ ಒಂದು ಸಂಬಂಧವು ಇದೆ ಎಂದು ಮಾರ್ಕ್ಸ್ ಹೇಳಿದ್ದು ಇಲ್ಲಿ ಈ ದೃಷ್ಟಿಯಿಂದ ಬಹಳ ಮಹತ್ವದ್ದು. ಆಹಾರ, ವಸತಿ ಮತ್ತು ಪರಿಕರಗಳು ಮನುಷ್ಯನಿಗೆ ಹೇಗೆ ಅಗತ್ಯವಾಗುತ್ತವೆ ಎಂದು ಅವನು ಹೇಳುತ್ತಾನೆ. ಉದಾಹರಣೆಗೆ ಭೂಮಿಯಲ್ಲಿ ಇರುವ ಗಡ್ಡೆಯನ್ನು ಬಾಯಲ್ಲಿ ಕಚ್ಚಿ ತೆಗೆಯಲು ಬರುವುದೂ ಇಲ್ಲ. ಅದಕ್ಕೆ ನಮಗೆ ಸಲಾಕೆ ಬೇಕಾಗುತ್ತದೆ, ಸಲಾಕೆಯು ಒಂದು ಪರಿಕರ. ಉತ್ಪಾದನೆ ಮತ್ತು ಅದರ ವಿವಿಧ ಹಂತಗಳು ನಮಗೆ ಬೇರೆ ಬೇರೆ ಅನುಭವವನ್ನು ಕೊಟ್ಟವು. ಅದು ಸಾಮಾಜಿಕ ರೂಪಕ್ಕೆ ಕಾರಣವೂ ಆಯಿತು. ಇದುವೇ ಲೆವಿಸ್ಟ್ರಾಸಿಗೆ ಮುಖ್ಯವಾದ ಒಳನೋಟಗಳನ್ನು ಕೊಟ್ಟಿತು. ನಮಗೆ ಬೇಕಾದ ಜೀವನವನ್ನು ನಾವು ರೂಪಿಸಿಕೊಳ್ಳುತ್ತೇವೆ. ಉತ್ಪಾದನೆ ಮತ್ತು ಮರು ಉತ್ಪಾದನೆ ಎನ್ನುವುದು ಸಮಾಜದಲ್ಲಿ ಅತ್ಯಂತ ಮುಖ್ಯವಾದ ಅಂಶವೂ ಆಗಿದೆ. ಅದು ಅಗತ್ಯವಾದದ್ದು. ಆಹಾರ, ವಸತಿ ಮತ್ತು ಬೇರೆ ಬೇರೆ ಪರಿಕರಗಳಿಂದ ನಾವು

ಸಮಾಜವನ್ನು ಮುನ್ನಡೆಸುತ್ತೇವೆ. ಮನುಷ್ಯನು ತನಗೆ ಬೇಕಾದ್ದನ್ನು ಉತ್ಪಾದಿಸುವ ಶಕ್ತಿಯನ್ನು ಹೊಂದಿದ್ದಾನೆ. ಸಮಾಜ ಮತ್ತು ಅದರ ಸಂಸ್ಥೆಗಳು ನಮಗೆ ಬೇರೆ ಬೇರೆ ಮಜಲುಗಳನ್ನು ಹೇಳುತ್ತವೆ. ಒಂದೇ ಕ್ಷಣದಲ್ಲಿ ಒಂದು ಸಮಾಜವು ಉಂಟಾಗಿಲ್ಲ.

ಸಾಮಾಜಿಕ ಸಂಸ್ಥೆಗಳು ಚರಿತ್ರೆಯಿಂದ ಬಂದಿವೆ. ಒಂದು ಸಮಾಜದಲ್ಲಿ ಬೇರೆ ಬೇರೆ ಉತ್ಪಾದನೆಗಳು ಹೇಗಾಗುತ್ತವೆ ಎನ್ನುವುದರ ಆಧಾರದ ಮೇಲೆಯೇ ನಾವು ಆ ಸಮಾಜದ ನಿಜವಾದ ಸಂಪತ್ತನ್ನು ಗುರುತಿಸಬಹುದು ಎಂದು ಮಾರ್ಕ್ಸ್ ಮತ್ತು ಏಂಗಲ್ಸರು ಹೇಳುತ್ತಾರೆ. ಆದರೆ ಅದರಲ್ಲಿ ಒಂದು ಸಮಾಜದ ನಿಯಮಗಳು ಅಥವಾ ಸಂಹಿತೆಗಳು ಕೆಲಸವನ್ನು ಮಾಡುತ್ತವೆ. ಹಾಗಿದ್ದರೆ ನಿಜವಾಗಿಯೂ ಸಮಾಜವನ್ನು ರೂಪುಗೊಳಿಸುವುದು ಲೈಂಗಿಕ ಸಂಬಂಧಗಳು ಎನ್ನುವುದರಲ್ಲಿ ಅನುಮಾನವೂ ಇಲ್ಲವೆಂದು ಅವರ ಪ್ರತಿಪಾದನೆಯು ಆಗಿದೆ. ಗಂಡು ಮತ್ತು ಹೆಣ್ಣು, ಪಾಲಕರು ಮತ್ತು ಮಕ್ಕಳು ಒಂದು ಕುಟುಂಬದ ರಚನೆಯನ್ನು ಸಂಕೇತಿಸುತ್ತಾರೆ. ಉತ್ಪಾದನೆಯು ಅವರ ಅಗತ್ಯವೂ ಆಗಿರುತ್ತದೆ. ಅದರಲ್ಲಿ ಸಮಾಜ ಮತ್ತು ಅದರ ಸಂಬಂಧಗಳು ಸೇರಿಕೊಳ್ಳುತ್ತವೆ. ಜೀವನದಲ್ಲಿ ಎರಡು ನಮೂನೆಯ ಸಂಬಂಧಗಳು ಇರುತ್ತವೆ. ಒಂದು ಸಹಜವಾದದ್ದು. ಅದನ್ನು ನೈಸರ್ಗಿಕವೆಂದು ಹೇಳುತ್ತಾರೆ. ಮತ್ತೊಂದು ಸಮಾಜಕ್ಕೆ ಸೇರಿದ್ದು. ಸಾಮಾಜಿಕ ಸಂಬಂಧಗಳು ಸಹಕಾರವನ್ನು ಆಧರಿಸಿಕೊಂಡು ಇರುತ್ತವೆ. ಸಹಕಾರಗಳು ಉತ್ಪಾದನೆಗೆ ಸಹಾಯವನ್ನು ಮಾಡುತ್ತವೆ (ಜರ್ಮನ್ ಈಡಿಯಾಲಜಿ) ಇದೇ ತರಹದ ಮತ್ತೊಂದು ವಾದವನ್ನು ಫ್ರಾಯ್ಡ್ ಹೇಳುತ್ತಾನೆ. ಉತ್ಪಾದನೆ ಮತ್ತು ಜ್ಞಾನವು ಬಾಹ್ಯವಾದದ್ದು ಮತ್ತು ಅದರ ಕೆಲವನ್ನು ರೂಪಿಸುತ್ತದೆ ಎಂದು ಅವನ ವಾದವಾಗಿದೆ. ಜ್ಞಾನ ಮತ್ತು ಉತ್ಪಾದನೆಯ ಒತ್ತಡಗಳು ನಮ್ಮ ಬಾಹ್ಯವನ್ನು ರೂಪಿಸುತ್ತವೆ.

ಮತ್ತೊಂದು ಸಮಾಜದ ಸಂಬಂಧಗಳು. ಇದನ್ನು ಹೇಳುವಾಗ ಮತ್ತೊಂದು ಅಂಶವನ್ನು ನಾವು ಇಲ್ಲಿ ಗಮನಿಸಬೇಕು: ಇದು ಈವತ್ತಿನ ಒಂದು ಸಂಗತಿಯನ್ನು ಹೇಳುತ್ತದೆ. ಒಂದೋ ದುಡ್ಡು ಮಾಡು ಅಥವಾ ಪ್ರೇಮಿಸು. ಇದು ಹಳೆಯ ಅಮೇರಿಕನ್ ಜೋಕನ ಥರ ಕಾಣಿಸಬಹುದು. ಆದರೆ ಇದು ಫ್ರಾಯ್ಡ್‌ನ ವಾದವನ್ನು ಹೇಳುತ್ತದೆ. ಆದರೆ ಇದನ್ನು ತಪ್ಪಾಗಿ ಓದಿದ ಸ್ತ್ರೀವಾದಿಗಳು ಕುಟುಂಬ ಮತ್ತು ಅದರಾಚೆಗೆ ಏನು ಎಂದು ವಾದಿಸತೊಡಗಿದರು. ಲಿಂಗ ವ್ಯತ್ಯಾಸವೂ ಉತ್ಪಾದನೆ ಎನ್ನುವುದನ್ನು ಮರೆತರು ಎಂದು ಜಿಜೆಕ್ ಹೇಳುತ್ತಾನೆ. ವಾಸ್ತವವಾಗಿ ಕುಟುಂಬ ಮತ್ತು ಖಾಸಗಿ ಆಸ್ತಿಯನ್ನು ಕುರಿತು ಹೇಳುವಾಗ ಬಹುಸಂಬಂಧಿತ ರೂಪಗಳನ್ನು ಮಾರ್ಕ್ಸ್ ಮತ್ತು ಏಂಗಲ್ಸ್‌ರು ಹೇಳಿಲ್ಲ. ಮನುಷ್ಯರ ಉತ್ಪಾದನೆ ಎನ್ನುವುದಕ್ಕೆ ಅದರಲ್ಲಿ ವಿಶಿಷ್ಟವಾದ ಅರ್ಥವೂ ಇದೆ. ಅದನ್ನು ಅವರು ವ್ಯಕ್ತಿ ಕೇಂದ್ರಿತವಾದ ಅರ್ಥದಲ್ಲಿ ಹೇಳಿಲ್ಲ ಮತ್ತು ಅದರಲ್ಲಿ ವೈಯಕ್ತಿಕವಾದ ಕಾರಣವನ್ನು

ನಾವು ಹುಡುಕಬೇಕಾದ ಅಗತ್ಯವೂ ಇಲ್ಲ. ಮಾರ್ಕ್ಸ್‌ನ ಪವರ್ಟಿ ಆಫ್ ಫಿಲಾಸಫಿ ಮತ್ತೆ ಒಂದು ಮಾತು ಬರುತ್ತದೆ. ನಿಲುವು, ಪ್ರತಿರೋಧ ಹಾಗೂ ಪ್ರಬಂಧ. ಗ್ರೀಕಿನ ಪದವನ್ನು ಹೇಳಬೇಕೆಂದರೆ ಥೀಸಿಸ್, ಆಂಟಿ ಥೀಸಿಸ್, ಮತ್ತು ಸಿಂಥೆಸಿಸ್. ಆದರೆ ಸಮಾಜ ಮತ್ತು ರಾಜಕಾರಣವು ನಮಗೆ ಎಂಥಾ ಒತ್ತಡವನ್ನು ಹೇರುತ್ತದೆ ಎಂದರೆ ಅದರಿಂದ ನಾವು ಅರಾಜಕತಾವಾದಿಗಳು ಆಗುವುದು ಈಗ ಅತ್ಯಂತ ಸುಲಭ. ಎಲ್ಲಾ ಬಂಡವಾಳವಾದಿ ಸಮಾಜವು ವರ್ಗಗಳು ಆಗುತ್ತವೆ. ಬೇರೆ ಬೇರೆ ತಾರತಮ್ಯವನ್ನು ಅವುಗಳು ಒಳಗೊಂಡಿರುತ್ತವೆ. ಆದರೆ ಮಾರ್ಕ್ಸ್ ಹೇಳಿದ್ದು ಕಾರ್ಮಿಕರು ಮತ್ತು ಅವರ ಸತ್ಯ ಎನ್ನುವುದು ಒಂದು ಇದೆ. ಅದು ಅಮೂರ್ತವಲ್ಲ. ಅದನ್ನು ಚಾರಿತ್ರಿಕವಾಗಿಯೂ ನಾವು ಗಮನಿಸಬಹುದು. ಯಾವುದು ನಮ್ಮ ನಿಜವಾದ ಕೌಶಲ ಮತ್ತು ಅದರ ಸ್ವರೂಪವು ಯಾವುದು ಎನ್ನುವುದರ ಆಧಾರದ ಮೇಲೆ ನಾವು ಇದನ್ನು ನಿರ್ಣಯಿಸಬಹುದು. ವರ್ಗ ಮತ್ತು ಅದರ ಸ್ವರೂಪಕ್ಕೆ ಒಂದು ಅರ್ಥವಿದೆ. ಅದು ಅರ್ಥರಹಿತವಲ್ಲ. ಅಥವಾ ಅದನ್ನು ನಾವು ಅರ್ಥವಿಸಿಕೊಳ್ಳುವ ಕ್ರಮಕ್ಕೆ ಅನುಸಾರವಾಗಿ ಬೇರೆಯಾಗುವುದೂ ಇಲ್ಲ. ಆದ್ದರಿಂದ ವರ್ಗ ಎನ್ನುವುದು ಒಂದು ಸಾಮಾಜಿಕವಾದ ಲಕ್ಷಣವನ್ನು ಹೊಂದಿರುತ್ತದೆ. ಅದು ನಮ್ಮ ವಾಸ್ತವವೂ ಆಗಿದೆ. ಅದನ್ನು ನಾವು ಸಾಮಾಜಿಕ ವಾಸ್ತವ ಎಂದು ಹೇಳಬಹುದು. ಅದನ್ನು ವಿಷಯನಿಷ್ಟವಾದ ಪ್ರಕ್ರಿಯೆ ಎಂದು ಭಾವಿಸಬೇಕಾಗಿಲ್ಲ.

1. ಜಿಜೆಕ್ – ಪ್ಯಾರಲಕ್ಸ್‌ವ್ಯೂ.

5. ಹೆಚ್ಚುವರಿ ಮೌಲ್ಯ ಮತ್ತು ಹೆಚ್ಚುವರಿ ಅಧಿಕಾರ

ಮಾರ್ಟಿನ್ ಹೈಡೆಗಾರ್ ಒಂದು ಪ್ರಶ್ನೆಯನ್ನು ಒಂದು ಸಂದರ್ಭದಲ್ಲಿ ಕೇಳಿದ: ನಾನು ಯಾಕೆ ಇದೇ ಪ್ರದೇಶದಲ್ಲಿ ಇದ್ದೇನೆ? ನಮ್ಮ ಅಸ್ತಿತ್ವಕ್ಕೂ ಪ್ರದೇಶಕ್ಕೂ ಇರುವ ಸಂಬಂಧವನ್ನು ಈ ಪ್ರಶ್ನೆಯು ಕೇಳುತ್ತದೆ. ಆದರೆ ಕಾಲ ಮತ್ತು ಪ್ರದೇಶದಿಂದ ನಾವು ತಪ್ಪಿಕೊಳ್ಳುವುದು ಅತ್ಯಂತ ಕಷ್ಟ. ಒಂದು ಹಂತದಲ್ಲಿ ಮಾರ್ಕ್ಸ್‌ವಾದಿಗಳು ಕೂಡಾ ಆಗುವುದು, ಕಾಲ ಮತ್ತು ಪ್ರದೇಶಗಳನ್ನು ಕುರಿತು ಹೇಳಿದರು. ಮನುಷ್ಯನು ಈ ಜಗತ್ತಿಗೆ ದಬ್ಬಲ್ಪಟ್ಟಿದ್ದಾನೆ. ಕೆಲವು ಸಂಗತಿಗಳು ಅವನನ್ನು ನಿಯಂತ್ರಿಸುತ್ತವೆ. ಆದ್ದರಿಂದ ಮನುಷ್ಯನನ್ನು ನಿಜವಾಗಿಯೂ ಎಲ್ಲಿ ನಿಲ್ಲಿಸಬೇಕು ಎನ್ನುವುದು ತಾತ್ವಿಕವಾದ ಪ್ರಶ್ನೆಯೂ ಹೌದು. ನಾವು ಏನನ್ನಾದರೂ ಅರ್ಥವಿಸಿಕೊಳ್ಳಬೇಕು ಎನ್ನುವುದು ಒಂದು ಮೂಲಭೂತವಾದ ನಿಲುವು ಹೌದು. ಕಾಲ ಮತ್ತು ಸ್ಥಳವು ನಮಗೆ ಹೆಚ್ಚು ಮಹತ್ವದ್ದು ಹೌದು. ನಾವು ನಮ್ಮ ಚರಿತ್ರೆಯೊಂದಿಗೆ ವಾಸ ಮಾಡುತ್ತವೆ. ಹೈಡೆಗಾರ್ ಈ ಮೂಲಭೂತವಾದ ಒಂದು ಪ್ರಶ್ನೆಯನ್ನು ಕೇಳುತ್ತಾನೆ: ನಾವು ನಮ್ಮ ಅಸ್ತಿತ್ವವನ್ನು ಹೇಗೆ ಉಳಿಸಿಕೊಳ್ಳುತ್ತೇವೆ ಮತ್ತು ನಮಗೆ ಇದು ಯಾವ ಅನನ್ಯತೆಯನ್ನು ಕೊಡುತ್ತದೆ. ನಮ್ಮ ಸಮಾಜವು ನಮಗೆ ಅನೇಕ ವಿಧದ ಅಭ್ಯಾಸಗಳನ್ನು ಹೇಳಿಕೊಡುತ್ತದೆ. ಸ್ಥಳ ಮತ್ತು ಲೋಕ ಎನ್ನುವುದು ನಮ್ಮ ಆಗುವಿಕೆಯ ಜೊತೆಗೆ ಇರುತ್ತದೆ. ಆಗುವುದು ಎನ್ನುವುದು ನಮಗೆ ಒಂದು ಸಾಧ್ಯತೆಯೂ ಹೌದು. ಮನುಷ್ಯ ಮತ್ತು ಅವನ ಆಗುವಿಕೆ ಹಾಗೂ ಅದರ ಕಾರಣಗಳನ್ನು ಕಾಂಟ್ ಕೂಡಾ ಹೇಳಿದ್ದ. ಅವನ ನಿಲುವು ಅನೇಕರನ್ನು ಪ್ರಭಾವಿಸಿತು. ಆದುದು, ಆಗುತ್ತಿರುವುದು ಮತ್ತು ಆಗಬೇಕಾದದ್ದು ಎನ್ನುವುದಕ್ಕೆ ಅಂತರಗಳು ಇವೆ. ಆದರೆ ಆಗುವುದು ಎಂದರೆ ಅದು ನಮ್ಮನ್ನು ನಾವು ಒಂದು ಸನ್ನಿವೇಶದಲ್ಲಿ ರೂಪಿಸಿಕೊಳ್ಳುವುದು. ಕಾಂಟ್ ವಿಶ್ವಾತ್ಮಕತೆಯನ್ನು ಹೇಳುವಾಗ ಅದರ ಸಾಧ್ಯತೆಯನ್ನು ವಿವರಿಸುತ್ತಾನೆ. ಅವನು ಈ ಜಗತ್ತು ಆಗಿದೆ. ಅದರಲ್ಲಿ ನಾವು ಆಗುತ್ತೇವೆ, ಆಗುವುದಕ್ಕೆ ಕಾರಣಗಳು ಇವೆ ಎಂದು ಪ್ರತಿಪಾದಿಸುತ್ತಾನೆ. ನಾವು ಹಾಜರಾಗುವುದು ಮತ್ತು ನಮ್ಮ ಆಗುವಿಕೆಗೆ ಕಾಂಟ್‌ನಲ್ಲಿ ಅರ್ಥವೂ ಇದೆ. ಮನುಷ್ಯನು ಆಗುತ್ತಾನೆ ಎಂದರೆ ಅವನು ಪರಿವರ್ತನೆಯೂ ಆಗುತ್ತಾನೆ ಎಂದು

ಅರ್ಥ. ದೇವರು ಇದ್ದಾನೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಆದರೆ ನಾವು ಇದ್ದೇವೆ ಎನ್ನುವುದು ಒಂದು ಅರಿವು. ಡೆಸ್ಕಾರ್ಟೆಸ್ ಸಂಕಥನದಲ್ಲಿ ಒಂದು ಸತ್ಯ ಮತ್ತು ಕಾರಣಗಳ ಪ್ರಶ್ನೆಯು ಬರುತ್ತದೆ. ಅವನ ಸಂಕಥನದ ಚರ್ಚೆಯು ಅತ್ಯಂತ ಮಹತ್ವದ್ದು. ಅವನು ಕಾರಣಗಳನ್ನು ಕುರಿತು ಹೇಳುತ್ತಾನೆ. ಆಲೋಚನೆ ಮತ್ತು ನಮ್ಮ ಭೌತಿಕತೆಗೆ ಒಂದು ಸಂಬಂಧವು ಇದೆ ಎಂದು ಅವನು ಹೇಳುತ್ತಾನೆ ನಮ್ಮ ತೀರ್ಮಾನದ ಶಕ್ತಿಯಿಂದ ನಾವು ಸರಿ ಮತ್ತು ತಪ್ಪುಗಳನ್ನು ನಿರ್ಧಾರ ಮಾಡುತ್ತೇವೆ. ಒಳ್ಳೆಯದು ಮತ್ತು ಕೆಟ್ಟದ್ದು ಎನ್ನುವುದು ಎಲ್ಲರಿಗೂ ಸಮಾನವಾದ ಅಂಶಗಳೂ ಆಗಿವೆ. ನಮಗೆ ಎಷ್ಟು ಒಳ್ಳೆಯದೋ ಅದನ್ನು ನಾವು ಆಯ್ಕೆ ಮಾಡಿಕೊಳ್ಳುತ್ತೇವೆ ನಮ್ಮ ಸಂಕಥನಕ್ಕೂ ಅಗತ್ಯಕ್ಕೂ ಒಂದು ಸಂಬಂಧವು ಇದೆ. ನಾನು ಯೋಚನೆಯನ್ನು ಮಾಡುತ್ತಿರುವುದರಿಂದ ನಮಗೆ ಒಂದು ಅಸ್ತಿತ್ವವು ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾನೆ (ಡೆಸ್ಕಾರ್ಟೆಸ್ ಡಿಸ್ಕೋರ್ಸ್ ಓನ್ ಮೆಥಡ್ 2006 ಓಕ್ಸ್ಫರ್ಡ್ ವರ್ಲ್ಡ್ ಕ್ಲಾಸಿಕ್ಸ್ ಪಾರ್ಟ್ 4) ಅವನು ಸಂವೇದನೆಯನ್ನು ಅಲ್ಲಗಳೆಯುವುದಿಲ್ಲ. ಆದರೆ ಮನುಷ್ಯರು ಬೇರೆ ಪ್ರಾಣಿಗಳು ತಮ್ಮ ಸಂವೇದನೆಯ ಕಾರಣಕ್ಕೆ ಬೇರೆಯಾಗುತ್ತಾರೆ ಎಂದು ಅವನು ಪ್ರತಿಪಾದಿಸುತ್ತಾನೆ. (ಪಾರ್ಟ್ 5)

ಪ್ರತಿಯೊಬ್ಬನೂ ತನ್ನದಾದ ಸಂಕಥನವನ್ನು ರೂಪಿಸುತ್ತಾನೆ. ಅವನು ಅತ್ಯಂತ ದೊಡ್ಡ ಹುಚ್ಚನೇ ಇರಬಹುದು ಅಥವಾ ಮೂರ್ಖನೇ ಇರಬಹುದು ಇಲ್ಲವೇ ಆತ್ಯಂತ ದಡ್ಡನೇ ಇರಬಹುದು. ಆದರೆ ಅವರೆಲ್ಲರೂ ಮಾತಾಡುತ್ತಾರೆ. ಮನುಷ್ಯರಾಗಿ ನಮಗೆ ನಮ್ಮದೇ ಆದ ಒಂದು ಭಾಷೆಯೂ ಇರುತ್ತದೆ. ನಾವು ಅದರಲ್ಲಿ ವ್ಯವಹರಿಸುತ್ತೇವೆ. ಪ್ರಾಣಿಗಳಿಗೆ ಮನುಷ್ಯರಿಗಿಂತ ಅತ್ಯಂತ ಕಡಿಮೆಯಾದ ಕಾರಣವೂ ಇದೆ. ನಾವು ನಮಗೆ ಇರುವ ವಿವೇಕದಲ್ಲಿ ಮಾತಾಡುತ್ತೇವೆ. ನಮಗೆ ಅದು ಅತ್ಯಂತ ಅಗತ್ಯವಾಗಿರುತ್ತದೆ. ಈ ದೃಷ್ಟಿಯಿಂದ ಅವನ ಚರ್ಚೆಯು ಅತ್ಯಂತ ಮಹತ್ವದ್ದು ಎನ್ನುವುದರಲ್ಲಿ ಎರಡು ಮಾತು ಇಲ್ಲ. ಆದರೆ ಇಲ್ಲಿ ಮತ್ತೆ ನಾವು ಹೈಡೆಗಾರನ ನಿಲುವನ್ನು ನೆನಪು ಮಾಡಿಕೊಳ್ಳಬೇಕು. ನಾವು ಚರಿತ್ರೆಗೆ ಧುಮುಕಿದ್ದೇವೆ. ಅದರಿಂದ ಆಚೆಗೆ ಬರಲು ಸಾಧ್ಯವೇ ಇಲ್ಲ. ಆದರೆ ಅವನು ಆಧುನಿಕತೆಯನ್ನು ಒಪ್ಪಿಕೊಂಡಿದ್ದಾನೆ. ಇಲ್ಲಿ ಹೀಗೆ ಚರಿತ್ರೆಗೆ ಎಸೆಯಲ್ಪಟ್ಟವರಲ್ಲಿ ಹಿಟ್ಲರ್ ಕೂಡಾ ಇದ್ದಾನೆ. ಹಿಟ್ಲರ್ ಚರಿತ್ರೆಯಲ್ಲಿ ಪ್ರತಿಯಾದ ಚರಿತ್ರೆಯನ್ನು ಕಟ್ಟಿದ್ದಾನೆ ಎನ್ನುವುದೂ ಇಲ್ಲಿ ಗಮನಾರ್ಹ. ಇರಲಿ ಅದು ಬೇರೆ ಪ್ರಶ್ನೆ. ಆದರೆ ನಮಗೆ ಆಗುವುದು ಎನ್ನುವುದೇ ಅತ್ಯಂತ ಮಹತ್ವದ್ದು. ಆಗುವುದು ಎನ್ನುವುದು ಮನುಷ್ಯನ ಅಗತ್ಯ. ಹೈಡೆಗಾರ್ ಆಗುವುದು ಎನ್ನುವಾಗ ಜಗತ್ತಿನಲ್ಲಿ ಆಗುವುದು ಒಂದು ಅರ್ಥದಲ್ಲಿ ಇದೆ ಎಂದು ಹೇಳುತ್ತಾನೆ. ನಾವು ಆಗುವುದು, ಮತ್ತೊಬ್ಬರು ಆಗುವುದು ಎನ್ನುವುದು ನಡೆಯುತ್ತದೆ. ಅವನು ಅದನ್ನು ಚಾರಿತ್ರಿಕ ಮಾಡುವುದಿಲ್ಲ.

ಚರಿತ್ರೆಯಲ್ಲಿ ಒಂದು ಜಾತಿ ಮತ್ತು ಜನಾಂಗವೂ ಆಗುತ್ತಿರುತ್ತದೆ. ಅನ್ವಯ ಎನ್ನುವುದೂ ನಮಗೆ ಬಹಳ ಮುಖ್ಯವಾಗುತ್ತದೆ. ಅದು ಅರ್ಥವಿಸಿಕೊಳ್ಳುವ ಒಂದು ಪ್ರಕ್ರಿಯೆ (ಹೈಡೆಗಾರ್ 1953 ಬೀಯಿಂಗ್ ಅಂಡ್ ಟೈಮ್ ಪುಟ 139 ಸ್ಟೇಟ್ ಯುನಿರ್ವಸಿಟಿ ಆಫ್ ನ್ಯೂಯರ್ಕ್.) ಉದ್ದೇಶಿತವಾದ ಅನ್ವಯ ಮತ್ತು ಅನುದ್ದೇಶಿತವಾದ ಅನ್ವಯ ಭಿನ್ನವಾಗುತ್ತವೆ. ಆದರೆ ಅವನು ವಾಸ್ತವ ಮತ್ತು ಅದರ ಆಗುವಿಕೆ, ಅದು ಬದಲಾಗುವುದು ಮುಂತಾದ ವಿವರಗಳನ್ನು ಚರ್ಚೆಮಾಡಿದ್ದಾನೆ. (ಅದೇ) ಅವನ ವಾದವನ್ನು ಮುಂದುವರಿಸುವುದಾದರೆ ಗ್ರೀಕಿನ ಪೊಲೀಸ್ ಸ್ಟೇಟ್ ಕೂಡಾ ಆಗಿದೆ. ಆಧುನಿಕ ತಂತ್ರಜ್ಞಾನ ಮತ್ತು ಕೈಗಾರಿಕೆಗಳು ವ್ಯಕ್ತಿಯನ್ನು ಬೇರೆ ಬೇರೆ ಥರ ಆಗಿಸುತ್ತವೆ. ಚರಿತ್ರೆ ಎನ್ನುವುದು ಯಾವತ್ತೂ ಅತ್ಯಂತ ಆಳದಲ್ಲಿ ಇರುತ್ತದೆ ಎಂದು ಬೆಂಜಮಿನ್ ಕೂಡಾ ಹೇಳುತ್ತಾನೆ.

ಒಮ್ಮೆ ಹೈಡೆಗಾರ್ ದೇವರನ್ನು ಭಂಜನಗೊಳಿಸಬೇಕು ಎಂದು ನಿರೂಪಿಸುತ್ತಾನೆ. ನಾವು ನಮ್ಮ ಅಥೆಂಟಿಕ್ ಆದ ಹುಡುಕಾಟದಲ್ಲಿ ಇದ್ದೇವೆ. ನಮಗೂ ನಮ್ಮ ಜೀವನ; ಅದರ ಅರ್ಥ ತಿಳಿಯುತ್ತದೆ. ಜೀವನ ಮತ್ತು ಅದರ ಕುರಿತಾದ ವ್ಯಾಮೋಹವಿದೆ. ಅದರ ಜೊತೆಗೆ ನಾವು ಸಮಾಜವನ್ನು ಪ್ರೀತಿಸುತ್ತೇವೆ. ಚೆಗೆವಾರ ಹೇಳಿದ ಮಾತಿದು: ಯಾರಿಗೆ ಅತ್ಯಂತ ತೀವ್ರವಾದ ಪ್ರೀತಿಯ ಭಾವನೆಗಳು ಇವೆಯೋ ಅವರು ನಿಜವಾದ ಅರ್ಥದಲ್ಲಿ ಕ್ರಾಂತಿಕಾರಿಗಳೂ ಆಗಿರುತ್ತಾರೆ. ಇದನ್ನು ಲೆನಿನ್ ಕೂಡಾ ಭಾವಿಸಿದ್ದ. ಸ್ವಾತಂತ್ರ್ಯವೆಂದರೆ ಅದು ಸುಮ್ಮನೆ ಆಗುವ ಪ್ರಕ್ರಿಯೆ ಅಲ್ಲ. ಹಾಗೆ ನೋಡಿದರೆ ಹೈಡೆಗಾರ್ ಸಾಹಿತ್ಯ, ಕಲೆ ಮುಂತಾದ ಸಂಭ್ರಮವನ್ನು ಮರೆಯುವುದಿಲ್ಲ. ಅದು ಬೇಕು ಎಂದು ಹೇಳುತ್ತಾನೆ. ಸತ್ಯವು ಹೇಗೆ ಜ್ಞಾನದ ರೂಪವನ್ನು ಪಡೆಯುತ್ತದೆ ಎನ್ನುವುದೂ ಅವನಿಗೆ ಹೆಚ್ಚು ಮುಖ್ಯವಾಗುತ್ತದೆ (ಅದೇ ಪುಟ 200) ಯಾವುದು ತಿಳಿವು ಎನ್ನುವುದು ಇದೆಯೋ ಅದರ ರೂಪವನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ನಮಗೆ ಈಗ ಬಂದಿರುವ ಆಧುನಿಕ ತಂತ್ರಜ್ಞಾನವೂ ಹೆಚ್ಚು ಅಥೆಂಟಿಕ್ ಆಗಿದೆ. ಈಗ ಅಮೇರಿಕಾ ತಂತ್ರಜ್ಞಾನ, ಜಪಾನ್ ತಂತ್ರಜ್ಞಾನವೂ ಹೊಸದಾದ ಮಾದರಿಯದು ಆಗಿದೆ. ಇವುಗಳು ನಮಗೆ ಹೊಸದಾದ ಅಥೆಂಟಿಕ್ ಆಯಾಮವನ್ನು ರೂಪಿಸುತ್ತವೆ. ನಮ್ಮ ವ್ಯಕ್ತಿತ್ವದ ಮೇಲೆ ಒಂದು ಒತ್ತಡವು ಇದೆ. ಈವತ್ತು ಎಲ್ಲರೂ ಕೆಲಸವನ್ನು ಮಾಡಲೇಬೇಕು ಎನ್ನುವ ಪರಿಸ್ಥಿತಿಯು ಬಂದಿದೆ. ನಾವು ಈಗ ಹೊಸದಾದ ಸನ್ನಿವೇಶದಲ್ಲಿ ಇದ್ದೇವೆ. ನಾವು ಹೊಸದಾಗಿ ಆಗುತ್ತಿದ್ದೇವೆ. ಸತ್ಯದ ಬಹುತ್ವದ ಜೊತೆಗೆ ನಾವು ಅನುಸಂಧಾನ ಮಾಡಬೇಕಾಗುತ್ತದೆ. ಮಾಧ್ಯಮಗಳು ಬದಲಾಗಿವೆ. ನಾವು ಈಗ ಕರಾರುವಕ್ಕಾದ ಲೆಕ್ಕವನ್ನು ಮಾಡುವುದು ಸಾಧ್ಯ. ಒಂದು ನಾವು ಗಮನಿಸುತ್ತಿರುವ ಅಸ್ತಿತ್ವವು ಇದೆ. ಮತ್ತೊಂದು ಅದರ ಜೊತೆಗೆ ನಮಗೆ ಸಂಬಂಧವೂ ಇದೆ. (ಅಲೆನ್ ಬದಿವೌ ಬೀಯಿಂಗ್ ಅಂಡ್ ಇವೆಂಟ್ 2005 ಪುಟ 401 ಕಂಟಿನ್ಯೂಂ)

ಅಧಿಕಾರ ಮತ್ತು ಅದರ ರಚನೆಯು ವ್ಯತ್ಯಾಸವಾಗುತ್ತಿದೆ. ಅದರ ಜೊತೆಗೆ ನಾವು ಈವತ್ತು ವ್ಯಕ್ತಿಗಳಾಗಿಯೇ ಭಿನ್ನವಾಗುತ್ತಿದ್ದೇವೆ. ಪಶ್ಚಿಮ ಮತ್ತು ಅದರ ಅನುಕರಣೆಯನ್ನು ನಾವು ಬೇರೆ ಬೇರೆ ಥರ ಮಾಡುತ್ತಿದ್ದೇವೆ. ನಮಗೆ ಪಶ್ಚಿಮದ ಮಾದರಿಯ ಫ್ರಿಜ್, ಕೋಲಾ, ಸಂಸ್ಕೃತಿಯು ಆರಾಮಾಗಿ ಸಿಗುತ್ತದೆ. ಇಡೀ ಸಮಾಜವೇ ಬದಲಾಗುತ್ತಿದೆ. ಈಗ ಯಾರನ್ನು ನಾವು ಶೋಷಿತರು ಎಂದು ಕರೆಯುವುದು ಎಂದು ಜಿಜೆಕ್ ಕೇಳುತ್ತಾನೆ. ನಮ್ಮ ಆಧುನಿಕ ಬರಹಗಾರರು ವಸ್ತುವನ್ನು ವಿಷಯವನ್ನಾಗಿ ಪರಿವರ್ತನೆ ಮಾಡುತ್ತಾರೆ ಎಂದು ನಮಗೆ ಗೊತ್ತಿರಬೇಕು.

1. ಹೈಡೆಗಾರ್ 1953 ಬೀಯಿಂಗ್ ಅಂಡ್ ಟೈಂ. ಸ್ಟೇಟ್‌ಯುನಿರ್ವಸಿಟಿ ಆಫ್ ನ್ಯೂಯಾರ್ಕ್.
2. ಅಲೆನ್ ಬದಿವೌ. 2005 ಬೀಯಿಂಗ್ ಅಂಡ್ ಇವೆಂಟ್ ಕಂಟಿನ್ಯೂಂ.

6. ನವೀನ ಚರಿತ್ರೆಯಲ್ಲಿ ಯಜಮಾನಿಕೆ ಮತ್ತು ಏಕತೆಗಳ ಪ್ರಶ್ನೆಗಳು: ಗ್ರಾಮ್ಷಿ

ಚರಿತ್ರೆಯಲ್ಲಿ ನಮಗೆ ಅನೇಕ ವಿಧಗಳು ಸಿಗುತ್ತವೆ. ಅದರಲ್ಲಿ ಮಾನ್ಯರಾದರವರ ಚರಿತ್ರೆಯು ಇದೆ. ಅಪಮಾನಗೊಂಡವರ ಚರಿತ್ರೆಯು ಇದೆ. ಹಾಗೆಯೇ ಅದರಲ್ಲಿ ಕೇಂದ್ರದವರು ಮತ್ತು ಅಂಚಿನವರು ಎನ್ನುವ ಪ್ರಶ್ನೆಯು ಇದೆ. ಹದಿನೆಂಟನೆಯ ಶತಮಾನದ ತರುವಾಯ ಚರಿತ್ರೆಯನ್ನು ನೋಡುವ ಕ್ರಮಗಳು ಬದಲಾದವು. ಚರಿತ್ರೆ ಮತ್ತು ಅದರ ಸಂಕಥನಗಳು ಬದಲಾದವು. ಚರಿತ್ರೆ ಮತ್ತು ಅದರ ಪ್ರಶ್ನೆಯನ್ನು ಒಂದು ನಿರ್ವಾತದಲ್ಲಿ ಮಾಡಲು ಸಾಧ್ಯವಿಲ್ಲ ಎಂದು ಅನೇಕರು ಭಾವಿಸಿದರು. ಇಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು. ಅದು ಆಧುನಿಕವಾದ ಸಂವಿಧಾನ ಮತ್ತು ದೇಶದ ಸ್ವಾಯತ್ತತೆಗೆ ಕುರಿತು ಹೇಳುವಾಗ ಅದರಲ್ಲಿ ಯಾರನ್ನು ಒಂದು ಮಾನದಂಡವಾಗಿ ಇರಿಸಲಾಗಿದೆ ಎಂದು ಗಮನಿಸುವುದು ಅತ್ಯಂತ ಅಗತ್ಯ. ಚರಿತ್ರೆ ಎನ್ನುವುದು ನಮಗೆ ಹೇಗೆ ಅನ್ವಯವಾಗುತ್ತದೆ ಎನ್ನುವುದೂ ಇಲ್ಲಿ ಗಮನಾರ್ಹ. ಚರಿತ್ರೆಗೆ, ಸಂವಿಧಾನಕ್ಕೆ ಮತ್ತು ರಾಜಕಾರಣಕ್ಕೆ ಹಾಗೂ ಒಂದು ದೇಶಕ್ಕೆ ನಿರ್ದಿಷ್ಟವಾದ ಸಂಬಂಧವು ಇರುತ್ತದೆ. ಹಾಗೆ ನೋಡಿದರೆ ಚರಿತ್ರೆ ಕಥನಗಳು ಯಾವತ್ತೂ ಒಂದು ಪ್ರದೇಶ ಮತ್ತು ಒಂದು ಭೌಗೋಳಿಕವಾದ ಆಕರವನ್ನು ಸೂಚಿಸುತ್ತದೆ. ಪುನರುಜ್ಜೀವನದ ಅನಂತರ ಅನೇಕ ಸಂಗತಿಗಳು ಹೇಗೆ ಪಲ್ಲಟವಾದವು ಎಂದು ಈ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಯದ್ಧಗಳು ನಡೆಯದೇ ಹೋದರೂ ಯಜಮಾನಿಕೆ ಮತ್ತು ಅದರ ಅರ್ಥಗಳು ಇದ್ದೇ ಇರುತ್ತವೆ. ಹಾಗೆಯೇ ಯುದ್ಧ ಮತ್ತು ಯಜಮಾನಿಕೆಗಳು ಅಷ್ಟು ಸುಲಭವಾಗಿ ನಿರ್ನಾಮವಾಗುವುದೂ ಇಲ್ಲ. ಹಾಗೆ ನೋಡಿದರೆ ಹದಿನೆಂಟನೆಯ ಶತಮಾನ ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಅನೇಕ ಬದಲಾವಣೆಗಳು ಆಗಿವೆ. ಅದಕ್ಕೆ ಅನುಗುಣವಾದ ವ್ಯಾಖ್ಯೆಗಳು ವ್ಯತ್ಯಾಸವಾಗಿದೆ. ಯಾವಾಗ ಆಧುನಿಕವಾದ ಚರಿತ್ರೆಯು ಪಲ್ಲಟವಾಗಲು ಪ್ರಾರಂಭವಾಯಿತೋ ಆಗ ಅದರ ಅರ್ಥವೂ ಬದಲಾಯಿತು. ಅದರಲ್ಲಿಯೂ ಆಧುನಿಕವಾದ ಚರಿತ್ರೆಯು ಹೇಗೆ ಬದಲಾಗುತ್ತದೆ

ಮತ್ತು ಅದರ ಪರಿಣಾಮವಾಗಿ ಆಧುನಿಕ ಚರಿತ್ರೆ ಮತ್ತು ಅದರ ಕಲ್ಪನೆಯು ಹೇಗೆ ವ್ಯತ್ಯಾಸವಾಗಿದೆ ಎಂದೂ ನೋಡಬೇಕು. ಹಾಗೆ ನೋಡಿದರೆ ನಮ್ಮ ಅನೇಕ ಚರಿತ್ರೆಗಳು ಬೇರೆ ಬೇರೆ ಕಾರಣಕ್ಕೆ ವ್ಯತ್ಯಾಸವಾಗಿದೆ. ಅದರಲ್ಲಿ ಸಮಾಜ ಮತ್ತು ಅದರ ಅಸ್ತಿತ್ವದ ಕಥನಗಳು ಸೇರಿಕೊಂಡಿವೆ. ಚರಿತ್ರೆ ಎಂದರೆ ಅದು ತತ್ವಜ್ಞಾನದ ಪಲ್ಲಟವೂ ಆಗಿದೆ. ಚರಿತ್ರೆಯು ಜನರು ಮತ್ತು ಅವರ ಅಸ್ತಿತ್ವದ ಕಥನವು ಹೌದು. ಚರಿತ್ರೆ ಮತ್ತು ಅದರ ಕಥನಗಳನ್ನು ಅರ್ಥ ಮಾಡಿಕೊಳ್ಳಲು ನಮಗೆ ಇದು ಅತ್ಯಂತ ಅಗತ್ಯವಾಗಿದೆ. ಚರಿತ್ರೆ ಮತ್ತು ಅದರ ಕಥನಗಳಲ್ಲಿ ಯುದ್ಧ ಮತ್ತು ಅದರ ನಿರ್ಮಾಣಗಳು ಸೇರಿವೆ. ರಾಜಕಾರಣಕ್ಕೆ ಯುದ್ಧಗಳು ಆಗಿವೆ. ಆಂತರಿಕವಾದ ಕಾರಣಕ್ಕೆ ಸಂಕಟಗಳು ಎದುರಾಗಿವೆ. ನಿಸರ್ಗ ಮತ್ತು ಅದರ ಮೇಲೆ ನಡೆದ ಯುದ್ಧಗಳು ಬೇರೆ. ಮನುಷ್ಯ ಮನುಷ್ಯರ ಮೇಲೆ ನಡೆಸಿದ ಯುದ್ಧಗಳು ಬೇರೆ. ಮನುಷ್ಯ ಮನುಷ್ಯರ ಮೇಲೆ ನಡೆಸಿದ ಯುದ್ಧಗಳಲ್ಲಿ ಅನೇಕ ರೀತಿಯ ಆಯುಧಗಳು ಬಳಕೆಯಾಗಿವೆ. ಜನಾಂಗಗಳು ಹೇಗೆ ಯುದ್ಧಗಳನ್ನು ಹುಟ್ಟುಹಾಕಿವೆಯೋ ಅದೇ ರೀತಿಯಲ್ಲಿ ರಾಷ್ಟ್ರವು ಕೂಡಾ ಯುದ್ಧಗಳನ್ನು ಹುಟ್ಟುಹಾಕಿವೆ. ರಾಷ್ಟ್ರ ಎನ್ನುವುದು ಹೇಗೆ ನಮಗೆ ವಿಭಿನ್ನವಾದ ಒಂದು ಸಂಕಥನವನ್ನು ಹೇಳಿಕೊಡುತ್ತದೆಯೋ ಅದೇ ರೀತಿಯಲ್ಲಿ ಅದು ಒಂದು ಪ್ರಭುತ್ವವನ್ನು ಹೆಚ್ಚು ಚಾಲ್ತಿಗೆ ತರುತ್ತದೆ. ರಾಷ್ಟ್ರ ಎಂದರೆ ಅದು ಭೂಮಿಯ ಪ್ರಶ್ನೆ. ಅದರ ಜೊತೆಗೆ ಅದು ಮನುಷ್ಯರ ಏಕತೆಯನ್ನು ರೂಪಿಸಲು ಯತ್ನವನ್ನು ಮಾಡುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ರಾಜನು ಒಂದು ದೇಶವನ್ನು ಆಳುತ್ತಿದ್ದರೆ ಅವನು ದೇಶವನ್ನು ಪ್ರತಿನಿಧಿಸುತ್ತಾನೆ. ಸರಕಾರವು ದೇಶವನ್ನು ಆಳುತ್ತಿದ್ದರೆ ದೇಶವನ್ನು ಸರಕಾರವು ಪ್ರತಿನಿಧಿಸುತ್ತದೆ. ಒಂದು ಭೂಮಿ, ಒಂದು ಭಾಷೆ ಮತ್ತು ಒಂದು ದೇಶ ಎನ್ನುವುದು ಹೇಗೆ ಇದರಲ್ಲಿ ಮುಖ್ಯವಾಗುತ್ತದೆಯೋ ಅದೇ ರೀತಿಯಲ್ಲಿ ಒಂದು ಜನಾಂಗ ಎನ್ನುವುದು ಇದರಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಆದರೆ ಇಲ್ಲಿಯೂ ಮನುಷ್ಯರು ಮತ್ತು ಅವರ ಸಂಬಂಧಗಳು ಹೆಚ್ಚು ಮುಖ್ಯವಾಗುತ್ತವೆ. ಹೀಗೆ ಇದ್ದರೂ ಒಂದು ರಾಷ್ಟ್ರದಲ್ಲಿ ಒಂದು ನಿರ್ದಿಷ್ಟವಾದ ನಿಯಮ ಎನ್ನುವುದು ಅತ್ಯಂತ ಮುಖ್ಯ. ರಾಷ್ಟ್ರ ಎನ್ನುವುದು ನಮಗೆ ಒಂದು ಅರ್ಥದಲ್ಲಿ ಅತ್ಯಂತ ಸಾಮಾನ್ಯವಾದ ಮತ್ತು ನಮ್ಮ ಭಾವನೆಗೆ ಸಂಬಂಧಪಟ್ಟ ವಿಷಯವೂ ಆಗಿದೆ. ಆದ್ದರಿಂದ ವ್ಯಕ್ತಿ ಮತ್ತು ರಾಷ್ಟ್ರ ಎನ್ನುವ ಪ್ರಶ್ನೆಯು ಅತ್ಯಂತ ಸಂಕೀರ್ಣವಾಗಿರುತ್ತದೆ. ಒಬ್ಬ ವ್ಯಕ್ತಿಯು ಒಂದು ರಾಷ್ಟ್ರವನ್ನು ಒಪ್ಪಿದ್ದಾನೆ ಎಂದಾದರೆ ಅವನು ಅಲ್ಲಿಯ ಕಾನೂನು ಮತ್ತು ಅಲ್ಲಿಯ ಸಂವಿಧಾನವನ್ನು ಒಪ್ಪಿದ್ದಾನೆ ಎಂದು ಅರ್ಥ. ಅವನ ದೈಹಿಕವಾದ ಅಸ್ತಿತ್ವಕ್ಕೂ ಒಂದು ರಾಷ್ಟ್ರಕ್ಕೂ ನಿಜವಾದ ಸಂಬಂಧವು ಇದೆ. ರಾಷ್ಟ್ರದಲ್ಲಿ ನಾವು ನಿಜವಾದ ಅರ್ಥದಲ್ಲಿ ಪ್ರಜೆಗಳು ಮಾತ್ರವೇ ಆಗಿರುತ್ತಾರೆ. ರಾಜನು ಒಂದು ದೇಶವನ್ನು ಆಳುತ್ತಾನೆ ಎಂದಾದರೆ ಅದರಲ್ಲಿ ಪ್ರಜೆಯನ್ನು ರಾಜಶಾಸನಕ್ಕೆ ತಕ್ಕಂತೆ ರೂಪಿಸಲಾಗುತ್ತದೆ.

ರಾಷ್ಟ್ರದಲ್ಲಿ ಎರಡು ಅಂಶಗಳು ಅತ್ಯಂತ ಮುಖ್ಯವಾಗಿ ಚಾಲ್ತಿಯಲ್ಲಿ ಇರುತ್ತದೆ. ಒಂದು ಶಾಸನಾಂಗ. ಮತ್ತು ಕಾನೂನು. ಅಧಿಕಾರವನ್ನು ಕಾನೂನುಗಳು ನಿರೂಪಣೆ ಮಾಡುತ್ತವೆ. ಕೆಲವು ಸಂದರ್ಭದಲ್ಲಿ ನಾವು ಒಂದು ಪ್ರದೇಶವನ್ನು ಮಾತ್ರ ನಾವು ರಾಷ್ಟ್ರ ಎಂದು ಒಪ್ಪಿಕೊಳ್ಳುವುದಿಲ್ಲ.

ಸಾಹಿತ್ಯ ಮತ್ತು ಚರಿತ್ರೆಯನ್ನು ಕುರಿತು ನಾವು ಮಾತಾಡುವಾಗ ಅದರ ಅನ್ವಯವನ್ನು ಕೂಡಾ ಗಮನಿಸುತ್ತೇವೆ. ಚರಿತ್ರೆ ಮತ್ತು ಸಾಹಿತ್ಯದ ಮಧ್ಯೆ ಒಂದು ಜಾಗವು ಇರುವುದು ನಿಜ. ಚರಿತ್ರೆಯ ಕುರಿತಾದ ದಾಖಲೆಗಳು ನಮಗೆ ಒಂದು ಅವಕಾಶವನ್ನು ಸೂಚಿಸುತ್ತವೆ. ಚರಿತ್ರೆಯ ದಾಖಲೆಗಳು ಅದು ಬೆಳೆದು ಬಂದ ಕ್ರಮವನ್ನು ಕೂಡಾ ನಿರೂಪಿಸುತ್ತವೆ. ಆದರೆ ನಮಗೆ ಯಾವ ದಾಖಲೆಗಳು ಸಿಕ್ಕಿವೆ ಮತ್ತು ಅದನ್ನು ನಾವು ಹೇಗೆ ಉಪಯೋಗ ಮಾಡುತ್ತೇವೆ ಎನ್ನುವುದು ಅತ್ಯಂತ ಮುಖ್ಯವಾದ ಒಂದು ಪ್ರಶ್ನೆ. ಚರಿತ್ರೆ ಮತ್ತು ಅದರ ದಾಖಲೆಗಳು ಈ ಮೊದಲು ಏನಾಗಿದೆ ಎಂದು ಹೇಳುತ್ತವೆ. ನಮಗೆ ಸಿಕ್ಕಿದ ದಾಖಲೆಗಳು ಯಾವುವು ಮತ್ತು ಅದು ಏನನ್ನು ಹೇಳುತ್ತದೆ ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ಚರಿತ್ರೆಯ ದಾಖಲೆಗಳು ಕನ್ನಡಿಯು ಆಗಿದೆಯೇ ಎನ್ನುವುದನ್ನೂ ಇಲ್ಲಿ ನೋಡಬೇಕು. ಅದು ನಿಜವೇ ಅಥವಾ ಕಲ್ಪಿತವೇ ಎನ್ನುವುದು ನಮಗೆ ಎಷ್ಟೋ ಸರ್ತಿ ಗೊತ್ತಾಗದೇ ಹೋಗಬಹುದು. ಚರಿತ್ರೆ ಮತ್ತು ಅದರ ದಾಖಲೆಯ ನಡುವೆ ಒಂದು ಸಣ್ಣ ಅಂತರವೂ ಇರಬಹುದು. ಯಾವುದೇ ಚಾರಿತ್ರಿಕವಾದ ನಿರೂಪಣೆಗಳು ಕೆಲವು ಸಂದರ್ಭದಲ್ಲಿ ಬರೀ ವಿವರಣೆಗಳು ಮಾತ್ರ. ಆದ್ದರಿಂದ ಅದನ್ನು ಓದುವ ನಾವು ಅದನ್ನು ಬೇರೆ ಥರ ಅನ್ವಯವನ್ನು ಮಾಡಬೇಕಾದ ಅಗತ್ಯವೂ ಇರುತ್ತದೆ. ಯಾವುದೇ ಒಂದು ಕೈಫಿಯತ್ತು ಇದ್ದರೆ ಅದನ್ನು ಬೇರೆ ಬೇರೆ ಥರ ಗ್ರಹಿಸುವ ಅವಕಾಶವೂ ಇರುತ್ತದೆ. ಅದನ್ನು ಇಟ್ಟುಕೊಂಡು ನಾವು ಚರಿತ್ರೆಯನ್ನು ಪುನರ್ ಕಟ್ಟುವ ಸಾಧ್ಯತೆಯು ಇರುತ್ತದೆ.

ಸಿದ್ಧಾಂತವನ್ನು ಕುರಿತು ಹೇಳುವಾಗ ನಾವು ಒಂದು ಸಮಸ್ಯೆಯನ್ನು ಎದುರಿಸುತ್ತೇವೆ. ಅದರಲ್ಲಿಯೂ ನವಚಾರಿತ್ರಿಕವಾದಿಗಳು ಸಿದ್ಧಾಂತವನ್ನು ವಿವಿಧ ರೀತಿಯಲ್ಲಿ ಅನ್ವಯ ಮಾಡುವ ಯತ್ನವನ್ನು ಮಾಡಿದ್ದಾರೆ. ಈ ಮೊದಲು ಹೇಳಿದಂತೆ ಅನ್ವಯ ಮತ್ತು ವಿವರಣೆಗಳು ಅದಕ್ಕೆ ಹೆಚ್ಚು ಮುಖ್ಯವಾಗುತ್ತವೆ. ಯಾವುದನ್ನು ನಾವು ಅನ್ವಯ ಎಂದು ಹೇಳುತ್ತೇವೆಯೋ ಅದರ ರೂಪವು ನಮಗೆ ಸಿಕ್ಕುವುದೇ ಅದರ ವಿವರಣೆಯಲ್ಲಿ ಎನ್ನುವುದನ್ನು ನಾವು ಗಮನಿಸಬೇಕು. ವಿವರಣೆಗಳು ಕಳೆದು ಹೋದುದನ್ನು ಹೇಳುತ್ತವೆ. ಆದರೆ ಅದರ ಜೊತೆಗೆ ಅವು ನಮಗೆ ಯಾವುದನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆಯೋ ಅದರ ವಸ್ತುವನ್ನು ಕುರಿತು ಹೇಳುತ್ತವೆ. ಹಾಗೆಂದು ಅದು ವೈಜ್ಞಾನಿಕವಾಗಿದೆ ಮತ್ತು ಅದು

ವಸ್ತುನಿಷ್ಠವಾದ ಒಂದು ನಿಲುವನ್ನು ತಳೆಯುತ್ತದೆ ಎಂದು ಹೇಳಲು ಬರುವುದೂ ಇಲ್ಲ. ಕನ್ನಡದ ಸಂಸ್ಕೃತಿಯ ಚರ್ಚೆಗಳು ಈವತ್ತು ಯಾವ ಕಡೆಗೆ ಹೋಗುತ್ತವೆ ಎನ್ನುವುದಕ್ಕೆ ಇದು ಒಂದು ಉದಾಹರಣೆಯು ಮಾತ್ರವೇ. ಸಂಸ್ಕೃತಿಯ ಕುರಿತಾಗಿ ಕನ್ನಡದಲ್ಲಿ ಬಂದಿರುವ ಅನೇಕ ಕೃತಿಗಳು ನಮಗೆ ನೋಡಲು ಮತ್ತು ಓದಲು ಅತ್ಯಂತ ಆಕರ್ಶಕವಾಗಿವೆ. ಆದರೆ ಅವುಗಳಲ್ಲಿ ನಮಗೆ ಅತ್ಯಂತ ಹೆಚ್ಚು ಸಿಕ್ಕುವುದು ಬರೀ ವಿವರಣೆಗಳು ಮಾತ್ರವೇ. ಆದ್ದರಿಂದ ಅವುಗಳಿಗೆ ಒಂದು ಸೈದ್ಧಾಂತಿಕವಾದ ಮತ್ತು ತಾತ್ವಿಕವಾದ ನೆಲೆಯು ಇರುವಂತೆ ಕಾಣುವುದಿಲ್ಲ. ಸಂಶೋಧಕರಿಗೆ ಯಾವ ಮಾಹಿತಿಯು ಸಿಕ್ಕದೆಯೋ ಅದನ್ನು ಮಾತ್ರವೇ ಅವರು ಹೇಳುತ್ತಾರೆ. ಆದರೆ ವಾಸ್ತವವು ಬೇರೆ ಇರುತ್ತವೆ. ಚರಿತ್ರೆಯಲ್ಲಿ ಯಾವುದನ್ನು ಅನ್ವಯ ಮಾಡುತ್ತೇವೆ ಎನ್ನುವುದು ಪರಿಕರದ ಪ್ರಶ್ನೆಯೂ ಹೌದು.

ಚರಿತ್ರೆ ಮತ್ತು ಅದರ ಅಧ್ಯಯನದಲ್ಲಿ ಮೊದಲು ನಮಗೆ ಕಾಣಿಸಿದ್ದು ತತ್ವಶಾಸ್ತ್ರಗಳ ಪ್ರಭಾವ. ತತ್ವಜ್ಞಾನ ಮತ್ತು ಅದರ ಪರಿಕರವು ನಮಗೆ ಚರಿತ್ರೆಯ ಕುರಿತಾಗಿ ಹೊಸನೋಟವನ್ನು ಕೊಟ್ಟಿತು. ಹೆಗೆಲ್‌ವಾದ, ಮಾರ್ಕ್ಸ್‌ವಾದ ಚರಿತ್ರೆಯನ್ನು ನೋಡಿದ್ದು ಇದೇ ರೀತಿಯಲ್ಲಿ. ಅವುಗಳಲ್ಲಿ ಒಂದು ದೃಷ್ಟಿಕೋನವೂ ಇತ್ತು. ತಾತ್ವಿಕ ದರ್ಶನವೂ ಇತ್ತು. ಹಾಗೆಯೇ ನಮಗೆ ಹೆಗೆಲ್ ಮುಂತಾದವರನ್ನು ನೋಡಿದರೆ ಅವರ ಬರಹಗಳಲ್ಲಿ ವಿವರಣೆಗಳೂ ಇವೆ. ಚರಿತ್ರೆಯ ಪ್ರಾತಿನಿಧಿಕವಾದ ರೂಪವನ್ನು ನಾವು ಈ ವಾದಗಳಲ್ಲಿ ನಾವು ಕಾಣುತ್ತೇವೆ. ಸಹಜವಾದ ಚರಿತ್ರೆ ಮತ್ತು ಮಹಾ ಚರಿತ್ರೆಗಳ ನಡುವೆ ತುಂಬಾ ವ್ಯತ್ಯಾಸವಿದೆ. ಮಹಾ ಚರಿತ್ರೆಗಳನ್ನು ಆದಿಭೌತಿಕ ಎಂದೂ ಕರೆಯುತ್ತಾರೆ. ಅದನ್ನು ಒಂದು ಅರ್ಥದಲ್ಲಿ ಅರಿಸ್ಟಾಟಲ್ ಬಳಸಿದ್ದ. ಅವನು ಆದಿಭೌತಿಕವಾದ ವಿಜ್ಞಾನದ ಕಲ್ಪನೆಯನ್ನು ಮಂಡಿಸುವಾಗ ಇದನ್ನು ಹೇಳುತ್ತಾನೆ. ಮೆಟಾ ಎನ್ನುವುದು ಒಂದು ವಿಶೇಷಣ ಪದ. ಅದನ್ನು ಬೇರೆ ಥರ ಬಳಸುವುದು ಸಾಧ್ಯ. ಯಾವುದು ನಿಜವಾಗಿಯೂ ನಡೆದಿದೆಯೋ ಅದನ್ನು ಮಾತ್ರವೇ ಹೇಳುವುದು ನೈಜ ಚರಿತ್ರೆಯು ಆಗುತ್ತದೆ. ಆದರೆ ಮಹಾಚರಿತ್ರೆಗಳು ಅವುಗಳನ್ನು ಮಾತ್ರವೇ ಹೇಳುವುದಿಲ್ಲ. ಚರಿತ್ರೆಯನ್ನು ಅತ್ಯಂತ ವೈಭವೀಕರಣ ಮಾಡಿದಾಗ ಮಾತ್ರವೇ ಇದು ಬೇರೆ ಅರ್ಥವನ್ನು ಪಡೆದುಕೊಳ್ಳುತ್ತದೆ. ಚರಿತ್ರೆ ಎನ್ನುವುದು ಹೇಗೆ ಆದಿಭೌತಿಕವಾದ ಅರ್ಥವನ್ನು ಪಡೆಯುತ್ತದೆ ಎನ್ನುವುದನ್ನು ಆಧುನಿಕ ನಿರೂಪಣೆಯಲ್ಲಿ ಕಾಣಬೇಕಾಗುತ್ತದೆ. ಇದನ್ನು ಬರೀ ಸಾಕ್ಷಿ ಮತ್ತು ನಮಗೆ ದೊರೆಯುವ ಆಧಾರದ ಮೇಲೆ ನಿರ್ಧಾರ ಮಾಡಲಾಗದು. ನಿಜವಾದ ಚರಿತ್ರೆಯನ್ನು ನಾವು ಹೇಗೆ ನೋಡುತ್ತೇವೆ ಮತ್ತು ಚರಿತ್ರೆಯ ಮಹಾನ್ ನಿರೂಪಣೆಗಳನ್ನು ಹೇಗೆ ಗ್ರಹಿಸುತ್ತೇವೆ ಎನ್ನುವುದೂ ಇಲ್ಲಿ ಅತ್ಯಂತ ಮುಖ್ಯ. ಏನು ನಡೆದಿದೆ ಎನ್ನುವುದು

ಅತ್ಯಂತ ಮುಖ್ಯ. ಯಾವುದು ಚರಿತ್ರೆಯಲ್ಲಿ ಪ್ರಾತಿನಿಧಿಕವಾಗಿದೆ ಎನ್ನುವುದನ್ನು ನೋಡಿಕೊಂಡು ಕೆಲವನ್ನು ನಿರ್ಧಾರ ಮಾಡಬೇಕಾಗುತ್ತದೆ.

ಅನ್ವಯವನ್ನು ನಾವು ಹೇಗೆ ಮಾಡುತ್ತೇವೆ ಎನ್ನುವುದರ ಆಧಾರದ ಮೇಲೆ ಆದಿಭೌತಿಕ ಮತ್ತು ನೈಜ ಚರಿತ್ರೆ ಎಂದು ವಿಭಾಗವನ್ನು ಸಾಧ್ಯ. ಚರಿತ್ರೆಯನ್ನು ಲೋಕದ ಗ್ರಹಿಕೆಯ ಮೂಲಕ ನೋಡಿದವರು ಇದ್ದಾರೆ. ಮತ್ತೆ ಕೆಲವರು ಚರಿತ್ರೆಯನ್ನು ಪರಿಕಲ್ಪನೆಯಾಗಿ ಗ್ರಹಿಸಿದ್ದಾರೆ. ಇನ್ನೂ ಕೆಲವರು ಚರಿತ್ರೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲನೆ ಮಾಡಿದ್ದಾರೆ. ಆದರೆ ಇದರ ಜೊತೆಗೆ ಚರಿತ್ರೆಯನ್ನು ನೋಡುವಾಗ ಅದನ್ನು ಒಂದು ಕಾರಣದ ಮೂಲಕ, ಇಲ್ಲವೇ ಮನೋವೈಜ್ಞಾನಿಕವಾಗಿ, ನೈತಿಕವಾಗಿ ನೋಡಲು ಯತ್ನವನ್ನು ಮಾಡಿದ್ದು ನಿಜ. ಚರಿತ್ರೆಯನ್ನು ಅತ್ಯಂತ ಹೆಚ್ಚು ವೈಭವೀಕರಿಸಿಕೊಂಡು ನೋಡಿದರೆ ಆಗ ಅಲ್ಲಿ ಒಂದು ರೊಮಾಂಟಿಕ್ ದೃಷ್ಟಿಕೋನವು ಬರುತ್ತದೆ. ಕಳೆದು ಹೋದದ್ದು ಅತ್ಯಂತ ಶ್ರೇಷ್ಟವಾಗಿದೆ. ಅದು ಅನುಕರಣನೀಯ ಎಂದು ಹೇಳಿದರೆ ಚಾರಿತ್ರಿಕ ಆದರ್ಶವು ಕಾಣಿಸಿಕೊಳ್ಳುತ್ತದೆ. ಆದರೆ ಇಲ್ಲಿ ಇನ್ನೊಂದು ಅಂಶವು ಗಮನಾರ್ಹ. ಚರಿತ್ರೆಯನ್ನು ಮುಗ್ಧವಾಗಿ ನೋಡಿ ಅದನ್ನು ದಾಖಲಿಸುವುದು ಒಂದು ಕ್ರಮ. ಯಾವುದು ನಡೆದಿದೆ ಎಂದು ಹೇಳಲು ನಮಗೆ ಇದು ಒಂದು ಮಾರ್ಗ. ಯಾವುದು ಆಗಿದೆ ಎಂದು ಹೇಳುವುದು ಒಂದು ಕ್ರಮವಾದರೆ ಮತ್ತೊಂದು ಕ್ರಮವು ಇದೆ: ಇದು ಯಾಕೆ ಹೀಗೆ ಆಗಿದೆ ಎಂದು ನೋಡುವುದು. ಯಾಕೆ ಎಂದು ಕೇಳಿದರೆ ಅದರಲ್ಲಿ ಒಂದು ಅನ್ವಯವೂ ಸಾಧ್ಯವಾಗುತ್ತದೆ. ನೋಡುವುದು ಮತ್ತು ಅದನ್ನು ಆಧಾರದ ಸಮೇತ ವಿವರಿಸುವುದು ಒಂದು ಕ್ರಮ. ನಮ್ಮ ಅನೇಕ ಹಳೆಯ ವಿದ್ವಾಂಸರು ಇದನ್ನು ಮಾಡಿದ್ದಾರೆ. ನೋಟ ಎನ್ನುವುದು ಒಂದು ಕ್ರಿಯೆ. ನೋಟವನ್ನು ನಾವು ಕ್ರಿಯೆ ಎಂದು ಹೇಳುವಾಗ ಅದು ಎಲ್ಲವನ್ನೂ ನೋಡುತ್ತದೆ ಎಂದು ಅರ್ಥ ಮಾಡಕೊಳ್ಳಬೇಕಾಗುತ್ತದೆ.. ಅದನ್ನು ನಾವು ಯಥಾವತ್ತಾಗಿ ಹೇಳಿದರೆ ಆಗ ಅದನ್ನು ನಾವು ವಾಸ್ತವ ಎಂದು ಹೇಳುತ್ತೇವೆ ಅಷ್ಟೆ. ಹಳ್ಳ ಬಂತು ಹಳ್ಳ ಕಾದಂಬರಿಯು ಇದಕ್ಕೆ ಒಂದು ಉದಾಹರಣೆಯು ಆಗುತ್ತದೆ. ಅನ್ವಯವು ಇಲ್ಲದೆ ಹೋದರೆ ಯಾವುದೇ ಚರಿತ್ರೆಯು ಅಪೂರ್ಣವಾಗಿರುತ್ತದೆ ಎಂದು ಡ್ರಾಯ್ಸನ್ ಹೇಳುತ್ತಾನೆ.

ಅನ್ವಯ ಮತ್ತು ಆಯ್ಕೆಗಳು ಜೊತೆಗೆ ಹೋಗುತ್ತವೆ. ನೀಶೆಯು ಒಂದು ಮಾತನ್ನು ಹೇಳುತ್ತಾನೆ: ನಾವು ಚರಿತ್ರೆಯನ್ನು ಒಂದು ಸಾಮಾನ್ಯವಾದ ಅಂಶ ಎಂದು ಭಾವಿಸಿದ್ದೇವೆ. ಆದರೆ ಎಲ್ಲರೂ ಸಂಧಿಸಬಹುದಾದ ಒಂದು ಅಂಶವು ಚರಿತ್ರೆಯಲ್ಲಿ ಇಲ್ಲ. ಅಂದರೆ ಇತಿಹಾಸಕಾರರಲ್ಲಿ ಒಂದೇ ಎನ್ನಬಹುದಾದ ಒಂದು ಭಾವನೆಯು ಇರುವುದು ಸಾಧ್ಯವೇ ಇಲ್ಲ. ಪ್ರಾತಿನಿಧಿಕವಾದ ಅಂಶವು ಇರುವುದಿಲ್ಲ. ಬೇರೆ ಒಂದು ಶಿಸ್ತುಗಳಲ್ಲಿ ಈ ಥರ ಆಗುವುದಿಲ್ಲ. ಗಣಿತದಲ್ಲಿ ಒಂದು ಅಭಿಪ್ರಾಯ ಎಂದರೆ ಅದು

ಒಂದೇ ಅಭಿಪ್ರಾಯವು ಆಗಿರುತ್ತದೆ. ಬೇರೆ ಬೇರೆ ಶಿಸ್ತುಗಳಲ್ಲಿ ಒಂದು ನಿಲುವು ಇರುವುದು ಅತ್ಯಂತ ಸಾಮಾನ್ಯ. ಅಂದರೆ ಗಣಿತದ ಸೂತ್ರವು ಒಂದೇ ಆಗಿರುತ್ತದೆ. ಚರಿತ್ರೆಯಲ್ಲಿ ನಮಗೆ ಸಿಗುವ ಮಾಹಿತಿ ಮತ್ತು ಅದರ ಕುರಿತಾದ ಒಂದು ನಿಲುವು ಬರುವುದು ಅತ್ಯಂತ ಕಷ್ಟ. ಆದರೆ ಕೆಲವು ವಿಶ್ವಾತ್ಮಕವಾದ ಸಂಕೇತವು ಇರುತ್ತದೆ. ಈ ಜಗತ್ತು ಏನು, ಈ ಜಗತ್ತಿನಲ್ಲಿ ಯಾವುದು ಅಧಿಕಾರದ ಕೇಂದ್ರವಾಗಿದೆ ಎಂದು ಅರ್ಥ ಮಾಡಿಕೊಳ್ಳುವುದು ಅತ್ಯಂತ ಸೂಕ್ತ.

ಹೆಗೆಲ್ ವಿಶ್ವವನ್ನು ನೋಡಿದ್ದು ಮತ್ತು ಅದನ್ನು ಗ್ರಹಿಸಿದ್ದು ಇದೇ ಅರ್ಥದಲ್ಲಿ. ಚರಿತ್ರೆ ಮತ್ತು ಅದರ ಅನ್ವಯವನ್ನು ಹೇಳುವಾಗ ಕೆಲವು ಚರ್ಚೆಯನ್ನು ಕ್ರೋಚೆಯು ಮಾಡುತ್ತಾನೆ. ಕಾವ್ಯ ಮತ್ತು ಅದರ ಸಾಧ್ಯತೆಯು ಏನಿದೆ ಮತ್ತು ಅದರ ಪರಿಣಾಮವು ಏನು ಎನ್ನುವುದನ್ನೂ ಅವನು ಒಂದು ಹಂತದಲ್ಲಿ ವಿವರಿಸಿದ್ದ. ಚರಿತ್ರೆಯನ್ನು ಮೊದಲು ವಿವರಣೆ ಮಾಡುವಾಗಲೂ ಒಂದು ವಿಚಾರದಿಂದ ಪ್ರಾರಂಭ ಮಾಡುತ್ತಾನೆ: ಕಳೆದು ಹೋದ ವರ್ಷ, ತಿಂಗಳು, ಕಳೆದು ದಿನ, ಕಳೆದು ಹೋದ ಅನೇಕ ಸಂಗತಿಗಳು ಹೇಗೆ ಚರಿತ್ರೆಯು ಆಗುತ್ತದೆ ಎನ್ನುವುದು ಅವನ ಪ್ರಧಾನವಾದ ಒಂದು ವಾದವೂ ಹೌದು. ದಾಖಲೆಗಳು ಮತ್ತು ಅದರ ಕುರಿತಾದ ಒಳನೋಟವು ಹೇಗೆ ಚರಿತ್ರೆಯ ಅಧ್ಯಯನಕ್ಕೆ ಪೂರಕವಾಗುತ್ತದೆ ಎನ್ನುವುದೂ ಅವನಲ್ಲಿ ಪ್ರಧಾನವಾದ ವಿಚಾರ. ಚರಿತ್ರೆಯು ಗತವು ನಿಜ. ಆದರೆ ಈ ಗತವನ್ನು ನಾವು ನೋಡುವುದರ ಕುರಿತು ನಮಗೆ ವಿವಿಧ ಆಯಾಮಗಳು ಇರುತ್ತವೆ. ನೀಶೆ, ಹೆಗೆಲ್ ಮತ್ತು ಡ್ರಾಯ್ಸನ್ ಚರಿತ್ರೆ ಮತ್ತು ಕಲೆಯನ್ನು ಅನ್ವಯ ಮಾಡಲು ಅಥವಾ ಬೆಸೆಯಲು ಯತ್ನವನ್ನು ಮಾಡುತ್ತಾರೆ. ಆದ್ದರಿಂದ ಅವರಲ್ಲಿ ಚರಿತ್ರೆಗೆ ಇನ್ನೊಂದು ಆಯಾಮವು ಸಿಕ್ಕಿದ್ದು ಸತ್ಯ. ಇದರಲ್ಲಿಯೂ ಜ್ಞಾನ ಮತ್ತು ಅದರ ಪ್ರಶ್ನೆಯು ಅತ್ಯಂತ ಮುಖ್ಯವಾಗಿದೆ. ಸಾಹಿತ್ಯವು ನಮಗೆ ಯಾವುದೇ ಜ್ಞಾನವನ್ನು ಕೊಡುವುದಿಲ್ಲ ಎನ್ನುವುದನ್ನು ಇವರು ಒಪ್ಪುವುದಿಲ್ಲ. ಲೋಕ ಮತ್ತು ಅದರ ಗ್ರಹಿಕೆಗೆ ಹಾಗೂ ನಮ್ಮ ಕಳೆದು ಹೋದ ಜೀವನ ಕ್ರಮಕ್ಕೆ ಒಂದು ಸಂಬಂಧವು ಇದೆ. ಅದನ್ನು ನಾವು ಮರೆಯಬಾರದು.

ಚರಿತ್ರೆಯು ನಿರೂಪಣೆಯನ್ನು ಆಧರಿಸಿಕೊಂಡು ಬೇರೆಯಾಗುತ್ತದೆ ಎನ್ನುವುದು ಸ್ಪಷ್ಟ. ಕಳೆದುಹೋದ ಚರಿತ್ರೆಯು ವರ್ತಮಾನಕ್ಕೆ ಎಷ್ಟು ಉಪಯುಕ್ತ ಎಂದೂ ನೋಡಬೇಕಾಗುತ್ತದೆ. ಚರಿತ್ರೆಯನ್ನು ನಾವು ನಮಗೆ ದೊರಕಿದ ದಾಖಲೆಯ ಮೂಲಕವೇ ಹೇಳುತ್ತೇವೆ. ಹಾಗೆಂದು ಚರಿತ್ರೆಗೆ ನಿರೂಪಣೆಯು ಮಾತ್ರವೇ ಆಧಾರವಾಗಿ ಇರುವುದಿಲ್ಲ. ಯಾವುದೇ ದಾಖಲೆಯು ಇಲ್ಲದೇ ಇರುವ ಚರಿತ್ರೆಗೆ ಅರ್ಥವು ಇರುವುದಿಲ್ಲ. ದಾಖಲೆಯು ನಮಗೆ ವಿವರಣೆಗೆ ಹೆಚ್ಚು ಅವಕಾಶವನ್ನು ಕಲ್ಪಿಸುತ್ತದೆ. ಅದರ ಜೊತೆಗೆ ಚರಿತ್ರೆಯು ನಮಗೆ ಪ್ರಮೇಯವನ್ನು ರಚಿಸಲು

ಇರುವ ಹಾದಿಯೂ ಹೌದು. ಗ್ರೀಕ್ ಮತ್ತು ಫ್ರೆಂಚ್ ದೇಶಗಳ ತತ್ವಜ್ಞಾನವು ನಮಗೆ ಈವತ್ತಿಗೂ ಬೇರೆ ಬೇರೆ ಕಾರಣದಿಂದ ಉಪಯುಕ್ತವಾಗುತ್ತದೆ. ಜೀವನವನ್ನು ಮತ್ತು ಚರಿತ್ರೆಯನ್ನು ಭೇದ ಮಾಡುವುದು ಹೇಗೆ ಮತ್ತು ಕಥನವನ್ನು ನಿರೂಪಣೆಯನ್ನು ವ್ಯತ್ಯಾಸ ಮಾಡುವುದು ಹೇಗೆ ಎನ್ನುವುದು ನಮಗೆ ಒಂದು ಪ್ರಶ್ನೆಯು ಆಗಿದೆ. ಒಂದು ಚಿತ್ರವನ್ನು ನಾವು ಮೌಲ್ಯ ಮಾಪನ ಮಾಡುವಾಗ ಅದರಲ್ಲಿ ಕಲಾವಿದ, ಅವನು ಬಳಸಿದ ಬಣ್ಣ, ಅವನ ಕಾಲ ಎಲ್ಲವೂ ಗಣನೆಗೆ ಬರುತ್ತದೆ. ದಾಖಲೆಗಳು ನಮ್ಮ ನಿರೂಪಣೆಗೆ ಅನುಗುಣವಾಗಿ ಬೇರೆಯಾದರೂ ಅದು ಗುಣಾತ್ಮಕವಾದ ಕೆಲವು ಅಂಶಗಳನ್ನು ಹೊಂದಿರುವುದು ನಿಜ. ಒಂದು ದಾಖಲೆಯಲ್ಲಿ ಯಾವುದು ಮುಖ್ಯ ಮತ್ತು ಯಾವುದು ಅಮುಖ್ಯ ಎಂದು ನಿರ್ಧಾರವನ್ನು ಮಾಡುವುದು ಅತ್ಯಂತ ಸುಲಭವಾದ ವಿಷಯವೂ ಅಲ್ಲ. ಈ ಮಾತು ಸಾಹಿತ್ಯದ ಕೃತಿಗೆ ಕೂಡಾ ಅನ್ವಯವಾಗುತ್ತದೆ. ಕೃತಿಯಲ್ಲಿ ಯಾವುದು ಮುಖ್ಯ ಮತ್ತು ಯಾವುದು ಅಮುಖ್ಯ ಎಂದು ಹೇಳುವುದು ಸಾಧ್ಯವೇ ಇಲ್ಲ ಬರಹದಲ್ಲಿ ಕೆಲವು ರೂಪಕವಾಗುತ್ತವೆ ಮತ್ತೆ ಕೆಲವು ಬರೀ ಮಾತುಗಳು ಮಾತ್ರವೇ ಆಗುತ್ತವೆ. ಆದ್ದರಿಂದಲೇ ಚರಿತ್ರೆಯು ನಮ್ಮ ಆಲೋಚನೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಯಾವುದು ಘಟನೆ ಮತ್ತು ಯಾವುದು ನಿರೂಪಣೆ ಎಂದು ಹೇಳಲು ನಮಗೆ ಮತ್ತು ಅವುಗಳನ್ನು ಪ್ರತ್ಯೇಕ ಮಾಡಲು ಸಮಸ್ಯೆಯು ಇದೆ. ಚರಿತ್ರೆಯು ಜೀವಂತವಾಗಿರುವ ಮತ್ತು ಚಲನಶೀಲವಾಗಿರುವ ಸಂಗತಿಗಳನ್ನು ಹೊರತು ಮಾಡುವಂತೆ ಇರುತ್ತದೆ. ಚರಿತ್ರೆಯಲ್ಲಿ ಕೆಲವು ಅಂಶಗಳು ಮಾತ್ರವೇ ದಾಖಲೆಯಾಗಿರುತ್ತವೆ. ಉಳಿದವುಗಳು ಖಾಲಿಯಾದ ಸಂಗತಿ. ಅವು ಇದ್ದವು ಎನ್ನುವುದಕ್ಕೆ ನಮಗೆ ಯಾವುದೇ ಆಧಾರವೂ ಇಲ್ಲ. ದೇವರು ಇದ್ದಾನೆ ಎನ್ನುವುದಕ್ಕೆ ನಮಗೆ ಆಧಾರವಿಲ್ಲ. ಆದರೆ ದೇವರು ಒಬ್ಬ ಇದ್ದಾನೆ ಎಂದು ಹೇಳುತ್ತೇವೆ. ಇದು ಸಮಸ್ಯೆ. ಕೆಲವು ಸಂಪ್ರದಾಯಗಳು ಉಳಿದುಕೊಂಡು ಬಂದಿವೆ. ಯಾಕೆ ಎನ್ನುವುದು ನಮಗೆ ಗೊತ್ತಿಲ್ಲ. ಕ್ರಿಶ್ಚಿಯನ್ ನಂಬಿಕೆಯ ಪ್ರಕಾರ ನಾವು ಪತನವನ್ನು ಹೊಂದಿದವರು. ನಾವು ಪಾಪದ ಕೂಸುಗಳು.

ಇದರ ಜೊತೆಗೆ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು: ಇಲ್ಲದೆ ಇರುವುದನ್ನು ನಿರೂಪಿಸುವುದೇ ಅತ್ಯಂತ ಕಷ್ಟ. ಆದ್ದರಿಂದಲೇ ದಾಖಲೆ ಮತ್ತು ಅದರ ಕುರಿತಾದ ಒಂದು ವಿಮರ್ಶಾತ್ಮಕವಾದ ನೋಟವು ಅಗತ್ಯವಾಗಿ ಬೇಕಾಗುತ್ತದೆ. ಪುನರುಜ್ಜೀವನ ಕಾಲದ ಅನಂತರ ಚರಿತ್ರೆಯ ಕುರಿತಾದ ನೋಟವೂ ಬದಲಾಯಿತು ಎನ್ನುವುದು ಸತ್ಯ. ಆದ್ದರಿಂದ ಸತ್ಯ, ಸಂಕೇತ, ಚರಿತ್ರೆ, ತತ್ವಜ್ಞಾನಗಳು ಜೊತೆಗೆ ಹೋಗುತ್ತವೆ. ಇವುಗಳನ್ನು ಬೇರೆ ಮಾಡುವುದು ಅತ್ಯಂತ ಕಷ್ಟ. ಆದ್ದರಿಂದ ಇಲ್ಲಿ ನಾವು ಇನ್ನೊಂದು ಅಂಶವನ್ನು ಗಮನಿಸುವುದು ಅತ್ಯಂತ ಅಗತ್ಯ. ಚರಿತ್ರೆಯಲ್ಲಿ

ಕೆಲವು ಸಂಕೇತಗಳು ಇವೆ. ಅದನ್ನು ನಾವು ಮರೆಯುತ್ತೇವೆ. ಚರಿತ್ರೆಯ ಹೆಸರಿನಲ್ಲಿ ಕೆಲವು ತಪ್ಪು ಹೇಳಿಕೆಗಳು ಬರುತ್ತವೆ. ಚರಿತ್ರೆಯಲ್ಲಿ ಯಾವುದು ಸತ್ಯ ಮತ್ತು ವೈಚಾರಿಕ ಎಂದು ನೋಡುವುದು ಅತ್ಯಂತ ಕಷ್ಟ. ಚರಿತ್ರೆ ಮತ್ತು ಅದರ ಕುರಿತಾದ ಆಲೋಚನೆಗಳು ಒಂದು ರೂಪದಲ್ಲಿ ಇರುವುದೂ ಇಲ್ಲ. ಚರಿತ್ರೆಯಲ್ಲಿ ಕೆಲವನ್ನು ಕಟ್ಟಲಾಗಿದೆ. ಅದರಲ್ಲಿ ಪರಂಪರೆಗಳೂ ಇವೆ. ಸತ್ತು ಹೋದ ಕೆಲವು ದಾಖಲೆಗಳು ಇವೆ. ಬರೀ ದಾಖಲೆಗಳು ಮಾತ್ರವೇ ಚರಿತ್ರೆಯು ಆಗುವುದಿಲ್ಲ. ಅದನ್ನು ನಾವು ಬರೆಯಬೇಕಾಗುತ್ತದೆ. ಬರೆಯುವುದು ಅಂದರೆ ಅದು ಒಂದು ನಿರೂಪಣೆಯು ಹೌದು. ನಿರೂಪಣೆ ಎಂದರೆ ಅದು ಭಾಷೆಯ ಮೂಲಕ ನಾವು ಹೇಳುವುದು.

ಚರಿತ್ರೆಯನ್ನು ಕುರಿತು ನಾವು ಬರೆಯುವುದು ಅಂದರೆ ಅದರಲ್ಲಿ ಒಂದು ಉದ್ದೇಶವು ಇದೆ ಎಂದು ಅರ್ಥ. ಅದು ವೈಜ್ಞಾನಿಕವಾಗಿ ಇರಬೇಕಾಗುತ್ತದೆ. ಅದಕ್ಕೆ ಒಂದು ಕ್ರಮವು ಇರುತ್ತದೆ. ಇತಿಹಾಸಕಾರನು ಯಾವುದಕ್ಕೆ ಹೆಚ್ಚು ನಿಷ್ಠೆಯನ್ನು ತೋರಿಸುತ್ತಾನೆ ಎನ್ನುವುದು ಅಷ್ಟೇ ಮುಖ್ಯ. ಚರಿತ್ರೆಗೆ ಒಂದು ವೈಚಾರಿಕವಾದ ಭಿತ್ತಿಯು ಇರುತ್ತದೆ. ಆದ್ದರಿಂದ ಅದರಲ್ಲಿ ಯಾವ ನಿಯಮವು ಇದೆ ಎನ್ನುವುದೂ ಅತ್ಯಂತ ಮುಖ್ಯ. ಅದರ ಜೊತೆಗೆ ಚರಿತ್ರೆಯಲ್ಲಿ ಯಾವುದು ಮುಖ್ಯ ಹಾಗೂ ಯಾವುದನ್ನು ಗಮನಿಸಬೇಕು ಎನ್ನುವುದೂ ಕೂಡಾ ಅಷ್ಟೇ ಗಮನಾರ್ಹವಾಗುತ್ತದೆ. ಚರಿತ್ರೆಯು ನಿಯಮವನ್ನು ಹೊರತು ಮಾಡಿಕೊಂಡು ಇರುವುದೂ ಇಲ್ಲ. ಆದರೆ ನಾವು ಒಂದು ವಿಚಾರವನ್ನು ನಿರೂಪಣೆ ಮಾಡುವುದು ಅಂದರೆ ಒಂದು ಸಂಹಿತೆಯನ್ನು ನಾವು ಚಾಲ್ತಿಗೆ ತರುವುದು ಎಂದು ಅರ್ಥ. ಚರಿತ್ರೆಯ ವಿಷಯವನ್ನು ನಾವು ಒಂದು ಭಾಷೆಯಲ್ಲಿ ಹೇಳುವುದೂ ಹೌದು. ಭಾಷೆ ಮತ್ತು ಅದರ ಮಾನ್ಯತೆಯು ಅತ್ಯಂತ ಮುಖ್ಯ. ಭಾಷೆಯಲ್ಲಿ ನಿರೂಪಣೆ ಮಾಡುವುದು ಅಂದರೆ ಅದರಲ್ಲಿ ಒಂದು ನಿಯಮವೂ ಇರುತ್ತದೆ. ನಿರೂಪಣೆ ಮತ್ತು ಅದರ ಸಾಹಿತ್ಯಕ ಎನ್ನುವುದೂ ನಮಗೆ ಒಂದು ರೂಪದಲ್ಲಿ ದೊರೆಯುತ್ತದೆ. ಯಾರು ನಿರೂಪಣೆಯನ್ನು ಮಾಡುತ್ತಾರೆಯೋ ಅವರ ಕ್ರಮವನ್ನು ಅವಲಂಬಿಸಿಕೊಂಡು ಚರಿತ್ರೆ ಮತ್ತು ಅದರ ನಿರೂಪಣೆಗಳು ಇರುತ್ತವೆ. ವಾಸ್ತವವಾಗಿ ನಮ್ಮ ನಿರೂಪಣೆಗಳು ಅನೇಕ ಸಂದರ್ಭದಲ್ಲಿ ವಿವರಣೆಗಳು ಆಗಿರುತ್ತವೆ. ಯಾವುದು ದಾಖಲೆಗಳಾಗಿವೆಯೋ ಅದನ್ನು ಚರಿತ್ರೆಕಾರರು ನಿರೂಪಣೆ ಮಾಡುತ್ತಾರೆ. ಹಾಗೆ ಮಾಡಿದಾಗ ಅವರು ಮಧ್ಯವರ್ತಿಗಳೂ ಆಗಿರುತ್ತಾರೆ. ಚರಿತ್ರೆಯಲ್ಲಿ ಅನ್ವಯವನ್ನು ಮಾಡದೇ ಅದನ್ನು ಯಥಾವತ್ತಾಗಿ ಗ್ರಹಿಸುವುದು ಅಸಾಧ್ಯ ಎಂದು ನವ ಇತಿಹಾಸಕಾರರು ಹೇಳುತ್ತಾರೆ. ಆದರೆ ಇಲ್ಲಿ ಅನ್ವಯ ಎನ್ನುವುದು ನಮಗೆ ತಾತ್ವಿಕವಾಗಿ ಇರಬಹುದು ಅಥವಾ ಅದನ್ನು ಅತಾತ್ವಿಕವಾಗಿಯೂ ಗ್ರಹಿಸಬಹುದು. ಇದು ಸಮಸ್ಯೆ. ಚರಿತ್ರೆಯು ಹೇಗೆ ಈ

ಬಗೆಯ ಅನ್ವಯವನ್ನು ಹೇಗೆ ಒಂದು ನಡೆಯಾಗಿಸುತ್ತದೆ ಎಂದು ಗ್ರಹಿಸಬಹುದು. ಅದರ ಜೊತೆಗೆ ಒಂದು ಮಾತನ್ನು ಇಲ್ಲಿ ಉಲ್ಲೇಖಿಸುವುದು ಅತ್ಯಂತ ಸೂಕ್ತವಾಗಿದೆ.

ಕ್ಲಾಡ್ ಲೆವಿಸ್ಟ್ರಾಸ್ ಸಮಾಜಗಳಲ್ಲಿ ಇರುವ ಒಂದು ಸಹಯೋಗವನ್ನು ಹೇಳುತ್ತಾನೆ. ಸಮಾಜದಲ್ಲಿ ಒಂದು ಪರಸ್ಪರ ಇರುವ ಸಹಕಾರ ಮತ್ತು ನಿಯಮಗಳು ಇರುತ್ತವೆ. ಚರಿತ್ರೆಯಲ್ಲಿ ಯಾವುದು ನಿಜವಾಗ ಘಟನೆ ಎನ್ನುವುದು ಇದೆಯೋ ಅದನ್ನು ನಾವು ಅದರ ರಚನೆಯ ಆಧಾರದ ಮೇಲೆ ನೋಡುತ್ತೇವೆ. ಅಷ್ಟೇ ಅಲ್ಲ ಅದನ್ನು ಚರಿತ್ರೆಗಾಗಿ ಚರಿತ್ರೆ ಎನ್ನುವ ಥರ ನೋಡಲು ಆಗುವುದೂ ಇಲ್ಲ. ಆದರೆ ಹಾಗೆಂದು ಅದನ್ನು ಅದರ ಆಂತರಿಕವಾದ ಒಂದು ವಿಜ್ಞಾನ ಎನ್ನುವಂತೆ ನೋಡಬೇಕಾಗುತ್ತದೆ ಎಂದು ಅನೇಕರು ಹೇಳುತ್ತಾರೆ. ಯಾವುದನ್ನು ಚರಿತ್ರೆಯಲ್ಲಿ ಒಂದು ವಾಸ್ತವ ಎಂದು ಹೇಳುತ್ತೇವೆಯೋ ಅದು ಒಂದೇ ರೀತಿಯಲ್ಲಿ ಇರುವುದಿಲ್ಲ. ಅದಕ್ಕೆ ಬಹು ಆಯಾಮಗಳೂ ಇರುತ್ತವೆ. ವಿವಿಧ ಅಂಶಗಳೂ ಇರುತ್ತವೆ. ಅದರಲ್ಲಿ ನಿರ್ದಿಷ್ಟವಾದ ಸಂಬಂಧವೂ ಇರುತ್ತವೆ. ಚರಿತ್ರೆಯ ನಿರೂಪಣೆಯಲ್ಲಿ ಅದರ ವಸ್ತು ಮತ್ತು ಅದರ ವಿವರಣೆಗಳು ಹೆಚ್ಚು ಪ್ರಧಾನವಾದ ಭಾಗವನ್ನು ತುಂಬುತ್ತವೆ. ಕಾಲಿಂಗ್‌ವುಡ್ ಇದನ್ನು ರಚನಾತ್ಮಕ ಮತ್ತು ವಿಮರ್ಶಾತ್ಮಕ ಎಂದು ಹೇಳುತ್ತಾನೆ. ಅಷ್ಟೇ ಅಲ್ಲ ಅದನ್ನು ನಾವು ಹೇಳುವಾಗ ಅದಕ್ಕೆ ಒಂದು ರಾಚನಿಕತೆಯು ಇರುತ್ತದೆ. ಒಂದು ಆಶಯವನ್ನು ನಾವು ಕತೆಯಾಗಿ ಹೇಗೆ ಹೇಳುತ್ತೇವೆ ಎನ್ನುವುದು ಮುಖ್ಯ. ತುಂಬಾ ಮಹತ್ವದ ಲೇಖಕರು ಏನು ನಡೆದಿದೆಯೋ ಅದನ್ನು ತಮಗೆ ಅನುಕೂಲವಾದ ಒಂದು ನಿರೂಪಣೆಯಲ್ಲಿ ಹೇಳುತ್ತಾರೆ. ಒಂದು ಅತ್ಯಂತ ಮುಖ್ಯವಾದ ಪ್ರಶ್ನೆಯು ಬಂದಿದೆ. ಯಾವುದೇ ಘಟನೆಯು ಇಲ್ಲದೆ ಹೋದರೆ ಆಗ ನಾವು ಯಾವುದನ್ನು ನಿರೂಪಿಸುವುದು? ನಾವು ಹೇಳುವುದಕ್ಕೆ ಒಂದು ಅರ್ಥವಿರುತ್ತದೆ. ಅದಕ್ಕೆ ಒಂದು ಸೂಚನೆಯು ಇರುತ್ತದೆ. ಅದು ನಿರ್ದಿಷ್ಟವಾದ ಗುಣವನ್ನು ಕೂಡಾ ಹೊಂದಿರುತ್ತದೆ. ನಾವು ಹೇಳುತ್ತಿರುವ ಕಥನಗಳಿಗೆ ಒಂದು ಸನ್ನಿವೇಶ ಎನ್ನುವುದೂ ಇರುತ್ತದೆ. ನಮ್ಮ ಯಾವುದೇ ಚಾರಿತ್ರಿಕ ನಿರೂಪಣೆಗಳು ಏನು, ಎಲ್ಲಿ ಮತ್ತು ಯಾವುದನ್ನು ಎಂದು ಹೇಳಬೇಕಾಗುತ್ತದೆ. ಚರಿತ್ರೆ ಮತ್ತು ಅದರ ಕುರಿತು ನಮಗೆ ಯಾವ ಬಗೆಯ ವಿವೇಕವು ಇರಬೇಕು ಎನ್ನುವುದು ಇಲ್ಲಿ ಅತ್ಯಂತ ಮುಖ್ಯ. ಇಲ್ಲದೆ ಹೋದರೆ ನಾವು ಮೇಲೆ ಹೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾರೆವು.

ವಾಸ್ತವವಾಗಿ ಈವತ್ತು ನಮ್ಮ ಚರಿತ್ರೆಗೆ ಇರುವ ವಿವಿಧ ಆಯಾಮವನ್ನು ಒಂದು ಪರಿಪ್ರೇಕ್ಷ್ಯದಲ್ಲಿ ಇಟ್ಟುಕೊಂಡು ನೋಡಬೇಕಾಗುತ್ತದೆ. ಚರಿತ್ರೆಗೆ ಸ್ಥಳೀಯ ಮತ್ತು ವಿಶ್ವಾತ್ಮಕವಾದ ಗ್ರಹಿಕೆಗಳೂ ಇರುತ್ತವೆ ಎನ್ನುವುದು ಸತ್ಯ. ಯಾವುದು ಕಳೆದು ಹೋಗಿದೆಯೋ ಅದರ ರೂಪವನ್ನು ನಾವು ವೈಭವೀಕರಿಸಿಕೊಂಡು ಹೇಳಿದರೆ ಆಗ ಅದರಲ್ಲಿ ಬರೀ ಆದರ್ಶವು ಮಾತ್ರವೇ ಇರುತ್ತವೆ. ಯಾವುದನ್ನು ಬರಹದ

ಪತ್ಯ ಎಂದು ಹೇಳುತ್ತೇವೆಯೋ ಅದರ ಸ್ವರೂಪವು ಒಂದು ಥರ ಇರುತ್ತದೆ. ಮಾತು ಬೇರೆ ಥರ ಇರುತ್ತವೆ. ಆದ್ದರಿಂದ ಇವುಗಳ ಸಂಕಥನವು ಭಿನ್ನವಾದ್ದು. ಮಾತಿನಲ್ಲಿ ಪದಗಳು ಮತ್ತು ಅವುಗಳ ಸಂಯೋಜನೆಯು ಆಗ ಉಂಟಾಗುತ್ತವೆ. ಅದು ನಿರ್ದಿಷ್ಟವೂ ಆಗಿರುತ್ತವೆ. ಅದರ ಏಕತೆಯು ಅತ್ಯಂತ ಮುಖ್ಯವಾಗುತ್ತದೆ. ಹಾಗೆ ನೋಡಿದರೆ ನಮಗೆ ಹದಿನೆಂಟನೆಯ ಶತಮಾನದಿಂದ ಬರಹಗಳು ಮತ್ತು ಅವುಗಳ ಮಾದರಿಗಳು ಬದಲಾದವು ಗದ್ಯಗಳು ಹೊಸದಾದ ಪರಿಕಲ್ಪನೆ ಮತ್ತು ನಿರ್ದಿಷ್ಟವಾದ ವಾಹಕವೂ ಆಗಿತ್ತು. ಮೊದಲು ಗದ್ಯವು ಇರಲಿಲ್ಲ ಎಂದು ಅರ್ಥವಲ್ಲ. ಆದರೆ ಮುದ್ರಣ ಯಂತ್ರವು ನಮಗೆ ಹೊಸದಾದ ಸಂವಹನ ಮಾಧ್ಯಮವಾಗಿತ್ತು. ನಮ್ಮಲ್ಲಿ ಕತೆಯನ್ನು ಹೇಳುವ ಎರಡು ಮಾದರಿಗಳು ಇದ್ದವು. ಒಂದು ಗದ್ಯದಲ್ಲಿ ಕತೆಯನ್ನು ಹೇಳುವುದು. ಇದರಲ್ಲಿ ಕತೆಯನ್ನು ವಿವಿಧ ನಿರೂಪಣೆಗೆ ಗುರಿ ಮಾಡಲಾಗುತ್ತಿತ್ತು. ಕತೆಯನ್ನು ಗದ್ಯದಲ್ಲಿ ಹೇಳುವುದು. ಇದರಲ್ಲಿ ಕತೆಯನ್ನು ಹೇಳುವವನ ಮನೋಭಾವಕ್ಕೆ ಅನುಸಾರವಾಗಿ ಬೇರೆಯಾಗುತ್ತದೆ. ಆದರೆ ಕತೆಯು ಸನ್ನಿವೇಶಕ್ಕೆ ಅನುಸಾರವಾಗಿ ಬೇರೆಯಾಗುತ್ತದೆ ಕತೆಯೇ ವಾಸ್ತವವಾಗಿ ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಇನ್ನೊಂದು ನಾವು ಕತೆಯನ್ನು ಪದ್ಯದಲ್ಲಿ ಹೇಳಿದ ಕ್ರಮಗಳು. ಇದು ಭಿನ್ನವಾದ ಬಗೆಯದು. ಕತೆಯನ್ನು ಬರೆದು ಹೇಳುವುದು ಎಂದರೆ ನಮಗೆ ಗೊತ್ತಿಲ್ಲದ ಅಥವಾ ನಮ್ಮ ದೃಶ್ಯಕ್ಕೆ ಸಿಗದೇ ಇರುವ ಓದುಗರನ್ನು ನಾವು ತಲುಪುವುದು. ಕತೆಯನ್ನು ನಾವು ಇನ್ನೊಂದು ಥರ ಹೇಳಬಹುದು: ಕತೆಯನ್ನು ತನ್ನ ಎದುರು ಇರುವವರನ್ನು ನೋಡಿಕೊಂಡು ಹೇಳುವುದು. ಕತೆಯನ್ನು ಪದ್ಯದಲ್ಲಿ ಹೇಳುವುದು ಇನ್ನೊಂದು ಬಗೆಯದು. ಚಂಪೂ,..ಷಟ್ಪದಿ ಮುಂತಾದವುಗಳು ನಮಗೆ ಮಾರ್ಗವಾಗಿದ್ದವು.

ನಮಗೆ ಅಗತ್ಯವಾದ ರೀತಿಯಲ್ಲಿ ಕತೆಯನ್ನು ಹೇಳುವುದು ಸಾಧ್ಯ. ಬರಹ ಮತ್ತು ಅದರ ಉದ್ದೇಶವು ಒಂದು ಥರ ಇರುತ್ತದೆ. ಅದಕ್ಕೆ ಕಾರಣವೂ ಇದೆ. ಆದ್ದರಿಂದ ಗದ್ಯವನ್ನು ನಾವು ನಮ್ಮ ಮುಂದೆ ಇರುವ ಅವಕಾಶವನ್ನು ಬಳಸಿಕೊಳ್ಳುವುದೂ ಸತ್ಯ. ಬರಹ ಮತ್ತು ಮಾತಿರುವುದು ವಿವಿಧ ಸಂಕೇತಗಳ ಆಧಾರದ ಮೇಲೆ. ಹಾಗೆ ನೋಡಿದರೆ ನಾವು ಬಳಸುವ ಯಾವುದೇ ಪರಿಕಲ್ಪನೆಗಳು ಒಂದೇ ರೀತಿಯಲ್ಲಿ ಮುಂದುವರಿಯುವುದೂ ಇಲ್ಲ. ಅದರ ಕಲ್ಪನೆಗಳು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಥರ ಇರುತ್ತದೆ. ಜ್ಞಾನವು ನಮಗೆ ವ್ಯತ್ಯಾಸವಾದರೆ ಮತ್ತು ಅದರ ಸ್ವರೂಪವು ಬದಲಾದರೆ ನಾವು ಬಳಸುವ ಪರಿಕಲ್ಪನೆಗಳೂ ಬದಲಾಗುತ್ತವೆ. ಅದು ನಿಜ. ಒಂದು ಪರಿಕಲ್ಪನೆಯು ಒಂದೇ ಅರ್ಥವನ್ನು ಕೊಡುವುದೂ ಇಲ್ಲ. ವಾಸ್ತವದಲ್ಲಿ ನಾವು ಅನೇಕವನ್ನು ಯಾವ ಅರ್ಥದಲ್ಲಿ ಬಳಸುತ್ತೇವೆ ಎನ್ನುವುದು ಒಂದು ವಿಚಾರವಾದರೆ ಅದನ್ನು ಬೇರೆ ಅರ್ಥದಲ್ಲಿ ಸ್ವೀಕಾರ ಮಾಡುವುದು

ಮತ್ತೊಂದು ಕ್ರಮ. ಒಂದು ಅಂಶವು ಇಲ್ಲಿ ನಮಗೆ ಅತ್ಯಂತ ಮುಖ್ಯವಾಗಿದೆ. ನಾವು ಇತಿಹಾಸವನ್ನು ನೋಡುವುದು ಮತ್ತು ಅದನ್ನು ಅದನ್ನು ನಾವು ಸ್ವೀಕಾರವನ್ನು ಮಾಡುವುದು ಕೂಡಾ ಇದೇ ಕ್ರಮದಲ್ಲಿ. ನಮಗೆ ಈಗ ಇವತ್ತು ಹಿಂದೆ ಏನಿತ್ತು ಮತ್ತು ನಮಗೆ ಯಾವ ಮಾದರಿಯ ಜ್ಞಾನದ ಮಾದರಿಗಳು ಇದ್ದವು ಎಂದು ಸ್ಪಷ್ಟವಿಲ್ಲ ಎನ್ನುವುದು ನಿಜ. ಆದರೆ ವಸಾಹತು ಮತ್ತು ಅದರ ಜ್ಞಾನದ ರೂಪಗಳು ಸಂಪೂರ್ಣವಾಗಿ ಸಂಕರವಾಗಿದೆ ಎನ್ನುವುದು ಸತ್ಯ. ನಮಗೆ ಈಗ ಯಾವುದು ಪರಿಪೂರ್ಣವಾದ ಜ್ಞಾನ ಎನ್ನುವುದೇ ತಿಳಿದಿಲ್ಲ. ಆದ್ದರಿಂದ ಈವತ್ತು ನಾವು ಯಾವುದನ್ನು ನಿಜವಾಗಿಯೂ ಅಭಿವೃದ್ಧಿ ಯಾವುದು ಎನ್ನುವುದೂ ಅರಿವಿಗೆ ಬಾರದಂತೆ ಇದೆ ಈವತ್ತು ನಾವು ಅತ್ಯಂತ ಮುಕ್ತವಾದ ಒಂದು ಸಮಾಜ ಮತ್ತು ಅದರ ಪ್ರತಿಕ್ರಿಯೆಗಳನ್ನು ನೋಡುತ್ತಿದ್ದೇವೆ. ಮುಕ್ತವಾದ ಒಂದು ಸಮಾಜ ಮತ್ತು ಮುಕ್ತವಾದ ಮಾರುಕಟ್ಟೆ ಮುಕ್ತವಾದ ಒಂದು ಜಗತ್ತು ಎನ್ನುವುದು ನಮಗೆ ಕೆಲವು ಭ್ರಮೆಗಳನ್ನು ಕೊಡುವುದು ನಿಜ. ಆದರೆ ಚರಿತ್ರೆಯು ಅಷ್ಟು ಸುಲಭವಲ್ಲ. ಪಶ್ಚಿಮದ ಅನೇಕ ಸಂಗತಿಗಳು ಈವತ್ತು ಜಗತ್ತನ್ನು ತನಗೆ ಬೇಕಾದಂತೆ ನಿರ್ವಚನ ಮಾಡಿರುವುದು ಸತ್ಯ. ಜಗತ್ತಿನ ಅನೇಕ ದೈತ್ಯ ಕಂಪೆನಿಗಳು ಈವತ್ತು ರಾಜಕಾರಣವನ್ನು ಮತ್ತು ಸಂಸ್ಕೃತಿಯನ್ನು ನಿರ್ದೇಶನ ಮಾಡುತ್ತಿರುವುದು ನಿಜ.

ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದಲ್ಲಿ ವಸಾಹತು ಆಢಳಿತವು ಜಗತ್ತಿನ ಅರ್ಧದಷ್ಟು ಭಾಗವನ್ನು ಆವರಿಸಿತ್ತು. ಹಾಗೆ ನೋಡಿದರೆ ನಮಗೆ ವಸಾಹತು ಮತ್ತು ಅನಂತರದ ವಿದ್ಯಮಾನಗಳು ಅಷ್ಟು ಸುಲಭವಲ್ಲ. ಅದರ ತಾತ್ವಿಕತೆಗೆ ವಿವಿಧ ಆಯಾಮಗಳೂ ಇವೆ. ಎಷ್ಟೋ ಸರ್ತಿ ಇದು ಹಳೆಯದನ್ನು ಮುಂದುವರಿಸಿದೆ. ನಾವು ಹಳೆಯದನ್ನು ಆಧುನಿಕ ಬೆಳಕಿನಲ್ಲಿ ನೋಡುವುದೂ ಸತ್ಯ. ಈವತ್ತು ಜಗತ್ತಿನಲ್ಲಿ ರಾಷ್ಟ್ರಗಳು ಮತ್ತು ಅವುಗಳ ಅನನ್ಯತೆಗಳ ಪ್ರಶ್ನೆಗಳು ಹಾಗೆ ನೋಡಿದರೆ ನಮಗೆ ಬಹಳ ದೊಡ್ಡದಾದ ಒಂದು ಚರಿತ್ರೆಯು ಇದೆ. ಅಷ್ಟೇ ಅಲ್ಲ ಅದರ ಜೊತೆಗೆ ನಮಗೆ ಸನ್ನಿವೇಶಗಳೂ ಭಿನ್ನವಾಗಿವೆ. ವಸಾಹತು ಮತ್ತು ವಸಾಹತೋತ್ತರ ನಮಗೆ ಒಂದು ಮಾನದಂಡವೇ ಆದರೂ ಅದರ ಮೂಲಕ ನಾವು ಈವತ್ತು ಒಂದು ಸೀಮೆಯನ್ನು ಮಾತ್ರವೇ ನೋಡಲು ಸಾಧ್ಯವಾಗುವುದಿಲ್ಲ. ಗ್ರೇಮಾಸ್ ನಿರೂಪಣೆಯನ್ನು ಹೇಳುವಾಗ ಒಂದು ವಿಚಾರವನ್ನು ಪ್ರಸ್ತಾವಿಸುತ್ತಾನೆ. ನಿರೂಪಣೆಗಳು ಮತ್ತೊಂದು ಬಗೆಯಲ್ಲಿ ಒಂದು ಪಲ್ಲಟವನ್ನು ಮತ್ತು ಕೌಶಲವನ್ನು ಹೇಳುತ್ತದೆ. ಕತೆಯನ್ನು ಹೇಳುವುದಕ್ಕೆ ನಮಗೆ ತಿಳಿದರೆ ನಾವು ಕತೆಯನ್ನು ಭಿನ್ನವಾಗಿಯೂ ನಿರೂಪಿಸುತ್ತೇವೆ. ಅದು ನಮ್ಮ ನಿರೂಪಣೆಗೆ ಒಂದು ಆಯಾಮವನ್ನು ಕೊಡುತ್ತದೆ. ಕತೆಯನ್ನು ನೇರವಾಗಿ ಹೇಳುವಾಗ ಅಲ್ಲಿ ಒಬ್ಬ ಶ್ರೋತೃವೂ ಇರುತ್ತಾನೆ.

ಇಲ್ಲಿ ಇನ್ನೊಂದು ಅಂಶವನ್ನು ನಾವು ಗಮನಕ್ಕೆ ತಂದುಕೊಳ್ಳಬೇಕು: ಕತೆಗಳು ಒಮ್ಮೊಮ್ಮೆ ಪುರಾಣದ ರೂಪವನ್ನು ಪಡೆಯುತ್ತವೆ. ಮತ್ತೆ ಒಮ್ಮೊಮ್ಮೆ ಅವುಗಳು ನಮಗೆ ನಿತ್ಯವನ್ನು ಮಾತ್ರವೇ ಹೇಳುತ್ತವೆ. ಕೆಲವು ಪುರಾಣಗಳಿಗೆ ಧಾರ್ಮಿಕವಾದ ಅರ್ಥವೂ ಇರುತ್ತದೆ. ಕಥನಗಳು ಚರಿತ್ರೆಗೆ ಅನುಸಾರವಾಗಿ ವಿವಿಧ ರೂಪಗಳನ್ನು ತಳೆಯುತ್ತವೆ. ಅದರ ಜತೆಗೆ ಕತೆಯನ್ನು ಹೇಳುವ ವಿಧಾನಗಳಲ್ಲಿ ಪರಿವರ್ತನೆಗಳು ಆಗುವುದನ್ನು ನಾವು ಚರಿತ್ರೆಯಲ್ಲಿ ಕಾಣುತ್ತೇವೆ. ಹಾಗೆ ನೋಡಿದರೆ ನಮಗೆ ಪಂಪ ಮತ್ತು ರನ್ನರ ಕಾವ್ಯಗಳಲ್ಲಿ ಇರುವ ಇತಿಹಾಸ ಮತ್ತು ಅದರ ಕಲ್ಪನೆಯು ಅತ್ಯಂತ ನವೀನವಾಗಿದೆ. ಅದರಲ್ಲಿ ಚರಿತ್ರೆ ಮತ್ತು ಕತೆಗಳು ಜೊತೆಗೆ ಹೋಗುತ್ತವೆ. ವ್ಯಾಸನಿಂದ ಪಂಪನಿಗೆ ಮತ್ತು ಪಂಪನಿಂದ ಕುಮಾರವ್ಯಾಸರ ಕಡೆಗೆ ಬರುವಾಗ ಚರಿತ್ರೆಯಲ್ಲಿ ಅನೇಕ ಬದಲಾವಣೆಯು ಆಗುತ್ತದೆ. ನಾವು ಯಾವುದೇ ಸಾಹಿತ್ಯದ ಪ್ರಕಾರವನ್ನು ನೋಡಿದರೂ ನಮಗೆ ಚರಿತ್ರೆ ಮತ್ತು ಅದರ ಕೌಶಲಕ್ಕೆ ಒಂದು ಸಂಬಂಧವಿದ್ದೇ ಇರುತ್ತದೆ. ಅನಂತಮೂರ್ತಿಯವರು ಘಟಶ್ರಾದ್ಧವನ್ನು ಬರೆಯುವುದಕ್ಕೆ ಕಾರಣವು ಇದೆ. ಆ ಕಾರಣದ ರೂಪವನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದರೆ ಪಂಪನು ತನ್ನ ಎದುರು ಯಾವ ಚರಿತ್ರೆಯು ಇದೆಯೋ ಅದನ್ನು ವ್ಯಾಸ ಪ್ರಣೀತವಾದ ಚರಿತ್ರೆಯ ಅರಿವು ಇಲ್ಲದೆ ಹೋಗಿದ್ದರೆ ಅದರ ಚಿತ್ರವೆ ಬೇರೆಯಾಗುತ್ತಿತ್ತು. ಚರಿತ್ರೆಯು ನಮಗೆ ಕೆಲವು ಮಾದರಿಯ ಸಂಬಂಧಗಳ ನಿರ್ವಹಣೆಯನ್ನು ಹೇಳುತ್ತವೆ. ಹಾಗೆ ನೋಡಿದರೆ ನಮಗೆ ಸಾಹಿತ್ಯದಲ್ಲಿ ರಸ, ಅಲಂಕಾರ, ಧ್ವನಿ, ರೀತಿಗಳು ಸೌಂದರ್ಯವನ್ನೇ ಹೇಳುತ್ತವೆ. ಇವುಗಳಿಗೆ ಭಿನ್ನವಾದ ಶಕ್ತಿಯು ಇದೆ. ಅದು ಬೇರೆ ಪ್ರಶ್ನೆ. ನಾವು ಇವತ್ತು ಅದನ್ನು ಬಳಸಬೇಕಾದ ಅಗತ್ಯವಿಲ್ಲ ಎಂದು ಹೇಳುವುದು ಸರಿಯಾದ ಕ್ರಮವು ಅಲ್ಲ. ಸಂಸ್ಕೃತಿಗೂ ಈ ಪರಿಕಲ್ಪನೆಗಳಿಗೂ ಸಂಬಂಧವು ಇದೆ. ಅದನ್ನು ನಾವು ಮರೆಯಬಾರದು. ಸಾಹಿತ್ಯ ಮತ್ತು ಅದರ ರೂಪಗಳಿಗೂ ಈ ಸಂಗತಿಗಳಿಗೂ ಒಂದು ಸಂಬಂಧವಿದೆ. ಇವುಗಳನ್ನು ನಾವು ಅತಾತ್ವಿಕ ಎಂದು ಹೇಳುವಂತೆ ಇಲ್ಲ. ಯಾವುದನ್ನು ಹಾಗೆ ಚೆಂದ ಮಾಡಿ ಹೇಳಬೇಕು ಎಂದು ಇವುಗಳು ಹೇಳುತ್ತವೆ. ಮಾತನ್ನು ಸುಂದರ ಮಾಡುವುದು ಎನ್ನುವುದಕ್ಕೆ ವಿಶೇಷವಾದ ಅರ್ಥವೂ ಇದೆ. ಅವುಗಳು ಬರೀ ಹೇಳಿಕೆಗಳು ಮಾತ್ರವೇ ಅಲ್ಲ. ಅವುಗಳಿಗೆ ಒಂದು ಉದ್ದೇಶವೂ ಇರುತ್ತದೆ. ಇವುಗಳನ್ನು ನಾವು ಬಳಸುವುದು ಅಂದರೆ ಸಾಹಿತ್ಯವನ್ನು ರಚನೆ ಮಾಡುವುದು ಅಂಥ ಅರ್ಥ. ನಾವು ಈವತ್ತು ಸಾಹಿತ್ಯದಲ್ಲಿ ವ್ಯಕ್ತಮಾಡುವ ಅಭಿಪ್ರಾಯವು ಮುಖ್ಯವಾಗಿ ನಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕವಾದ ಒಂದು ನಿಲುವು ಕೂಡಾ ಹೌದು.

1. ಗ್ರಾಮ್ಷಿರೀಡರ್.

7. ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ–ಫುಕೋ

ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಹೇಳುವಾಗ ಮೊದಲ ಚರ್ಚೆಯನ್ನು ಪ್ರಾರಂಭ ಮಾಡಿದವರಲ್ಲಿ ಸಾಕ್ರೆಟಿಸ್ ಕೂಡಾ ಒಬ್ಬ. ಅದನ್ನು ಫುಕೋ ಗಮನಿಸಿದ್ದಾನೆ. ಅವನ ಅಭಿಪ್ರಾಯವು ಈ ದೃಷ್ಟಿಯಿಂದ ಬೇರೆಯಾಗಿದೆ. ಅವನು ಸಾಕ್ರೆಟಿಸ್ ತನ್ನ ಬರಹಗಳಲ್ಲಿ ತತ್ವಜ್ಞಾನ ಮತ್ತು ಜೀವನ ಕ್ರಮವು ಒಂದಾಗಿದೆ ಎಂದು ಹೇಳುತ್ತಾನೆ. ನಾವು ಯಾವುದನ್ನೂ ಪರಿಶೀಲನೆ ಮಾಡದೆ ಒಪ್ಪಿಕೊಳ್ಳುವುದು ಸರಿಯಲ್ಲ ಎನ್ನುವುದು ಅವನ ನಿಲುವು. ಸಾಕ್ರೆಟಿಸ್ ಯುವ ಜನರನ್ನು ಹಾದಿ ತಪ್ಪಿಸುತ್ತಾನೆ ಎನ್ನುವ ಅಪಾದನೆಯು ಇತ್ತು. ಆದರೂ ವ್ಯಕ್ತಿ ಮತ್ತು ಅವನ ಘನತೆ ಹಾಗೂ ಅವನ ಜ್ಞಾನ ಮತ್ತು ಧೈರ್ಯವನ್ನು ಕುರಿತು ಅವನು ಹೇಳುತ್ತಾನೆ. ಜ್ಞಾನ ಮತ್ತು ವ್ಯಕ್ತಿಯ ಘನತೆ ಎನ್ನುವುದಕ್ಕೆ ವಿವಿಧ ಆಯಾಮಗಳೂ ಇರುತ್ತವೆ. ಅವನಿಗೆ ಜ್ಞಾನ ಮತ್ತು ಸಮಾಜ ಎನ್ನುವುದು ಬೇರೆ ಸೂಚನೆಗಳನ್ನು ಕೊಡುತ್ತವೆ. ಸ್ವಂತಿಕೆ ಮತ್ತು ಅದರ ಯಜಮಾನಿಕೆಯನ್ನು ಅವನು ಒಪ್ಪುತ್ತಾನೆ. ಅವನಲ್ಲಿ ಒಂದು ನೈತಿಕವಾದ ನಿಲುವು ಇದೆ. ಅದರ ಚೌಕಟ್ಟಿನಲ್ಲಿ ನಿಂತುಕೊಂಡು ಜ್ಞಾನವನ್ನು ವಿಶ್ಲೇಷಣೆ ಮಾಡುತ್ತಾನೆ. ಪ್ಲೇಟೋನಿಗಿಂತ ಭಿನ್ನವಾದ ಒಂದು ನಿಲುವನ್ನು ಅವನು ಹೊಂದಿದ್ದಾನೆ. ಸಾಕ್ರೆಟಿಸ್ ಪ್ರಶ್ನೆಗಳನ್ನು ಎತ್ತುತ್ತಾನೆ. ಆದರೆ ಅನೇಕ ವಿಷಯಗಳ ಕುರಿತು ಒಂದು ಮೌನವನ್ನು ಹೊಂದುತ್ತಾನೆ. ವ್ಯಕ್ತಿ ಮತ್ತು ಅವನ ಘನತೆ ಎನ್ನುವುದು ಯಾವತ್ತೂ ಜ್ಞಾನ ಎನ್ನುವುದು ಅವನ ನಿಲುವು. ನನಗೆ ಏನೂ ಗೊತ್ತಿಲ್ಲ ಎನ್ನುವುದು ನನಗೆ ಗೊತ್ತಿದೆ ಎಂದು ಅವನು ಹೇಳುತ್ತಾನೆ. ವ್ಯಕ್ತಿ ಮತ್ತು ಅವನ ಘನತೆಯು ಹೇಗೆ ಇರುತ್ತದೆ ಎನ್ನುವುದನ್ನು ಅವನು ವಿವರಿಸುತ್ತಾನೆ. ಆಲೋಚನೆ, ಸಂವೇದನೆ, ತೀರ್ಪು ಅತ್ಯಂತ ಮುಖ್ಯ. ಆದರೆ ಇನ್ನೊಂದು ವಿಚಾರದಲ್ಲಿ ಅವನು ಅತ್ಯಂತ ಮುಖ್ಯನಾಗಿದ್ದಾನೆ. ಅವನು ದ್ವಂದ್ವಾತ್ಮಕತೆ ಎನ್ನುವುದನ್ನು ಚಾಲ್ತಿಗೆ ತರುತ್ತಾನೆ. ಆತ್ಮ ಮತ್ತು ಅದರ ಶಕ್ತಿಯನ್ನು ಅವನು ಅವಲಂಬಿಸುತ್ತಾನೆ. ನಿಜವಾದ ವಿವೇಕಿಯಾದ ಮನುಷ್ಯನು ಈ ಜಗತ್ತನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬಲ್ಲ ಎನ್ನುವುದು ಅವನ ಮತ್ತೊಂದು ವಾದ.

ಪ್ರಜಾಪ್ರಭುತ್ವ ಎನ್ನುವುದು ಕಾರ್ಯ ಸಾಧುವೇ ಎನ್ನುವುದು ಅವನ ಪ್ರಶ್ನೆ. ಆದ್ದರಿಂದ ಆತ್ಮದ ವಿಮರ್ಶೆ ಎನ್ನುವುದನ್ನು ಅವನು ವಿಶಿಷ್ಟವಾದ ಅರ್ಥದಲ್ಲಿ ಬಳಸಿದ್ದಾನೆ. ಪ್ರಜಾಪ್ರಭುತ್ವ ಎನ್ನುವುದನ್ನು ನಾವು ಇಂಗ್ಲೀಶಿನಲ್ಲಿ ಡೆಮಾಕ್ರಸಿ ಎಂದು ಕರೆಯುತ್ತಾರೆ. ಡೆಮ್ಮೋಸ್ ಅಂದರೆ ಜನರು ಎಂದು ಅರ್ಥ. ಅಗೊಗಸ್ ಅಂದರೆ ನೇತೃತ್ವವನ್ನು ವಹಿಸಿಕೊಳ್ಳುವುದು. ಇದು ಗ್ರೀಕ್ ಭಾಷೆಯಲ್ಲಿ ಚಾಲ್ತಿಯಲ್ಲಿ ಇತ್ತು. ಆದರೆ ಅದು ಅಥೆನ್ಸ್ ನಗರದಲ್ಲಿ ಕೆಟ್ಟ ಅನುಭವವನ್ನು ಕೊಟ್ಟಿತ್ತು. ಆದ್ದರಿಂದ ಸಾಕ್ರೆಟಿಸ್ ಪ್ರಜಾಪ್ರಭುತ್ವವನ್ನು ವಿರೋಧಿಸಿದ್ದ. ಆದರೆ ಸಾಕ್ರೆಟಿಸ್ ನೈತಿಕತೆ ಮತ್ತು ಜ್ಞಾನವನ್ನು ಸಮೀಕರಿಸಿದ್ದು ಫುಕೋನ ಗಮನದಲ್ಲಿ ಇದೆ. ಯಾವುದು ಸರಿಯೆಂದು ನಾವು ತಿಳಿದುಕೊಂಡರೆ ಆಗ ಅಪಾಯವಿಲ್ಲ. ಆದರೆ ತಪ್ಪು ನಂಬಿಕೆ ತಪ್ಪು ಫಲಿತಾಂಶಕ್ಕೆ ಕಾರಣವಾಗುತ್ತದೆ. ಗ್ರೀಕ್‌ನಲ್ಲಿ ಎಡುಯ್ಯೆಮೊನಿಯಾ ಎಂದು ಹೇಳುತ್ತಾರೆ. ಯಾರಿಗೆ ನಿಜವಾದ ಅರಿವು ಇದೆಯೋ ಅವರು ತಪ್ಪು ಆಯ್ಕೆಯನ್ನು ಮಾಡಲಾರರು. ಅಜ್ಞಾನ ಎನ್ನುವುದು ನಿಜವಾದ ಅರ್ಥದಲ್ಲಿ ಒಂದು ನೈತಿಕ ಅಧಃಪತನ. ಇದನ್ನು ಫುಕೋ ತನ್ನ ವಾದದಲ್ಲಿ ಮುಂದುವರಿಸುತ್ತಾನೆ. ಅವನ ಹಿಸ್ಟ್ರಿ ಆಫ್ ಸೆಕ್ಸುವಲಿಟಿಯಲ್ಲಿ ಇದರ ಚರ್ಚೆಯನ್ನು ನಾವು ಕಾಣುತ್ತೇವೆ. ಸಾಕ್ರೆಟಿಸ್ ಬಾಳುವ ತಂತ್ರಗಾರಿಕೆಯನ್ನು ಹೇಳುತ್ತಾನೆ.. (ತೆಕ್ನೆ ತೌಬಿವೌ) ಇದು ಮುಂದುವರಿದು ಸ್ವಂತಿಕೆ ಮತ್ತು ಅದರ ರಕ್ಷಣೆಯ ಕಡೆಗೆ ಹೋಗುತ್ತದೆ. ಸಾಕ್ರೆಟಿಸ್ ಜೀವನ ಮತ್ತು ಅದರ ಕಲೆ ಎನ್ನುವುದು ಮತ್ತೊಂದು ಅರ್ಥದಲ್ಲಿ ಆತ್ಮವನ್ನು ರಕ್ಷಿಸುವ ಒಂದು ವಿಧಾನವೂ ಹೌದು. ಅವನಲ್ಲಿ ಆತ್ಮರಕ್ಷಣೆ ಎನ್ನುವುದು ಕೂಡಾ ಒಂದು ಬಗೆಯ ಜ್ಞಾನ,. ಮತ್ತೊಂದು ಕಡೆಯಿಂದ ಅದು ತನ್ನನ್ನು ತಾನು ನಿಯಂತ್ರಿಸಿಕೊಳ್ಳುವ ವಿಧಾನ. ತನ್ನ ಅರಿವು ಮತ್ತು ತನ್ನ ತಿಳುವಳಿಕೆ ಎನ್ನುವುದಕ್ಕೆ ಸಾಕ್ರೆಟಿಸ್‌ನಲ್ಲಿ ವಿಶೇಷವಾದ ಅರ್ಥವಿದೆ. ಆತ್ಮರಕ್ಷಣೆ ಎನ್ನುವುದು ಕೂಡಾ ಆತ್ಮರತಿಯನ್ನು ಹೇಳಬಹುದು. ಅದನ್ನು ಫುಕೋ ವಿವರಿಸುತ್ತಾನೆ. ಆತ್ಮ ರಕ್ಷಣೆ ಅಥವಾ ಆತ್ಮರತಿಯು ಹೆಚ್ಚು ಮುಂದುವರಿದರೆ ಅದು ಇನ್ನೊಬ್ಬರನ್ನು ಆಳುವುದಕ್ಕೆ ಅವಕಾಶವನ್ನು ಕಲ್ಪಿಸಬಹುದು.

ಫುಕೋ ಸತ್ಯ ಮತ್ತು ಸ್ವಯಂ ಅಸ್ತಿತ್ವಗಳ ನಡುವೆ ಒಂದು ಸಂಬಂಧವನ್ನು ಕಲ್ಪಿಸುತ್ತಾನೆ. ಸತ್ಯವನ್ನು ಹೇಳುವುದು ಅಂದರೆ ಅದು ತನಗೂ ಹೌದು, ಅನ್ಯರಿಗೂ ಹೌದು. ತನ್ನ ಅಸ್ತಿತ್ವದಲ್ಲಿ ಹೇಗೆ ಸತ್ಯವು ಮುಖ್ಯವಾಗುತ್ತದೆಯೋ ಅದೇ ರೀತಿಯಲ್ಲಿ ಅದೇ ಅನ್ಯರಿಗೂ ಮುಖ್ಯವಾಗುತ್ತದೆ. ಸಾಕ್ರೆಟಿಸ್ ಹೇಳಿದ ವಿಚಾರಗಳನ್ನು ಫುಕೋ ಇಲ್ಲಿಗೆ ಅನ್ವಯವನ್ನು ಮಾಡುತ್ತಾನೆ. ಸಾಕ್ರೆಟಿಸ್ ಕೊನೆಯ ದಿನಗಳಲ್ಲಿ ಪ್ರಸ್ತಾವಿಸಿದ ಸಂಗತಿಗಳು ಇಲ್ಲಿ ಮುಖ್ಯವಾಗುತ್ತದೆ ಎಂದು ಫುಕೋ ಭಾವಿಸುತ್ತಾನೆ. ಸತ್ಯ ಮತ್ತು ಅದರ ನಿರೂಪಣೆಯಲ್ಲಿ ನಮಗೆ ಬೇಕಾಗಿರುವುದು ಮೊದಲನೆಯದಾಗಿ ಒಂದು ಧೈರ್ಯ. ಸಾಕ್ರೆಟಿಸ್ ಹೇಳಿದ ಪರೆಶೀಯಾವನ್ನು ಫುಕೋ ಈ ರೀತಿಯಲ್ಲಿ

ಅನುವಾದವನ್ನು ಮಾಡಿದ್ದಾನೆ.: ಮುಕ್ತತೆ, ಸತ್ಯ ಮತ್ತು ಮುಕ್ಕಾಗದ ಮಾತು (ಕಪಟದ ಮಾತು) ವಾಸ್ತವವಾಗಿ ಪ್ಲೇಟೋ ಮತ್ತು ಸಾಕ್ರೆಟಿಸ್ ನಡುವೆ ಒಂದು ಮಾತುಕತೆಯು ನಡೆದಿತ್ತು. ಆಗ ಈ ಮಾತುಗಳು ಬಂದಿದ್ದವು. ಸಾಕ್ರೆಟಿಸ್ ದೇವರು ಮತ್ತು ಮಾನವ ಅಧಿಕಾರವನ್ನು – ಅದು ಕಾನೂನು ಬದ್ಧವಾಗಿರುವಾಗ ಪಾಲಿಸಬೇಕು ಎಂದು ಬಯಸುತ್ತಾನೆ. ಅಪಾಲಜಿಯಲ್ಲಿ ಬರುವ ಒಂದು ಮಾತನ್ನು ಸಾಕ್ರೆಟಿಸ್ ಫುಕೋ ಮತ್ತೆ ಹೇಳುತ್ತಾನೆ. ನಾವು ನಮ್ಮನ್ನು ಪರೀಕ್ಷೆ ಮಾಡದ ಹೊರತು ಜೀವಿಸಲು ಅರ್ಹರಲ್ಲ. ಹಾಗೆ ನೋಡಿದರೆ ಅಥೆನ್ಸ್ ಮತ್ತು ಅಲ್ಲಿಯ ರಾಜಕಾರಣಗಳ ಸ್ವರೂಪಗಳು ಬೇರೆ ಇದ್ದವು. ಅದನ್ನು ನಾವು ಗ್ರೀಕ್ ರಂಗಭೂಮಿಯಲ್ಲಿಯೂ ಕಾಣುತ್ತೇವೆ. ಅದು ಮತ್ತೊಂದು ಪ್ರಶ್ನೆ. ಪ್ಲೇಟೋ ಇದನ್ನು ಗಮನಿಸಿಕೊಂಡೇ 'ದಿ ಅಫಾಲಜಿ ಆಫ್ ಸಾಕ್ರೆಟಿಸ್' ಬರೆದ. ಆದರೆ ಫುಕೋ ಕೆಲವು ವಿಚಾರಗಳಲ್ಲಿ ಸಾಕ್ರೆಟಿಸ್ ಹೇಳುವ ಕೆಲವು ಚರ್ಚೆಯನ್ನು ಒಪ್ಪುತ್ತಾನೆ. ಆತ್ಮ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನ ಪರೆಶಿಯಾದ ಮಾತುಗಳನ್ನು ಒಪ್ಪುತ್ತಾನೆ. ಮುಕ್ತತೆ ಮತ್ತು ಯಾವುದೆ ಭಯವು ಇಲ್ಲದೆ ಮಾತಾಡುವುದು ಅತ್ಯಂತ ಮುಖ್ಯ. ಫುಕೋ ಎಪೆಕ್ಟಿಸ್‌ನ ಚರ್ಚೆಯನ್ನು ಬಳಸುತ್ತಾನೆ. ಯಾವುದೇ ಒಂದು ವಸ್ತುವು ತನ್ನಿಂದ ತಾನೇ ನಮ್ಮನ್ನು ಕಾಡುವುದಿಲ್ಲ. ನಮ್ಮ ನೋಟವು ಯಾವುದು ಇದೆಯೋ ಅದು ನಮ್ಮನ್ನು ಕಾಡುತ್ತದೆ ಎನ್ನುವುದು ಅವನ ವಾದ. ಫುಕೋ ಇದನ್ನು ಗಮನಿಸಿಕೊಂಡು ಹಾಗೆ ನೋಡಿದರೆ ತನ್ನ ಸ್ವಂತಿಕೆಯನ್ನು ರಕ್ಷಿಸಿಕೊಳ್ಳುವುದು ಅತ್ಯಂತ ಕಷ್ಟ. ಇದನ್ನೇ ಫುಕೋ ಹೇಳುತ್ತಾನೆ. ಆತ್ಮ ಮತ್ತು ಅದರ ರಕ್ಷಣೆ ಎನ್ನುವುದು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಅವನು ಹೇಳುತ್ತಾನೆ.

ಅಗಸ್ಟಿನ್. ಮೊದಲ ಕ್ರಿಶ್ಚಿಯನ್ ತತ್ವಶಾಸ್ತ್ರಜ್ಞಾನ ಎನ್ನುವ ಹೆಸರಿಗೆ ಪಾತ್ರನಾಗಿದ್ದಾನೆ. ಅವನ ಅತ್ಯಂತ ಮಹತ್ವದ ಕೃತಿಗಳೆಂದರೆ 'ದ ಸಿಟಿ ಆಫ್ ಗಾಡ್' 'ಓನ್ ಪ್ರೀ ಚಾಯಿಸ್ ಆಫ್ ದ ವಿಲ್' 'ಕನ್ಸರಿಂಗ್ ದ ನೇಚರ್ ಆಪ್ ಗಾಡ್' ಅವನ ಅತ್ಯಂತ ಮುಖ್ಯವಾದ ನಿಲುವು ಹೀಗೆ ಇದೆ: ದೇವರೇ ಕೆಲವು ವಿಷಯಗಳಲ್ಲಿ ನಮಗೆ ನ್ಯಾಯವನ್ನು ಕೊಡುತ್ತಾನೆ. ಅವನಲ್ಲಿ ಥಿಯೋ ಅಂದರೆ ದೇವರು. ಡೈಕೆ ಅಂದರೆ ನ್ಯಾಯ ಇದು ಅವನ ಅತ್ಯಂತ ಮುಖ್ಯವಾದ ಪರಿಕಲ್ಪನೆ. ಅದರ ಮೂಲಕ ಅವನು ಒಂದು ಪ್ರಮೇಯವನ್ನು ರೂಪಿಸುತ್ತಾನೆ. ಅವನು ಮತ್ತೊಂದು ಮಹತ್ವದ ವಿಚಾರವನ್ನು ನಮ್ಮ ಮುಂದೆ ಇಡುತ್ತಾನೆ. ಕೇಡು ಮತ್ತು ಒಳ್ಳೆಯತನ ಎನ್ನುವುದು ಮನುಷ್ಯರಲ್ಲಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈ ಜಗತ್ತಿನಲ್ಲಿ ನಾವು ಕೇಡು ಎನ್ನುವುದು ಇಲ್ಲವೇ ಇಲ್ಲ ಎಂದು ವಾದಿಸಲು ಬರುವುದಿಲ್ಲ. ಕೇಡು ಎನ್ನುವುದು ಯಾವತ್ತೂ ನಮಗೆ ಕಣ್ಣಿಗೆ ಕಾಣಿಸುವ ಸಂಗತಿಯು ಅಲ್ಲ. ಅದರಲ್ಲಿ ಬೇರೆ ಬೇರೆ ಅಂಶಗಳೂ ಇರುತ್ತವೆ. ಕೇಡು ಎನ್ನುವುದು ಹುಟ್ಟುವುದೇ

ಮನುಷ್ಯ ಮತ್ತು ಅವನ ಅಸ್ತಿತ್ವದಲ್ಲಿ ಎನ್ನುವುದನ್ನು ಗಮನಿಸಬೇಕು ಎಂದು ಅವನು ಹೇಳುತ್ತಾನೆ. ನಮಗೆ ನಮ್ಮ ಬಯಕೆಯನ್ನು ಗೆಲ್ಲಲು ಸಾಧ್ಯವಾದರೆ ಆಗ ಅಲ್ಲಿ ಕೇಡು ಇರುವುದೂ ಇಲ್ಲ. ಇದನ್ನು ಹೇಳುವಾಗಲೇ ಅವನು ನಮಗೆ ಶ್ರೇಷ್ಠ ಎಂದು ಅನಿಸುತ್ತದೆ ಹಾಗೂ ಯಾವುದು ಕೇಡು ಎನ್ನುವುದು ಸೃಷ್ಟಿಯಾಗುವುದು ನಮ್ಮ ಮನಸ್ಸಿನಲ್ಲಿ ಎಂದು ಭಾವಿಸುತ್ತಾನೆ. ಆದರೂ ಅಗಸ್ಟಿನ್ ದೇಹ ಮತ್ತು ಮನಸ್ಸುಗಳ ದ್ವಂದ್ವವನ್ನು ಹೇಳುತ್ತಾನೆ. ಇದರ ಆಧಾರದ ಮೇಲೆ ಫುಕೋ ತನ್ನ ವಾದವನ್ನು ಮಂಡಿಸುತ್ತಾನೆ. ಕ್ರಿಶ್ಚಿಯಾನಿಟಿಯು ಒಮ್ಮೆ ಭೋಗ ಮತ್ತು ಬಯಕೆಗಳನ್ನು ದೂರವಿಟ್ಟಿತ್ತು. ದೇಹ ಮತ್ತು ಅದರ ಬಯಕೆಗಳನ್ನು ನಿಯಂತ್ರಣ ಮಾಡುವುದು ಹೇಗೆ ಎನ್ನುವುದು ಅತ್ಯಂತ ಮುಖ್ಯವಾದ ಒಂದು ಪ್ರಶ್ನೆಯೂ ಆಗಿತ್ತು. ದೇಹ ಅಥವಾ ಇಂದ್ರಿಯಗಳ ಆಸಕ್ತಿಯು ನಮ್ಮ ಜೀವನದ ಜೊತೆಗೆ ಇದೆ. ಅದನ್ನು ನಿಯಂತ್ರಣ ಮಾಡುವುದು ಅತ್ಯಂತ ಮುಖ್ಯವೆಂದು ಆಗ ಕ್ರಿಶ್ಚಿಯಾನಿಟಿಯು ನಂಬಿತ್ತು. ಬಯಕೆಗಳು, ಲೈಂಗಿಕ ಸಂಬಂಧಗಳು ಹಾಗೂ ಮದುವೆಗಳನ್ನು ಜೊತೆಗೆ ಸಮೀಕರಿಸಲಾಗಿದೆ. ಆದರೆ ವಿಷಯವು ಅಷ್ಟು ಸುಲಭ ಇಲ್ಲ ಎನ್ನುವುದನ್ನು ಫುಕೋ ತಿಳಿದುಕೊಂಡಿದ್ದಾನೆ. ಆದ್ದರಿಂದ ಅವನು ಕಾಮ ಎನ್ನುವುದು ಒಂದು ಅಪರಾಧವೇ ಎಂದು ಕೇಳುತ್ತಾನೆ. ಒಂದು ರೀತಿಯಿಂದ ಮದುವೆ ಮತ್ತು ಗಂಡು ಹೆಣ್ಣಿನ ಸಂಯೋಗವು ಬಯಕೆಯನ್ನು ಹೇಳುತ್ತದೆ.

ಅಗಸ್ಟಿನ್ ಹೇಳಿದ ಮತ್ತೊಂದು ಪ್ರಮುಖವಾದ ಸಂಗತಿಯನ್ನು ಫುಕೋ ಎತ್ತಿಕೊಂಡಿದ್ದಾನೆ. ದೇವರಿಗೆ ಮತ್ತು ಮನುಷ್ಯರ ಬಯಕೆಗಳಿಗೆ ಒಂದು ಸಂಬಂಧವು ಇದೆ. ನಾವು ಅತ್ಯಂತ ಸಾಧಾರಣವಾದ ಅರ್ಥದಲ್ಲಿ ಹೇಳುವ ಇಂದ್ರಿಯದ ಬಯಕೆಯನ್ನು ಅಗಸ್ಟಿನ್ ದೇವರು ಮತ್ತು ಮನುಷ್ಯರ ಬಯಕೆಗಳ ನಡುವೆ ಇರುವ ಸಂಬಂಧ ಎನ್ನುವ ಅರ್ಥದಲ್ಲಿ ಬಳಸುತ್ತಾನೆ. ಆದರೆ ಸ್ವಂತ ಮತ್ತು ಅದರ ಸ್ವರೂಪವನ್ನು ಹೇಳುವಾಗ ಫುಕೋ ಅದನ್ನು ಸ್ವಂತಿಕೆ ಮತ್ತು ಅದರ ತಂತ್ರಗಾರಿಕೆ ಎಂದು ಹೇಳುತ್ತಾನೆ. ಇದೇ ಸ್ವಂತಿಕೆ ಎನ್ನುವುದು ನಮ್ಮ ಬರಹಗಳಲ್ಲಿ ಕಂಡು ಬರುತ್ತದೆ. ಸಾಹಿತ್ಯದಲ್ಲಿ ಅನೇಕ ಪುನರುತ್ಥಾನವಾದಿಗಳು ಮತ್ತು ರೊಮಾಂಟಿಕ್ ವಾದಿಗಳು ಸ್ವಂತಿಕೆ ಮತ್ತು ಅದರ ಅಭಿವ್ಯಕ್ತಿಯನ್ನು ಹೇಳಿದರು. ಅವರ ವಾದಗಳಿಗೆ ಅತ್ಯಂತ ದೊಡ್ಡ ಇತಿಹಾಸವಿದೆ ಎಂದು ಫುಕೋ ಭಾವಿಸುತ್ತಾನೆ. ಪಶ್ಚಿಮದ ಪರಂಪರೆಯಲ್ಲಿ ಅದು ಬಂದಿದೆ ಎನ್ನುವುದು ಅವನ ವಾದ. ಇದರ ಒಂದು ಮೂಲವನ್ನು ನಾವು ಅಗಸ್ಟಿನ್ ತತ್ವಜ್ಞಾನದಲ್ಲಿ ಕಾಣಬಹುದು. ಗ್ರೀಕ್ ಪರಂಪರೆಯಲ್ಲಿ ದಿನಚರಿಯನ್ನು ಬರೆಯುವುದು ಹೇಗೆ ಪ್ರಾರಂಭವಾಯಿತು ಮತ್ತು ಅದರ ಪರಿಣಾಮವು ಏನು ಎಂದು ಫುಕೋ ಪರಿಶೀಲನೆ ಮಾಡುತ್ತಾನೆ.

ನಾವು ಹೇಳುವುದಕ್ಕೆ ಬರಹವೂ ಒಂದು ಪರಿಕರವಾಗಿದೆ. ಬರಹ ಎನ್ನುವುದು ನಮಗೆ ಒಂದು ಬಗೆಯಲ್ಲಿ ಸಂಶೋಧನೆಯು ಕೂಡಾ ಹೌದು. ಜ್ಞಾನ ಮತ್ತು ಅದರ ಪರಿವರ್ತನೆ ಹಾಗೂ ಅದರ ಮೂಲಕ ನಾವು ನಡೆಸುವ ಸಂಕಥನಗಳನ್ನು ಸೂಚಿಸಲು ನಮಗೆ ಬರಹ ಅಗತ್ಯವಿದೆ. ದಿನಚರಿ ಎನ್ನುವುದು ನಮ್ಮ ವೈಯಕ್ತಿಕವಾದ ಸಂಗತಿಯೂ ಹೌದು. ಆದರೆ ಅದರಲ್ಲಿಯೂ ನಮ್ಮ ಜ್ಞಾನವು ಅಸ್ತಿತ್ವವನ್ನು ಪಡೆದಿರುತ್ತದೆ. ಖಾಸಗಿಯಾದ ಬರಹಗಳು ನಮಗೆ ಜ್ಞಾನವನ್ನು ಸೂಚಿಸಲು ಇರುವ ಸಾಧ್ಯತೆಯೂ ಹೌದು. ಜ್ಞಾನವನ್ನು ನಾವು ನಮ್ಮ ಬರಹಗಳನ್ನು ರೂಪಿಸಲು ನಮ್ಮ ಜ್ಞಾನವೇ ಆಧಾರವಾಗಿರುತ್ತದೆ. ನಾವು ನಮ್ಮ ಜ್ಞಾನವನ್ನು ಇನ್ನೊಬ್ಬರಿಗೆ ವರ್ಗಾಯಿಸಬಹುದು. ಗ್ರೀಕ್ ಭಾಷೆಯಲ್ಲಿ ಒಂದು ಪದವು ಚಾಲ್ತಿಯಲ್ಲಿ ಇತ್ತು. ಅದನ್ನು ಎಥ್ನೋಪೊಯಿಸ ಎಂದು ಹೇಳುತ್ತಿದ್ದರು. ಅದರ ಅರ್ಥವು ಸ್ಪಷ್ಟ. ಜ್ಞಾನ ಎನ್ನುವುದು ನಮಗೆ ನಿರ್ಣಾಯಕ. ಅದು ಪರಿವರ್ತನಶೀಲವೂ ಹೌದು. ಆದ್ದರಿಂದ ಜ್ಞಾನವನ್ನು ನಾವು ಉತ್ಪಾದಿಸುತ್ತೇವೆ. ಅದನ್ನು ನಾವು ಬೇರೆಯವರಿಗೆ ಕೊಡುತ್ತೇವೆ. ಹಾಗಿದ್ದಾಗ ಅದನ್ನು ಇನ್ನೊಬ್ಬರಿಗೆ ಹೇಳಿಕೊಳ್ಳುವುದು ಹೇಗೆ? ಅದಕ್ಕಿರುವ ದಾರಿ ಎಂದರೆ ಅದು ಬರಹ. ಯಾವುದನ್ನು ನಾವು ಖಾಸಗಿಯಾದ ಬರಹ ಎಂದು ಹೇಳುತ್ತೇವೆಯೋ ಈ ಎಥ್ನೋ ಪೊಯೆಟಿಕ್ ಜ್ಞಾನವನ್ನು ಹೇಳುತ್ತದೆ. ಬರಹದಲ್ಲಿ ಅದು ಇನ್ನೊಬ್ಬರಿಗೆ ತಲುಪುತ್ತದೆ. ಬರೆಯುವುದು ಅಂದರೆ ಅದು ನಮ್ಮ ಸ್ವಾತಂತ್ರ್ಯವೂ ಹೌದು.

ಒಂದು ಅರ್ಥದಲ್ಲಿ ಆಧುನಿಕ ತತ್ವಜ್ಞಾನವು ಕಾಂಟ್‌ನಿಂದ ಪ್ರಾರಂಭವಾಗುತ್ತದೆ. ಅವನ ಕಾರಣವಾದವು ಅತ್ಯಂತ ಪ್ರಮುಖವಾದ ಪ್ರಶ್ನೆಗಳನ್ನು ಎತ್ತಿಕೊಂಡಿತ್ತು. ಅದರ ಜೊತೆಗೆ ಅವನು ನೈತಿಕತೆ ಮತ್ತು ಅದರ ಪರಿಣಾಮಗಳನ್ನು ಹೇಳುತ್ತಾನೆ. ವಾಸ್ತವವಾಗಿ ನಾವು ಅನೇಕರು ನೈತಿಕತೆ ಮತ್ತು ಅದರ ಸ್ವರೂಪವನ್ನು ಅವಲಂಭಿಸಿಕೊಂಡು ನೈತಿಕತೆಯನ್ನು ತೀರ್ಮಾನ ಮಾಡುತ್ತೇವೆ. ಎಲ್ಲವೂ ಈ ಜಗತ್ತಿನಲ್ಲಿ ಇದೆ. ಈ ಜಗತ್ತಿನಿಂದ ಹೊರತಾಗಿ ಯಾವುದೂ ಇರುವುದಿಲ್ಲ. ನಮಗೆ ಅತ್ಯಂತ ಒಳ್ಳೆಯ ಗುಣವು ಇದೆ? ನಾವು ಒಳ್ಳೆಯದನ್ನು ಸಾಧಿಸುತ್ತೇವೆ. ನಮಗೆ ಬೇಕಾದ್ದು ಒಳ್ಳೆಯ ಉದ್ದೇಶವೆಂದು ಕಾಂಟ್ ಹೇಳುತ್ತಾನೆ. ನಮಗೆ ಯಾವ ಬಗೆಯ ನೈತಿಕತೆಯು ಇರುತ್ತದೆಯೋ ಅದಕ್ಕೆ ಅನುಸಾರವಾಗಿ ನಾವು ಜೀವಿಸಿಕೊಳ್ಳುತ್ತೇವೆ. ಯಾವುದು ನಿಜವಾದ ಒಂದು ಒಳ್ಳೆಯತನ ಎಂದು ಹೇಳುತ್ತೇವೆಯೋ ಯಾವತ್ತೂ ಕೆಡುಕು ಆಗಿರುವುದಿಲ್ಲ. ಅದರ ಜೊತೆಗೆ ಅದು ನಮಗೆ ವಿಶ್ವಾತ್ಮಕವಾಗಿರುತ್ತದೆ. ಅಷ್ಟೇ ಅಲ್ಲ ಅದು ನೈತಿಕವೂ ಆಗಿರುತ್ತದೆ. ಅದರ ಜೊತೆಗೆ ಕಾಂಟ್ ಇನ್ನೊಂದು ಮುಖ್ಯವಾದ ಅಂಶವನ್ನು ನಮ್ಮ ಮುಂದೆ ಇಡುತ್ತಾನೆ. ಯಾವುದು ಪುನರುಜ್ಜೀವನ ಎನ್ನುವುದು ಅವನ ಪ್ರಶ್ನೆಯೂ ಹೌದು. ಕಾರಣಗಳು, ಪುನರುಜ್ಜೀವನ ಮತ್ತು

ವಿಶ್ವಾತ್ಮಕತೆಗೆ ಒಂದು ಸಂಬಂಧವು ಇದೆ. ಅದರ ಜೊತೆಗೆ ಕಾರಣಗಳು ಮತ್ತು ಸ್ವಾತಂತ್ರ್ಯದ ಸಂಬಂಧವನ್ನು ಕಾಂಟ್ ಹೇಳುತ್ತಾನೆ. ಸ್ವಾತಂತ್ರ್ಯ ಎನ್ನುವುದು ಹೇಗೆ ಹಿಂದಿನಿಂದಲೂ ಬಂದಿದೆ ಮತ್ತು ಅದಕ್ಕೂ ಒಂದು ಇತಿಹಾಸವು ಇದೆ ಎಂದು ಕಾಂಟ್ ಚರ್ಚೆಯನ್ನು ಮಾಡುತ್ತಾನೆ. ಆದರೆ ಫುಕೋ ಸ್ವಾತಂತ್ರ್ಯ ಎನ್ನುವುದು ನಮಗೆ ಅಭ್ಯಾಸವಾಗಿ ಬಂದಿಲ್ಲ ಎಂದು ಹೇಳುತ್ತಾನೆ.

ಹಾಗೆ ನೋಡಿದರೆ ನಮಗೆ ಸ್ವಾತಂತ್ರ್ಯ ಎನ್ನುವುದು ಬಂದರೂ ಅದರ ಸ್ವರೂಪವನ್ನು ಅಧಿಕಾರದ ಕೇಂದ್ರಗಳು ಯಾವ ರೀತಿಯಲ್ಲಿ ನಿರೂಪಣೆ ಮಾಡುತ್ತವೆ ಎಂದು ಫುಕೋ ಕೇಳುತ್ತಾನೆ. ಸ್ವಾತಂತ್ರ್ಯ ಎನ್ನುವುದು ಒಂದು ಅಲ್ಲ. ಅದರಲ್ಲಿ ಏಕತೆಯು ಇಲ್ಲ. ಅದರ ಜೊತೆಗೆ ಅದು ಸ್ಥಿರವಾದ ಒಂದು ರೂಪವನ್ನು ಹೊಂದಿರುವುದೂ ಇಲ್ಲ. ಎಲ್ಲಾ ಅಧಿಕಾರ ಕೇಂದ್ರಗಳು ಕೂಡಾ ತನಗೆ ಬೇಕಾದಂತೆ ಸ್ವಾತಂತ್ರ್ಯವನ್ನು ಬದಲಿಸುತ್ತವೆ. ಹೀಗೆ ಇರುವುದರಿಂದಲೇ ಸ್ವಾತಂತ್ರ್ಯ ಮತ್ತು ಸತ್ಯಗಳು ಸಂವಾದಿಯಾಗುತ್ತವೆ.

1. ಫುಕೋರೀಡರ್.

8. ಮಾರ್ಕ್ಸ್‌ವಾದ – ಫ್ರೆಡ್ರಿಕ್ ಜೇಮ್ಸನ್

ವಾಲ್ಟರ್ ಬೆಂಜಮಿನ್ ಮತ್ತು ಲೂಶಿಯನ್ ಗೋಲ್ಡ್‌ಮನ್ ಇಬ್ಬರೂ 'ವಸ್ತುನಿಷ್ಠ ಸತ್ಯ' ಮತ್ತು ಕಲೆ ಇವುಗಳ ದ್ವಂದ್ವಾತ್ಮಕ ಸಂಬಂಧ; ತಳಹದಿ ಮತ್ತು ಮೇಲುರಚನೆಯ ಸಂಬಂಧವನ್ನು ಚರ್ಚಿಸುತ್ತಾರೆ. ಈ ಸಂದರ್ಭದಲ್ಲಿ ಬೆಂಜಮಿನ್ 'ಔರ' ಪರಿಕಲ್ಪನೆಯನ್ನು ಪರಿಶೀಲಿಸುತ್ತಾನೆ. 'ಔರ' ಎಂದರೆ ಮೂಲಕೃತಿಯ ವಿಶಿಷ್ಟ ಪರಿಸರ. ಇದನ್ನು ಬೆಂಜಮಿನ್ ಹೀಗೆ ವಿವರಿಸುತ್ತಾನೆ : 'ಅವಕಾಶ ಮತ್ತು ಕಾಲಗಳ ವಿಶಿಷ್ಟ ಸಂಯೋಜನೆ; ಇವುಗಳ ನಡುವಿನ ಅಂತರಗಳನ್ನು ಒಂದು ಏಕತೆಯಿಂದ ಪ್ರತಿಪಾದಿಸುವ ಕ್ರಮ. ಇವುಗಳು ಒಂದು ಕಲಾಕೃತಿಯಲ್ಲಿ ವಿಶಿಷ್ಟ ಪರಿಸರವಾಗಿ ರೂಪುಗೊಳ್ಳುತ್ತದೆ ಮತ್ತು ವಿಶಿಷ್ಟ ಪರಿಸರಕ್ಕೂ ಕೃತಿಗೂ ಒಂದು ಸಂಬಂಧವಿರುತ್ತದೆ. ವಸಾಹತು ಕಾಲದ ಲೇಖಕರಿಗೆ ಇದರ ಅರಿವು ಇದೆ. ಕುವೆಂಪು ಬರೆಯುವಾಗ ಅವರ ಎದುರು ಒಂದು ನಿರ್ದಿಷ್ಟವಾದ ಕಾಲವಿತ್ತು. ಆ ಕಾಲದಲ್ಲಿ ಒಂದು ಕಡೆಯಿಂದ ಇಂಗ್ಲೀಷರು ಇದ್ದರು. ಮತ್ತೊಂದು ಕಡೆಯಿಂದ ನವವಿದ್ಯಾವಂತ ವರ್ಗವಿತ್ತು. ಹೊಸ ಲೇಖಕರು ಮತ್ತು ಅವಕಾಶ ಅವರಿಗೆ ಮುಖ್ಯವಾಯಿತು. ಬೆಂಜಮಿನ್ ಕಲಾಕೃತಿಯ ವಿಶ್ಲೇಷಣೆಯ ಸಂದರ್ಭದಲ್ಲಿ 'ಚಾರಿತ್ರಿಕತೆ'ಯನ್ನು ಒಂದು ಮಾನದಂಡವಾಗಿ ಬಳಸುತ್ತಾನೆ. ಈ ಅರ್ಥದಲ್ಲಿ ಬೆಂಜಮಿನ್ 'ಚಾರಿತ್ರಿಕವಾದಿ'ಯೂ ಆಗಿದ್ದಾನೆ. ಸಾಹಿತ್ಯದಲ್ಲಿ ಅಥವಾ ಕಲೆಯಲ್ಲಿ ಒಂದು ರೀತಿಯ ಕೌಶಲ ಹೋಗಿ ಮತ್ತೊಂದು ರೀತಿಯ ಕೌಶಲವು ರೂಪುಗೊಳ್ಳುವುದಕ್ಕೆ 'ರಾಜಕಾರಣ'ವೇ ಮುಖ್ಯ ಹಿನ್ನೆಲೆಯಾಗಿರುತ್ತದೆಯೆನ್ನುವುದು ಬೆಂಜಮಿನ್‌ನ ಮುಖ್ಯವಾದ. ಹೀಗಾಗಿ ಬೆಂಜಮಿನ್‌ಗೆ ಸಾಂಸ್ಕೃತಿಕ ಚರಿತ್ರೆಯು ಮುಖ್ಯವೆಂದು ಅನಿಸಿದೆ. ವಸಾಹತು ರಾಜಕಾರಣ ಮತ್ತು ಆದರೆ ಚರಿತ್ರೆಯು ಭಿನ್ನ. ಆದರೆ ಮಾರ್ಕ್ಸ್‌ವಾದಿ ವಿಮರ್ಶಾ ಸಿದ್ಧಾಂತವು ಮಾತ್ರ – ಬಂಡವಾಳಶಾಹಿ ವ್ಯವಸ್ಥೆಯೊಳಗಿನ ಆಂತರಿಕ ವೈರುಧ್ಯವನ್ನು ಹೇಳುತ್ತದೆ. ಎರಡನೆಯದಾಗಿ ಮಾರ್ಕ್ಸ್‌ವಾದಿ ವಿಮರ್ಶೆಯ ತತ್ವಕ್ಕೆ ಚರಿತ್ರೆಯು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ – ಭವಿಷ್ಯವಾದಿ ಚಿಂತನೆಯೂ ಕೂಡಾ.

ಮಾರ್ಕ್ಸ್‌ವಾದಿ ವಿಮರ್ಶೆಯ ತತ್ವವು ಜೀವನದ ಬಗ್ಗೆ ಖಚಿತವಾದ ದೃಷ್ಟಿಕೋನವನ್ನು ಹೊಂದಿದೆ. ಜೀವನವನ್ನು ರೂಪಿಸುವುದು ಅದಕ್ಕೆ ಮುಖ್ಯ. ಈ ದೃಷ್ಟಿಯಿಂದ ಮಾರ್ಕ್ಸ್‌ವಾದಿ ವಿಮರ್ಶೆಯ ತತ್ವವು ಕೂಡಾ ಆಧುನಿಕಯುಗವು ಜ್ಞಾನ ಜಗತ್ತಿನಲ್ಲಿ ರಾಜಕಾರಣದಲ್ಲಿ ಭಾಗವಹಿಸುತ್ತದೆ. ಅದಕ್ಕೆ ಅದು ತಪ್ಪೆಂದು ಅನಿಸುವುದಿಲ್ಲ. ಮಾರ್ಕ್ಸ್‌ವಾದಿ ವಿಮರ್ಶೆಯ ತತ್ವದಲ್ಲಿ ತಾತ್ವಿಕತೆ; ವಸ್ತು; ಬದ್ಧತೆಗಳು ಮುಖ್ಯ. ಲುಕಾಕ್ಸ್ ರಾಜಕೀಯ ಉದ್ದೇಶ ಪ್ರತಿಪಾದಿಸಿದರೆ ರೇಮಾಂಡ್ ವಿಲಿಯಂಸ್ ಸಂಸ್ಕೃತಿ ಮತ್ತು ಬರವಣಿಗೆಯ ಸಂಬಂಧಗಳನ್ನು ಚರ್ಚಿಸಿದ. ಈ ದೃಷ್ಟಿಯಿಂದಲೂ ಇದಕ್ಕೆ ಸಾಹಿತ್ಯವೆಂದರೆ ಸಾಂಸ್ಕೃತಿಕ ಉತ್ಪಾದನೆ ಮತ್ತು ಮಾರ್ಕ್ಸ್‌ವಾದಿ ವಿಮರ್ಶೆಯ ತತ್ವವು ನಿರ್ದಿಷ್ಟ ತತ್ವಜ್ಞಾನವನ್ನು ಹೊಂದಿದೆ. ಸಾಹಿತ್ಯವೆನ್ನುವುದು ಸಂಸ್ಕೃತಿ, ರಾಜಕಾರಣ, ಸಮಾಜದ ಪ್ರಾತಿನಿಧಿಕ ರೂಪವೆಂಬುದನ್ನು ಮಾರ್ಕ್ಸ್‌ವಾದಿ ವಿಮರ್ಶೆಯ ತತ್ವವು ಒಪ್ಪಿಕೊಳ್ಳುತ್ತದೆ. ಈ ಅರ್ಥದಲ್ಲಿ ಮಾರ್ಕ್ಸ್‌ವಾದಿ ವಿಮರ್ಶೆಯ ತತ್ವವು ಶುದ್ಧ ಸೌಂದರ್ಯ ಮೀಮಾಂಸೆಯಲ್ಲ. ಆದರ ಸಾಹಿತ್ಯಕ ವ್ಯಾಖ್ಯಾನವು ಸಮಾಜದಿಂದ ಪ್ರಾರಂಭವಾಗುತ್ತದೆ. ಆದರೆ ಬ್ರೆಕ್ಟ್‌ನ ಒಂದು ಮುಖ್ಯ ವ್ಯಾಖ್ಯಾನವಿದೆ: 'ಸಾಹಿತ್ಯವು ಜೀವನವನ್ನು ವಿಶಿಷ್ಟ ಕನ್ನಡಿಯ ಮೂಲಕ ಪ್ರತಿಬಿಂಬಿಸುತ್ತದೆ'. ಅಂದರೆ ಸಾಹಿತ್ಯ ಕೃತಿಯು ಸರಳವಾಗಿ ಪ್ರತಿಬಿಂಬಿತವಾಗಿರುವುದಿಲ್ಲ. ಸನ್ನಿವೇಶ ಮತ್ತು ಕೃತಿಯನ್ನು ಕುರಿತು ಪುಕೋ ಕೂಡಾ ಹೇಳುತ್ತಾನೆ. ಇದನ್ನು ಹೇಳುವಾಗ ಆಧುನಿಕ ಪ್ರಭುತ್ವವು ಹೇಗೆ ಕೆಲಸವನ್ನು ಮಾಡುತ್ತದೆಯೆಂದು ಫುಕೋ ವಾದಿಸುತ್ತಾನೆ. ಅವನು ಹಿಂದಿನ ಪ್ರಭುತ್ವ ಮತ್ತು ಆಧುನಿಕ ಪ್ರಭುತ್ವದ ನಡುವಣ ವ್ಯತ್ಯಾಸವನ್ನು ಹೇಳುತ್ತಾನೆ. ಆಧುನಿಕ ಪ್ರಭುತ್ವವು ಧನಾತ್ಮಕವಾಗಿದೆ. ಜೀವನಕ್ಕೆ ಬೆಂಬಲವಾಗಿ ಅನೇಕ ಸನ್ನಿವೇಶದಲ್ಲಿ ನಿಲ್ಲುತ್ತದೆ. ಆದರೆ ಹಿಂದಿನ ಪ್ರಭುತ್ವ ಋಣಾತ್ಮಕವಾದ ಪ್ರಜ್ಞೆಯನ್ನು ಹೊಂದಿತ್ತು. ಅದರ ತಾಂತ್ರಿಕತೆಯು ಬೇರೆಯಾಗಿದೆ. ಆಧುನಿಕ ಕಾನೂನು ಮತ್ತು ನ್ಯಾಯ ತೀರ್ಮಾನದ ಕ್ರಮಗಳು ಬೇರೆಯೆಂದು ಅವನು ಪ್ರತಿಪಾದಿಸುತ್ತಾನೆ. ಅಧಿಕಾರದ ಸಂಬಂಧಗಳು ಕೂಡಾ ಭಿನ್ನವಾಗುತ್ತವೆ. ಇದನ್ನು ವಿಶ್ಲೇಷಿಸುವಾಗ ಅವನು ತಾತ್ವಿಕತೆಯನ್ನು ಮರೆಯುವುದಿಲ್ಲ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರಕೃತಿ ಮತ್ತು ವಾಸ್ತವಕ್ಕೆ ಇರುವ ದ್ವಂದ್ವ ವಿನ್ಯಾಸವನ್ನು ಏಂಗೆಲ್ಸ್ ಡಯಲೆಕ್ಟಿಕಲ್ ವಿಧಾನದ ಮೂಲಕ ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಿದ. ಸಾಹಿತ್ಯ ಮತ್ತು ಅದರ ತಾತ್ವಿಕತೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಬುನಾದಿಯನ್ನು ಹಾಕಿದೆ. ಏಂಗೆಲ್ಸ್‌ನ ಪ್ರಕಾರ ಚಾರಿತ್ರಿಕ ಭೌತವಾದವು ಸಾಮಾಜಿಕ ಜೀವನ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಕುರಿತು ಚರ್ಚಿಸುತ್ತದೆ. ಮನುಷ್ಯ ಸಮಾಜದ ಮೇಲೆ ಚಾರಿತ್ರಿಕ ಭೌತವಾದವು ತುಂಬಾ ಸಂಕೀರ್ಣವಾದ

ಪ್ರಭಾವವನ್ನು ಬೀರಿದೆ. ಆದುದರಿಂದ ಸಾಮಾಜಿಕ ಬದಲಾವಣೆಯ ವಿಶ್ಲೇಷಣೆಯಲ್ಲಿ ಚಾರಿತ್ರಿಕ ಭೌತವಾದವು ವಹಿಸುವ ಪಾತ್ರವು ಹಿರಿದಾಗಿದೆ. ಮಾರ್ಕ್ಸ್‌ವಾದಿ ವಿಮರ್ಶೆಯ ತತ್ವವು ಚಾರಿತ್ರಿಕ ಭೌತವಾದವನ್ನು ಪ್ರಧಾನವೆಂದು ಪರಿಗಣಿಸಲು ಕೂಡಾ ಕಾರಣವಿದು. ತಾತ್ವಿಕತೆಯನ್ನು ಹೊರತು ಪಡಿಸಿಕೊಂಡು ಒಂದು ಸಾಹಿತ್ಯದ ಅಧ್ಯಯನವು ಸಾಧ್ಯವಿಲ್ಲ ಎನ್ನುವುದು ಇಲ್ಲಿಯ ಮುಖ್ಯವಾದ ಪ್ರಶ್ನೆಯಾಗಿದೆ. ಮಾರ್ಕ್ಸ್‌ವಾದಿ ವಿಮರ್ಶೆಯ ತತ್ವವು ಎಲ್ಲಕ್ಕಿಂತ ಹೆಚ್ಚಾಗಿ ತಾತ್ವಿಕತೆಯ ಪ್ರಶ್ನೆಯನ್ನು ತುಂಬಾ ಗಂಭೀರವಾಗಿ ಪರಿಗಣಿಸುತ್ತದೆ. ಕೃತಿಯನ್ನು ವಿಶ್ಲೇಷಿಸುವುದೆಂದರೆ ಮೂಲತಃ ಅದು ಕೃತಿಯೊಂದರ ತಾತ್ವಿಕತೆಯನ್ನು ಚರ್ಚಿಸುವುದು. ಅಂದರೆ ಕೃತಿಯು ರೂಪುಗೊಳ್ಳುವುದು ತಾತ್ವಿಕತೆಯ ಆಧಾರದ ಮೇಲೆ. ತಾತ್ವಿಕತೆಯು ಕೃತಿಯನ್ನು ನಿರ್ಧರಿಸುತ್ತದೆ. ಬೇಂದ್ರೆ ಎಷ್ಟು ಚೆನ್ನಾಗಿ ಬರೆದಿದ್ದಾರೆ ಎನ್ನುವುದಕ್ಕಿಂತ ಬೇಂದ್ರೆಯವರು ಕೃತಿಗಳಲ್ಲಿ ಏನನ್ನು ಹೇಳಿದ್ದಾರೆ ಅನ್ನುವುದೂ ತುಂಬಾ ಮುಖ್ಯ. ಕೃತಿ ರಚನೆ: ಅದರ ತಾಂತ್ರಿಕ ಅಂಶಗಳು ಮುಖ್ಯವಲ್ಲ. ಅದರ ತಾತ್ವಿಕತೆ ಮುಖ್ಯವೆಂದು ಮಾರ್ಕ್ಸ್‌ವಾದಿ ವಿಮರ್ಶಾತತ್ವ ಪರಿಗಣಿಸುತ್ತದೆ. ನವ್ಯ ಮಾದರಿಯ ವಿಮರ್ಶೆಯಲ್ಲಿ ಕಲಾತ್ಮಕತೆಯು ಪ್ರಧಾನವಾಗಿದೆ. ಅದು ಹೇಳುವ ಕ್ರಮಗಳು ಭಿನ್ನವಾಗಿದೆ. ಒಂದು ಕೃತಿ ಅದರ ಹಿಂದಿರುವ ತಾತ್ವಿಕತೆ, ಚರಿತ್ರೆ, ಲೇಖಕನ ತಾತ್ವಿಕತೆ, ಅವುಗಳ ಜೊತೆಗೆ ರಚನೆಯ ಕ್ರಮ ಈ ತರಹ ಅನೇಕ ಸಂಮಿಶ್ರ ಸಂಗತಿಗಳು ಮಾರ್ಕ್ಸ್‌ವಾದಿ ಅಧ್ಯಯನ ಕ್ರಮದಲ್ಲಿ ಹಾಸುಹೊಕ್ಕಾಗಿರುವುದರಿಂದ ಸಾಹಿತ್ಯದ ಚರ್ಚೆಯು ಈ ತರಹಗಳ ಅಂಶಗಳಿಂದ ಪ್ರೇರಣೆಯನ್ನು ಪಡೆದುಕೊಳ್ಳುತ್ತದೆ. ಜ್ಞಾನ, ಅನುಭವಗಳು ಕಟ್ಟಿಕೊಡುವ ಪ್ರತಿಮೆಗಳಿಗೆ ಒಂದು ನಿರ್ದಿಷ್ಟತೆಯಿದೆ ಆದರೆ ಆ ನಿರ್ದಿಷ್ಟತೆಯು ಒಂದು ಪಠ್ಯದ ಮೂಲಕ ನಮ್ಮ ಕಣ್ಣೆದುರು ದಾಖಲಾಗುತ್ತದೆಯೆಂದು ಮಾರ್ಕ್ಸ್‌ವಾದವು ಪರಿಭಾವಿಸುತ್ತದೆ. ಫುಕೋ ಸಮಾಜವನ್ನು ನೋಡುವಾಗ ಅದನ್ನು ಅಧಿಕಾರದ ಜೊತೆಗಿನ ಸಂಬಂಧದ ಹಿನ್ನೆಲೆಯಲ್ಲಿ ನೋಡುತ್ತಾನೆ. ಮೊದಲನೆಯ ಮತ್ತು ಎರಡನೆಯ ಹಂತದ ಮಾರ್ಕ್ಸ್‌ವಾದಿ ವಿಮರ್ಶೆಯು ಸಮಾಜವಾದಿ ವಿಮರ್ಶೆ; ವಿಮರ್ಶಾತ್ಮಕ ವಾಸ್ತವ, ತತ್ವಜ್ಞಾನ ಮತ್ತು ಮೇಲುರಚನೆಯ ಕುರಿತಂತೆ ಪ್ರಮುಖ ವಾಗ್ವಾದಗಳನ್ನು ಎತ್ತಿಕೊಂಡಿತು. ಅದು ಪ್ರಜ್ಞೆಯ ಮೇಲೆ ಬೀರುವ ಪ್ರಭಾವಗಳ ಕುರಿತು ಚರ್ಚಿಸಿತು. ಪ್ರಜ್ಞೆಯೆನ್ನುವುದು ಚರಿತ್ರೆ ಮತ್ತು ಜೀವನಕ್ಕೆ ಸಂಬಂಧಿಸಿರುವುದು. ಮಾತ್ರವೇ ಅಲ್ಲ ಅದನ್ನು ಉತ್ಪಾದನೆಯ ಸಂಬಂಧ ನಿರ್ಧರಿಸುತ್ತದೆ. ಚರಿತ್ರೆ ಮತ್ತು ಆರ್ಥಿಕ ತಳಹದಿಯು ಜೀವನವನ್ನು ನಿರ್ಣಾಯಕವಾಗಿ ಬದಲಾಯಿಸುತ್ತದೆಯೆಂದು ಮಾರ್ಕ್ಸ್ ಹೇಳಿರುವುದು ಗಮನಾರ್ಹ. ಪ್ರಜ್ಞೆಯು ಆರ್ಥಿಕ ತಳಹದಿಯೊಂದಿಗೆ ಸಂವಾದವನ್ನು ರೂಪಿಸಿಕೊಳ್ಳುತ್ತದೆಯೆಂದೂ ಮಾರ್ಕ್ಸ್ ತಿಳಿಸಿದ. ಪ್ರಜ್ಞೆ ಅಥವಾ ಮೇಲು ರಚನೆಯು ಕಾನೂನು, ತತ್ವಜ್ಞಾನ, ಧಾರ್ಮಿಕತೆ ಮತ್ತು ಸಂಸ್ಕೃತಿಯಿಂದ

ನಿರ್ಣೀತಗೊಳ್ಳುತ್ತದೆಯೆಂದು ಮಾರ್ಕ್ಸ್‌ನ ವಾದವಾಗಿದೆ. ಜನರ ಪ್ರಜ್ಞೆ, ವೈರುಧ್ಯಗಳು, ಸಂಘರ್ಷಗಳು ಸಮಾಜದ ಬದಲಾವಣೆಗೆ ಕಾರಣವಾಗುತ್ತದೆ. ನಮ್ಮ ಸುತ್ತ ಮುತ್ತ ಏನಿದೆಯೋ ಅದು ನಮ್ಮನ್ನು ಪ್ರಭಾವಿಸುತ್ತದೆಯೆಂದು ಫುಕೋ ಹೇಳುತ್ತಾನೆ.

ಸಾಹಿತ್ಯವೂ ಅಷ್ಟೇ; ಅದು ಬರಿಯ ಆರ್ಥಿಕತೆಯ ಪ್ರತಿಬಿಂಬವಲ್ಲ. ಅದು ರಾಜಕಾರಣ, ತಾತ್ವಿಕತೆಯಂಥ ಮೇಲುರಚನೆಯ ಅಂಶಗಳನ್ನು ಒಳಗೊಂಡಿರುತ್ತವೆ. ಹೀಗಾಗಿ ರಾಜಕೀಯ ಅರ್ಥಶಾಸ್ತ್ರವೆನ್ನುವುದು ಸಾಹಿತ್ಯದ ಮೇಲೆ ಪ್ರಭಾವ ಬೀರುತ್ತದೆ. ಇನ್ನೊಂದೆಡೆಯಿಂದ ತಳರಚನೆ ಮತ್ತು ಮೇಲುರಚನೆಗಳ ಆಂತರಿಕ ಸಂಬಂಧಗಳು ಸಾಹಿತ್ಯವನ್ನು ನಿರ್ವಚಿಸುತ್ತವೆ.

ಎರಡನೆಯ ಮಹಾಯುದ್ಧದ ತರುವಾಯ ಮಾರ್ಕ್ಸ್‌ವಾದಿ ವಿಮರ್ಶೆಯು ಸಾಂಸ್ಕೃತಿಕ ಚಿಂತನೆಗಳ ಕಡೆಗೆ ಗಮನಹರಿಸಿತು. ಸಾಮಾಜಿಕ ಸಂಬಂಧ; ವರ್ಗದ ವಾಸ್ತವ; ಸಮಾಜವು ಇರುವ ರೀತಿ – ಮುಂತಾದವು ಮುಖ್ಯವಾದವು. ಹೀಗಾಗಿ ಸಾಹಿತ್ಯವೆಂದರೆ ಅದು ಸಮಾಜದ ಪ್ರತಿಬಿಂಬವಲ್ಲ. ಲುಕಾಕ್ಸ್ ಸಾಹಿತ್ಯವನ್ನು ಸಮಾಜದ ಪ್ರತಿಬಿಂಬವೆಂದರೆ, ಬ್ರೆಕ್ಟ್ ಅದನ್ನು ವಿರೋಧಿಸುತ್ತಾನೆ ಮತ್ತು ಪರ್ಯಾಯ ದಾರಿಯನ್ನು ಅವನು ಕಂಡುಕೊಳ್ಳುತ್ತಾನೆ. ಬ್ರೆಕ್ಟ್ ಸಾಹಿತ್ಯ ಮತ್ತು ಕಲೆಯನ್ನು ನೋಡುವ ಕ್ರಮಗಳು ಬೇರೆಯಾಗಿದೆ. ಅದನ್ನು ಸರಳಗೊಳಿಸುವ ಅಗತ್ಯವಿಲ್ಲವೆನ್ನುವುದು ಅವನ ವಾದವಾಗಿದೆ. ಸಸ್ಯವರ್ಗ, ಪ್ರಾಣಿವರ್ಗ, ಬೆಳಕು ಮುಂತಾದವುಗಳು ಮನುಷ್ಯನ ಪ್ರಜ್ಞೆಯನ್ನು ರೂಪಿಸುತ್ತವೆ. ಅವು ಮನುಷ್ಯ ವರ್ಗದ ಪ್ರಜ್ಞೆಯಿಂದ ಹೊರತಾದುದೇನಲ್ಲ. ಅವುಗಳು ಮನುಷ್ಯನ ಜೀವನದ ಜೊತೆಗೆ ಒಂದು ಭಾಗವಾಗಿರುತ್ತವೆ. ನಿಸರ್ಗ ಬೇರೆ, ಮನುಷ್ಯ ಬೇರೆ ಎಂಬ ವಾದಗಳು ಅರ್ಥಹೀನ. ಮನುಷ್ಯನೂ ಕೂಡ ಭೌತಿಕವಾದ ಉತ್ಪಾದನೆಯ ಸಂಬಂಧಗಳನ್ನು ಅವಲಂಬಿಸಿಕೊಂಡಿರುತ್ತಾನೆ.

ಮನುಷ್ಯ ಯಾವುದನ್ನು ತಿನ್ನಬೇಕೆಂದು ಬಯಸುತ್ತಾನೋ, ಯಾವುದನ್ನು ಉತ್ಪಾದಿಸಬೇಕೆಂದು ಬಯಸುತ್ತಾನೋ ಅದು ನಿರ್ದಿಷ್ಟವಾದ ಸಾಮಾಜಿಕ ಸಂಬಂಧವನ್ನು ಸೂಚಿಸುತ್ತದೆ. ಜಗತ್ತಿನೊಡನೆ ಸಂಬಂಧವನ್ನು ಕೂಡ ಇದು ಬಯಸುತ್ತದೆ. ಈ ರೀತಿಯ ಸಂಬಂಧ ಒಂದು ರೀತಿಯ ಉತ್ಪಾದನೆಯ ಕ್ರಮವನ್ನು ಸೂಚಿಸುತ್ತದೆ. ಅಡರ್ನೊನ ವಾದಗಳು ಬೇರೆ – ಮನುಷ್ಯ ಪರಕೀಯತೆಯಿಂದ ಅಥವಾ ಪ್ರತ್ಯೇಕತೆಯಿಂದ ನಿಯಂತ್ರಿಸಲ್ಪಡುತ್ತಾನೆ. ಕಲೆಯೆನ್ನುವುದು ವಾಸ್ತವದ ಅನುಭವ ಹಾಗೂ ಕಲೆಗೆ ಸಾಹಿತ್ಯಕ ಅಥವಾ ಸಾಂಸ್ಕೃತಿಕ ಸೂಚನೆಗಳು ಇರುತ್ತವೆ. ಕಲೆಯು ವಸ್ತುವನ್ನು ಒಂದು ಸೂಚಕವಾಗಿ ಸೆರೆ ಹಿಡಿಯುತ್ತದೆ ಮತ್ತು ಕಲೆಯು ಒಂದಲ್ಲ ಒಂದು ಅರ್ಥದಲ್ಲಿ ಸ್ವಾಯತ್ತವಾದುದು. ಅಡರ್ನೊ ಇದನ್ನು ಎತ್ತಿ

ಹಿಡಿಯುತ್ತಾನೆ. ಕಲೆಗೆ ಶಾಸ್ತ್ರೀಯವೆನ್ನಬಹುದಾದ ಕ್ರಿಯಾತ್ಮಕ ಗುಣವಿದೆ. ಹಾಗಾಗಿ ಯಾವುದೇ ಕಲೆಯು ಸಂಘರ್ಷಗಳನ್ನು ನೇರವಾಗಿ ಪ್ರತಿನಿಧಿಸುವುದಿಲ್ಲ. ಕಲೆಯಲ್ಲಿ ಸಂಘರ್ಷವೆನ್ನುವುದು ಪಾರ್ಶ್ವನೋಟ ಮಾತ್ರವೇ ಆಗಿರುತ್ತದೆ. ಮಾರ್ಕ್ಸ್‌ವಾದವನ್ನು ಫುಕೋ ಒಂದು ವಿಜ್ಞಾನ ಎಂದು ಕರೆಯುತ್ತಾನೆ. ಅದು ಸತ್ಯವನ್ನು ಹುಡುಕುತ್ತದೆ ಎನ್ನುವುದು ಅವನ ವಾದ. ಮೊದಲು ಅವನಿಗೆ ಮಾರ್ಕ್ಸ್‌ವಾದದ ತಾತ್ವಿಕ ನಿಲುವುಗಳ ಬಗ್ಗೆ ಹೆಚ್ಚು ಭಿನ್ನಾಭಿಪ್ರಾಯಗಳು ಇರಲಿಲ್ಲ ಎನ್ನುವುದು ಗಮನಾರ್ಹ.

ಲುಕಾಕ್ಸ್ ಮತ್ತು ಅಡರ್ನೊರಿಗೆ ಕೆಲವು ವಿಷಯಗಳಲ್ಲಿ ಭಿನ್ನತೆಯಿದೆ. ವಸ್ತುವಿನ ಆಯ್ಕೆ ಆಯಾ ಕಾಲದ ಚರಿತ್ರೆಗೆ ಸಂಬಂಧಿಸಿದ್ದು ಎನ್ನುವುದು ಲುಕಾಕ್ಸ್‌ನವಾದ. ಸಾಹಿತ್ಯವು ವರ್ಗ ಸಂಘರ್ಷದ ಪರಿಕರ ಅಥವಾ ಉಪಉತ್ಪಾದನೆಯೆಂದು ಅವನು ಪ್ರತಿಪಾದಿಸುತ್ತಾನೆ. ಈ ವಿಷಯದಲ್ಲಿ ಅಡರ್ನೊ ಸ್ವಲ್ಪ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಸಾಹಿತ್ಯವೆನ್ನುವುದು ಒಂದೇ ಒಂದು ರಾಜಕೀಯ ದೃಷ್ಟಿಕೋನ ಹೊಂದಿರಬೇಕೆಂದು ಇಲ್ಲ. ಸಾಹಿತ್ಯದ ಹೊರಗೆ ಒಂದು ಪದವು ಕೆಲಸ ಮಾಡುವ ರೀತಿಯಲ್ಲಿ; ಅಥವಾ ಅದು ಹೊಂದುವ ಅರ್ಥವಂತಿಕೆಯ ರೀತಿಯಲ್ಲಿ ಒಂದು ಪದವು ಒಂದು ಕೃತಿಯ ಒಳಗೆ ಕೆಲಸ ಮಾಡುವುದಿಲ್ಲ. ಒಂದು ಪದದ ಸಂವಹನದ ಅರ್ಥವು ಒಂದು ಸಂಸ್ಕೃತಿಯೊಳಗೆ ರೂಪುಗೊಳ್ಳುತ್ತದೆ. ಆದರೆ ಕೃತಿಯೊಳಗೆ ಪದದ ಸಂವಹನವು ತುಂಬಾ ಸರಳವಾದ ಸಂದೇಶವನ್ನು ಮಾತ್ರ ಓದುಗರಿಗೆ ಮುಟ್ಟಿಸುವುದಿಲ್ಲ. ಕಲೆಯೆನ್ನುವುದು ವಾಸ್ತವವನ್ನು ಪ್ರತಿನಿಧಿಸುತ್ತದೆ. ಅದು ಮನುಷ್ಯನ ಪ್ರಜ್ಞೆಯ ಪ್ರಾತಿನಿಧೀಕರಣ. ಆದುದರಿಂದ ಕಲೆಯಲ್ಲಿ ಮನುಷ್ಯನ ಆಂತರಿಕ ಜೀವನವೆನ್ನುವುದು ತುಂಬಾ ಮುಖ್ಯ. ಇದು ಅಡರ್ನೊ ಪ್ರತಿಪಾದಿಸುವ ನಿಲುವು. ಸಿದ್ಧಾಂತದ ವಿರೋಧಿಗಳು ಇದನ್ನು ಗಮನಿಸಬೇಕಾದ ಅಗತ್ಯವಿದೆ. ಅಧಿಕಾರ ಎನ್ನುವುದು ಎಲ್ಲಾ ಕಡೆಗೆ ಇರುತ್ತದೆ. ಅದು ನಮ್ಮ ಸಂಬಂಧಗಳನ್ನು ಕೂಡಾ ನಿಯಂತ್ರಣ ಮಾಡುತ್ತದೆ. ಫುಕೋ ಯಜಮಾನಿಕೆ ಮತ್ತು ಅದರ ಸ್ವರೂಪವನ್ನು ಚರ್ಚೆ ಮಾಡುತ್ತಾನೆ. ಮಾರ್ಕ್ಸ್‌ವಾದದಲ್ಲಿ ಅಧಿಕಾರ ಎನ್ನುವುದು ಉತ್ಪಾದನೆಯ ಸಂಬಂಧವನ್ನು ಹೇಳುತ್ತದೆ.

ಬರವಣಿಗೆ ಮತ್ತು ಓದು ಎರಡೂ ಪ್ರಜ್ಞೆಗೆ ಸಂಬಂಧಿಸಿದ್ದು, ಬರವಣಿಗೆ ಮತ್ತು ಓದಿನ ಕ್ರಮಗಳೆರಡೂ ವ್ಯಕ್ತಿಯೊಬ್ಬನ ನಿರ್ಧಾರ ಮತ್ತು ಉದ್ದೇಶಗಳನ್ನು ಅವಲಂಬಿಸಿಕೊಂಡಿದೆ. ಮೌಖಿಕ ಪರಂಪರೆ ಮತ್ತು ಅದರ ಸನ್ನಿವೇಶಗಳು ಬೇರೆ. ಇದು ಬರವಣಿಗೆಯ ಮಾದರಿಯದಲ್ಲ. ಹಾಗೆಯೇ ಬರವಣಿಗೆಯಲ್ಲಿ ಒಂದು ನಿರ್ದಿಷ್ಟ ತಾಂತ್ರಿಕ ಸನ್ನಿವೇಶ ಮತ್ತು ನಿಯಮವೆನ್ನುವುದು ಇರುತ್ತದೆ. ಹೀಗಾಗಿ ಬರವಣಿಗೆ ಮತ್ತು ಓದಿನ ಕ್ರಮದಲ್ಲಿ ಬಹಳಷ್ಟು ಜನರು ಭಾಗವಹಿಸುವುದಿಲ್ಲ. ಹೀಗಾಗಿ

'ಬರವಣಿಗೆ'ಯೆನ್ನುವುದು ವಿಶಿಷ್ಟ ಬಗೆಯ 'ಸಂವಹನ' ಮಾಧ್ಯಮ. ಓದು ಮತ್ತು ಬರವಣಿಗೆಯು ಒಂದು ಅಕ್ಷರಸ್ಥ ಸಮಾಜದಲ್ಲಿ 'ಸಾಮಾನ್ಯ ಸಂಸ್ಕೃತಿ'ಯ ದ್ಯೋತಕ ಮಾತ್ರ. ಮಾರ್ಕ್ಸ್‌ವಾದಿಗಳ ಪ್ರಕಾರ ಮೌಖಿಕ ಮತ್ತು ಬರವಣಿಗೆಯು ಮಾನಸಿಕ ಚಟುವಟಿಕೆಗಳು. ಭೌತಿಕ ಚಟುವಟಿಕೆಯೆನ್ನುವುದು ತಳಹದಿ ರಚನೆಯಾದರೆ ಬೌದ್ಧಿಕ ಚಟುವಟಿಕೆಗಳು ಮೇಲುರಚನೆ ಆಗಿರುತ್ತವೆ. ಇವು ನಿರ್ದಿಷ್ಟ ಚಾರಿತ್ರಿಕ, ಸಾಮಾಜಿಕ ಸನ್ನಿವೇಶಗಳಿಗೆ ಅನುಸಾರವಾಗಿ ರೂಪುಗೊಳ್ಳುತ್ತವೆ. ಇದನ್ನು ಮಾರ್ಕ್ಸ್ 'ವಿಶಿಷ್ಟ ಸನ್ನಿವೇಶ' ಎಂದು ಗುರುತಿಸುತ್ತಾನೆ. ವಸಾಹತು ಕಾಲದ ಸಾಮಾಜಿಕ ಸನ್ನಿವೇಶವು ನಿರೂಪಿಸಿದ ಕಥಾನಕಗಳಲ್ಲಿ ಬದಲಾದ ಪ್ರಜ್ಞೆಯ ಸ್ವರೂಪವನ್ನು ಕಾಣಬಹುದು. ಫುಕೋನ ಸಿದ್ಧಾಂತ ಮತ್ತು ಮಾರ್ಕ್ಸ್‌ವಾದವು ಸಾಮಾಜಿಕ ಸಂಬಂಧಗಳನ್ನು ಹೇಳುತ್ತವೆ.

ಚಾರಿತ್ರಿಕ ಭೌತವಾದವು ಬುಡರಚನೆ ಅಥವಾ ತಳರಚನೆ ಮತ್ತು ಮೇಲುರಚನೆ ಪ್ರಶ್ನೆಯನ್ನು ಕೈಗೆತ್ತಿಕೊಂಡಿತು. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯು ತಳರಚನೆ (ಬುಡರಚನೆ) ಮತ್ತು ಮೇಲುರಚನೆಯ ಮೇಲೆ ಯಾವ ರೀತಿಯ ಪ್ರಭಾವ ಬೀರುತ್ತದೆಯೆಂಬುದನ್ನು ಇದು ಚರ್ಚಿಸಿತು. ವಾಸ್ತವವಾಗಿ ಈ ಪ್ರಶ್ನೆಯು ತಾತ್ವಿಕ ತಳಹದಿಯಿಂದ ರೂಪುಗೊಂಡಿದೆ ಮತ್ತು ಇದರೊಂದಿಗೆ ಇದು ಒಂದು ಸಮಾಜದ ಮೂಲಭೂತವಾದ ಸಮಸ್ಯೆಯೂ ಹೌದು. ಬುಡರಚನೆಯು ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದದ ಪ್ರಮುಖ ಲಕ್ಷಣಗಳಲ್ಲಿ ಒಂದು. ಉತ್ಪಾದನೆಯ ಸಂಬಂಧಕ್ಕೆ ಅನುಸಾರವಾಗಿ ಹೇಗೆ ಒಂದು ಸಂಸ್ಥೆ; ಒಂದು ಆಲೋಚನಾಕ್ರಮ ಸಮಾಜದಲ್ಲಿ ರೂಪುಗೊಳ್ಳುತ್ತದೆಯೆಂಬುದನ್ನು ಈ ಪರಿಕಲ್ಪನೆಗಳು ವಿವರಿಸುತ್ತವೆ. ಉತ್ಪಾದನೆಯ ಶಕ್ತಿಗಳೇ ಉತ್ಪಾದನಾ ಸಂಬಂಧಗಳನ್ನು ನಿರ್ಣಯಿಸುತ್ತವೆ. ಇದನ್ನು ತಳರಚನೆ ಅಥವಾ ಬುಡರಚನೆಯೆಂದು ಕರೆಯುತ್ತೇವೆ. ಅನೇಕ ರೀತಿಯ ಕೆಲಸಗಳು ಸಾಮಾಜೀಕರಣವನ್ನು ಸೂಚಿಸುತ್ತವೆ. ಅದರ ಚಹರೆಗಳನ್ನು ನಾವು ನೋಡಿದರೆ ಯಾವುದೇ ಕೆಲಸಗಳನ್ನು ನಾವು ಒಂದು ಸಮಾಜವು ಸೃಷ್ಟಿಸಿಕೊಂಡದ್ದು ತನ್ನ ಅಗತ್ಯಕ್ಕಾಗಿಯೇ ಹೊರತು ಬೇರೆ ಕಾರಣಕ್ಕಾಗಿ ಅಲ್ಲ. ಫುಕೋ ಜ್ಞಾನ ಮತ್ತು ಅಧಿಕಾರವನ್ನು ಕುರಿತು ಹೇಳುತ್ತಾನೆ.

ತಳರಚನೆಯು ಒಂದು ಸಮಾಜದ ಮೇಲುರಚನೆಯನ್ನು ನಿರ್ಧರಿಸುತ್ತದೆ. ಹೀಗಾಗಿ ತಳರಚನೆ ಮತ್ತು ಮೇಲುರಚನೆಯ ನಡುವೆ ನಿರ್ಣಾಯಕ ಸಂಬಂಧವಿರುತ್ತದೆ. ತಳರಚನೆಯು ಮೇಲುರಚನೆಯ ಮೇಲೆ ಪ್ರಭಾವ ಬೀರುತ್ತದೆ.

ಮೇಲುರಚನೆಯು ಈ ಕೆಳಗಿನ ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತವೆ.

1. ಆಲೋಚನಾ ವಿಧಾನ; ಸಂವೇದನೆ; ಭಾವನೆಗಳು; ತಾತ್ವಿಕತೆ; ಸಿದ್ಧಾಂತಗಳು; ಮುಂತಾದ ಅಂಶಗಳನ್ನು ಒಳಗೊಂಡಿರುವ ಮತ್ತು ಅನೇಕ ಸಂದರ್ಭ ರಾಜಕೀಯವಾಗಿ; ನೈತಿಕವಾಗಿ; ತಾತ್ವಿಕವಾಗಿ; ತತ್ವಜ್ಞಾನವಾಗಿ; ಸೌಂದರ್ಯಶಾಸ್ತ್ರವಾಗಿ ಬೇರೆ ಬೇರೆಯಾಗಿ ಕಾಣಿಸಿಕೊಳ್ಳುವ ಪ್ರಕ್ರಿಯೆಗಳು. ಇದರ ಅಂಶಗಳಾಗಿವೆ.

2. ಸಮಗ್ರ ಮಾನವೀಯ ಸಂಬಂಧಗಳ ಮೇಲೆ ಪ್ರಭಾವ ಬೀರುವ ಅಂಶಗಳು. ಇದು ಮನುಷ್ಯರ ಪ್ರಜ್ಞಾವಲಯವನ್ನು ಸೂಚಿಸುತ್ತದೆ ಹಾಗೂ ಇದು ಅನೇಕ ಸಂದರ್ಭದಲ್ಲಿ ತಾತ್ವಿಕ ನಿಲುವಾಗಿ ಪರಿವರ್ತನೆ ಹೊಂದುತ್ತದೆ. ಇವು ಮೇಲುರಚನೆಯ ಸೂಚಕಗಳು.

3. ಸಮಗ್ರ ಸಾಂಸ್ಥಿಕ ಮತ್ತು ಸಾಂಘಿಕ ಸೂಚನೆಗಳು – ಇವುಗಳು ರಾಜಕೀಯವಾಗಿ ರಾಜ್ಯಾಂಗ ವ್ಯವಸ್ಥೆಯಾಗಿ; ರಾಜಕೀಯ ಪಕ್ಷವಾಗಿ ಕಾಣಿಸಿಕೊಳ್ಳುತ್ತವೆ. ಕಾನೂನಿಗೆ ಸಂಬಂಧಿಸಿದಂತೆ ಇದು ನ್ಯಾಯಾಂಗ ವ್ಯವಸ್ಥೆ ಮತ್ತು ಕಾನೂನು ರೂಪವಾಗಿ ವ್ಯಕ್ತವಾಗುತ್ತದೆ. ಧಾರ್ಮಿಕ ವ್ಯವಸ್ಥೆಯ ಕಡೆಗೆ ಬಂದರೆ ಚರ್ಚುಗಳು; ದೇವಸ್ಥಾನಗಳು; ಮಸೀದಿಗಳು ಇವುಗಳ ಸೂಚನೆಗಳಾಗಿವೆ. ಹೆಚ್ಚು ದೇವಸ್ಥಾನಗಳಿಗೆ ಹೋಗುವವರು ಜೀವನದಲ್ಲಿ ನಿರಾಶೆ ಹೊಂದಿದವರು; ಅಸ್ಥಿರತೆಯುಳ್ಳವರೂ ಆಗಿದ್ದಾರೆ. ಈ ಪ್ರಶ್ನೆಗಳನ್ನು ಯಾವ ವಿಮರ್ಶಾ ಸಿದ್ಧಾಂತಗಳು ಎತ್ತಿಕೊಳ್ಳುವುದಿಲ್ಲ.

ಮೇಲುರಚನೆಯನ್ನು ನಿರ್ಧರಿಸುವುದು ತಳರಚನೆ. ಮೇಲುರಚನೆಯು ಆಧ್ಯಾತ್ಮಿಕ ಮತ್ತು ಸಾಮಾಜಿಕ ಸಂರಚನೆಗಳನ್ನು ನಿರ್ಧರಿಸುತ್ತವೆ. ತಳರಚನೆ ಮತ್ತು ಮೇಲು ರಚನೆಗೆ ಯಾವಾಗಲೂ ದ್ವಂದ್ವಾತ್ಮಕ ಸಂಬಂಧವಿದ್ದೇ ಇರುತ್ತದೆ. ಒಂದು ನಿರ್ದಿಷ್ಟ ಸಮಾಜದಲ್ಲಿ ಬದುಕುವ ಕ್ರಮ, ಕಾನೂನಿಗೆ ತಲೆ ಬಾಗುವುದು; ಸಾಮಾಜಿಕ ಸಂಬಂಧಗಳನ್ನು ರೂಪಿಸಿಕೊಳ್ಳುವುದು ಇವೆಲ್ಲವೂ ತಳರಚನೆಯಿಂದ ನಿರ್ಧಾರವಾಗುತ್ತದೆ. ಅದೇ ಕಾಲಕ್ಕೆ ಇದು ಮನುಷ್ಯರ ಪ್ರಜ್ಞೆಯನ್ನು ನಿಯಂತ್ರಿಸುತ್ತದೆ. ಇದು ಮನುಷ್ಯರ ಮನೋಸ್ಥಿತಿಯನ್ನು ಪ್ರತಿಫಲಿಸುತ್ತದೆ. ಭೌತಿಕ ಸಂಬಂಧಗಳು ತಾತ್ವಿಕತೆಯನ್ನು ರೂಪಿಸುತ್ತದೆ. ಸಂಸ್ಥೆಗಳನ್ನು ಕಟ್ಟುತ್ತವೆ. ಅನಂತರ ಇವು ಮೇಲುರಚನೆಯಾಗಿ ಪರಿವರ್ತನೆ ಹೊಂದುತ್ತವೆ. ವರ್ಗ ಸಮಾಜದಲ್ಲಿ ಪ್ರಭುತ್ವವೇ ಮೇಲುರಚನೆಯಾಗಿರುತ್ತವೆ. ಇದು ಮನುಷ್ಯರನ್ನು ಆಳುತ್ತವೆ. ಧಾರ್ಮಿಕ ಮೂಲಭೂತವಾದವು ಹೇಗೆ ಭ್ರಮೆಯನ್ನು ಒಡ್ಡುತ್ತದೆಯೆನ್ನುವುದಕ್ಕೆ ಅನೇಕ ಕೋಮು ಹಿಂಸೆಗಳು ಸಾಕ್ಷಿಯಾಗಿವೆ. ಆದರೆ ವರ್ಗವು ಆರ್ಥಿಕತೆಯನ್ನು ನಿಯಂತ್ರಿಸುತ್ತವೆ.

ಹೀಗಾಗಿ ಇದರ ನಡುವಣ ಅಂತರ್ಗತ ಸಂಬಂಧವು ಸಂಕೀರ್ಣವಾಗಿರುತ್ತದೆ. ಇದು ಮಾರ್ಕ್ಸ್‌ವಾದಿ ವಿಮರ್ಶೆಯ ಪ್ರಮುಖ ಪರಿಕಲ್ಪನೆಯೂ ಹೌದು. ಸಮಾಜ ಮತ್ತು ಅದರ ಸಾಧ್ಯತೆಗಳನ್ನು ನಾವು ಏಕ ಕೇಂದ್ರಿತವಾಗಿ ನೋಡಲು ಬರುವುದೂ ಇಲ್ಲ. ಅನೇಕ ಕೆಲಸಗಳು ಸಮಾಜದಲ್ಲಿ ಜಾರಿಯಲ್ಲಿ ಇರುತ್ತವೆ. ಮತ್ತು ಅದನ್ನು ಒಂದು ಸಮಾಜವೇ ಸೃಷ್ಟಿಸಿಕೊಂಡಿದೆ. ಕೆಲಸ ಮತ್ತು ಅದರ ಹಿನ್ನೆಲೆಯನ್ನು ನಾವು ಬಹಳ ಸೂಕ್ಷ್ಮವಾಗಿ ಪರಿಗಣಿಸಬೇಕಾಗುತ್ತದೆ. ಕೆಲಸ ಮತ್ತು ಅದರ ಹಿನ್ನೆಲೆಯನ್ನು ನಾವು ನೋಡಿದರೆ ಒಂದು ಅಂಶವು ಎದ್ದು ಕಾಣುತ್ತದೆ. ಕೆಲಸವನ್ನು ಅತಾತ್ವಿಕವೆಂದು ಹೇಳಲು ಬರುವುದಿಲ್ಲ. ತತ್ವವೇ ಬೇರೆ, ಕೆಲಸವೇ ಬೇರೆ ಎಂದು ನೋಡಬೇಕಾದ ಅಗತ್ಯವೇ ಇಲ್ಲ. ಅವುಗಳಿಗೆ ಸಂಬಂಧವಿದೆ. ನಮ್ಮ ಸಾಮಾಜಿಕ ಜೀವನದಲ್ಲಿ ಅನೇಕ ರೀತಿಯ ಕೆಲಸಗಳು ನಡೆಯುತ್ತವೆ. ಅವುಗಳಿಗೆ ಸಾಮಾಜಿಕ ಜೀವನದಲ್ಲಿ ಅರ್ಥವೂ ಇದೆ. ಅರ್ಥವೇ ಇಲ್ಲದ ಕೆಲಸವು ಇರಲಾರದು. ಪುಕೋ ಕೂಡಾ ಇದನ್ನು ಒಪ್ಪುತ್ತಾನೆ.

ಬೂರ್ಜ್ವಾ ವಿಮರ್ಶಾ ನಿಲುವಿನ ಪ್ರಕಾರ ಸಾಹಿತ್ಯವೆಂದರೆ ವಸ್ತು ಮತ್ತು ಅದರ ನಿರ್ವಹಣೆಯ ಕ್ರಮ ಮಾತ್ರ. ಅದಕ್ಕೂ ಚರಿತ್ರೆಗೂ ಯಾವುದೇ ರೀತಿಯ ಸಂಬಂಧವಿಲ್ಲ. ಉದಾಹರಣೆಗೆ – ನವ್ಯ ವಿಮರ್ಶೆಯು ಈ ರೀತಿಯ ನಿಲುವನ್ನು ತಳೆಯುತ್ತದೆ. ಇದರ ಪ್ರಕಾರ – ಸಾಹಿತ್ಯ ಕೃತಿಯೊಂದರ ವಸ್ತು ಚಲನರಾಹಿತ್ಯ. ಕಾರಂತರ ಬಗ್ಗೆ ಜಿ.ಎಚ್.ನಾಯಕರು ಬರೆದಿರುವ ವಿಮರ್ಶೆಯು ಇದಕ್ಕೆ ಒಂದು ಉದಾಹರಣೆ. ಇದನ್ನು ಮಾರ್ಕ್ಸ್‌ವಾದಿ ವಿಮರ್ಶೆಯು ವಿರೋಧಿಸುತ್ತದೆ.

ಲುಕಾಕ್ಸ್ ಮತ್ತು ಗೋಲ್ಡ್‌ಮನ್ ಇಬ್ಬರೂ ಸಮಗ್ರತೆಯನ್ನು ಎತ್ತಿ ಹಿಡಿಯುತ್ತಾರೆ. ಈ ಸಮಗ್ರತೆಯು ಅಭಿವ್ಯಕ್ತಿಯಿಂದ ಸಾಧ್ಯವಾಗುವಂಥದ್ದು ಮತ್ತು ಒಂದು ಪಠ್ಯವು ಅಭಿವ್ಯಕ್ತಿಗೊಳ್ಳುವುದಕ್ಕೆ ಅದರ ಹಿಂದಿರುವ ಚಾರಿತ್ರಿಕ ಒತ್ತಡವೇ ಕಾರಣವೆಂದು ಮಾರ್ಕ್ಸ್‌ವಾದಿ ವಿಮರ್ಶೆಯ ಅಭಿಪ್ರಾಯ. ಬ್ರೆಕ್ಟ್ ಮತ್ತು ಬೆಂಜಮಿನ್ ಇಬ್ಬರೂ ಸಾಹಿತ್ಯ ಮತ್ತು ಚರಿತ್ರೆಯ ಸಂಬಂಧ ರಾಚನಿಕ ಹೊಂದಾಣಿಕೆಯದು ಎಂದು ಪ್ರತಿಪಾದಿಸುತ್ತಾರೆ. ರೊಮಾಂಟಿಕರ ಪ್ರಕಾರ ಕಲಾವಿದ ಸೃಷ್ಟಿಶೀಲನಾದವನು. ಆದರೆ ಮಾರ್ಕ್ಸಿಸ್ಟರ ಪ್ರಕಾರ ಕಲೆಯೆನ್ನುವುದು ಒಂದು ಬೌದ್ಧಿಕ ಉತ್ಪಾದನೆ ಮತ್ತು ಅಭ್ಯಾಸ ಫುಕೋ ಇದನ್ನು ಅಂಗೀಕರಿಸಿದ್ದಾನೆ.

ಬೆಂಜಮಿನ್ ಕಲಾವಿದನ ಚಾರಿತ್ರಿಕ ಸಂದರ್ಭ, ಉತ್ಪಾದನೆಯ ಅರ್ಥವನ್ನು ಗ್ರಹಿಸಲು ಯತ್ನಿಸುತ್ತಾನೆ. ಅವನಿಗೆ ಬರಿಯ ತಾತ್ವಿಕ ಚರ್ಚೆ ಮಾತ್ರವೇ ಮುಖ್ಯವಲ್ಲ ಎಂದು ಹೇಳಿದ್ದು ಇಲ್ಲಿ ಉಲ್ಲೇಖನೀಯ.

ಕಲೆಯು ಅದರಷ್ಟಕ್ಕೆ ಅದು ಮುಕ್ತ ಮತ್ತು ಅದರಷ್ಟಕ್ಕೆ ಮುಕ್ತಾಯವೂ ಹೌದು ಎಂದು ಬ್ರೆಕ್ಟ್ ಹೇಳುತ್ತಾನೆ. ಕಲೆಯು ಉತ್ಪಾದಕ ಮತ್ತು ಪ್ರೇಕ್ಷಕರ ನಡುವೆ ಸಂಬಂಧ

ಸ್ಥಾಪಿಸುತ್ತದೆ. ಈ ದೃಷ್ಟಿಯಿಂದ ಅದು ಸಾಮಾಜಿಕ ಸಂಬಂಧವಾಗಿರುತ್ತದೆ. ಬ್ರೆಕ್ಟ್ ಮತ್ತೊಂದು ಮಾತನ್ನು ಹೇಳುತ್ತಾನೆ. ಸಾಹಿತ್ಯವೂ ಕೂಡಾ ಇತರ ವಸ್ತುಗಳಂತೆ ಉತ್ಪಾದಿತವಾದುದು. ಆದರೆ ಅದು ವಿಶಿಷ್ಟವಾದುದು. ಸಾಹಿತ್ಯದ ಕಚ್ಚಾವಸ್ತು ಬೇರೆ. ಲೇಖಕನ ತಾತ್ತಿಕತೆಯು ಶೂನ್ಯದಿಂದ ಸಂಭವಿಸುವಂಥದ್ದಲ್ಲ. ಲೇಖಕನ ಜೀವನಾನುಭವದಿಂದ ಹುಟ್ಟಿಕೊಳ್ಳುವ ಸಾಹಿತ್ಯದ ಹಿನ್ನೆಲೆಯಲ್ಲಿ ಲೇಖಕನ ಸಾಮಾಜಿಕವರ್ಗ; ಆತನ ರಾಷ್ಟ್ರೀಯತೆ; ಲಿಂಗ ಪ್ರಭೇದ, ಧರ್ಮ, ಪ್ರಾದೇಶಿಕತೆ ಮುಂತಾದವು ಕೆಲಸ ಮಾಡುತ್ತದೆ. ಸಾಮಾನ್ಯ ತಾತ್ವಿಕತೆಗಿಂತ ಸಾಹಿತ್ಯಿಕ ತಾತ್ವಿಕತೆಯನ್ನು ಹೇಗೆ ಹೊರತುಪಡಿಸಿ ನೋಡಲಾಗುವುದಿಲ್ಲವೋ ಅದೇ ರೀತಿಯಲ್ಲಿ ಲೇಖಕನ ತಾತ್ವಿಕತೆಯನ್ನು ನೋಡಲಾಗುವುದಿಲ್ಲ. ಒಂದು ಕೃತಿಯ ಹಿನ್ನೆಲೆಯಲ್ಲಿರುವ ಕವಿಯ ತಾತ್ವಿಕತೆಯು, ಅವನ ಸಾಮಾಜಿಕ ಸಂಬಂಧ, ಸಾಮಾಜಿಕ ಸ್ಥಿತಿಗತಿ ಇತ್ಯಾದಿಗಳಿಂದ ನಿರ್ಮಿತವಾಗಿರುತ್ತದೆ. ಬ್ರೆಕ್ಟ್ ಹೇಳಿದ. ಮಾತೊಂದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡು ಮುಂದುವರಿಯಬಹುದು. ಅವನು ವಾಸ್ತವತೆಗೆ ಸಂಬಂಧಿಸಿದಂತೆ ಹೇಳಿದ ಮಾತಿದು. ಈಗಾಗಲೇ ಬಂದಿರುವ ವಸ್ತುವನ್ನು ಮತ್ತೆ ಪುನರಾವರ್ತಿಸಬೇಕಾದ ಅಗತ್ಯವಿಲ್ಲ. ಎಲ್ಲರೂ ತಿಳಿದಿರುವುದನ್ನು ಮತ್ತೆ ಮತ್ತೆ ಬರೆಯಬೇಕಾಗಿಯೂ ಇಲ್ಲ. ವಾಸ್ತವತೆಯೆಂದರೆ ತಿಳಿದುದನ್ನು ಮತ್ತು ಈಗಾಗಲೇ ಬಂದಿರುವ ವಸ್ತುವನ್ನು ಮತ್ತೆ ಪುನರಾವರ್ತಿಸುವುದಲ್ಲ. ಅದು ವಾಸ್ತವದೊಂದಿಗೆ ಹೊಸ ರೀತಿಯ ಜೀವನ್ಮುಖಿಯಾದ ಸಂಬಂಧವನ್ನು ಕಟ್ಟಿಕೊಳ್ಳುವುದು. ವಾಸ್ತವದೊಂದಿಗೆ ಸಂಬಂಧ ಕಟ್ಟಿಕೊಳ್ಳುವುದೆಂದರೆ ಹೊಸ ರೀತಿಯ ರಚನೆಯೂ ಆಗಿರುತ್ತದೆ. ಲುಕಾಕ್ಸ್ ಮತ್ತು ಬ್ರೆಕ್ಟ್‌ನ ವಾದಗಳಲ್ಲಿ ವಾಸ್ತವವೆನ್ನುವುದಕ್ಕೆ ಒಂದು ಒತ್ತು ಇರುವುದು ಗಮನಾರ್ಹ. ಮೆಶಿಯರಿಯು ಸಾಹಿತ್ಯವನ್ನು ವೈಜ್ಞಾನಿಕ ವಿಧಾನದ ಮೂಲಕ ಪರಿಶೀಲಿಸಿದ. ಅವನು ವಿವರಣಾತ್ಮಕ ವಿಮರ್ಶೆಯನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾನೆ. ಒಂದು ಪಠ್ಯವು ಏನು ಹೇಳಬೇಕೆಂದು ಬಯಸುತ್ತದೆಯೋ ಅದನ್ನು ಅದು ಹೇಳುತ್ತದೆ. ವಿಮರ್ಶಕ ಅದನ್ನು ಗುರುತಿಸಬೇಕಾಗುತ್ತದೆ. ವಿಮರ್ಶಕ ಒಂದು ಕೃತಿಯ ಸಾಧ್ಯತೆಯನ್ನು ಗುರುತಿಸಬೇಕಾದ ಅಗತ್ಯವಿದೆ. ಮೆಶಿಯರಿಯ ಮತ್ತೊಂದು ವಾದವೆಂದರೆ ಕೃತಿಯೊಳಗೆ ಒಂದು ಮೌನವಿರುತ್ತದೆ. ಅದು ಚರಿತ್ರೆಯಿಂದ ಉತ್ಪಾದಿತವಾದುದು. ರೊಮಾಂಟಿಕ್ ಮಿಥ್‌ನ ಪ್ರಕಾರ– ಸಾಹಿತ್ಯ ಕೃತಿಯು ಸಾವಯವ ಏಕಾಗ್ರತೆಯಿಂದ ಹುಟ್ಟಿರುತ್ತದೆ. ಅದು ಆಂತರಿಕ ಸಂಬಂಧದ ಏಕಸೂತ್ರತೆಯನ್ನು ಹೊಂದಿರುತ್ತದೆ. ಅದು ಸ್ವಯಂ ಸಂಪೂರ್ಣವಾದುದು. ಮೆಶಿಯರಿಯ ಪ್ರಕಾರ – ರಚನೆಯು ವಿಕೇಂದ್ರಿತವಾದುದು. ಅದಕ್ಕೆ ನಿರಂತರತೆಯೆಂಬುದಿಲ್ಲ. ರಚನೆಯೊಳಗೆ ಆಂತರಿಕ ಸಂಘರ್ಷ ಮತ್ತು ವೈರುಧ್ಯಗಳಿರುತ್ತವೆ. ಇದನ್ನು ವೈಜ್ಞಾನಿಕವಾದ ವಿಧಾನದ ಮೂಲಕ

ಅರ್ಥಮಾಡಿಕೊಳ್ಳಬೇಕು. ಹೀಗಾಗಿ ವಿಮರ್ಶೆಯು ಅಪೂರ್ಣವಾದುದನ್ನು ಪೂರ್ಣಗೊಳಿಸಬೇಕಾಗುತ್ತದೆ. ಅವನು ಇನ್ನೊಂದು ಮಾತು ಹೇಳಿದ: ಲೇಖಕ ಸೃಜನಶೀಲನಲ್ಲ. ಅವನು ಕೂಡಾ ಒಬ್ಬ ಕೆಲಸಗಾರ. ನಮ್ಮ ಕೆಲಸವನ್ನು ಅನುಭವವೆಂದು ಪರಿಗಣಿಸುತ್ತದೆ. ಮೊದಲು ಫುಕೋ ರಚನಾವಾದವನ್ನು ಒಪ್ಪಿದ್ದ ಎನ್ನುವುದು ಇಲ್ಲಿ ಗಮನಾರ್ಹ.

9. ಚರಿತ್ರೆಯನ್ನು ಕಟ್ಟಲಾಗಿದೆ

ಮೆಶಿಯರಿ ರಚನಾವಾದಿಗಳಂತೆ ಒಂದು ಪಠ್ಯವು ನಿರ್ದಿಷ್ಟವಾದ ಸಂದೇಶವನ್ನು ಕೊಡುತ್ತದೆ ಎಂಬುದನ್ನು ಒಪ್ಪುವುದಿಲ್ಲ. ಅವನ ಪ್ರಕಾರ ಒಂದು ಪಠ್ಯದಲ್ಲಿ ಎಲ್ಲವೂ 'ಮುಕ್ತ ಸಂದೇಶ' ಹೊಂದಿರಬೇಕಾಗಿಲ್ಲ. ಚರಿತ್ರೆಗೂ ಮನುಷ್ಯನಿಗೂ ನಿರ್ಣಾಯಕವಾದ ಸಂಬಂಧವಿದೆಯೆಂದು ಪರಿಭಾವಿಸುವ ಮಾರ್ಕ್ಸ್‌ವಾದದ ನಿಲುವು ಬರವಣಿಗೆ ಮತ್ತು ಮನುಷ್ಯನ ಅನುಭವಗಳನ್ನು ಒಂದು ವರ್ತುಲದೊಳಗೆ ತರುತ್ತದೆ. ಹೀಗೆ ತರುವುದರ ಮೂಲಕ ಅಲ್ಲೊಂದು ಸಹಯೋಗವಿದೆಯೆಂದು ಮಾರ್ಕ್ಸ್‌ವಾದವು ತಿಳಿಯುತ್ತದೆ. ಇದರ ಪರಿಣಾಮವೆಂದರೆ – 'ಮಾರ್ಕ್ಸ್‌ವಾದಿ ಸಿದ್ಧಾಂತ ಮತ್ತು ಸಾಹಿತ್ಯ ಪಠ್ಯ' ಇವುಗಳ ದ್ವಂದ್ವಾತ್ಮಕ ಸಂಬಂಧವೆನ್ನುವುದು ಇದರಲ್ಲಿ ಮುಖ್ಯ. ಈ ರೀತಿಯ ನಿಲುವು ಒಂದು ತರ್ಕವನ್ನು ರೂಪಿಸುವುದರ ಜೊತೆಗೆ ಮುಕ್ತಾಯವಾಗುತ್ತದೆ. ಸಿದ್ಧಾಂತವನ್ನು ಅನೇಕರು ಬೇರೆ ಬೇರೆ ಕಾರಣಕ್ಕೆ ವಿರೋಧಿಸುತ್ತಾರೆ.

ಚರಿತ್ರೆಯೆಂದರೆ ಈಗಾಗಲೇ ಸಿದ್ಧವಾಗಿರುವ ಮಾದರಿ. ಚರಿತ್ರೆಯು ನಗರಗಳನ್ನು ಕಟ್ಟಿದೆ ಮತ್ತು ಬೇರೆ ಬೇರೆ ವಿಷಯಗಳನ್ನು ರೂಪಿಸಿದೆ. ವಾಸ್ತು ಶಿಲ್ಪಗಳೂ ಕೂಡಾ ಒಂದು ಐತಿಹಾಸಿಕ ರಚನೆಗಳು ಆಗಿವೆ. ವಾಸ್ತು ಮತ್ತು ಅದರ ರಚನೆಗೂ ಒಂದು ವಿನ್ಯಾಸವಿದೆ. ಅದರಲ್ಲಿ ಸೌಂದರ್ಯವನ್ನು ಹೇಳಲಾಗುತ್ತದೆ ಮತ್ತು ಅವುಗಳ ರಚನೆಗೂ ಅದರಲ್ಲಿ ಪಡೆಯುವ ಸೌಲಭ್ಯಕ್ಕೂ ಒಂದು ಅರ್ಥಗಳು ಇರುತ್ತವೆ. ಅವುಗಳು ಉತ್ಪಾದನೆಗಳು. ತಾತ್ವಿಕತೆಯೂ ಇರುತ್ತವೆ. ಕಟ್ಟಡಗಳ ತಾತ್ವಿಕತೆಯೂ ಒಂದು ಬಗೆಯಲ್ಲಿ ವೈಜ್ಞಾನಿಕವೂ ಆಗಿರುತ್ತವೆ. ಮತ್ತು ಅದರಲ್ಲಿ ಭಿನ್ನತೆಗಳು ಇರುತ್ತವೆ. ಈ ದೃಷ್ಟಿಯಿಂದ ಅವುಗಳ ತಾತ್ವಿಕತೆಗೆ ಅರ್ಥವಿದೆ. ಆದರೆ ಚಾರಿತ್ರಿಕ ಕತೆಗಳೂ ಕೂಡಾ ಒಂದು ಹಂತದಲ್ಲಿ ಸಮಸ್ಯಾತ್ಮಕವಾದವು. ವಾಸ್ತವವಾಗಿ ಕತೆಗಳು ಮತ್ತು ಚರಿತ್ರೆಗಳು ಜೊತೆಯಲ್ಲಿ ಇರುತ್ತವೆ. ಚರಿತ್ರೆಯ ನಿರೂಪಣೆಯೂ ಕೂಡಾ ಈ ಕಾರಣದಿಂದ ಅತ್ಯಂತ ಮಹತ್ವದ್ದೂ ಹೌದು. ಚರಿತ್ರೆ ಮತ್ತು ಅದರ ಸ್ವರೂಪವನ್ನು

ನೋಡುವುದು ಎಂದರೆ ಅದರ ಅರ್ಥವನ್ನು ಬೇರೆ ಮಾದರಿಯಲ್ಲಿ ಗ್ರಹಿಸುವುದೂ ಹೌದು. ವಾಸ್ತವವಾಗಿ ಚರಿತ್ರೆ ಮತ್ತು ಅದರ ನಿರೂಪಣೆಯನ್ನು ನೋಡುವುದು ಅಂದರೆ ನಮ್ಮನ್ನು ನಾವು ನೋಡಿಕೊಳ್ಳುವುದೂ ಹೌದು. ಅಂದರೆ ಇದರಲ್ಲಿ ಬೇರೆ ಬೇರೆ ರೀತಿಯಲ್ಲಿ ನಾವು ಕಾಣುತ್ತೇವೆ.

ನಮ್ಮನ್ನು ನಾವು ಭೂತದ ಮೂಲಕ ಕಟ್ಟುತ್ತೇವೆ. ವರ್ತಮಾನವನ್ನು ಗ್ರಹಿಸುವ ಪ್ರಯತ್ನವನ್ನು ಮಾಡುತ್ತೇವೆ. ಆದರೆ ಈ ಸಮಸ್ಯೆಯು ಬಹಳ ಮಟ್ಟಿಗೆ ಬೇರೆಯೂ ಹೌದು. ಚರಿತ್ರೆಯು ಒಂದು ಶಿಸ್ತು ಆಗಿದೆಯೇ ಇಲ್ಲವೇ ಎನ್ನುವುದು ಮುಖ್ಯವಾದ ಸಮಸ್ಯೆ ಅಲ್ಲ. ಅದು ವರ್ತಮಾನವನ್ನು ಪ್ರಭಾವಿಸುತ್ತದೆ ಎನ್ನುವುದು ಮಾತ್ರವೇ ಮುಖ್ಯವಾಗಿದೆ. ಆದ್ದರಿಂದ ನಮ್ಮ ಗ್ರಹಿಕೆಯು ಅದರ ಮೂಲಕವೇ ಬೆಳೆಯುತ್ತದೆ. ಚರಿತ್ರೆ ಮತ್ತು ಅದರ ಸ್ವರೂಪವು ಬೆಳೆಯುತ್ತದೆ ಮತ್ತು ವಿಕಾಸವಾಗುತ್ತಾ ಹೋಗುತ್ತದೆ. ಆದ್ದರಿಂದ ಅದನ್ನು ಶೂನ್ಯವೆಂದು ಹೇಳಲಾಗುವುದಿಲ್ಲ. ಮಾರ್ಕ್ಸ್ ಅದನ್ನು ಹೇಳಿದ ಎಂದು ತಿರಸ್ಕರಿಸುವುದು ಸರಿಯಾದ ಕ್ರಮವಲ್ಲ.

ಚರಿತ್ರೆ ಮತ್ತು ಅದನ್ನು ನೋಡುವ ಕ್ರಮವನ್ನು ವಾಸ್ತವವಾಗಿ ಕಲಿಸಿದ್ದೂ ಮಾರ್ಕ್ಸ್. ಇದನ್ನು ಅಲ್ಲಗಳೆಯುವವರು ಮಾತ್ರವೇ ಚರಿತ್ರೆಯನ್ನು ಒಂದು ಕಟ್ಟುಕತೆಯೆಂದೋ ಅಥವಾ ಅರ್ಥಹೀನವೆಂದೋ ಹೇಳುತ್ತಾರೆ. ಮತ್ತೆ ಕೆಲವರು ಚರಿತ್ರೆಯನ್ನು ಖಾಲಿಯಾದ ಅವಕಾಶದಲ್ಲಿಯೂ ಇಡುತ್ತಾರೆ. ಅದನ್ನು ಮತ್ತೆ ಕೆಲವರು ಚರಿತ್ರೆಯ ಅಗತ್ಯವಿಲ್ಲವೆಂಬ ಮೊಂಡುವಾದಕ್ಕೂ ಬಿದ್ದಿದ್ದಾರೆ. ಚರಿತ್ರೆಯಲ್ಲಿ ಯಾವುದು ಕಥಾನಕವಾಗಿದೆಯೋ ಅದರ ಸ್ವರೂಪವನ್ನು ನಾವು ವೈಜ್ಞಾನಿಕವಾಗಿಯೂ ವಿಶ್ಲೇಷಣೆಯನ್ನು ಮಾಡಲು ಸಾಧ್ಯವೆನ್ನುವ ತಿಳುವಳಿಕೆಯನ್ನು ಮಾರ್ಕ್ಸ್‌ವಾದವು ಹೇಳುತ್ತದೆ. ನಾವು ಇದನ್ನು ಪರಿಕಲ್ಪನಾತ್ಮಕವಾಗಿಯೂ ಅಧ್ಯಯನ ಮಾಡಲು ಸಾಧ್ಯ. ಯಾವುದನ್ನು ಪ್ರಾತಿನಿಧಿಕವಾಗಿ ನೋಡಬೇಕು ಮತ್ತು ಯಾವುದನ್ನು ಹಾಗೆ ನೋಡಬಾರದು ಎನ್ನುವ ವಿವೇಕವು ಅದಕ್ಕೆ ಇದೆ.

ಚರಿತ್ರೆ ಮತ್ತು ಅದರ ಸ್ವರೂಪವನ್ನು ನಾವು ಈ ದೃಷ್ಟಿಯಿಂದ ಗಮನಿಸುವುದು ಅತ್ಯಂತ ಅಗತ್ಯವೂ ಹೌದು. ಹಾಗೆ ನೋಡುವುದಿದ್ದರೆ ಚರಿತ್ರೆ ಮತ್ತು ಅದರ ಬರವಣಿಗೆಯು ನಿಜವಾಗಿಯೂ ಅತ್ಯಂತ ದೊಡ್ಡ ಸಮಸ್ಯೆಯೂ ಹೌದು. ಯಾಕೆಂದರೆ ಅದನ್ನು ಅನೇಕರು ಅತ್ಯಂತ ಸುಲಭವಾದ ದಾರಿಯೆಂದೂ ಭಾವಿಸಿಕೊಂಡಿದ್ದಾರೆ. ಅನೇಕರು ಚರಿತ್ರೆಯನ್ನು ಬರೀ ಒಂದು ವಿವರಣೆ ಎಂದುಕೊಂಡಿದ್ದಾರೆ. ಆದರೆ ಅದು ಶಾಸ್ತ್ರವೂ ಹೌದು ಎನ್ನುವುದನ್ನು ಮರೆಮಾಚುತ್ತಾರೆ.

ಚರಿತ್ರೆಯು ಒಂದು ಅರ್ಥದಲ್ಲಿ ಸಂಕೇತಶಾಸ್ತ್ರವನ್ನು ಅವಲಂಬಿಸಿಕೊಂಡಿದೆ. ಚಾರಿತ್ರಿಕತೆ ಮತ್ತು ಅದನ್ನು ನೋಡುವ ಕ್ರಮವನ್ನು ನಮಗೆ ಸಂಕೇತಶಾಸ್ತ್ರವು

ಹೇಳಿದೆ. ಚರಿತ್ರೆಗೂ ಒಂದು ರೀತಿಯಲ್ಲಿ ಕೆಲವು ದರ್ಶನಗಳು ಇರುತ್ತವೆ. ಬಾರ್ತ್ ಈ ದೃಷ್ಟಿಯಿಂದ ಮತ್ತೊಂದು ಅಂಶವನ್ನು ಹೇಳಿದ್ದಾನೆ. ಅವನು ಚರಿತ್ರೆ ಮತ್ತು ಸಾಹಿತ್ಯವನ್ನು ನೋಡುವಾಗ ಅದರ ವೈರುಧ್ಯವನ್ನು ಹೇಳುತ್ತಾನೆ. ಕಾರಣ ಮತ್ತು ಅದರ ಸ್ವರೂಪವನ್ನು ಅವನು ಹೇಳುವುದೂ ಈ ದೃಷ್ಟಿಯಿಂದಲೇ. ಬಾರ್ತ್ ಕಾರಣ ಮತ್ತು ಅದರ ಹಿಂದೆ ಇರುವ ಆಲೋಚನೆಯನ್ನು ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತಾನೆ. ಕಾರಣ ಮತ್ತು ಆಲೋಚನೆಯನ್ನು ಅವನು ದ್ವಂದ್ವಾತ್ಮಕ ಎಂದು ವಿವರಿಸುತ್ತಾನೆ. ಅವನ ಪ್ರಕಾರ ಅದು ಸರಿಯಾದ ಉಪಕ್ರಮವೂ ಹೌದು. ಆಧುನಿಕೋತ್ತರವಾದಿಗಳು ಮಾತ್ರವೇ ಅದನ್ನು ಅನುಮಾನಿಸುತ್ತಾರೆ. ಮತ್ತೆ ಇಲ್ಲಿ ಬರಹ ಮತ್ತು ಅದರ ಸಾಧ್ಯತೆಯನ್ನು ಹೇಳಬೇಕು. ಆಧುನಿಕೋತ್ತರವಾದಿಗಳು ಬರಹ ಮತ್ತು ಅದರ ಸಾಧ್ಯತೆಯನ್ನು ಒಂದು ರೀತಿಯಲ್ಲಿ ನೋಡುತ್ತಾರೆ. ಬರಹವನ್ನು ಮತ್ತು ಆಲೋಚನೆಯನ್ನು ಅವರು ಗ್ರಹಿಸುವಾಗ ಅವರಿಗೆ ಅನೇಕ ಮಿತಿಗಳು ಇವೆ. ಅಳಿಸಲಾಗದ ಬರಹ ಮತ್ತು ಅದರ ಹಿಂದೆ ಇರುವ ಒತ್ತಡವನ್ನು ಗಮನಿಸಿಕೊಂಡು ಅವರು ಅದನ್ನು ಬೇರೆ ರೀತಿಯಲ್ಲಿ ಹೇಳುತ್ತಾರೆ. ಬರಹವನ್ನು ಅವರು ಆಧಾರವೆಂದು ಒಪ್ಪಿಕೊಳುವುದಿಲ್ಲ. ಆದರೆ ಬರಹವೂ ಒಂದು ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಅದರಲ್ಲಿ ನಿರ್ದಿಷ್ಟವಾದ ನೆಲೆಗಳು ಇವೆ. ಯಾವುದನ್ನು ನಾವು ಬರೆಯುತ್ತಾ ಬಂದಿದ್ದೇವೆಯೋ ಅದು ಮೂಲತಃ ದಾಖಲೆ ಮತ್ತು ಅದು ಮನುಷ್ಯನ ಚರಿತ್ರೆಯನ್ನು ಹೇಳುತ್ತದೆ. ಅದು ಖಾಲಿಯಾದ ಮನಸ್ಸು ಮತ್ತು ಅದರ ಸೂಚಕವಲ್ಲ. ಅದರಲ್ಲಿ ಅನೇಕ ಸಂಗತಿಗಳು ಇವೆ. ಚರಿತ್ರೆ ಮತ್ತು ಅದರ ಸ್ವರೂಪವು ಹೀಗೆ ಬರಹಗಳಲ್ಲಿ ವ್ಯಕ್ತವಾಗುತ್ತದೆ. ಮತ್ತು ಬರಹಕ್ಕೆ ಒಂದು ಸಾಮಾಜಿಕವಾದ ಜಾಗವೂ ಇದೆ. ವಾಸ್ತವವಾಗಿ ಬರಹವು ಸಮಾಜದಲ್ಲಿ ಅತ್ಯಂತ ಮಹತ್ವದ ಜಾಗವನ್ನು ವಹಿಸಿಕೊಂಡಿತು. ಅದು ಕೂಡಾ ಒಂದು ರೀತಿಯಲ್ಲಿ ಅತ್ಯಂತ ಮಹತ್ವದ ಸಂಶೋಧನೆಯೇ ಆಗಿದೆ. ಅದು ಸಮಾಜದಲ್ಲಿ ವಹಿಸಿಕೊಂಡ ಪಾತ್ರವೂ ಅತ್ಯಂತ ಮುಖ್ಯವಾದದ್ದು. ಬರಹವು ಮೂಲತಃ ಜೀವನದ ಅತ್ಯಂತ ಅವಿಭಾಜ್ಯವಾದ ಒಂದು ಅಂಶ. ಅದು ಚರಿತ್ರೆಯ ದರ್ಶನವೂ ಹೌದು. ಫುಕೋ ಚರಿತ್ರೆಯನ್ನು ಬೇರೆ ಬೇರೆ ಮಾದರಿಯಲ್ಲಿ ನೋಡುತ್ತಾನೆ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ.

ಚರಿತ್ರೆ ಮತ್ತು ಅದರ ದರ್ಶನವನ್ನು ನೋಡಿದರೆ ಅದರ ಸ್ವರೂಪವು ಹೇಗೆ ಬದಲಾಗಿದೆ ಮತ್ತು ಯಾವ ರೀತಿಯಲ್ಲಿ ಬದಲಾಗಿದೆ ಎಂದು ತಿಳಿಯುತ್ತದೆ. ಚರಿತ್ರೆಯು ಕಾಲ ಕಾಲಕ್ಕೆ ಸ್ಥಿತ್ಯಂತರವಾಗುವುದೂ ಸಹಜವೂ ಆಗಿದೆ. ಅಂದರೆ ಅದರ ಸ್ವರೂಪ ಮತ್ತು ಅದರ ಲಕ್ಷಣಗಳು ಆಗಾಗ ಬದಲಾಗಿದೆ. ಚರಿತ್ರೆಯನ್ನು ನಮ್ಮ ಕಣ್ಣಿಗೆ ಕಾಣಿಸುವಂತೆ ಮಾಡಿದ್ದು ಅಕ್ಷರವೇ ಎನ್ನುವುದರಲ್ಲಿ ಎರಡು

ಮಾತಿಲ್ಲ. ಫುಕೋ ತನ್ನ ಮೊದಲ ಕೃತಿಗಳಲ್ಲಿ ಚರಿತ್ರೆಯನ್ನು ಗಮನಿಸಿದ್ದು ಈ ಕಾರಣದಿಂದ ಮುಖ್ಯ. ಅದು ನಮಗೆ ಅನೇಕವನ್ನು ವಿವರಿಸುತ್ತದೆ. ಚರಿತ್ರೆಯನ್ನು ಅರ್ಥಮಾಡಿಕೊಳ್ಳಲು ನೆರವಾಗುವುದೂ ಇದೇ ಅಕ್ಷರವೇ. ಆದ್ದರಿಂದ ಅದು ಖಾಲಿಯಾದ ಒಂದು ಹಾಳೆಯ ಮೇಲಿನ ಕಪ್ಪು ಚಿಹ್ನೆಯಲ್ಲ. ಅದು ಶೂನ್ಯವಾದದ್ದೂ ಆಗಿಲ್ಲ. ಅದು ಅತ್ಯಂತ ಖಚಿತವಾದ ಸಂಗತಿಯೂ ಹೌದು. ಬರಹವೂ ನಮಗೆ ಒಂದು ಬಗೆಯ ಆಧಾರವೂ ಆಗಿದೆ. ಅದು ನಮ್ಮ ಅಗತ್ಯವಾದ ಸಂಗತಿ. ಬರಹ, ಚರಿತ್ರೆ ಮತ್ತು ಸಮಾಜದ ನಡುವೆ ದ್ವಂದ್ವಾತ್ಮಕವಾದ ಸಂಬಂಧವಿರುತ್ತದೆ. ಮಾರ್ಕ್ಸ್‌ವಾದದ ಅನಂತರದ ವಾದವೆಂದು ಅನೇಕರು ಯಾವ ರೀತಿಯಲ್ಲಿ ಹೇಳಿಕೊಂಡು ಬಂದಿದ್ದಾರೆಯೋ ಅವರು ಬರಹವನ್ನು ಒಂದು ಆಧಾರವೆಂದು ಹೇಳಬಹುದಾ ಎಂದು ಕೇಳುತ್ತಾರೆ. ಆದರೆ ಮಾರ್ಕ್ಸ್‌ವಾದವು ಊಹೆಯನ್ನು ಹೇಳುವುದೇ ಇಲ್ಲ. ಅದು ಖಚಿತವಾದ ನಂಬಿಕೆಯನ್ನು ಹೇಳುತ್ತದೆ. ಮಾರ್ಕ್ಸ್ ಮೂಲಭೂತವಾಗಿ ಕ್ರಿಯಾಶೀಲನಾದ ವ್ಯಕ್ತಿಯನ್ನು ನಂಬಿದ್ದ ಮತ್ತು ಅವನು ಅದನ್ನು ಕಲ್ಪನೆಯೆಂದು ಹೇಳಿಲ್ಲ. ವಾಸ್ತವ ಜೀವನಕ್ಕೆ ನಾವು ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು ಎನ್ನುವುದು ಅವನ ವಾದವಾಗಿದೆ. ವಾಸ್ತವ ಜೀವನವೆಂದರೆ ಅದು ಕಲ್ಪಿತವಾದದ್ದು ಆಗಿಲ್ಲ. ಅದನ್ನು ನೋಡಿದರೆ ನಾವು ಯಾವುದೇ ಪೂರ್ವ ಪ್ರಮೇಯವನ್ನು ಮಾಡುವಂತೆ ಇಲ್ಲ. ಜೀವನವು ಎರಡು ಮಗ್ಗುಲಲ್ಲಿ ಇರುತ್ತದೆ. ಅದನ್ನು ಹೀಗೆಯೂ ಹೇಳಬಹುದು: ವಾಸ್ತವವು ಯಾವಾಗಲೂ ಬೇರೆಯಾದ ಒಂದು ಆದರ್ಶವಲ್ಲ. ಅದರಲ್ಲಿ ಯಾವುದೇ ಕಲ್ಪನೆಗೆ ಅವಕಾಶವೂ ಇಲ್ಲ. ಜೀವನ ಮತ್ತು ಅದರ ಭೌತಿಕತೆಯು ನಿರ್ಧಾರವಾಗುವುದೂ ಕೂಡಾ ಈ ಚಲನೆಯಿಂದ. ಚಲನೆ ಮತ್ತು ಅದರ ಪರಿಣಾಮಗಳೂ ಕೂಡಾ ಒಂದು ಬಗೆಯದು ಅಲ್ಲ. ಅದರಲ್ಲಿ ವ್ಯತ್ಯಾಸವಿದೆ. ಯಾವುದು ನಿಜವಾದ ಜೀವನ ಆಗಿದೆಯೋ ಅದರ ವಿವಿಧತೆಯು ನಮ್ಮ ಕ್ರಿಯೆಯಿಂದ ವ್ಯಕ್ತವಾಗುತ್ತದೆ. ಯಾವುದು ಭೌತಿಕವಾದ ಅಗತ್ಯವಾಗಿದೆಯೋ ಅದು ನಮ್ಮ ಸಮಾಜವನ್ನು ರೂಪಿಸಿದೆ. ಧರ್ಮವು ನಮ್ಮ ಅಗತ್ಯವನ್ನು ಹೇಳಿಲ್ಲ. ಅದಕ್ಕೆ ಅದು ಯಾವುದೂ ಮುಖ್ಯವಲ್ಲ. ಕಲ್ಪನೆ, ಧಾರ್ಮಿಕತೆ, ಮತ್ತು ಆದರ್ಶಗಳಿಂದ ಸಮಾಜವು ರಚನೆಯಾಗಿಲ್ಲ. ಅದರ ಗತಿಯೇ ಬೇರೆ. ಆದರೆ ಯಾವುದೇ ಭೌತಿಕತೆಯು ನಮ್ಮ ಜೀವನವನ್ನು ರೂಪಿಸುವಾಗ ಅದರ ಚರಿತ್ರೆಯು ಬೇರೆಯಾಗುತ್ತದೆ. ಅದು ಕಲ್ಪಿತವಲ್ಲ. ಜೀವನ ಮತ್ತು ಅದು ರೂಪಿಸುವ ತಾತ್ವಿಕತೆಯು ಚರಿತ್ರೆಯನ್ನು ಕಟ್ಟಿದೆ. ಅದನ್ನು ಕೆಲವು ಬುದ್ಧಿಜೀವಿಗಳು ಕಟ್ಟಿಲ್ಲ. ಅದಕ್ಕೆ ಅದರದೇ ಅಸ್ತಿತ್ವವು ಇದೆ.

ಚಾರಿತ್ರಿಕ ಭೌತಿಕವಾದ ಎಂದರೆ ಅದು ಭೌತವಾದಿಯಾದ ಒಂದು ಪರಿಕಲ್ಪನೆಯೇ ಆಗುತ್ತದೆ. ಯಾವುದನ್ನು ನಾವು ಈಗ ಚರಿತ್ರೆಯೆಂದು ಹೇಳುತ್ತೇವೆಯೋ ಅದು

ಕಪೋಲ ಕಲ್ಪಿತವಾದ ಸಂಗತಿಯಲ್ಲ. ಆದ್ದರಿಂದ ಅದನ್ನು ನೋಡುವಾಗ ನಾವು ದ್ವಂದ್ವಾತ್ಮಕವಾದ ಒಂದು ಸಂಗತಿಯ ರೀತಿಯಲ್ಲಿ ನೋಡಬೇಕಾಗುತ್ತದೆ. ಅದನ್ನು ಚಾರಿತ್ರಿಕತೆಯನ್ನು ನೋಡಬೇಕಾದ ಪರಿಕರವನ್ನು ಒದಗಿಸುತ್ತದೆ. ಚರಿತ್ರೆ ಮತ್ತು ಅದರ ಅಧ್ಯಯನವನ್ನು ನೋಡುವುದು ಎಂದರೆ ಅದರ ಸ್ವರೂಪವನ್ನು ಈ ಮಾದರಿಯ ದ್ವಂದ್ವಾತ್ಮಕತೆಯ ಮೂಲಕವೇ ಗ್ರಹಿಸುವುದೂ ಅತ್ಯಂತ ಅಗತ್ಯವಾಗಿದೆ. ಚರಿತ್ರೆ ಎಂದರೆ ಅದರಲ್ಲಿ ಯಾವುದೋ ಒಂದು ರೂಪವಿದೆ ಎಂದೂ ಹೇಳುವಂತಿಲ್ಲ. ಅದನ್ನು ಕೇವಲ ಒಂದು ನಿರ್ದಿಷ್ಟವಾದ ಶೈಲಿಯೆಂದೂ ಹೇಳಬೇಕಾಗಿಯೂ ಇಲ್ಲ. ಅದು ವೈರುಧ್ಯವನ್ನು ಒಳಗೊಂಡಿರುತ್ತದೆ ಮತ್ತು ಅದನ್ನು ಒಂದು ನಿರ್ದಿಷ್ಟವಾದ ಪ್ರದೇಶದ ಮೂಲಕವೂ ಗುರುತಿಸಬೇಕಾಗುತ್ತದೆ.

ಚರಿತ್ರೆಯು ಮೂಲಭೂತವಾಗಿ ಒಂದು ವಿವರವನ್ನು ಹೇಳುತ್ತದೆ ಮತ್ತು ಅದು ತರ್ಕ ಪೂರ್ಣವೂ ಆಗಿರುತ್ತದೆ. ಅದನ್ನು ಗಾಳಿಯಲ್ಲಿನ ಗುಂಡು ಎಂದು ಭಾವಿಸಬೇಕಾಗಿಯೂ ಇಲ್ಲ. ಚರಿತ್ರೆ ಮತ್ತು ಅದರ ತರ್ಕದಲ್ಲಿ ಇರುವ ಆಶಯವನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ನಗರ ಮತ್ತು ಅದರ ರಚನೆಯನ್ನು ನೋಡಿದರೆ ಈ ಮೇಲಿನ ಅಂಶಗಳು ನಮಗೆ ತಿಳಿಯುತ್ತದೆ. ನಗರಗಳನ್ನು ನಿರ್ಮಾಣ ಮಾಡುವಾಗ ಯಾರ ಪರವಾಗಿ ಅದು ಇದೆ ಎಂದೂ ನೋಡಬೇಕಾಗುತ್ತದೆ. ವಾಸ್ತವವಾಗಿ ಯಾವುದೇ ನಗರಗಳು ಶ್ರೀಮಂತರ ವಿಲಾಸಕ್ಕೆ ಇರುತ್ತದೆ. ಮತ್ತು ಅದನ್ನು ನೋಡುವುದು ಎಂದರೆ ಅದು ಬಡವರ ಪರವೇ ಇಲ್ಲ ಎನ್ನುವುದೇ ನಿರ್ವಿವಾದದ ಸಂಗತಿ. ಬುದ್ಧಿಜೀವಿಗಳು ಮತ್ತು ಅವರ ಉದ್ಯೋಗಕ್ಕೂ ಅವರ ಸ್ಥಾನ ಮಾನಕ್ಕೂ ಚರಿತ್ರೆಗೂ ಸಂಬಂಧವಿದೆ. ಆದ್ದರಿಂದ ಅವರು ಯಾರ ಪರವಾಗಿ ಮಾತಾಡುತ್ತಾರೆ ಎನ್ನುವುದೇ ಸರಿಯಾದ ಅಂಶವೂ ಆಗಿದೆ. ದ್ವಂದ್ವಾತ್ಮಕವಾದ ಚರಿತ್ರೆಗೂ ಸೌಂದರ್ಯಶಾಸ್ತ್ರಕ್ಕೂ ಯಾವ ಮಾದರಿಯ ಸಂಬಂಧವಿದೆ ಎನ್ನುವುದೂ ಅಷ್ಟೇ ಮುಖ್ಯವಾದ ಸಂಗತಿಯೂ ಆಗಿದೆ. ನಗರಗಳು ಮತ್ತು ಅವುಗಳ ಚರಿತ್ರೆಯು ವಿಶಿಷ್ಟವಾದದ್ದೂ ಹೌದು.

ಮೂರನೆಯ ಜಗತ್ತು ಪಶ್ಚಿಮದ ವಾಸ್ತು ಶಿಲ್ಪವನ್ನು ಅನುಕರಿಸಿದೆ ಮತ್ತು ಅದರ ಸಂಗೀತ ಹಾಗೂ ಅದರ ಸಂಗೀತದ ಉಪಕರಣವನ್ನು ಕೂಡಾ. 1950 ಮತ್ತು 60ರ ದಶಕದಲ್ಲಿ ಸಂಗೀತವು ಅದರಲ್ಲಿಯೂ ಚಿತ್ರಗೀತೆಗಳು ಪಶ್ಚಿಮದ ಉಪಕರಣವನ್ನು ಬಳಸಿಕೊಂಡಿದೆ. ಅದೇ ವೇಳೆಯಲ್ಲಿ ಎಲೆಕ್ಟ್ರಾನಿಕ್ ಪರಿಕರಗಳು ಹೆಚ್ಚು ಪ್ರಸಿದ್ಧಿಯನ್ನು ಪಡೆದವು. ಆದ್ದರಿಂದ ಚರಿತ್ರೆಯನ್ನು ನಾವು ಬೇರೆ ಬೇರೆ ದೃಷ್ಟಿಕೋನದಿಂದಲೂ ನೋಡಬೇಕಾಗುತ್ತದೆ. ಕಟ್ಟಡಗಳು ಕೂಡಾ ಹೀಗೆಯೇ. ಅಕ್ಷರಗಳು ಹೇಗೆ ಚರಿತ್ರೆಯನ್ನು ಹೇಳುತ್ತವೆಯೋ ಅದೇ ರೀತಿಯಲ್ಲಿ ಕಟ್ಟಡಗಳೂ ಕೂಡಾ ಚರಿತ್ರೆಯ ಪುಟಗಳಲ್ಲಿ ದಾಖಲಾಗಿವೆ. ತಾತ್ವಿಕತೆಯನ್ನೂ ಈ ಕಟ್ಟಡಗಳು

ನಮಗೆ ಹೇಳುತ್ತವೆ. ಮತ್ತು ಅವುಗಳು ಯಾವ ಕಾಲದಲ್ಲಿ ಏನಾಯಿತು ಎಂಬುದನ್ನೂ ಹೇಳುತ್ತವೆ. ಇಲ್ಲಿ ಮತ್ತೆ ಬೇರೆ ಪ್ರಶ್ನೆಗಳನ್ನು ನೋಡಬಹುದು: ಕಟ್ಟಡಗಳು ಬದಲಾಗುತ್ತಾ ಬಂದಿವೆ ಮತ್ತು ಅದರಲ್ಲಿ ಬೇರೆ ಬೇರೆ ರೂಪಗಳೂ ಇವೆ. ಆಯ್ಕೆಗಳಿವೆ. ಮತ್ತು ಸ್ವರೂಪಗಳು ಮತ್ತು ಆವಶ್ಯಕತೆಯ ಪ್ರಶ್ನೆಯೂ ಇದೆ. ಕಟ್ಟಡಗಳು ರಚನೆಯಾಗಿವೆ. ಹಾಗೆ ನೋಡುವುದಿದ್ದರೆ ಯಾವುದೇ ತಾತ್ವಿಕತೆಯು ಕೂಡಾ ಒಂದು ಸಿದ್ಧ ಮಾದರಿಯ ಉತ್ತರವನ್ನು ಹೇಳುವುದೇ ಇಲ್ಲ. ಹೀಗಾಗಿ ನಾವು ಓದು ನಿರ್ಣಾಯಕವಾದ ನಿಲುವನ್ನು ತಳೆಯಬೇಕಾಗುತ್ತದೆ. ಅದರಲ್ಲಿಯೂ ನವ ಚಾರಿತ್ರಿಕ ವಾದದಲ್ಲಿ ನಾವು ಒಂದು ನಿಲುವನ್ನು ಇಟ್ಟುಕೊಳ್ಳುವುದು ಅಗತ್ಯವಾಗಿದೆ. ಚರಿತ್ರೆಯನ್ನು ಕಟ್ಟಲಾಗಿದೆ ಎನ್ನುವುದು ಪುಕೋನ ಅಭಿಪ್ರಾಯ. ಇದನ್ನು ಮಾರ್ಕ್ಸ್‌ವಾದವು ಹೇಳುತ್ತದೆ. (ವಿವರಗಳಿಗೆ ನೋಡಿ: ಮಿಶೆಲ್ ಫುಕೋ ರಿ ಮಾರ್ಕ್ಸ್ ಆನ್ ಮಾರ್ಕ್ಸ್‌ಕೊಲೊಂಬಿಯಾ ಯುನಿರ್ವಸಿಟಿ ನ್ಯೂಯಾರ್ಕ್)

1. ಫುಕೋ – ರಿ ಮಾರ್ಕ್ಸ್ ಆಫ್ ಮಾರ್ಕ್ಸ್
ಕೊಲಂಬಿಯಾ ಯುನಿರ್ವಸಿಟಿ.

10. ಅರ್ಥಶಾಸ್ತ್ರ : ಮಾರ್ಕ್ಸ್ ಮತ್ತು ಫ್ರಾಯ್ಡ್

ಅರ್ಥಶಾಸ್ತ್ರ ಮತ್ತು ಅದರ ಪ್ರಶ್ನೆಗಳು ಹೇಗೆ ನಮ್ಮ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಫ್ರಾಯ್ಡ್‌ವಾದ ಮತ್ತು ಮಾರ್ಕ್ಸ್‌ವಾದವು ಹೇಳುತ್ತದೆ. ಈ ಎರಡೂ ಸಿದ್ಧಾಂತಗಳು ಜೀವನದ ಅರ್ಥಶಾಸ್ತ್ರವು ಹೇಗೆ ಇದೆ ಎಂದು ಹೇಳುತ್ತದೆ. ಆದರೆ ಅದನ್ನು ಜಿಜೆಕ್ ವಿವರಿಸುತ್ತಾನೆ. ಕನಸಿನ ಕುರಿತು ಹೇಳುವಾಗ ಅವನು ಅದನ್ನು ಅತ್ಯಂತ ಸರಿಯಾಗಿ ಗುರುತಿಸುತ್ತಾನೆ. ಇದರ ಬಗ್ಗೆ ಹೇಳುತ್ತಾ ಜಿಜೆಕ್ ಹೇಳುತ್ತಾನೆ. ಇದು ವರ್ಗದ ಸಮರವನ್ನು ಹೇಳುವುದಿಲ್ಲ. ಇದು ಧಾರ್ಮಿಕವಾದ ಸಂಘರ್ಷವೂ ಅಲ್ಲ. ಆದರೆ ಇದರಲ್ಲಿ ಅತ್ಯಂತ ಸೂಕ್ಷ್ಮವಾದ ಸಂಗತಿಯು ಇದೆ. ಇದು ಸಮಾಜ ಮತ್ತು ಅದರ ವಿಧಿ ವಿಧಾನವನ್ನು ಹೇಳುತ್ತದೆ. ಯಾವುದು ನಮಗೆ ಅನನ್ಯತೆಯು ಆಗಿದೆ ಎನ್ನುವುದನ್ನು ಹೇಳುವಾಗ ಅದರಲ್ಲಿ ಸಂಸ್ಕೃತಿಯನ್ನು ನೋಡಬೇಕಾಗುತ್ತದೆ. ಗಂಡು ಮತ್ತು ಹೆಣ್ಣು ಸಂಸ್ಕೃತಿಯನ್ನು ಕಟ್ಟುವಾಗ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಆದ್ದರಿಂದ ರಾಜಕಾರಣ ಮತ್ತು ಅದರ ಹೋರಾಟಗಳಲ್ಲಿ ನಾವು ಬೇರೆ ಬೇರೆ ಥರ ಯೋಚನೆಯನ್ನು ಮಾಡಬೇಕಾಗಿದೆ. ಇಲ್ಲಿ ಒಂದು ನೆನಪನ್ನು ಮಾಡುವುದು ಅತ್ಯಂತ ಆವಶ್ಯಕತೆಯಾಗಿದೆ. ಆರ್ಥಿಕತೆ ಎನ್ನುವುದು ವಾಸ್ತವವಾಗಿ ಒಂದು ಲಕ್ಷಣವು ಮಾತ್ರವೇ ಆಗಿದೆ. ಆದರೆ ಅದು ನಮ್ಮ ಜೀವನದಲ್ಲಿ ಬೇರೆ ಬೇರೆ ಥರ ಕಾಣಿಸುತ್ತದೆ. ರಾಜಕೀಯವಾದ ಹೋರಾಟಗಳು ಹೇಗೆ ರೂಪಿತವಾಗಬೇಕಾಗುತ್ತದೆ ಎಂದು ಹೋರಾಟಗಾರರು ನಿರ್ಧರಿಸಬೇಕಾಗುತ್ತದೆ. ಅದು ತಾತ್ವಿಕವಾಗಿಯೂ ಇರಬೇಕಾಗುತ್ತದೆ.

ಯಾವುದು ರಾಜಕೀಯವಾಗಿ ಎಡ ಮತ್ತು ಯಾವುದು ಬಲ ಎನ್ನುವುದು ನಿರ್ಧಾರವಾಗುವುದು ನಮಗೆ ಆಯಾ ಸನ್ನಿವೇಶಗಳ ಕಾರ್ಯ ಸೂಚಿಗಳಲ್ಲಿ. ಎಡಕ್ಕೆ ಬಲವು ಸಂಪೂರ್ಣವಾಗಿ ವಿರುದ್ಧವಾಗಿದೆ. ಅದರ ನೀತಿಯು ಬೇರೆಯಾಗಿದೆ. ಸಾಂಪ್ರದಾಯಿಕರು ಜೀವನವನ್ನು ನೋಡುವುದು ಒಂದು ದೃಷ್ಟಿಕೋನದಲ್ಲಿ. ಜೀವನವು ಹೇಗೆ ಇದೆಯೋ ಹಾಗೆ ಅದನ್ನು ಸ್ವೀಕರಿಸುವುದು ಅವರ

ದೃಷ್ಟಿಕೋನವಾಗಿದೆ. ಆದರೆ ಬಲಪಂಥದವರು ಜೀವನವನ್ನು ನೋಡುವ ಕ್ರಮವು ಬೇರೆಯಾಗಿದೆ. ಅವರು ಜೀವನವನ್ನು ಬಂಡವಾಳದ ಜೊತೆಗೆ ನೋಡುತ್ತಾರೆ. ಅಂದರೆ ಬಡತನವು ಅವರ ಕಣ್ಣಿಗೆ ಬೀಳುವುದಿಲ್ಲ. ಆದರೆ ಸಮಾನತೆಯನ್ನು ಹೇಳುವುದು ಸಮಾಜವಾದದ ಅತ್ಯಂತ ಮುಖ್ಯವಾದ ಗುರಿಯೂ ಹೌದು. ಈ ಎಲ್ಲಾ ವಾದಗಳಲ್ಲಿ ಯಜಮಾನಿಕೆಯನ್ನು ವಹಿಸುವ ಸೂಚಕರು ಬೇರೆ ಥರ ಇರುತ್ತಾರೆ. ಆದ್ದರಿಂದ ಅವರು ಅರ್ಥಶಾಸ್ತ್ರವನ್ನು ನೋಡುವ ಕ್ರಮವು ಬೇರೆಯಾಗಿರುತ್ತದೆ.

ರಾಜಕಾರಣ ಮತ್ತು ಅರ್ಥಶಾಸ್ತ್ರಗಳಿಗೆ ಒಂದು ನೆಂಟು ಇದೆ. ಅದನ್ನು ಬೇರೆ ಥರ ವ್ಯಾಖ್ಯಾನವನ್ನು ಮಾಡಬಹುದು. ಆದರೆ ಇಲ್ಲಿ ನಮಗೆ ಅತ್ಯಂತ ಮುಖ್ಯವಾಗುವುದು ಈವತ್ತು ಏನು ನಡೆಯುತ್ತದೆ ಎನ್ನುವುದು ಮಾತ್ರವೇ. ರಾಜಕಾರಣ ಮತ್ತು ಅರ್ಥಶಾಸ್ತ್ರಗಳು ಒಂದು ಅಂತರವನ್ನು ಇಟ್ಟುಕೊಂಡಿವೆ ಎಂದಾದರೆ ಅದರ ಅರ್ಥವು ಬೇರೆಯಾಗುತ್ತದೆ. ಆದ್ದರಿಂದಲೇ ರಾಜಕೀಯ ಅರ್ಥಶಾಸ್ತ್ರ ಎನ್ನುವುದಕ್ಕೆ ಹೆಚ್ಚು ಮಹತ್ವವು ಇದೆ. ಮಾರ್ಕ್ಸ್‌ವಾದವು ಇದನ್ನು ಎರಡು ಥರ ನೋಡುತ್ತದೆ: ಒಂದು ರಾಜಕಾರಣ ಮತ್ತು ಅದರ ವಿವಿಧ ನೆಲೆಗಳು. ಮತ್ತೊಂದು ಅರ್ಥಶಾಸ್ತ್ರದ ಮೂಲಕ ನಾವು ಚರಿತ್ರೆಗೆ ಮರಳುವುದು. ಇದು ಅತ್ಯಂತ ಮಹತ್ವದ್ದು. ವರ್ಗಗಳು ಮತ್ತು ಅದರ ನೆಲೆಗಳು ಒಂದು ಥರ ಇರುತ್ತದೆ. ಆದರೆ ಮತ್ತೊಂದು ಅಂಶವು ನಮ್ಮ ಗಮನಕ್ಕೆ ಬರುವುದು ಅತ್ಯಂತ ಅಗತ್ಯವೂ ಇದೆ. ಅದನ್ನು ನೋಡಬೇಕು– ಅನೇಕರು ವರ್ಗ ಎನ್ನುವುದನ್ನು ತಿರುಚುತ್ತಾರೆ. ಅವರು ಅದಕ್ಕೆ ಬೇರೆ ಅರ್ಥಗಳನ್ನು ಕೊಡುವುದು ನಿಜ. ಆದರೆ ಇಲ್ಲಿ ಒಂದು ಅಂಶವಿದೆ. ಆಧುನಿಕ ಅರ್ಥಶಾಸ್ತ್ರವು ಯಾವುದನ್ನು ಅತ್ಯಂತ ವೈಭವೀಕರಿಸುತ್ತದೆಯೋ ಅದರ ರೂಪವು ಬೇರೆಯಿರುತ್ತದೆ. ಅದು ಕೆಲವರಿಗೆ ಮಾತ್ರವೇ ಅನುಕೂಲವನ್ನು ಮಾಡುತ್ತದೆ.

ಇಲ್ಲಿ ಲಕಾನ್ ವಾದವನ್ನು ಮತ್ತೊಮ್ಮೆ ನೋಡಬೇಕು: ಅವನು ಹೇಳುತ್ತಾನೆ– ಅರ್ಥಶಾಸ್ತ್ರವೂ ಅತ್ಯಂತ ವಿಶಾಲವಾಗಿ ರಾಜಕಾರಣವೇ ಆಗಿರುತ್ತದೆ. ಅದನ್ನು ನಾವು ಮರೆಯಬಾರದು. ಮತ್ತೊಂದು ಕಡೆಯಿಂದ ಅದು ಚರಿತ್ರೆಯೂ ಆಗಿದೆ. ಆದ್ದರಿಂದ ನಾವು ಅರ್ಥಶಾಸ್ತ್ರದ ಮೂಲಕ ಚರಿತ್ರೆಗೆ ಮರಳುವುದು ಸಾಧ್ಯವಾಗುತ್ತದೆ. ಹಾಗೆ ನೋಡಿದರೆ ಎಲ್ಲವೂ ನಿಜವಾದ ರಾಜಕಾರಣವೇ ಆಗಿರುತ್ತವೆ. ಅದರಲ್ಲಿ ತಾತ್ವಿಕತೆ, ಸಂಸ್ಕೃತಿ, ಮತ್ತು ಇತರ ಲಕ್ಷಣಗಳು ನಮಗೆ ಕಾಣಿಸುತ್ತವೆ. ಆದ್ದರಿಂದ ಯಾವುದೇ ರಾಜಕೀಯವಾದ ಹೋರಾಟಗಳು ಮೂಲಭೂತವಾಗಿರುತ್ತದೆ. ಇದು ಬರೀ ಟ್ರೇಡ್ ಯೂನಿಯನ್ ಪ್ರಶ್ನೆಗಳು ಮಾತ್ರವೇ ಅಲ್ಲ. ರಾಜಕಾರಣವು ಈ ದೃಷ್ಟಿಯಿಂದ ಹೆಚ್ಚು ಮಹತ್ವದ್ದು. ಆದರೆ ಅನೇಕರು ಇಲ್ಲಿ ನಮ್ಮನ್ನು ಹಾದಿ ತಪ್ಪಿಸುತ್ತಾರೆ. ಮಾರ್ಕ್ಸ್ ಹೇಳಿದ ಮಾತು ಇಲ್ಲಿ ಉಲ್ಲೇಖನೀಯ. ಪ್ರತಿಯೊಂದು ಸಮಾಜದ ಉತ್ಪಾದನೆಗೆ ನಿರ್ದಿಷ್ಟವಾದ ಸಂಬಂಧವು ಇರುತ್ತದೆ. ಆದರೆ ಈ ಸಂಬಂಧವನ್ನು ನಾವು

ಸ್ವತಂತ್ರವಾದದ್ದು ಎಂದು ಹೇಳಬೇಕಾದ ಅಗತ್ಯವಿಲ್ಲ. ಯಾವುದು ಭೌತಿಕವಾದ ಉತ್ಪಾದನೆಯು ಆಗಿರುತ್ತದೆಯೋ ಅದು ನಮ್ಮನ್ನು ನಿರ್ದಿಷ್ಟವಾಗಿ ರೂಪಿಸುತ್ತದೆ ಸಂಪತ್ತು ಅದರ ಹಂಚಿಕೆಯಲ್ಲಿ ನಿರ್ದಿಷ್ಟವಾದ ರೂಪವು ಇರಬೇಕಾದದ್ದು ಅತ್ಯಂತ ಅಗತ್ಯವಾಗಿದೆ. ಯಾವುದು ನಮ್ಮನ್ನು ರೂಪಿಸುತ್ತದೆ ಎಂದು ನೋಡಲು ನಮಗೆ ಭೌತಿಕತೆಯು ಅತ್ಯಂತ ಅಗತ್ಯವಾಗಿದೆ. ಅದರ ಜೊತೆಗೆ ಯಾವ ಸಂಬಂಧವನ್ನು ಇಟ್ಟುಕೊಳ್ಳುತ್ತೇವೆ ಎನ್ನುವುದರ ಆಧಾರದ ಮೇಲೆ ನಾವು ನಮ್ಮನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಹಾಗೆ ನೋಡಿದರೆ ಆರ್ಥಿಕತೆಯು ಧರ್ಮ, ರಾಜಕಾರಣ, ತತ್ವಜ್ಞಾನವನ್ನು ನಿರೂಪಿಸುತ್ತದೆ. ಹಾಗೆ ನೋಡಿದರೆ ಯಾವುದೇ ಸಮಾಜವು ಉತ್ಪಾದನೆಯು ಇಲ್ಲದೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಾರದು. ಸಮಾಜದಲ್ಲಿ ಉತ್ಪಾದನೆಯು ಇರುತ್ತದೆ. ಅದರಲ್ಲಿ ಬೆಳವಣಿಗೆಯು ಇರುತ್ತದೆ. ಅದಕ್ಕೆ ಒಂದು ಚೌಕಟ್ಟು ಎನ್ನುವುದು ಇರುತ್ತದೆ. ಆದ್ದರಿಂದ ಕೆಲವು ಶಕ್ತಿಗಳು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತವೆ. ಈ ದೃಷ್ಟಿಯಿಂದ ನಮಗೆ ವರ್ಗಗಳು ಮತ್ತು ಅದರ ಚಹರೆಗಳು ನಮಗೆ ತಿಳಿಯಬೇಕಾಗುತ್ತದೆ. ಆದರೆ ಚರಿತ್ರೆಯಲ್ಲಿ ಎಲ್ಲವೂ ಒಂದಲ್ಲ ಒಂದು ಅರ್ಥದಲ್ಲಿ ರತಿ ಪ್ರತೀಕವನ್ನು ಹೊಂದಿರುತ್ತದೆ. ಆದ್ದರಿಂದ ಉತ್ಪಾದನೆಗೂ ರತಿಪ್ರತೀಕಕ್ಕೂ ಒಂದು ಸಂಬಂಧವಿದೆ. ಅದರಲ್ಲಿ ಅಧಿಕಾರ ಮತ್ತು ಅದರ ಸ್ವರೂಪವು ಇರುತ್ತದೆ. ಅದರ ಜೊತೆಗೆ ಈವತ್ತು ಅದಕ್ಕೆ ಬೇರೆ ಬೇರೆ ಆಯಾಮವನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಫ್ರಾಯ್ಡ್‌ವಾದವನ್ನು ಮತ್ತು ಮಾರ್ಕ್ಸ್‌ವಾದವನ್ನು ಮತ್ತೆ ಜೊತೆಗೆ ಓದಲೇಬೇಕಾದ ಸನ್ನಿವೇಶವು ಇದೆ.

1. ಜಿಜೆಕ್ – ಪ್ಯಾರಲಕ್ಸ್‌ವ್ಯೂ.

11. ಸ್ವಯಂಬಲ: ಜಿಜೆಕ್

ಯಾವುದು ನಮಗೆ ನಿಜವಾದ ರಾಜಕಾರಣ ಮತ್ತು ಯಾವುದು ಮನುಷ್ಯ ಕುಲಕ್ಕೆ ಅಪಾಯವನ್ನು ತರುವ ರಾಜಕಾರಣ ಎನ್ನುವುದು ನಮ್ಮ ಮುಂದೆ ಇರುವ ಅತ್ಯಂತ ಮುಖ್ಯವಾದ ಪ್ರಶ್ನೆ. ಸಮಸ್ತ ಜನರನ್ನು ನಾಶ ಮಾಡುವ ರಾಜಕಾರಣವು ಆಗಿದೆಯೋ ಅದನ್ನು ನಾವು ಎಷ್ಟು ಒಪ್ಪಬೇಕು ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಆಧುನಿಕ ಉದಾರವಾದಿ ರಾಜಕಾರಣವು ನಮ್ಮನ್ನು ಯಾವ ಚರಿತ್ರೆಗೆ ನೂಕುತ್ತದೆ ಎಂದೂ ನೋಡಬೇಕಾಗಿದೆ. ಉದಾರವಾದಿ ರಾಜಕಾರಣದ ಒಳಗೆ ಒಬ್ಬ ಸರ್ವಾಧಿಕಾರಿಯು ಇರುತ್ತಾನೆ ಅಷ್ಟೇ ಅಲ್ಲ ಅವನು ಜನರನ್ನು ಹಿಂಸೆ ಮಾಡುತ್ತಾನೆ ಎಂದು ಜಿಜೆಕ್ ಹೇಳುತ್ತಾನೆ. ಅವನ ಮಾತು ನಮಗೆ ಈಗ ಹೆಚ್ಚು ಮುಖ್ಯವೆಂದು ಕಾಣಿಸುತ್ತದೆ. ಭಾರತದಲ್ಲಿ ನಮಗೆ ಈಗ ಸ್ಪಷ್ಟವಾಗಿದೆ. ಉದಾರವಾದಿ ರಾಜಕೀಯದ ಸ್ವರೂಪವು ನಮಗೆ ಹೇಗೆ ಕಾಣುತ್ತದೆ ಎನ್ನುವುದು ಒಂದು ಪ್ರಶ್ನೆ. ಆದರೆ ಮತ್ತೊಂದು ಕಡೆಯಲ್ಲಿ ಅದು ನಮಗೆ ಸಾಂಸ್ಥಿಕವಾದ ಗುಣವನ್ನು ಸೂಚಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಸಂಸ್ಥೆಗಳು ಕೂಡಾ ಒಂದು ನಿಯಂತ್ರಣಕ್ಕೆ ಗುರಿಯಾಗುತ್ತವೆ. ಪ್ರಜಾಪ್ರಭುತ್ವದಲ್ಲಿ ನ್ಯಾಯವಿಧಾನವೂ ಕೂಡಾ ನೈತಿಕ ಮತ್ತು ಸಾಂಸ್ಥಿಕವಾಗಿದ್ದು ಅದು ಕೆಲವು ಮೌಲ್ಯಗಳನ್ನು ಹೇರುತ್ತವೆ. ಪ್ರಜಾಪ್ರಭುತ್ವದಲ್ಲಿಯೂ ಪ್ರಭುತ್ವವು ಇದೆ. ಕ್ರಿಚ್ಲೆಯು ಇದನ್ನೂ ಹೇಳುತ್ತಾನೆ: ನಿಜವಾದ ಪ್ರಜಾಪ್ರಭುತ್ವದಲ್ಲಿ ನಮಗೆ ಒಂದು ವಸ್ತು ನಿಷ್ಟತೆಯು ಬೇಕಾಗುತ್ತದೆ. ಆದರೆ ನಮಗೆ ಅನೇಕರಿಗೆ ಅದರ ಅರಿವು ಇರುವುದು ಇಲ್ಲ. ಪ್ರಜಾಪ್ರಭುತ್ವ ಎನ್ನುವುದು ಒಂದು ಅತ್ಯಂತ ನಿರ್ದಿಷ್ಟವಾದ ಮತ್ತು ಯಾವುದೇ ಚಲನೆಯು ಇಲ್ಲದ ಒಂದು ವ್ಯವಸ್ಥೆ ಎಂದು ಭಾವಿಸಬೇಕಾದ ಯಾವ ಅಗತ್ಯವೂ ಇಲ್ಲ. ರಾಜಕೀಯವಾಗಿ ಅದರ ಸ್ವರೂಪವು ನಮಗೆ ಒಂದು ರೂಪೀಕರಣದ ಪ್ರಕ್ರಿಯೆಗೆ ಗುರಿಯಾಗಿದೆ ಎನ್ನುವುದು ಅರ್ಥವಾಗುತ್ತದೆ.

ಉದಾರವಾದಿ ಪ್ರಜಾಪ್ರಭುತ್ವದಲ್ಲಿ ಸರಕಾರೇತರ ಸಂಸ್ಥೆಗಳು (ಎನ್.ಜಿ.ಒ) ರಾಜಕೀಯವಾದ ಚಳುವಳಿಯನ್ನು ಮಾಡಿರುವುದು ಮತ್ತು ಅವುಗಳು ಬೇರೆ ಬೇರೆ ಹೆಸರಿನಲ್ಲಿ ಕಾರ್ಯ ಪ್ರವೃತ್ತರಾಗುವುದು ಹೊಸದಾದ ಸಂಗತಿಯೂ ಅಲ್ಲ. ಎಷ್ಟೋ

ಸರ್ತಿ ಅವುಗಳ ಕಾರ್ಯಗಳು ಮತ್ತು ಅವುಗಳ ವಿಧಾನಗಳು ನಮಗೆ ಸಂದೇಹವನ್ನು ಉಂಟುಮಾಡುವುದು ಸತ್ಯವಾಗಿದೆ. ವಿಮೋಚನೆಗಾಗಿ ಚಳುವಳಿ ಎನ್ನುವುದು ಒಂದು ವಿಚಾರವು ಮಾತ್ರವೇ ಆಗಿರುತ್ತವೆ. ಆದರೆ ಅವುಗಳು ಒಂದು ಅರಾಜಕತೆಯನ್ನು ಹುಟ್ಟುಹಾಕುವುದು ಅಷ್ಟೇ ಸತ್ಯ. ಪ್ರಭುತ್ವವನ್ನು ವಿರೋಧಿಸುವುದು ಮಾತ್ರವೇ ಆ ಸಂಸ್ಥೆಗಳ ಗುರಿಯೂ ಆಗಿದೆ. ಹಿಂಸೆಯನ್ನು ತಾತ್ವಿಕ ಮಾಡಲು ಯತ್ನವನ್ನು ಮಾಡುತ್ತವೆ. ಆಲ್ ಕೈದಾ ಸಂಘಟನೆಗೆ ಯಾರು ದುಡ್ಡು ಹಾಕಿದರು ಮತ್ತು ಯಾಕೆ ದುಡ್ಡು ಹಾಕಿದರು ಎನ್ನುವುದು ಈವತ್ತು ಗುಟ್ಟಾಗಿ ಉಳಿದಿಲ್ಲ. ಹಾಗೆಂದು ಅದು ಒಂದು ಹಂತದಲ್ಲಿ ಸ್ವಾತಂತ್ರ್ಯ ಮತ್ತು ಅದರ ಜೊತೆಗೆ ಬರುವ ಪದಗಳನ್ನು ಬಿಟ್ಟಿಲ್ಲ. ಆಲ್ ಕೈದಾ ಒಂದು ರಾಜಕೀಯವಾದ ಚಟುವಟಿಕೆಯೂ ಆಗಿದೆ. ಕ್ರಚ್ಲೆ ಮತ್ತೊಂದು ಸಂಗತಿಯನ್ನು ನಮ್ಮ ಗಮನಕ್ಕೆ ತರುತ್ತಾನೆ – ಅವನು ಬಂಡವಾಳವಾದದ ಸ್ಥಾನಾಂತರ ಎಂದು ಹೇಳುತ್ತಾನೆ. ಈ ಸ್ಥಾನಾಂತರವು ಸಮಾಜದ ಮೇಲೆ ಪ್ರಭಾವವನ್ನು ಬೀರಿದೆ. ಅದು ಕುಟುಂಬ, ಲೈಂಗಿಕ ತಾರತಮ್ಯ, ಜಾತಿ ಮತ್ತು ಜನಾಂಗಗಳ ಮೇಲೆ ಪ್ರಭಾವವನ್ನು ಬೀರಿದೆ. ಯಜಮಾನಿಕೆಯನ್ನು ನೋಡುವಾಗ ಇವತ್ತು ನಾವು ಹೇಗೆ ಇದು ನಮ್ಮನ್ನು ಆವರಿಸಿಕೊಂಡಿದೆ ಎಂದು ನೋಡಬೇಕು. ಟೋನಿ ನೆಗ್ರಿ ಇದನ್ನು ಗುರುತಿಸುವಾಗ ಇದರ ಜತೆಗೆ ಏನು ಸೇರಿಕೊಂಡಿದೆ ಗುರುತಿಸುತ್ತಾನೆ. ಮೊದಲನೆಯದಾಗಿ ಇದು ಒಂದು ನಾಟಕೀಯವಾದ ಪಲ್ಲಟ ಎಂದು ಗುರುತಿಸುತ್ತಾನೆ. ಇದು ಒಂದು ತಿರುವು. ಇದರಲ್ಲಿ ಒಂದು ಗುಣಾತ್ಮಕವಾದ ಬದಲಾವಣೆಗಿಂತ ಹೆಚ್ಚಾಗಿ ಪ್ರಮಾಣದಲ್ಲಿ ಅತ್ಯಂತ ಹೆಚ್ಚು ಬದಲಾವಣೆಯನ್ನು ನಾವು ಕಾಣಬಹುದು.

ಈಗ ರೂಪುಗೊಂಡಿರುವ ಮೌಲ್ಯಗಳನ್ನು ನಾವು ಕಾರ್ಮಿಕರು ಮತ್ತು ಅವರ ಶಕ್ತಿಯ ಹಿನ್ನೆಲೆಯಲ್ಲಿ ನೋಡುವುದು ಹೇಗೆ ಎನ್ನುವುದು ಅತ್ಯಂತ ಮುಖ್ಯವಾದ ಸಮಸ್ಯೆ. ಇದರಲ್ಲಿ ಸರಿಯಾದ ಮಾನದಂಡವು ಇಲ್ಲ. ಇನ್ನಷ್ಟು ಸರಳವಾಗಿ ಹೇಳಬೇಕೆಂದರೆ ನಮ್ಮ ಬುದ್ಧಿ ಮತ್ತು ಅದರ ಶಕ್ತಿಯನ್ನು, ಅದರ ಬಳಕೆಯನ್ನು ಒಟ್ಟಿಗೆ ಗ್ರಹಿಸಿಕೊಂಡು ಒಂದು ಮೌಲ್ಯವನ್ನು ನಿರ್ಧಾರ ಮಾಡುವುದು ಅತ್ಯಂತ ಕಷ್ಟ. ಇನ್ನೊಂದು ಸಂಗತಿಯು ಇದೆ: ಅದನ್ನು ನೆಗ್ರಿಯು ಗುರುತಿಸುತ್ತಾನೆ– ಇವತ್ತು ನಾವು ಅತ್ಯಂತ ಹೆಚ್ಚು ಬಳಸುತ್ತಿರುವ ಪದವೆಂದರೆ ಸ್ವಾತಂತ್ರ್ಯ. ಆದರೆ ಈ ಸ್ವಾತಂತ್ರ್ಯವೆನ್ನುವುದು ಆಧುನಿಕ ಬಂಡವಾಳವಾದವು ಇಷ್ಟ ಪಡುವ ಪದವೂ ಆಗಿದೆ ಎಂದು ನಮ್ಮ ಅರಿವಿಗೆ ಬರಬೇಕು. ಬಂಡವಾಳವಾದಕ್ಕೆ ಈವತ್ತು ಅತ್ಯಂತ ಹೆಚ್ಚು ಬೇಕಾಗಿರುವುದು ಕ್ರಿಯಾಶೀಲರಾದ ಬುದ್ಧಿಜೀವಿಗಳು. ಅವರ ಮಿದುಳನ್ನು ತೆಗೆದುಕೊಂಡಿದೆ. ಮಾಹಿತಿ ಮತ್ತು ಅದರ ಜ್ಞಾನವು ಹೇಗೆ ಅತ್ಯಂತ ಉಪಯುಕ್ತವಾಗುತ್ತದೆ ಎಂದೂ ನೋಡಬೇಕಾಗಿದೆ. ಯಾವಾಗ ಬುದ್ಧಿಜೀವಿಗಳು ಬಂಡವಾಳವಾದದ ಕಾರ್ಮಿಕರು ಆಗುತ್ತಾರೆಯೋ ಆಗ ಉಳಿದವರು ಮತ್ತು

ಅಧಃಪತನವನ್ನು ಕಾಣುತ್ತಾರೆ. ಲೇಖಕರು ಮತ್ತು ಬುದ್ಧಿಜೀವಿಗಳು ಸರಕಾರ ಮತ್ತು ಬಂಡವಾಳವಾದದ ತುತ್ತೂರಿಯಾಗುತ್ತಾರೆ. ಆದರೆ ಅದರ ಜೊತೆಗೆ ಮತ್ತೊಂದು ಪ್ರಕ್ರಿಯೆ ನಡೆಯುತ್ತಿರುವುದು ನಮ್ಮ ಗಮನಕ್ಕೆ ಬರುತ್ತದೆ. ಅವರ ಜ್ಞಾನವನ್ನು ಪ್ರಭುತ್ವವು ಬೇರೆ ಬೇರೆ ಪರಿಕರವಾಗುವಂತೆ ನೋಡಲಾಗುತ್ತದೆ. ಅದು ವ್ಯಕ್ತಿಯೇ ಆಗಿರಬೇಕು ಎಂದೇನಿಲ್ಲ. ಅದು ವ್ಯಕ್ತಿಯಾಗಲೀ ಸಂಸ್ಥೆಗಳೇ ಆಗಲಿ ಒಂದು ಉದ್ದೇಶಕ್ಕೆ ತಕ್ಕಂತೆ ಜನರು ಸೇವಕರಾಗುತ್ತಾರೆ. ಅಥವಾ ಸೇವಕರಾಗುವಂತೆ ನೋಡಲಾಗುತ್ತದೆ. ಇದರಿಂದ ಒಂದು ಸಮೂಹವೇ ಬೇರೆಯಾಗುತ್ತದೆ. ಸಮಸ್ಯೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಮಾರ್ಕ್ಸ್‌ವಾದದಲ್ಲಿ ಒಂದು ಮಾತು ಬರುತ್ತದೆ. ಕಚ್ಚಾ ಸಾಮಾಗ್ರಿಯನ್ನು ಯಾರೋ ಒಬ್ಬರು ಉತ್ಪಾದಿಸುತ್ತಾರೆ. ಮತ್ತೆ ಯಾರೋ ಒಬ್ಬರು ಅದರ ಲಾಭವನ್ನು ಪಡೆಯುತ್ತಾರೆ. ಒಬ್ಬರ ಜ್ಞಾನ ಮತ್ತೊಬ್ಬರಿಗೆ ಇಮ್ಮಡಿ ಲಾಭಕ್ಕೆ ಮಾರಾಟವಾಗುತ್ತದೆ. ಜ್ಞಾನ ಮತ್ತು ಅದರ ಸ್ವರೂಪಗಳು ಯಾರಿಗೆ ಹೇಗೆ ಮಾರಾಟವಾಗುತ್ತದೆ ಎಂದು ತಿಳಿಯುವುದೂ ಇಲ್ಲ.

ಎಷ್ಟೋ ಸರ್ತಿ ಯಾರು ನಮಗೆ ಯಜಮಾನಿಕೆಯನ್ನು ನಡೆಸುತ್ತಿದ್ದಾರೆ ಎನ್ನುವುದು ನಮ್ಮ ಅರಿವಿಗೆ ಬಾರದೇ ಹೋಗುವುದರಿಂದ ನಾವು ಯಾವುದಕ್ಕೆ ಪ್ರತಿಕ್ರಿಯೆಯನ್ನು ಕೊಡಬೇಕು ಎಂದು ತಿಳಿಯದೇ ಹೋಗಬಹುದು. ಆದ್ದರಿಂದ ಈವತ್ತು ಯಾವುದನ್ನು ನಾವು ನಿರಾಕರಣೆ ಮಾಡುತ್ತಿದ್ದೇವೆ ಮತ್ತು ಅದರ ರೂಪವು ಯಾವುದು ಎಂದು ತಿಳಿಯಬೇಕಾದ ಅಗತ್ಯವೂ ಇದೆ. ಆಧುನಿಕ ಬಂಡವಾಳವಾದವು ಹೇಗೆ ನಿರ್ದಿಷ್ಟವಾದ ಬಯಕೆಯನ್ನು ಉತ್ಪಾದಿಸುತ್ತವೆ ಮತ್ತು ಅದರ ಪರಿಣಾಮವು ಏನು ಎಂದು ಯೋಚಿಸುವುದು ಅಗತ್ಯವಿದೆ. ಒಂದು ಇಚ್ಛಿತ್ತವಾದ ಸ್ಥಿತಿಯನ್ನು ಆಧುನಿಕ ಬಂಡವಾಳವಾದವು ನಿರ್ಮಾಣ ಮಾಡುತ್ತದೆ ಎಂದು ಡೆಲ್ಯೂಷೆಯು ಹೇಳುತ್ತಾನೆ. ಆಧುನಿಕ ಡಿಜಿಟಲ್ ಬಂಡವಾಳವಾದವು ಕೆಲವು ತಂತ್ರಗಳನ್ನು ಬಳಸುತ್ತದೆ. ಅದಕ್ಕೂ ಕೆಲವು ಸಂಜ್ಞೆಗಳು ಇವೆ ಎನ್ನುವುದು ನಿಜ. ಇದರಿಂದ ಒಂದು ಸಂವಾದಿಯಾದ ಸಂಬಂಧಗಳು ರೂಪುಗೊಳ್ಳುತ್ತವೆ. ನಮಗೆ ಇರುವ ವ್ಯವಸ್ಥೆ ಮತ್ತು ಅದರ ನಿರಾಕರಣೆಯನ್ನು ಹೇಗೆ ನಿರೂಪಿಸಬೇಕು ಎನ್ನುವುದು ಮಾತ್ರವೇ ಮುಖ್ಯವಾಗಿದೆ. ತಂತ್ರಜ್ಞಾನದಲ್ಲಿ ಬದಲಾವಣೆಯು ಆದಾಗ ಅದರಲ್ಲಿ ಉತ್ಪಾದನೆಯಲ್ಲಿ ಗುಣಾತ್ಮಕವಾದ ಬದಲಾವಣೆಯು ಆಗುತ್ತದೆ. ಉತ್ಪಾದನೆಯಲ್ಲಿ ಹೆಚ್ಚಳವು ಆಗುತ್ತದೆ. ಉತ್ಪಾದನೆಯ ಮಿಗುತಾಯ ಮೌಲ್ಯದಲ್ಲಿ ವ್ಯತ್ಯಾಸವಾಗುತ್ತದೆ.

ದೊಡ್ಡದಾದ ಕೈಗಾರಿಕೆಗಳು ಹೆಚ್ಚು ಉತ್ಪಾದನೆಯನ್ನು ಮಾಡುತ್ತದೆ. ಆಗ ಮನುಷ್ಯರು ಮತ್ತು ಅವರ ದುಡಿಮೆಯಲ್ಲಿ ವ್ಯತ್ಯಾಸವಾಗುತ್ತದೆ. ಅಷ್ಟೇ ಅಲ್ಲ ಸಾಮಾಜಿಕ ಜ್ಞಾನದಲ್ಲಿ ಪಲ್ಲಟಗೊಂಡ ದೃಷ್ಟಿಕೋನವನ್ನು ನಾವು ಕಾಣುತ್ತೇವೆ. ಉತ್ಪಾದನೆ ಮತ್ತು ಅದರ ರೂಪದಲ್ಲಿ ವ್ಯತ್ಯಾಸವಾದರೆ ಅದರಲ್ಲಿ ಒಂದು ರಾಜಕಾರಣವು ನಿರ್ಮಾಣವಾಗುತ್ತದೆ. ಅದನ್ನು ನೆಗ್ರಿಯು ಒಂದು ದೈಹಿಕ ರಾಜಕಾರಣವೆಂದು ಹೇಳುತ್ತಾನೆ. ಸಾಮಾಜಿಕ

ಜೀವನದಲ್ಲಿ ಒಂದು ಮತ್ತೊಂದನ್ನು ನಿಯಂತ್ರಿಸುತ್ತದೆ. ಆಧುನಿಕ ಉತ್ಪಾದನೆಯಲ್ಲಿ ಉಂಟಾದ ಅತ್ಯಂತ ಮಹತ್ವದ ತಿರುವನ್ನು ನೋಡಿದರೆ ನಮಗೆ ಇದರ ಮರ್ಮವು ಅರ್ಥವಾಗುತ್ತದೆ. ಯಾವುದು ನಮಗೆ ಹೆಚ್ಚು ಅರ್ಥಪೂರ್ಣವಾದ ಮೌಲ್ಯವಾಗಿದೆಯೋ ಅದರ ರೂಪವನ್ನು ಕಾರ್ಮಿಕರು ಮತ್ತು ಅವರ ಶಕ್ತಿಯ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಾವು ಈವತ್ತು ಯಾವುದನ್ನು ನಿಜವಾದ ಮೌಲ್ಯವೆಂದು ನೋಡುತ್ತೇವೆಯೋ ಅದರ ಅರ್ಥವನ್ನು ನಾವು ಹಿನ್ನೆಲೆಯ ಮೂಲಕವೇ ಗಮನಿಸುವುದು ಅತ್ಯಂತ ಅಗತ್ಯ. ಉತ್ಪಾದನೆಯು ಯಾವುದೇ ಆಗಿರಲಿ ಅದು ನಿರ್ದಿಷ್ಟವಾದ ಅರ್ಥವನ್ನು ಹೊಂದಿರುತ್ತದೆ. ಆದರೆ ನಾವು ಅನೇಕ ಬಾರಿ ಅದನ್ನು ಮರೆಯುತ್ತೇವೆ. ರಾಜಕೀಯ ಅರ್ಥಶಾಸ್ತ್ರವು ನಮಗೆ ಅದನ್ನು ಹೇಳುತ್ತದೆ. ಯಾವುದು ಸಮೂಹವನ್ನು ಹೇಳುತ್ತದೆ ಮತ್ತು ಅದರಲ್ಲಿ ಸಮೂಹವು ಯಾವುದನ್ನು ಉತ್ಪಾದನೆ ಮಾಡಿದೆ ಎನ್ನುವುದು ಮುಖ್ಯ. ಆದರೆ ಈವತ್ತು ನಾವು ಕೆಲಸ ಎನ್ನುವುದು ಹೇಗೆ ಇದೆ ಮತ್ತು ಅದರ ಸ್ವರೂಪವನ್ನು ಹೇಗೆ ಮೌಲ್ಯಮಾಪನ ಮಾಡುತ್ತೇವೆ ಎನ್ನುವುದೂ ಅತ್ಯಂತ ಮುಖ್ಯ. ದೈಹಿಕ ರಾಜಕಾರಣ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅದರ ಸಾಧ್ಯತೆಯನ್ನು ಸಾಮಾಜಿಕ ಆಯಾಮದ ಮೂಲಕ ಗುರುತಿಸಬೇಕು ಎಂದು ನೆಗ್ರಿಯು ಹೇಳುತ್ತಾನೆ. ಆದರೆ ಅದರ ಜೊತೆಗೆ ಅವನು ಸಾಮಾನ್ಯವಾದ ಒಂದು ಬುದ್ಧಿಶಕ್ತಿಯು ಹೇಗೆ ಸಮಾಜದಲ್ಲಿ ಇರುತ್ತದೆ ಎಂದು ಹೇಳುತ್ತಾನೆ. ಅದನ್ನು ಅವನು ಜನರಲ್ ಇಂಟಲೆಕ್ಚುವಲ್ಸ್ ಎಂದು ಹೇಳುತ್ತಾನೆ. ಯಾವುದನ್ನು ನಾವು ಹೀಗೆ ನೋಡಬೇಕು ಎನ್ನುವುದಕ್ಕೆ ಅವನಲ್ಲಿ ಉತ್ತರವು ಇದೆ. ಸಾಮಾನ್ಯವಾದ ಬುದ್ಧಿಶಕ್ತಿ ಮತ್ತು ಆಡಳಿತಾತ್ಮಕವಾದ ಶಕ್ತಿಯು ಬೇರೆ ಇರುತ್ತದೆ. ಉತ್ಪಾದನೆ ಮತ್ತು ಅದರ ಕ್ರಮವನ್ನು ನೋಡಿದರೆ ನಮಗೆ ಇದು ತಿಳಿಯುತ್ತದೆ. ಆಢಳಿತಗಾರರು ಉತ್ಪಾದನೆಯನ್ನು ನೇರವಾಗಿ ಮಾಡುವುದಿಲ್ಲ. ಅವರು ಉತ್ಪಾದನೆಯ ಮೇಲುಸ್ತುವಾರಿಯನ್ನು ಮಾತ್ರವೇ ನೋಡಿಕೊಳ್ಳುತ್ತಾರೆ. ಆದ್ದರಿಂದ ಈವತ್ತು ಬಂಡವಾಳವಾದ ಎನ್ನುವುದು ನಮಗೆ ಒಂದು ಶಕ್ತಿಯು ಆಗಿದೆ. ಅದು ಅಧಿಕಾರವೂ ಹೌದು. ಆದರೆ ಮತ್ತೆ ಮತ್ತೆ ನಾವು ನೆಗ್ರಿಯ ಈ ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಸೂಕ್ತ.

1. ಜಿಜೆಕ್ – ಪ್ಯಾರಲಕ್ಸ್‌ವ್ಯೂ.

12. ಫ್ರಾಯ್ಡ್‌ನಲ್ಲಿ ಸುಪ್ತಪ್ರಜ್ಞೆಯ ಪ್ರಶ್ನೆ

ಚಾರಿತ್ರಿಕವಾಗಿ ಈವತ್ತು ಯಾವುದು ನಮ್ಮನ್ನು ಹೆಚ್ಚು ಒಗ್ಗೂಡಿಸುತ್ತದೆ ಎನ್ನುವುದು ಅನೇಕ ಸಂವೇದನಾಶೀಲರ ಪ್ರಶ್ನೆ. ನಮ್ಮ ಸಾಮಾಜಿಕವಾದ ಅವಶ್ಯಕತೆಯು ಯಾವುದು ಎನ್ನುವುದು ಅನೇಕರನ್ನು ಕಾಡುತ್ತದೆ. ಅತ್ಯಂತ ಹೆಚ್ಚು ಮಾನವೀಯವಾದ ಕಳಕಳಿಯಿಂದ ನಾವು ಯಾವುದೇ ತತ್ವಕ್ಕೆ ಬದ್ಧರಾಗಿಲ್ಲ ಎಂದು ಹೇಳುವವರು ಕೂಡಾ ಈವತ್ತು ಇದೇ ಪ್ರಶ್ನೆಯನ್ನು ಕೇಳುತ್ತಾರೆ. ಅದೇ ರೀತಿಯಲ್ಲಿ ಸಮಾಜವಾದಿಗಳು ಕೂಡಾ ಇದನ್ನು ಕೇಳುತ್ತಿದ್ದಾರೆ. ಹಣ ಮತ್ತು ಅದರ ವಿನಿಮಯವು ಹೇಗೆಲ್ಲಾ ಚಲಾವಣೆಯನ್ನು ಹೊಂದುತ್ತದೆ ಎನ್ನುವುದು ಅಷ್ಟು ಬೇಗನೆ ನಮ್ಮ ಅರಿವಿಗೆ ಬಾರದಿರುವುದಿಂದ ಈ ಪ್ರಶ್ನೆಯು ಹೆಚ್ಚು ಔಚಿತ್ಯ ಪೂರ್ಣವಾಗಿದೆ ಎಂದು ಭಾವಿಸಿಕೊಳ್ಳಲಾಗಿದೆ. ಒಮ್ಮೆ ಇದ್ದಕ್ಕಿದ್ದಂತೆ ಅಮೇರಿಕಾದಿಂದ ಅಸಂಖ್ಯಾತ ಇಂಜಿನಿಯರ್‌ಗಳು ತಮ್ಮ ಕೆಲಸವನ್ನು ಕಳೆದುಕೊಂಡು ಭಾರತಕ್ಕೆ ಬರುವಂತಾಯಿತು. ಇದು ಒಂದು ದೃಷ್ಟಿಯಿಂದ ಯಾರು ಕೆಲಸಕ್ಕೆ ಇದ್ದಾರೋ ಅವರ ಮೇಲೆ ನಡೆದ ಹಿಂಸೆಯೂ ಆಗಿದೆ. ಹಣಕಾಸಿನ ವಿಚಾರವೇ ಇರಬಹುದಾದರೂ ಇದು ಮನುಷ್ಯನ ಘನತೆಯ ಮೇಲೆ ನಡೆದ ಬಹಳ ದೊಡ್ಡ ಆಘಾತವೂ ಆಗಿದೆ. ಅಮೂರ್ತವಾದ ಹಿಂಸೆಯು ಇದೆ. ಮತ್ತೊಂದು ಕಡೆಯಿಂದ ಕೆಲವು ವರ್ಷಗಳ ಹಿಂದೆ ಸುನಾಮಿ ಅಲೆಯು ಬಂದು ಬಹಳ ಜನರ ಜೀವವನ್ನು ತೆಗೆಯಿತು. ವಾಸ್ತವವಾಗಿ ಅದು ಅನೀರಿಕ್ಷಿತ. ಆದರೆ ಅದರ ಕಾರಣವು ನಮಗೆ ಗೊತ್ತಿಲ್ಲ. ಹೆಗೆಲ್ ಹೇಳುವ ಮಾತನ್ನು ಹೇಳಬೇಕೆಂದರೆ ಇದು ಮುಕ್ತಾಯವಿಲ್ಲದ ಅನೇಕ ತೀರ್ಮಾನಗಳು. ಇದನ್ನು ನೋಡಿದರೆ ನಾವು ಮತ್ತೊಂದು ಅಂಶವನ್ನು ಇಲ್ಲಿ ಹೇಳಬೇಕಾದದ್ದು ಸೂಕ್ತವಾಗಿದೆ. ಒಂದು ಅಮೂರ್ತವಾದ ಹಿಂಸೆಗಳು ಹೇಗೆ ಕೆಲಸವನ್ನು ಮಾಡುತ್ತವೆ ಎಂದು ಇದರ ಮೂಲಕ ತಿಳಿಯುತ್ತದೆ.

ಅಜ್ಞಾತವಾದದ್ದು ಜ್ಞಾತವೂ ಆಗಿದೆ ಎಂದು ಫ್ರಾಯ್ಡ್ ಹೇಳುತ್ತಾನೆ. ಅದೇ ರೀತಿಯಲ್ಲಿ ಜ್ಞಾತ ಅಜ್ಞಾತದ ನಡುವೆ ಒಂದು ಸಂಬಂಧವೂ ಇದೆ. ಕೆಲವು ಅಜ್ಞಾತವಾದದ್ದು ಸಂಭವಿಸಿದಾಗ ನಾವು ಅದಕ್ಕೆ ಹೇಗೆ ಪ್ರತಿಕ್ರಿಯೆಯನ್ನು

ಕೊಡಬೇಕು ಎಂದು ಹೊಳೆಯುವುದೂ ಇಲ್ಲ. ಆದರೆ ಬಾಹ್ಯ ಮತ್ತು ಅಂತರಂಗದ ನಡುವೆ ಸಂಬಂಧವು ಇದೆ. ಬಾಹ್ಯವಾದದ್ದು ನಮಗೆ ಅನಿರೀಕ್ಷಿತವಾದರೆ ಅದಕ್ಕೆ ನಾವು ಆತಂಕವೆಂದು ಮಾತ್ರವೇ ಹೇಳುತ್ತೇವೆ. ಆದರೆ ವಿಷಯವು ಅಷ್ಟು ಸುಲಭವಲ್ಲ. ಇದನ್ನು ಫ್ರಾಯ್ಡ್ ಮತ್ತು ಲಕಾನ್ ಇಬ್ಬರೂ ಮನೋವಾಸ್ತವ ಎನ್ನುವ ಅರ್ಥದಲ್ಲಿ ಹೇಳುತ್ತಾರೆ. ಅದರಲ್ಲಿ ಅನೇಕವು ನಮಗೆ ಬೇರೆ ಬೇರೆ ಭಾವನೆಗಳಿಗೆ ಕಾರಣವೂ ಆಗುತ್ತವೆ. ಅತ್ಯಾಚಾರ ಮಾಡಿದನು ಅನಂತರ ಪಾಪ ಪ್ರಜ್ಞೆಯಿಂದ ನರಳಬಹುದು. ಇನ್ನೊಬ್ಬನನ್ನು ಕೊಂದವನು ಸಾವಿನ ಭಯದಿಂದ ನರಳಬಹುದು. ಸಾವಿನ ಭಯಕ್ಕೆ ಅದು ಕಾರಣವು ಆಗಬೇಕೆಂದೇನೂ ಇಲ್ಲ. ಆದರೆ ಅದು ಕೂಡಾ ಕಾರಣವಾಗಬಹುದು.

ಬಾಂಬು ಸ್ಫೋಟ, ಯುದ್ಧ, ಬೀದಿಯಲ್ಲಿ ಕೊಲೆ ಮುಂತಾದವುಗಳು ನಮ್ಮನ್ನು ಹದಗೆಡಿಸಬಹುದು. ನಾವು ಅದಕ್ಕಾಗಿಯೂ ಯೋಚಿಸಬಹುದು. ಕೆಲವು ಖಾಯಿಲೆಗಳು ಬರುತ್ತವೆ. ಅವು ಮನಸ್ಸಿಗೆ ಸಂಬಂಧಪಟ್ಟವುಗಳು. ಕೆಲವು ಮಾನಸಿಕವಾದ ಖಾಯಿಲೆಗೆ ಬಾಹ್ಯವು ಕಾರಣವಾದರೆ ಮತ್ತೆ ಕೆಲವಕ್ಕೆ ಬಾಹ್ಯವು ಕಾರಣವಾಗಬೇಕೆಂದೇನೂ ಇಲ್ಲ. ಅದು ಹಾರ್ಮೋನಿನ ಕಾರಣದಿಂದ ಆಗುತ್ತದೆ. ಮನಸ್ಸಿನಲ್ಲಿ ಉಂಟಾಗುವ ಅನೇಕ ತಳಮಳಗಳಿಗೆ ಒಂದು ನಿರ್ದಿಷ್ಟವಾದ ಕಾರಣವು ಇದೆ ಎಂದು ಹೇಳಲು ಬರುವುದೂ ಇಲ್ಲ. ಮೆದುಳಿನ ರಕ್ತಸ್ರಾವವು ನಮಗೆ ಸಾವನ್ನು ತರಬಹುದು. ಮರೆವಿನ ಖಾಯಿಲೆಯು ಬೇರೆ ಬೇರೆ ಕಾರಣದಿಂದ ಉಂಟಾಗಬಹುದು. ಅದೇ ರೀತಿಯಲ್ಲಿ ಕೆಲವು ಸಂಗತಿಗಳು ನಮ್ಮ ಜೀವನದಲ್ಲಿ ನಡೆದರೆ ಅದು ನಮಗೆ ಖಿನ್ನತೆಯನ್ನು ಒಡ್ಡಬಹುದು. ಅತ್ಯಂತ ಸಂವೇದನಾಶೀಲನಾದ ವ್ಯಕ್ತಿಯು ಇದರಿಂದ ಉದ್ವೇಗಕ್ಕೆ ಒಳಗಾಗಬಹುದು. ಆದರೆ ಇದನ್ನು ಹೀಗೆಯೇ ಇದೆ ಎಂದು ಹೇಳಲು ಆಗುವುದಿಲ್ಲ. ಯಾರು ಹಿಂಸೆಗೆ ಬಲಿಯಾಗುತ್ತಾರೆಯೋ ಅವರು ಬೇರೆ ಬೇರೆ ಬಗೆಯಿಂದ ಭಯವನ್ನು ಅನುಭವಿಸುವುದು ಅತ್ಯಂತ ಸಹಜ. ನಾವು ಈಗ ಹೇಳುತ್ತಿರುವ ಧಾರ್ಮಿಕೋತ್ತರ ಸಂದರ್ಭದಲ್ಲಿ ನಮಗೆ ಅನೇಕ ವಿಷಯಗಳು ಅರ್ಥಹೀನವಾಗಿ ಕಾಣಿಸಬಹುದು. ಆದರೆ ಈವತ್ತು ನಾವು ಬೇರೆ ಬೇರೆ ಹಿಂಸೆಯಿಂದ ನರಳುತ್ತಿರುವುದು ಮಾತ್ರ ಸತ್ಯವಾಗಿದೆ. ಕೆಲವರು ಧಾರ್ಮಿಕವಾದ ಭ್ರಮೆಯಿಂದ ನರಳುತ್ತಾರೆ. ಆದರೆ ನಮಗೆ ಒಂದು ವಿಚಾರವು ಗೊತ್ತಿರಬೇಕು: ಈವತ್ತು ವಿಕೃತನಾದ ವ್ಯಕ್ತಿಯು ರೇಪ್ ಮಾಡುತ್ತಾನೆ. ಅತ್ಯಾಚಾರ ಮಾಡುವವನ ಮನೋಸ್ಥಿತಿಯು ಯಾವ ಬಗೆಯದು ಎಂದು ನೋಡಬೇಕಾಗುತ್ತದೆ. ಅದಕ್ಕೂ ಒಂದು ಚರಿತ್ರೆಯು ಇರುತ್ತದೆ. ಅದು ಒಂದು ಪರಿಣಾಮವನ್ನು ಒಂದು ಸಮಾಜದ ಮೇಲೆ ಉಂಟುಮಾಡುತ್ತದೆ. ಸೆಕ್ಸ್ ಮತ್ತು ಅದರ ವೈಭವೀಕರಣವೂ ಇದಕ್ಕೆ ಒಂದು ಕಾರಣವಾಗಿರುತ್ತದೆ. ಮನಸ್ಸು

ಇದರಲ್ಲಿ ಒಂದು ಅಂಶವಾಗಿದೆ. ಲೈಂಗಿಕ ಕಲ್ಪನೆಗಳು ವ್ಯಕ್ತಿಯನ್ನು ಅತ್ಯಾಚಾರ ಮಾಡಲು ಪ್ರೇರೇಪಣೆಯನ್ನು ನೀಡುತ್ತದೆ. ಕೆಲವು ಘಟನೆಗಳು ನಮಗೆ ಹಿಂಸೆಯನ್ನು ಅನುಭವಿಸುವಂತೆ ಮಾಡುತ್ತವೆ. ವಾಸ್ತವವಾಗಿ ಕೆಲವು ನಮಗೆ ಶಾಕ್ ಕೊಡುತ್ತವೆ. ಅದರಿಂದ ಚೇತರಿಸಲು ನಾವು ಯತ್ನವನ್ನು ಮಾಡಬೇಕಾಗುತ್ತದೆ. ಆದರೆ ಕೆಲವು ಭಯ ಮತ್ತು ಆತಂಕಗಳಿಗೆ ಕಾರಣವಿರಲೇಬೇಕೆಂದೇನೂ ಇಲ್ಲ. ಆದರೂ ನಾವು ಭಯಗೊಳ್ಳುತ್ತೇವೆ. ಹೊರಗನ್ನು ನೋಡಿ ನಾವು ಆತಂಕಕ್ಕೆ ಗುರಿಯಾಗಲು ನಮ್ಮದೇ ಆದ ಕಾರಣವೂ ಇರುತ್ತದೆ. ವಾಸ್ತವವಾಗಿ ಈ ಕಾರಣಗಳನ್ನು ನಾವು ಹೀಗೆಯೇ ಇದೆ ಎಂದು ವಿವರಿಸುವುದು ಅಸಾಧ್ಯ. ಯಾಕೆಂದರೆ ಇದು ನಮ್ಮ ಮನಸ್ಸಿನ ಸಮಸ್ಯೆ. ನಾವು ಯಾವುದನ್ನು ನಮ್ಮ ಮನಸ್ಸಿನಲ್ಲಿ ಹೇಳುತ್ತೇವೆ ಎನ್ನುವುದನ್ನು ಹೇಳುವುದೂ ಅಸಾಧ್ಯ. ಯಾವಾಗ ನಮ್ಮ ಮೆದುಳಿಗೆ ಗಾಯವು ಆಗುತ್ತದೆಯೋ ಆಗ ನಾವು ನಿಜವಾಗಿಯೂ ಸರಿಯಾದ್ದದನ್ನು ಗುರುತಿಸಲಾರೆವು.

ಫ್ರಾಯ್ಡ್ ಬಾಹ್ಯ ಮತ್ತು ಅದರ ಹಿಂಸೆಯನ್ನು ಕುರಿತು ಹೇಳುತ್ತಾನೆ. ಹೊರಗೆ ಏನು ಹಿಂಸೆಯು ಆಗುತ್ತದೆಯೋ ಅದನ್ನು ನಾವು ಮನಸ್ಸಿನಲ್ಲಿ ದಾಖಲಿಸುತ್ತೇವೆ. ನಮ್ಮ ಮನೋಸ್ಥಿತಿಯ ಮೇಲೆ ಅದು ಹೆಚ್ಚು ಪ್ರಭಾವವನ್ನು ಬೀರುತ್ತದೆ. ಕೆಲವು ವಿಷಯಗಳಿಗೆ ಅದರದೇ ಆದ ವಿಶಿಷ್ಟತೆಯು ಇರುತ್ತದೆ. ಮನಸ್ಸಿಗೆ ಆದ ಗಾಯವನ್ನು ನಾವು ಬೇರೆ ಬೇರೆ ಥರ ನೋಡಬಹುದು. ಅದು ಸಾಮಾಜಿಕ, ಸಹಜ, ದೈಹಿಕ ಮತ್ತು ಸಾಂಕೇತಿಕವೂ ಆಗಿರುತ್ತದೆ. ಕೆಲವು ಸಾಂಕೇತಿಕವಾದ ಅನನ್ಯತೆಯನ್ನು ಹೊಂದಿರುತ್ತದೆ. ವಸ್ತುವು ಅದರ ಪಾಡಿಗೆ ಅದು ಇರುವುದಿಲ್ಲ. ಅದು ಆಗುತ್ತದೆ. ಆದ್ದರಿಂದ ಯಾವುದು ಆಗುತ್ತದೆಯೋ ಅದನ್ನು ನಾವು ಸ್ವೀಕಾರ ಮಾಡುತ್ತೇವೆ. ಯಾವಾಗ ನಮ್ಮ ಅಹಮಿಕೆಗೆ ಪೆಟ್ಟು ಬೀಳುತ್ತದೆಯೋ ಆಗ ನಾವು ತಿರುಗಿ ಬೀಳುತ್ತೇವೆ ಮತ್ತು ಹೆಚ್ಚು ಅಗ್ರೆಸ್ಸಿವ್ ಆಗುತ್ತೇವೆ. ಅದು ಅಪಾಯಕಾರಿಯೂ ಆಗಬಹುದು. ಯಾರು ರಾಜಕೀಯವಾಗಿ ಬಲಿಪಶುಗಳು ಆಗುತ್ತಾರೋ ಅವರು ತಮ್ಮ ಅಸ್ತಿತ್ವಕ್ಕೆ ಹೋರಾಟ ಮಾಡುವುದೂ ಅಷ್ಟೇ ನಿಜ. ರಾಜಕೀಯ ಹಿಂಸೆ ಮತ್ತು ಅದರ ಸ್ವರೂಪವನ್ನು ನೋಡಿದರೆ ನಮಗೆ ಇದು ಅರ್ಥವಾಗುತ್ತದೆ. ರಾಜಕೀಯವು ಹಿಂಸೆಗೆ ಪ್ರಚೋದನೆಯನ್ನು ನೀಡುವುದು ಅಷ್ಟೇ ನಿಜ. ಹಿಂಸಾತ್ಮಕ ಶತ್ರುಗಳ ನಿರ್ಮಾಣವನ್ನು ರಾಜಕಾರಣ ಮಾಡುತ್ತಿರುವುದು ಸತ್ಯ. ಹಿಂಸೆಗೆ ಈವತ್ತು ಈ ದೃಷ್ಟಿಯಿಂದ ಹೊಸ ಮುಖಗಳು ಬಂದಿವೆ. ಜಾಗತಿಕ ಅರ್ಥಶಾಸ್ತ್ರವು ಒಂದು ಅರ್ಥದಲ್ಲಿ ಇದಕ್ಕೆ ಕೊಡುಗೆಯನ್ನು ಕೊಟ್ಟಿದೆ. ಒಂದು ಸೈಕಿಕ್ ಪಥಾಲಜಿಯು ಉಂಟಾಗಿದೆ ಎಂದು ಜಿಜೆಕ್ ಹೇಳುತ್ತಾನೆ.

ಆಧುನಿಕ ಸಾಮಾಜಿಕ ಸಂಘರ್ಷವನ್ನು ಉಂಟುಮಾಡುವವರ ಮನೋಸ್ಥಿತಿಯು ಈವತ್ತು ಒಂದು ಮಾದರಿಯಲ್ಲಿ ನಿರ್ಮಾಣವಾಗುತ್ತದೆ. ಕೋಮುವಾದ ಮತ್ತು

ಅದರ ಹಿಂಸೆಯನ್ನು ಯಾರು ಮಾಡುತ್ತಾರೆಯೋ ಅವರ ಮನೋಸ್ಥಿತಿಯು ಸತ್ಯವನ್ನು ಒಪ್ಪಿಕೊಳ್ಳುವುದೂ ಇಲ್ಲ. ಒಂದು ದ್ವಂದ್ವವು ಇರುತ್ತದೆ. ಅವರ ಚರಿತ್ರೆಯು ಬೇರೆಯಾಗುತ್ತದೆ. ಸತ್ಯ ಮತ್ತು ಅಂಗೀಕಾರವನ್ನು ಅವರು ಮಾಡಲಾರರು. ಸಹಜವಾದ ನಾಶ ಮತ್ತು ಉದ್ದೇಶ ಪೂರ್ವಕ ನಾಶ ಮಾಡುವುದು ಎರಡೂ ಬೇರೆ ಬೇರೆ ಸಂಗತಿಗಳು. ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಾಶವನ್ನು ಮಾಡುವವರ ಮನೋಭಾವವು ಬೇರೆ ಥರ ಇರುತ್ತದೆ.

ಇಡೀ ಜಗತ್ತು ಮತ್ತು ಅದರ ಹೊಂದಾಣಿಕೆಯ ಬದಲು ಈವತ್ತು ನಾಶವನ್ನು ಬೇರೆ ಥರ ರೂಪಿಸಲಾಗುತ್ತದೆ. ಅನೇಕ ದೇಶಗಳಲ್ಲಿ ಅಣ್ವಸ್ತ್ರವೇ ಒಂದು ಪ್ರಧಾನವಾದ ಆಯುಧವೂ ಆಗಿದೆ. ಅನೇಕ ರಾಜಕಾರಣಿಗಳು ಈವತ್ತು ಒಂದು ಮುಖವಾಡದಲ್ಲಿ ವಾಸ ಮಾಡುತ್ತಿದ್ದಾರೆ. ಏನಿದೆಯೋ ಅದನ್ನು ನಾವು ಈವತ್ತು ಅರ್ಥಮಾಡಿಕೊಳ್ಳುವುದು ಸಾಧ್ಯ. ಒಂದು ರಿವಾಲ್ವರ್ ಈವತ್ತು ಮಾತಾಡುತ್ತಿದೆ. ಕೊಲ್ಲುವುದು ಅಂದರೆ ಈವತ್ತು ಅತ್ಯಂತ ಸುಲಭವಾದ ಒಂದು ಪ್ರಕ್ರಿಯೆಯು ಆಗಿದ್ದು ಯಾರಲ್ಲಿ ಪಿಸ್ತೂಲು ಇದೆಯೋ ಅವರು ನಾಶದ ಹಾದಿಯಲ್ಲಿ ಇದ್ದಾರೆ ಎಂದು ಅರ್ಥವಾಗುತ್ತದೆ. ಹಾಗೆ ನೋಡಿದರೆ ಯಾರಿಗೆ ಈವತ್ತು ವಿವೇಕವು ಇಲ್ಲವೋ ಅವರ ಕೈಯಲ್ಲಿ ಈ ಆಯುಧ ಇದ್ದರೆ ಕಷ್ಟವೂ ಆಗುತ್ತದೆ. ನಮಗೆ ಯಾವುದು ಈವತ್ತು ಹೆಚ್ಚು ಸುಖವನ್ನು ಕೊಡುತ್ತದೆ ಅದನ್ನು ಮಾತ್ರವೇ ನಾವು ಸ್ವೀಕರಿಸಲು ತಯಾರಾಗುತ್ತೇವೆ. ಒಂದು ಮನೋಭಾವವವು ಬೆಳೆಯುತ್ತದೆ. ಅದನ್ನು ನಾವು ಸ್ಯಾಡಿಸ್ಟಿಕ್ ಎಂದು ಹೇಳಬಹುದು ಎಂದು ಕಾಣುತ್ತದೆ. ನಮಗೆ ಸುಖವು ಸಿಕ್ಕಿಲ್ಲವಾದರೆ ನಾವು ಇನ್ನೊಬ್ಬರಿಗೂ ಅದು ಬೇಡವೆಂದು ಹೇಳುತ್ತೇವೆ.

ಜಾಗತೀಕರಣವು ನಮಗೆ ಕೊಟ್ಟ ಉಡುಗೊರೆಯಲ್ಲಿ ಇದೂ ಒಂದು. ಇದು ಡಯಲಿಕ್ಟಲ್ ಆದ ಸ್ವರೂಪವೂ ಹೌದು.

ಒಂದು ಅಧ್ಯಯನದ ಪ್ರಕಾರ ಈವತ್ತು ನಮಗೆ ವಸ್ತುನಿಷ್ಟವಾದ ಮಾನದಂಡವೇ ಇಲ್ಲವಾಗಿದೆ. ನಾವು ಭಾವುಕವಾದ ನಿರ್ಧಾರವನ್ನು ಹೆಚ್ಚು ಮಾಡುತ್ತಿದ್ದೇವೆ. ಎಲ್ಲರಿಗೂ ಗೊತ್ತಿರುವಂತೆ ಹುಚ್ಚು ಬೇರೆ ಭ್ರಾಂತಿಯು ಬೇರೆ. ಆದರೆ ನಾವು ಈವತ್ತು ಒಂದು ಭ್ರಾಂತಿಯನ್ನು ಹೇಗೆ ಅವಲಂಬಿಸಿದ್ದೇವೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಸಂಗೀತದಿಂದ ಕೊಡಬಹುದು. ಅದರಲ್ಲಿ ಸಣ್ಣ ಭ್ರಾಂತಿಯು ಉಂಟಾಗಬಹುದು. ತನ್ನದಾದ ಕಾರಣದ ಸ್ವರೂಪದಿಂದ ಒಬ್ಬ ವ್ಯಕ್ತಿಯು ತನ್ನದೇ ಆದ ಭ್ರಾಂತಿಯಲ್ಲಿ ಮುಳುಗಬಹುದು. ಭ್ರಾಂತಿಯು ಹೇಗಾಗುತ್ತವೆ ಮತ್ತು ಅದರ ಕಾರಣಗಳು ಏನು ಎನ್ನುವುದಕ್ಕೆ ಒಂದು ಉದಾಹರಣೆಯು ಇದೆ: ಇದು ವಾಸ್ತವವಾಗಿ ನಡೆದ್ದದ್ದು. ಒಬ್ಬ ವ್ಯಕ್ತಿಗೆ ಒಂದು ನಿರ್ದಿಷ್ಟವಾದ ಹಾಡು ಕೇಳಿದರೆ ಸಿಟ್ಟು ಬರುತಿತ್ತು. ಅವನಿಗೆ

ಕಾರಣವನ್ನು ಕೇಳಿದರೆ ಅವನು ಒಂದು ಸಂದರ್ಭದಲ್ಲಿ ಆ ಮಾದರಿಯ ಹಾಡನ್ನು ಕೇಳಿದ್ದಕ್ಕೂ ಅವನಿಗೆ ಆದ ಹಿಂಸೆಗೂ ಅವನು ಸಂಬಂಧವನ್ನು ಕಲ್ಪಿಸಿಕೊಂಡಿದ್ದ. ಇನ್ನೊಂದು ಉದಾಹರಣೆ: ಒಬ್ಬ ವ್ಯಕ್ತಿಗೆ ಕ್ರಿಸ್ಮಸ್ ಹಾಡು ಕೇಳಿದರೆ ಆಗುತ್ತಿರಲಿಲ್ಲ. ಆ ಹಾಡನ್ನು ಜ್ಯೂಗಳು ಬಳಸುತ್ತಿದ್ದರು ಎಂದು ಅವನು ಭಾವಿಸಿಕೊಂಡಿದ್ದ. ಅದು ಅವನ ಭ್ರಾಂತಿ. ಯಾವುದು ನಮಗೆ ಕೆಲವು ಭ್ರಾಂತಿಯನ್ನು ಉಂಟುಮಾಡುತ್ತವೆ ಎನ್ನುವುದು ಮಾತ್ರವೇ ಇಲ್ಲಿ ಮುಖ್ಯವಾಗುತ್ತದೆ. ಕೆಲವು ಹಾಡುಗಳು ಮಾತ್ರವೇ ನಮಗೆ ಹೆಚ್ಚು ಭ್ರಾಂತಿಯನ್ನು ಉಂಟುಮಡುತ್ತವೆ ಮತ್ತು ಮತ್ತೆ ಕೆಲವು ಯಾಕೆ ಭ್ರಾಂತಿಯನ್ನು ಉಂಟುಮಾಡುವುದಿಲ್ಲವೆಂದು ನೋಡಬೇಕು. ಕೆಲವು ಹಾಡುಗಳು ನಮ್ಮನ್ನು ಬಿಡುಗಡೆ ಮಾಡುತ್ತವೆ. ಮತ್ತೆ ಕೆಲವು ನಮ್ಮನ್ನು ಮತ್ತಷ್ಟು ಕುಗ್ಗಿಸುತ್ತವೆ. ಇದರಲ್ಲಿ ಮೊದಲ ಕಾರಣವೆಂದರೆ ಹೊಸದಾದ ನಮ್ಮ ವಿಷಯನಿಷ್ಠವಾದ ಧೋರಣೆಗಳು. ಎರಡನೆಯಾಗಿ ಈವತ್ತು ನಮ್ಮ ವ್ಯಕ್ತಿತ್ವಗಳು ಬದಲಾದ್ದರಿಂದ ನಾವು ಉಪಯೋಗಿಸುವ ಹಾಡುಗಳು ನಮ್ಮ ಮನೋಭಾವಕ್ಕೆ ತಕ್ಕಂತೆ ಇರುತ್ತವೆ. ಜೀವನದ ರೂಪಕ್ಕೂ ನಾವು ಬಯಸುವ ಸಂಗೀತಕ್ಕೂ ಒಂದು ಸಂಬಂಧವಿದೆ. ಸಂಗೀತದ ರೂಪವು ಹೇಗೆ ಬದಲಾಗಿದೆಯೋ ಅದೇ ರೀತಿಯಲ್ಲಿ ನಮ್ಮ ಜೀವನದ ಶೈಲಿಯೂ ಬದಲಾಗಿದೆ.

ಸಾವಿನ ಮುಂದೂಡುವಿಕೆಯನ್ನು ಇಲ್ಲಿ ಯೋಚಿಸಬೇಕು. ಇದನ್ನು ಹೇಳಿದವನು ಜಿಜೆಕ್. ಅವನು ಒಂದು ಉದಾಹರಣೆಯನ್ನು ಕೊಡುತ್ತಾನೆ. ಅದು ಒಂದು ಸಿನಿಮಾದ್ದು. ಅದರಲ್ಲಿ ಒಬ್ಬಳು ಯುವತಿಯು ತಾನು ಆತ್ಮಹತ್ಯೆಯನ್ನು ಮಾಡಬೇಕೆಂದು ಯೋಚಿಸುತ್ತಾಳೆ. ಅದಕ್ಕಾಗಿ ಎಲ್ಲಾ ಸಿದ್ಧತೆಯನ್ನು ಮಾಡುತ್ತಾಳೆ. ಆದರೆ ಅದೇ ಹೊತ್ತಿಗೆ ಸರಿಯಾಗಿ ಒಂದು ಭಯಾನಕವಾದ ಪ್ರಾಣಿಯು ಬಂದು ಅವಳನ್ನು ಸಾಯಿಸಲು ಯತ್ನವನ್ನು ಮಾಡುತ್ತದೆ. ಯುವತಿಯು ಅದನ್ನು ತಪ್ಪಿಸಿಕೊಳ್ಳಲು ಯತ್ನವನ್ನು ಮಾಡುತ್ತಾಳೆ. ಸಾವನ್ನು ಇಚ್ಛಿಸಿದವಳು ಸಾವನ್ನು ಗೆಲ್ಲುವುದಕ್ಕೆ ಸೆಣಸಾಡುತ್ತಾಳೆ. ಇದು ಕತೆ. ಆದರೆ ಇದರಲ್ಲಿ ಒಂದು ಸತ್ಯವೂ ಇದೆ. ನಾವು ಸಾವಿಗೆ ಭಯವನ್ನು ಪಡುತ್ತೇವೆ. ಸಾವಿನ ಭಯ ಮತ್ತು ನಿಜವಾದ ಸಾವು ಎನ್ನುವುದು ಬೇರೆ ಎಂದು ಡೆಲ್ಯೂಷೆ ಹೇಳುತ್ತಾನೆ.

ಫ್ರಾಯ್ಡ್‌ನಲ್ಲಿ ಒಂದು ಕಲ್ಪನೆಯು ಬರುತ್ತದೆ. ಅದನ್ನು ಅವನು ಸಾವಿನ ಕಡೆಗೆ ಹೋಗುವುದು ಎಂದು ಕರೆಯುತ್ತಾನೆ. (ಡೆತ್ ಡ್ರೈವ್) ಅಂತರಾಳದಲ್ಲಿ ನಮಗೆ ಇರುವ ಒಂದು ಭಾವನೆಯನ್ನು ಅದು ಹೇಳುತ್ತದೆ. ಸಾವು ಮತ್ತು ಅದರ ಇಚ್ಛೆ. ಆದರೆ ಸಾವನ್ನು ನಾವು ನೋಡುವುದು ಮತ್ತು ಅಂಗೀಕರಿಸುವುದು ಬೇರೆ ವಿಧಾನದಲ್ಲಿ. ನಿಜವಾಗಿಯೂ ಅಪಘಾತದ ಮೂಲಕ ಸಾವನ್ನು ನಾವು ಇಷ್ಟಪಡುವುದಿಲ್ಲ.

ಭೀಕರವಾದ ಅಪಘಾತವು ನಮ್ಮನ್ನು ಕೊಲ್ಲಬಹುದು ಎನ್ನುವುದು ಒಂದು ಭಯ. ಮತ್ತು ಸಾವು ಪರಿವರ್ತನೆಯನ್ನು ತರುತ್ತದೆ ಎನ್ನುವುದು ಮತ್ತೊಂದು. ಇದರಲ್ಲಿ ನಮಗೆ ಆಯ್ಕೆಗಳು ವಾಸ್ತವವಾಗಿ ಇಲ್ಲ. ಆದರೆ ಸಾವು ಮತ್ತು ಅದರ ಭಯವಂತೂ ಇದ್ದೇ ಇರುತ್ತದೆ. ಅತ್ಯಂತ ಹೆಚ್ಚು ಖಿನ್ನತೆಗೆ ಜಾರಿದಾಗ ನಾವು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತೇವೆ. ಅದು ಒಂದು ದಾರಿಯೂ ಆಗುತ್ತದೆ. ಆತ್ಮಹತ್ಯೆ ಎನ್ನುವುದು ಸಾಯಬೇಕು ಎನ್ನುವ ತೀರ್ಮಾನವನ್ನು ಹೆಚ್ಚು ಗಟ್ಟಿ ಮಾಡುತ್ತದೆ.

ಆಧುನಿಕ ಜಗತ್ತು ಈವತ್ತು ಅತ್ಯಂತ ಹೆಚ್ಚು ಗಾಯಗಳನ್ನು ಮಾಡುತ್ತವೆ. ಹಳೆಯದನ್ನು ಮರೆತು ನಾವು ಹೊಸದಾದ ಗಾಯವನ್ನು ಯೋಚನೆ ಮಾಡುವಂತೆ ಆಗಿದೆ. ಪ್ರತ್ಯೇಕತೆಯ ಮನೋಭಾವ ಇದರಲ್ಲಿ ಒಂದು. ಹಾಗೆ ನೋಡಿದರೆ ಈವತ್ತು ನಾವು ನಿಜವಾಗಿಯೂ ನಮ್ಮ ಮನಸ್ಸನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ. ನಾವು ನಮ್ಮ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಕಷ್ಟವಾದ್ದರಿಂದ ನಮಗೆ ಬೇರೆ ದಾರಿಯೂ ಬೇಕಾಗುತ್ತದೆ. ನಮ್ಮ ನೋವು ಯಾವುದರದ್ದು ಎನ್ನುವುದು ನಮಗೆ ಗೊತ್ತಿಲ್ಲವಾದ್ದರಿಂದ ನಾವು ಮನೋವೈದ್ಯರ ಹತ್ತಿರ ಹೋಗುತ್ತೇವೆ, ಅವರು ನಮ್ಮ ನೋವುಗಳ ವಿವಿಧತೆಯನ್ನು ನೋಡಿಕೊಂಡು ಅದನ್ನು ಒಂದು ಕಡೆಗೆ ಸಂಯೋಜನೆ ಮಾಡುತ್ತಾರೆ ನಾವು ಕಷ್ಟವನ್ನು ಪಡುತ್ತಿರುವುದು ನಿಜ. ಆದರೆ ಆ ಕಷ್ಟವನ್ನು ಒಬ್ಬ ಮನೋವೈದ್ಯನು ಅರ್ಥಮಾಡಿಕೊಳ್ಳುವ ಯತ್ನ ಮಾಡುತ್ತಾನೆ. ಆದರೆ ಇಲ್ಲಿಯೂ ಸಮಸ್ಯೆಯು ಇದೆ. ಅವನು ತನಗೆ ಗೊತ್ತಿರುವ ಸಂಗತಿಗಳನ್ನು ಮಾತ್ರವೇ ಸಂಯೋಜನೆ ಮಾಡಿಕೊಂಡು ಅದಕ್ಕೆ ಔಷಧಿಯನ್ನು ಕೊಡಬಲ್ಲ. ಮಲಾಬೌಸ್ 'ಇದನ್ನು ಇನ್ನೊಬ್ಬರ ನೋವನ್ನು ಸಂಯೋಜನೆ ಮಾಡುವ ಕ್ರಮ' ಎಂದು ಹೇಳುತ್ತಾಳೆ.

ನಾವು ಈಗ ಕೇಳುಗರಿಲ್ಲದ ಜಗತ್ತಿನಲ್ಲಿ ಇದ್ದೇವೆ. ಇನ್ನೊಬ್ಬರ ಬದಲಾಗಿ ಮತ್ತೊಬ್ಬರು ಮಾತಾಡುವ ಸ್ಥಿತಿಯು ಬರುತ್ತದೆ. ನಿಜವಾದ ಸಾಕ್ಷ್ಯ ಎನ್ನುವುದು ಕಳೆದು ಹೋಗಿರುತ್ತದೆ. ಇದರ ಮತ್ತೊಂದು ರೂಪವೆಂದರೆ ಇನ್ನೊಬ್ಬರು ನಮ್ಮ ಮಾತನ್ನು ಕೇಳಿಸಿಕೊಳ್ಳದೆ ಇರುವುದು. ನಿಜವಾದ ಒಂದು ಸಾರ್ವಜನಿಕತೆ ಎನ್ನುವುದೇ ಇರುವುದಿಲ್ಲ. ಇದನ್ನು ಒಂದು ಉದಾಹರಣೆಯ ಮೂಲಕವೇ ನಾವು ವಿವರಿಸಬಹುದು: ಯುದ್ಧಕ್ಕೆ ಹೋದವನೊಬ್ಬ ಜೀವಂತ ಬಂದ ಮೇಲೆ ತಾನು ಹೇಗೆ ಯುದ್ಧವನ್ನು ಮಾಡಿದೆ ಮತ್ತು ಆಗ ಏನಾಯಿತು ಎಂದು ವಿವರಿಸಲು ಹೋಗುತ್ತಾನೆ. ಅದನ್ನು ಅವನು ನಿತ್ಯವೂ ಹೇಳುತ್ತಾನೆ. ಆದರೆ ಅವನ ಎದುರು ಕುಳಿತವರು ಅದು ಅವರಿಗೆ ಬೋರಾಗಿ ಒಬ್ಬೊಬ್ಬರೇ ಎದ್ದು ಹೋಗುತ್ತಾರೆ. ಇದು ಕತೆ. ಕೊನೆಗೆ ತನ್ನ ಕತೆಯನ್ನು ಕೇಳಲು ಯಾರೂ ಇಲ್ಲವೆಂದು ಅವನಿಗೆ ತಿಳಿಯುತ್ತದೆ. ಮತ್ತೊಂದು

ನಿಜವಾದ ಘಟನೆ. ಇದು ನಡೆದದ್ದು 1990ರಲ್ಲಿ. ಬೋಸ್ನಿಯನ್ ಯುದ್ಧದ ಸಂದರ್ಭದಲ್ಲಿ. ಆ ಸಂದರ್ಭದಲ್ಲಿ ಅನೇಕ ಹುಡುಗಿಯರು ರೇಪ್‌ಗೆ ಒಳಗಾದರು. ಅವರು ಮತ್ತೆ ವಾಪಾಸು ಆದರು. ಆದರೆ ಅವರ ಮಾತನ್ನು ಕೇಳಲು ಯಾರೂ ತಯಾರು ಇರಲಿಲ್ಲ. ಲಕಾನ್ ಇದನ್ನು ಕುರಿತು ಹೇಳುತ್ತಾನೆ. ಇಲ್ಲಿ ಸಮಸ್ಯೆಯು ಇರುವುದು ನಿಜವಾದ ಒಬ್ಬ ಕೇಳುಗನದ್ದು. ನಿಜವಾದ ಒಂದು ಅವಕಾಶವು ಶುರುವಾಗುತ್ತದೆ. ಅದು ಖಾಲಿಯಾಗಿರುತ್ತದೆ. ಅದನ್ನು ಭರ್ತಿ ಮಾಡುವುದು ನಮಗೆ ಸಮಸ್ಯೆಯೂ ಹೌದು. ನಮಗೆ ಇರುವ ಅತ್ಯಂತ ಮೂಲಭೂತವಾದ ಸಮಸ್ಯೆ ಎಂದರೆ ನಾವು ಆಡುವ ಮಾತುಗಳು ದಾಖಲಾಗುತ್ತದೆಯೇ ಇಲ್ಲವೇ ಎನ್ನುವುದು. ಇಲ್ಲಿ ದಾಖಲಾಗುವುದು ಎನ್ನುವುದನ್ನು ಲಕಾನ್ ಹೆಚ್ಚು ಒತ್ತು ಕೊಟ್ಟು ಹೇಳುತ್ತಾನೆ. ಸಾಂಕೇತಿಕವಾದ ಲಿಪಿ ಎನ್ನುವುದು ಅವನ ಮತ್ತೊಂದು ಮಾತು. ಖಾಲಿಯಾದ ಜಾಗ ಎನ್ನುವುದಕ್ಕೆ ಇಲ್ಲಿ ವಿಶೇಷತೆಯು ಇದೆ. ಒಬ್ಬ ವ್ಯಕ್ತಿಯು ಮಾತಾಡುತ್ತಿರುವಾಗಲೇ ಅಲ್ಲಿಂದ ಜಾಗವನ್ನು ಖಾಲಿ ಮಾಡಿದರೆ ಆ ವ್ಯಕ್ತಿಯು ಒಬ್ಬಂಟಿಯಾಗುತ್ತಾನೆ. ಅವನು ತನ್ನ ಪಾಡಿಗೆ ತಾನೇ ಮಾತಾಡುತ್ತಾನೆ ಎಂದಾದರೆ ಅವನು ಹುಚ್ಚ ಎನ್ನುವ ಪಟ್ಟವನ್ನು ಕಟ್ಟಿಕೊಳ್ಳುತ್ತಾನೆ. ಅಥವಾ ಅವನು ಒಬ್ಬ ಸುಳ್ಳುಗಾರ ಆಗಿಬಿಡುತ್ತಾನೆ.

ನಮ್ಮ ನರಮಂಡಲ ವ್ಯವಸ್ಥೆಗೂ ನಮ್ಮ ವರ್ತನೆಗೂ ಒಂದು ಸಂಬಂಧವು ಇದೆ. ಅದನ್ನು ಹೀಗೆ ಹೇಳಬಹುದು: ನಮ್ಮ ನರಮಂಡಲವು ತನ್ನದೇ ಆದ ಒಂದು ವ್ಯವಸ್ಥೆಯನ್ನು ಹೊಂದಿರುತ್ತದೆ. ಅದರ ಮೂಲಕ ನಾವು ಅನೇಕವನ್ನು ನಿರ್ಧರಿಸುತ್ತೇವೆ, ನರಮಂಡಲ ಮತ್ತು ನಮ್ಮ ಮಿದುಳು ಹೇಗೆ ಕ್ರಿಯಾಶೀಲವಾಗಿರುತ್ತದೆ ಎನ್ನುವುದು ನಮಗೆ ಅನೇಕ ಪ್ರಯೋಗದಿಂದ ತಿಳಿದು ಬಂದಿದೆ. ಭ್ರಾಂತಿಯನ್ನು ಕುರಿತು ಈಗಾಗಲೇ ಹೇಳಿದೆ. ಆದರೆ ಇದಕ್ಕೆ ಸಂಬಂಧಿಸಿದ ಪ್ರಯೋಗವೂ ಆಗಿದೆ ನಾವು ಯಾವ ಸಂಕೇತವನ್ನು ಪಡೆಯುತ್ತೇವೆ ಮತ್ತು ಅದರ ಮೂಲಕ ನಾವು ಹೇಗೆ ಪ್ರತಿಕ್ರಿಯೆ ಕೊಡುತ್ತೇವೆ ಎನ್ನುವುದೂ ಚರ್ಚೆಯಾಗಿದೆ. ಇಲಿಗೆ ಮನುಷ್ಯರ ಸ್ವಭಾವ ಇಲ್ಲ. ಒಂದು ಪ್ರಯೋಗವು ನಡೆಯಿತು. 2002ರಲ್ಲಿ ನ್ಯೂಯರ್ಕ್ ವಿವಿಯಲ್ಲಿ ಇಲಿಗೆ ಕಂಪ್ಯೂಟರ್‌ನ ಚಿಪ್ಪನ್ನು ಅಳವಡಿಸಿದರು. ಆಟದ ಕಾರಿಗೆ ತನ್ನಿಂದ ತಾನೇ ಓಡುವಂತೆ ಇಲ್ಲೂ ಅದೇ ಪ್ರಯೋಗವನ್ನು ಮಾಡಲಾಯಿತು. ಸಂಕೇತವನ್ನು ಹೇಗೆ ಸ್ವೀಕರಿಸುತ್ತದೆ ಎನ್ನುವುದು ಇಲ್ಲಿ ಮುಖ್ಯವಾಗಿತ್ತು. ಜೀವಂತ ಪ್ರಾಣಿಗೆ ಒಂದು ಚಿಪ್ಪನ್ನು ಅಳವಡಿಸಿದ ಪ್ರಯೋಗವನ್ನು ಅನೇಕರು ಕುತೂಹಲದಿಂದ ನೋಡಿದರು. ಹೊರಗಿನಿಂದ ಚಲನೆಯನ್ನು ನಿಯಂತ್ರಿಸುವ ಕ್ರಮವು ಇದಾಗಿತ್ತು. ಆದರೆ ಪರಿಣಾಮವು ವ್ಯತಿರಿಕ್ತವಾಯಿತು. ಇಲಿಯು ಇದಕ್ಕೆ ಸ್ಪಂದಿಸಲಿಲ್ಲ ಎನ್ನುವುದಕ್ಕಿಂತ

ಬಾಹ್ಯದ ಶಕ್ತಿಯು ಆಂತರಿಕವಾದ ನಿರ್ಧಾರವನ್ನು ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಕೆಲವು ಚಟುವಟಿಕೆಯು ತಕ್ಷಣ ಬರುತ್ತದೆ. ಮತ್ತೆ ಕೆಲವಕ್ಕೆ ನಿಧಾನವಾದ ಪ್ರತಿಕ್ರಿಯೆ ಇರುತ್ತದೆ. ಇಲ್ಲಿ ಮತ್ತೊಂದು ವಿಚಾರವನ್ನು ಹೇಳುವುದು ಸೂಕ್ತ. ಅನಸ್ಥೇಶಿಯಾ ಪದವನ್ನು ಸಾಮಾನ್ಯವಾಗಿ ಎಲ್ಲರೂ ಕೇಳಿರುತ್ತಾರೆ. ಅದರ ಸ್ವರೂಪವು ಏನೇ ಇರಲಿ ಅದು ನಮಗೆ ಒಂದು ಕ್ಷಣ ಆಯಾ ಭಾಗದ ನೋವನ್ನು ಅರಿವಿಲ್ಲದಂತೆ ಮಾಡುತ್ತದೆ. ಅದು ಸಂವೇದನೆಯ ಮೇಲೆ ಕೆಲಸವನ್ನು ಮಾಡುತ್ತದೆ. ಅದರ ಬಗ್ಗೆ ಏನೇ ಅಭಿಪ್ರಾಯ ಇರಲಿ ಅದು ನಮಗೆ ಒಂದು ಉಪಶಮನವನ್ನು ಕೊಡುತ್ತದೆ. ಅದು ಸಂವೇದನೆಯ ಮೇಲೆ ಕೆಲಸವನ್ನು ಮಾಡುವುದರಿಂದ ಅದರ ಸ್ವರೂಪ ಮತ್ತು ಅದರ ಕಾರ್ಯವು ಬೇರೆಯಿರುತ್ತದೆ. ವಾಸ್ತವವಾಗಿ ಅನಸ್ಥೇಶಿಯಾ ನಮಗೆ ಆ ಕ್ಷಣಕ್ಕೆ ಅಗತ್ಯವಾಗಿರುತ್ತದೆ. ಅದರ ಪ್ರಯೋಗವು ಪ್ರಾರಂಭವಾದಾಗ ಅದರ ಸ್ವರೂಪ ಮತ್ತು ಅದರ ಕಾರ್ಯದ ಬಗ್ಗೆ ಕೆಲವು ಆಕ್ಷೇಪಗಳು ಬಂದಿದ್ದವು. ಆಪರೇಷನ್ ಸಮಯದಲ್ಲಿ ಅನಸ್ತೇಶಿಯಾ ಕೊಡುತ್ತಾರೆ. ಅದರ ಅಗತ್ಯವೂ ಇರುತ್ತದೆ. ಆದರೆ ಅದು ಮೈಮರೆವನ್ನು ಕೆಲವು ಕ್ಷಣ ಕೊಡುತ್ತದೆ. ಯಾವಾಗ ಅದರ ಶಕ್ತಿಯು ಕಡಿಮೆಯಾಗುತ್ತದೆಯೋ ಆಗ ನೋವು ಪ್ರಾರಂಭವಾಗುತ್ತದೆ. ಆದರೆ ಒಂದು ವಾದದ ಪ್ರಕಾರ ಅನಸ್ತೇಶಿಯಾ ನಮ್ಮ ಮನಸ್ಸಿನ ಮೇಲೆ ಯಾವುದೇ ಪ್ರಭಾವವನ್ನು ಬೀರುವುದೂ ಇಲ್ಲ. ಆಪರೇಷನ್ ಆಗುವಾಗ ರೋಗಿಗೆ ಏನೋ ಆಗುತ್ತಿದೆ ಎನ್ನುವ ಅರಿವು ಇರುತ್ತದೆ. ಆದರೆ ಆಪರೇಷನ್ ನೋವು ಮಾತ್ರವೇ ಕಾಣಿಸುವುದಿಲ್ಲ. ಯಾವಾಗ ಅದರ ಶಕ್ತಿಯು ಕುಂದುತ್ತದೆಯೋ ಆಗ ಅದರ ನೋವು ಗೊತ್ತಾಗುತ್ತದೆ. ಅನಸ್ತೇಶಿಯಾ ನಮ್ಮ ಮಾಂಸಖಂಡಗಳನ್ನು ಸ್ವಲ್ಪ ರಿಲಾಕ್ಸ್ ಮಾಡುತ್ತದೆ.

ಇದನ್ನು ಇನ್ನೊಂದು ಥರ ನೋಡಬಹುದು: ನಮ್ಮ ಅನೇಕ ಭ್ರಾಂತಿಗಳು ಈ ಥರ ಇರುತ್ತದೆ. ನಿದ್ದೆಯಲ್ಲಿ ನಡೆಯುವುದು, ನಿದ್ರಾಹೀನತೆ, ಮಾನಸಿಕ ಒತ್ತಡಗಳು, ಮತ್ತೆ ಕೆಲವು ಸಂದರ್ಭದಲ್ಲಿ ಆತ್ಮಹತ್ಯೆಯ ಯೋಚನೆಗಳು ಕೆಲವು ಭ್ರಾಂತಿಯಿಂದ ಆಗುತ್ತವೆ. ಆಗಾಗ ರಾತ್ರಿ ಯಾರೋ ನಮ್ಮನ್ನು ಕರೆದಂತೆ ಆಗುತ್ತದೆ. ಅದು ಭ್ರಾಂತಿ. ಮರೆಗುಳಿತನ ಎನ್ನುವುದು ಕೂಡಾ ಮನುಷ್ಯನಿಗೆ ಆವರಿಸುತ್ತದೆ. ಮರೆಯುವುದು ಒಂದು ರೋಗ. ಅದರಲ್ಲಿ ತಾನು ಏನು ತಿನ್ನುತ್ತಿದ್ದೇನೆ ಅಥವಾ ಏನು ತಿಂದೆ ಎನ್ನುವುದೂ ಮರೆತು ಹೋಗುತ್ತದೆ. ಗುರುತಿಸುವುದು ಮರೆತು ಹೋಗುತ್ತದೆ. ಫ್ರಾಯ್ಡ್‌ನಲ್ಲಿ ಲಿಬಿಡೋ ಎನ್ನುವುದು ಒಂದು ಪರಿಕಲ್ಪನೆ. ಆದರೆ ಇದರ ಬಗ್ಗೆ ಮಾತಾಡುವಾಗ ಮಾಲಬೌ ಹೇಳುತ್ತಾಳೆ: ಮೆದುಳು ತನ್ನ ಪಾಡಿಗೆ ತಾನು ಮಾತಾಡುವುದಿಲ್ಲ. ಅದು ಸ್ವೀಕರಿಸುತ್ತದೆ ಮಾತ್ರವೇ. ಆದರೆ ಭಾವನೆಗಳು ತನ್ನ ಪಾಡಿಗೆ ತಾನೇ ಅಭಿವ್ಯಕ್ತಾತ್ಮಕವಾದದ್ದು

ಫ್ರಾಯ್ಡ್‌ನ ಮತ್ತೊಂದು ಅತ್ಯಂತ ಮಹತ್ವದ ಚಿಂತನೆಯು ಇರುವುದು ಕಾಮದ ಪ್ರಶ್ನೆಯಲ್ಲಿ. ಲೈಂಗಿಕ ಕಾಮನೆ ಎನ್ನುವುದು ಮುಖ್ಯವಾಗಿ ಸುಪ್ತವಾದ ನೆಲೆಯಲ್ಲಿ ಕೆಲಸವನ್ನು ಮಾಡುತ್ತದೆ. ಅದನ್ನು ಅವನು ಸುಪ್ತವಾದ ಪ್ರಜ್ಞೆಯ ಒಂದು ನೆಲೆ ಎಂದು ಹೇಳುತ್ತಾನೆ. ಆದರೆ ಯಾರೊಬ್ಬರೂ ನಮ್ಮ ಮೆದುಳು ಏನು ಕೆಲಸವನ್ನು ಮಾಡುತ್ತದೆ ಎಂದು ಯೋಚಿಸಲಾರರು. ಯಾವುದನ್ನು ಈವತ್ತು ನಾವು ಸುಪ್ತವಾದ ಪ್ರಜ್ಞೆಎಂದು ಹೇಳುತ್ತೇವೆಯೋ ಅದರ ರೂಪವು ಅರ್ಥದ ರಚನೆಯನ್ನು ಹೇಳುತ್ತದೆ. ಆದ್ದರಿಂದ ಇದನ್ನು ಲಕಾನ್ ಕಲ್ಪಿತ, ಸಾಂಕೇತಿಕ ಮತ್ತು ವಾಸ್ತವದ ನಡುವೆ ಇರುವ ಸಂಬಂಧವನ್ನು ಹೇಳುತ್ತವೆ ಎಂದು ಹೇಳುತ್ತಾನೆ. ಲೈಂಗಿಕ ವ್ಯತ್ಯಾಸ ಎನ್ನುವುದು ಅತ್ಯಂತ ಮುಖ್ಯವಾಗಿ ಸ್ಥಿರವಾದ ಒಂದು ಅರ್ಥವನ್ನು ಹೇಳುವುದಿಲ್ಲವೆಂದು ಅವನು ಭಾವಿಸುತ್ತಾನೆ. ಫ್ರಾಯ್ಡ್‌ನಲ್ಲಿ ಲೈಂಗಿಕತೆ ಎನ್ನುವುದು ಮುಖ್ಯವಾಗಿ ಬಾಹ್ಯ ಮತ್ತು ಆಂತರಿಕ ಎನ್ನುವುದನ್ನು ಸುಲಭವಾಗಿ ವರ್ಗೀಕರಣ ಮಾಡುವುದಿಲ್ಲ. ಸೆಲೆಬ್ರಲ್ ಅನಸ್ತೇಶಿಯಸ್ ಅನ್ನುವುದು ಮುಖ್ಯವಾಗಿ ಸ್ವತಃ ನಿಯಂತ್ರಣ ಮತ್ತೆ ಸ್ವ ಪ್ರಾತಿನಿಧಿಕವೂ ಆಗಿರುತ್ತದೆ.

ಅರಿಸ್ಟಾಟಲ್ ಹೇಳುವ ಪ್ರಕಾರ ಅತ್ಮವು ದೇಹದ ಪ್ರಶ್ನೆಯೂ ಹೌದು. ವಾಸ್ತವವಾಗಿ ಲಿಬಿಡಿನಲ್ ಸ್ವರೂಪವನ್ನು ಒಂದು ವಲಯಕ್ಕೆ ನಾವು ಸೀಮೀತ ಮಾಡಲು ಆಗುವುದಿಲ್ಲ. ಆಗುವಿಕೆ ಎನ್ನುವುದು ಎಲ್ಲರಲ್ಲೂ ಇರುತ್ತದೆ. ಯಾವಾಗ ನಾವು ಆಗುವಿಕೆಯಲ್ಲಿ ಸೋಲುತ್ತೇವೆಯೋ ಆಗ ಸಮಸ್ಯೆಯು ಬರುತ್ತದೆ. ಆಗುವಿಕೆ ಎನ್ನುವುದು ಒಂದು ರಚನೆಯಾಗಿದೆ. ಯಶಸ್ಸು ಮತ್ತು ಸೋಲು ಎನ್ನುವುದು ನಮಗೆ ಬೇರೆ ಬೇರೆ ಪರಿಣಾಮವನ್ನು ಬೀರುತ್ತದೆ. ಒಂದು ಹಂತದಲ್ಲಿ ಆಗುವಿಕೆ ಎನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಇಲ್ಲಿ ನಾವು ನೋಡಬೇಕಾದ ಅಂಶವೆಂದರೆ ಯಾವುದು ನಮ್ಮ ಸೋಲು ಮತ್ತು ಯಾವುದು ನಮ್ಮ ಗೆಲುವು ಎನ್ನುವುದು ಸನ್ನಿವೇಶವನ್ನು ಹೇಳುತ್ತದೆ. ಒಂದು ಚರಿತ್ರೆಯಿಂದ ಮತ್ತೊಂದು ಚರಿತ್ರೆಗೆ ನಾವು ಬದಲಾಗುವಾಗ ಕಳೆದದ್ದು ನಮಗೆ ಕಾಡುವುದಿಲ್ಲ. ಮನೋವಾಸ್ತವ ಎನ್ನುವುದು ಇದೆ. ಅದನ್ನು ಮರೆಮಾಡಲು ಆಗುವುದೂ ಇಲ್ಲ. ಯಾವಾಗ ನಮಗೆ ಒಂದು ಖಿನ್ನತೆಯು ಬರುತ್ತದೆ ಎಂದು ವಿಶ್ಲೇಷಣೆ ಮಾಡುವಾಗ ವಸ್ತು ನಮಗೆ ಕೆಲವು ಬಯಕೆಗಳನ್ನು ಹುಟ್ಟುಹಾಕುತ್ತದೆ ಮತ್ತು ಅದರ ಪರಿಣಾಮವಾಗಿ ನಾವು ಅದನ್ನು ಬಯಸುತ್ತೇವೆ. ವಿಷಯಕ್ಕೆ ಹತ್ತಿರವಾಗುವಾಗ ನಾವು ಅದನ್ನು ಇಷ್ಟ ಪಡುತ್ತೇವೆ. ಆದರೆ ಅದುವೇ ನಮ್ಮ ನಮ್ಮ ಮನಸ್ಸಿನಲ್ಲಿ ಉದ್ವೇಗವನ್ನು ಹುಟ್ಟುಹಾಕುತ್ತದೆ ಎಂದು ಫ್ರಾಯ್ಡ್ ಹೇಳುತ್ತಾನೆ. ಆದರೆ ಹಾಗೆ ನೋಡಿದರೆ ನಮ್ಮ ನಮ್ಮ ಮನಸ್ಸು ಮತ್ತು ಕ್ರಿಯೆಗಳ ನಡುವೆ ಒಂದು ದ್ವಂದ್ವತಾತ್ಮಕವಾದ ಸಂಬಂಧವು ಇರುತ್ತದೆ.

ಯಾವುದು ನಮಗೆ ಬಾಹ್ಯವೆಂದು ಅನಿಸುತ್ತದೆಯೋ ಅದು ಬರೀ ಬಾಹ್ಯವೇ ಆಗಿದೆ ಮತ್ತು ಅದಕ್ಕೂ ನಮ್ಮ ಅಂತರಂಗಕ್ಕೂ ಯಾವುದೇ ಸಂಬಂಧವೇ ಇಲ್ಲವೆಂದು ಹೇಳುವುದು ಸಾಧ್ಯವಿಲ್ಲ. ದ್ವಂದ್ವಮಾನ ಭೌತವಾದವು ಮಾತ್ರವೇ ಇದನ್ನು ಅತ್ಯಂತ ಖಚಿತವಾಗಿ ಹೇಳಿದೆ. ಸುಪ್ತವಾದ ಪ್ರಜ್ಞೆಗೂ ನಮ್ಮ ಜೀವನದ ಕ್ರಮಕ್ಕೂ ಸಂಬಂಧವಿರುವುದು ಹೆಚ್ಚು ಖಚಿತ. ಯಾವುದು ನಮ್ಮ ನಮ್ಮ ಮನಸ್ಸಿನಲ್ಲಿ ದಾಖಲಾಗುತ್ತದೆಯೋ ಅದರ ಕ್ರಮವನ್ನು ನಾವು ಬೇರೆ ಬೇರೆ ರೀತಿಯಲ್ಲಿ ವ್ಯಕ್ತಮಾಡುತ್ತೇವೆ ಚಾರಿತ್ರಿಕವಾದ ವಾಸ್ತವವನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಮುಖ್ಯವಾಗುತ್ತದೆ. ಕೆಲವು ಪ್ರಾಚೀನವಾದ ಸಂಗತಿಗಳು ನಮ್ಮ ಮೇಲೆ ಪ್ರಭಾವವನ್ನು ಬೀರುತ್ತದೆ. ಅನೇಕ ಸಂದರ್ಭದಲ್ಲಿ ನಮ್ಮ ಮನಸ್ಸು ಅನೇಕವನ್ನು ಒಂದು ಸಾರ ರೂಪವಾಗಿ ಸ್ವೀಕರಿಸುತ್ತದೆ. ಹಾಗೆ ನೋಡಿದರೆ ನಮ್ಮ ನಮ್ಮ ಮನೋಸ್ಥಿತಿ ಮತ್ತು ಅದರ ಸಮಸ್ಯೆಗಳು ಭಿನ್ನವಾಗುತ್ತಾ ಹೋಗುತ್ತವೆ. ಕಾರ್ಮಿಕರು ಮತ್ತು ಅವರ ಶಕ್ತಿಯನ್ನು ಬಂಡವಾಳವಾದ ಬಳಸಿಕೊಳ್ಳುವಾಗ ಅದನ್ನು ಅದು ಒಂದು ಋಣವೆಂದು ಭಾವಿಸುವುದಿಲ್ಲ. ಕಾರ್ಮಿಕರು ಮತ್ತು ರೈತರ ಸಮಸ್ಯೆಯನ್ನು ಅವಾಸ್ತವ ಮಾಡಲಾಗುತ್ತದೆ. ಅದನ್ನು ಒಂದು ಮಾಧ್ಯಮವಾಗಿ ಬಳಸಲಾಗುತ್ತದೆ. ಆದ್ದರಿಂದ ರೈತರು ಮತ್ತು ಕಾರ್ಮಿಕರ ಮನೋಸ್ಥಿತಿಯು ಆಧುನಿಕ ಸಂದರ್ಭದಲ್ಲಿ ಬೇರೆಯಾಗುತ್ತದೆ. ನಮಗೆ ಈಗ ಇರುವುದು ಮತ್ತು ನಾವು ಹೇಳುತ್ತಿರುವುದು ಏನಿದೆಯೋ ಅದರ ರೂಪವನ್ನು ನಾವು ನೋವು ಎಂದೇ ಹೇಳಬೇಕಾಗಿದೆ.

ಈವತ್ತು ನಮಗೆ ಮತ್ತೆ ಮತ್ತೆ ಮನುಷ್ಯ ಮತ್ತು ಅವನ ಬುದ್ಧಿಶಕ್ತಿಯನ್ನು ಎಷ್ಟು ತಿದ್ದಬಹುದು ಎನ್ನುವುದು ಮುಖ್ಯವಾದ ಪ್ರಶ್ನೆಯು ಆಗುತ್ತಿದೆ. ಅದಕ್ಕಾಗಿಯೇ ಅನೇಕ ಪ್ರಯೋಗಗಳು ನಡೆಯುತ್ತಿವೆ. ಭವಿಷ್ಯ ಮತ್ತು ಅದರ ಸಾಧ್ಯತೆಗಳು ಏನಿವೆ ಎಂದೂ ನೋಡಬೇಕಾಗಿದೆ. ಮನುಷ್ಯ ಹಾಗೂ ಅವನ ನೆನಪನ್ನು ಹೇಗೆ ವೃದ್ಧಿ ಮಾಡಬಹುದು ಎನ್ನುವುದು ನಮಗೆ ದೊಡ್ಡದಾದ ಒಂದು ಫಂಥಾಹ್ವಾನವೂ ಆಗಿರುವುದು ಸತ್ಯ. ಮೆದುಳು ಮತ್ತು ಅದರ ಶಕ್ತಿಯನ್ನು ಅಳೆಯಲು ಬೇರೆ ಬೇರೆ ಮಾನದಂಡವು ಬಂದಿದೆ. ವಾಸ್ತವವಾಗಿ ಅಹಮಿಕೆಯು ಕೊನೆಗೆ ಒಂದು ಕಡೆಗೆ ತನ್ನ ಭ್ರಮ ನಿರಸನವನ್ನು ಆಹ್ವಾನಿಸುತ್ತದೆ. ಎಲ್ಲಿ ಬಯಕೆಯು ಈಡೇರುವುದಿಲ್ಲವೋ ಆಗ ಇದು ಕಟ್ಟಿಟ್ಟ ಬುತ್ತಿಯೂ ಆಗಿದೆ. ಅಹಮಿಕೆಯ ಮತ್ತೊಂದು ಗುಣವೆಂದರೆ ಅದು ತನ್ನ ಅಸ್ತಿತ್ವವನ್ನು ಮಾತ್ರವೇ ಉಳಿಸಿಕೊಳ್ಳಲು ಯತ್ನವನ್ನು ಮಾಡುತ್ತದೆ. ಆದ್ದರಿಂದ ಅದು ಅನ್ಯವನ್ನು ತಿರಸ್ಕಾರದಿಂದ ನೋಡುತ್ತದೆ. ಮನುಷ್ಯನ ಸುಪ್ತವಾದ ಪ್ರಜ್ಞೆಯು ನಮಗೆ ನಿಜವಾಗಿಯೂ ಆಶ್ಚರ್ಯವನ್ನು ತರುತ್ತದೆ. ಅದು ಮುಚ್ಚಿದ ಪೆಟ್ಟಿಗೆ ಥರ ಇದೆ. ನಮ್ಮ ಜೀವನದಲ್ಲಿ ಅತ್ಯಂತ ಹೆಚ್ಚು ಪ್ರಧಾನವಾದ ಪಾತ್ರವನ್ನು ವಹಿಸುವ ಪ್ರಜ್ಞೆಯನ್ನು ನಿಖರವಾಗಿ ಹೀಗೆಯೇ ಇದೆ ಎಂದು ಹೇಳಲು

ಬರುವುದಿಲ್ಲ. ಈವತ್ತಿಗೂ ನಮಗೆ ಪ್ರಜ್ಞೆ ಮತ್ತು ಅದರ ಕುರಿತಾದ ಚರ್ಚೆಯು ಬೇರೆ ಬೇರೆ ರೀತಿಯಲ್ಲಿ ನಡೆಯುತ್ತದೆ. ಪ್ರಜ್ಞೆ ಎನ್ನುವುದು ಹೇಗೆ ವಿಜ್ಞಾನದ ಆಚೆಗೆ ಇದೆ ಎಂದು ಕಮೂ ಹೇಳುತ್ತಾನೆ. ನಾವು ಪ್ರಜ್ಞೆಯನ್ನು ಒಂದು ನಿಯಮದ ಜೊತೆಗೆ ತರಬೇಕಾದ ಅವಶ್ಯಕತೆಯು ಇಲ್ಲವೆಂದು ಅವನು ಹೇಳುತ್ತಾನೆ. ಅವನು ನಮ್ಮ ಪ್ರಜ್ಞೆಯ ಕುರಿತಾಗಿ ಎದ್ದಿರುವ ಎಲ್ಲಾ ಪ್ರಶ್ನೆಗಳಿಗೆ ವಿಜ್ಞಾನವು ಉತ್ತರವನ್ನು ಕೊಡಲಾರದು ಎಂದು ಹೇಳುತ್ತಾನೆ.

ಹಾಗೆ ನೋಡಿದರೆ ಅನೇಕರಿಗೆ ವಿಜ್ಞಾನದ ಕುರಿತು ಅನೇಕ ರೀತಿಯ ಭಯವೂ ಇದೆ. ಆ ಭಯವು ನಮಗೆ ಬರಲು ಒಂದು ಕಾರಣವೂ ಇದೆ: ಅದು ಎಲ್ಲವನ್ನು ಕತ್ತರಿಸಿ ಪರೀಕ್ಷೆಯನ್ನು ಮಾಡುತ್ತದೆ. ಪ್ರಯೋಗಶಾಲೆಯಲ್ಲಿ ಕಪ್ಪೆಯನ್ನು ಕೊಯ್ದು ಪರೀಕ್ಷೆಯನ್ನು ಮಾಡುತ್ತಾರೆ. ಅವರು ನಿಸರ್ಗವನ್ನು ಕೂಡಾ ಒಂದು ಛಿದ್ರೀಕರಣಕ್ಕೆ ಗುರಿ ಮಾಡುತ್ತಾರೆ. ಆದರೆ ವಿಜ್ಞಾನವು ಹೇಳುವ ಥರ ನಮ್ಮ ನಿಸರ್ಗವು ಇಲ್ಲವೆಂದು ತೇಜಸ್ವಿಯವರು ಕರ್ವಾಲೋ ಕಾದಂಬರಿಯಲ್ಲಿ ಪ್ರತಿಪಾದಿಸಿದ್ದು ಇಲ್ಲಿ ಗಮನಾರ್ಹ. ಆದ್ದರಿಂದಲೇ ನಮಗೆ ವಿಜ್ಞಾನವನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ಕಷ್ಟವಾಗಿದೆ.

ನಾವು ಇವತ್ತು ಸುಪ್ತವಾದ ಪ್ರಜ್ಞೆ ಮತ್ತು ಪ್ರಜ್ಞೆ ಎಂದು ಏನು ವರ್ಗೀಕರಣ ಮಾಡುತ್ತೇವೆಯೋ ಅದರಲ್ಲಿ ವರ್ಗೀಕರಣ ಮಾಡುವುದು ಅತ್ಯಂತ ಕಷ್ಟವಾಗುತ್ತದೆ. ಅನೇಕ ಚಿಂತಕರು ಪ್ರಜ್ಞೆಯನ್ನು ಅತ್ಯಂತ ಬೆಲೆಬಾಳುವ ಒಂದು ಸಂಗತಿಯೆನ್ನುವಂತೆ ನೋಡಿದ್ದಾರೆ. ಡೆನೆಟ್ ಹಣ ಮತ್ತು ಪ್ರೇಮವನ್ನು ಕುರಿತು ಹೇಳುತ್ತಾನೆ. ಪ್ರೇಮವು ನಮಗೆ ಒಂದು ಅನುಭವನ್ನು ಕೊಡುತ್ತದೆ. ಹಣವು ಮತ್ತೊಂದು ಅನುಭವವನ್ನು ಹೇಳುತ್ತದೆ. ಹಣದಲ್ಲಿ ವಿನಿಮಯ ಮತ್ತು ಬೆಲೆಯ ಪ್ರಶ್ನೆಗಳು ಪ್ರಧಾನವಾಗುತ್ತದೆ. ಪ್ರೇಮವು ನಮಗೆ ದೇಹ ಮತ್ತು ಮನಸ್ಸಿನ ಪ್ರಶ್ನೆಯು ಆದರೆ ಹಣಕ್ಕೂ ನಮ್ಮ ದೇಹಕ್ಕೂ ಯಾವುದೇ ಸಂಬಂಧವು ಇಲ್ಲ. ಹಣ ಮತ್ತು ಅದರ ಕುರಿತಾದ ಪ್ರೀತಿಯನ್ನು ನಾವು ದೈಹಿಕ ಅನುಭವದ ಭಾಗವಾಗಿ ನೋಡುವುದಿಲ್ಲ. ನಮ್ಮ ಅನೇಕ ಬರಹಗಳು ಇದಕ್ಕೆ ಸಾಕ್ಷಿಯೂ ಆಗಿವೆ. ಪ್ರೇಮದ ಬಗ್ಗೆ ಹೆಚ್ಚು ಕವಿತೆಗಳು ಬರುತ್ತವೆ. ಆದರೆ ಹಣವನ್ನು ಕೇಂದ್ರವಾಗಿ ಇಟ್ಟುಕೊಂಡು ಕವಿತೆಗಳನ್ನು ಬರೆದವರು ಕಡಿಮೆ.

ಪ್ರಜ್ಞೆಯು ಯಾವತ್ತೂ ನಮಗೆ ಅತ್ಯಂತ ನಿಗೂಢವಾಗಿಯೇ ಉಳಿದಿದ್ದು ಆಶ್ಚರ್ಯ. ಪ್ರಜ್ಞೆ ಮತ್ತು ಅದರ ಪ್ರಶ್ನೆಗಳು ಒಂದು ಕಡೆಯಿಂದ ನಮಗೆ ಸಮಾಜದ ಪ್ರಶ್ನೆ. ಮತ್ತೊಂದು ಕಡೆಯಿಂದ ಅದು ವಿಜ್ಞಾನದ ಪ್ರಶ್ನೆ.

ಪ್ರಜ್ಞೆಯು ನಮಗೆ ಯಾಕೆ ಆಶ್ಚರ್ಯವನ್ನು ಹುಟ್ಟಿಸುತ್ತದೆ ಎಂದೂ ನೋಡಬೇಕು. ನಮಗೆ ಅನೇಕವು ಅನುಭವಕ್ಕೆ ಬರುತ್ತವೆ. ಅದಕ್ಕೆ ನಾವು ಪ್ರತಿಕ್ರಿಯೆಯನ್ನು

ಕೊಡುತ್ತೇವೆ. ಬೇಸರವಾದರೆ ನಾವು ಅಳುತ್ತೇವೆ. ಸಿಟ್ಟು ಬಂದರೆ ವ್ಯಗ್ರರಾಗುತ್ತೇವೆ. ಪ್ರಜ್ಞೆಯು ನಮಗೆ ಅತ್ಯಂತ ಮಹತ್ವದ ಸೂಚನೆಯನ್ನು ಕೊಡುತ್ತದೆ. ಪ್ರಜ್ಞೆ ಎನ್ನುವ ಪದವನ್ನು ನಾವು ಬೇರೆ ಬೇರೆ ಅರ್ಥದಲ್ಲಿ ಬಳಸುತ್ತೇವೆ. ಅವನು ಕುಡಿದು ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ ಎನ್ನುವುದಕ್ಕೂ ಅವನು ಜ್ವರದಿಂದ ಪ್ರಜ್ಞೆ ತಪ್ಪಿದ್ದಾನೆ ಎನ್ನುವುದಕ್ಕೂ ಅಂತರವು ಇದೆ. ಅದನ್ನು ದೇಹದ ಪ್ರಶ್ನೆಯಾಗಿ ನೋಡಿದರೆ ಅದಕ್ಕೆ ಒಂದು ಅರ್ಥವು ಇರುತ್ತದೆ. ಡೆನೆಟ್ ತನ್ನ ಅನುಭವವನ್ನು ಹಂಚಿಕೊಳ್ಳುತ್ತಾನೆ: ಒಂದು ದಿನ ಬೆಳಿಗ್ಗೆ ನಾನು ತುಂಬಾ ತಲ್ಲೀನವಾಗಿ ಓದುತ್ತಾ ಕುಳಿತಿದ್ದೆ. ಓದುತಿದ್ದ ನಾನು ಇದ್ದಕ್ಕಿದ್ದಂತೆ ಕಿಟಿಕಿಯಿಂದ ಹೊರಗೆ ನೋಡಿದೆ: ಅಲ್ಲಿ ಆಗ ಒಂದು ಬೆಳಗು ಇತ್ತು. ಅದರ ಪರಿಣಾಮವಾಗಿ ನನಗೆ ಗಿಡಗಳು ಮತ್ತು ಮರಗಳು ಕಾಣಿಸಿದವು. ಯಾಕೋ ಖುಶಿಯೆಂದು ಅನಿಸಿತು. ಅದೇ ಹೊತ್ತಿಗೆ ಸರಿಯಾಗಿ ಹಕ್ಕಿಗಳು ಧ್ವನಿಯನ್ನು ಹೊರಡಿಸುತ್ತಿದ್ದವು. ನನಗೆ ಆ ಶಬ್ದಗಳು ಅತ್ಯಂತ ಹಿತವೆಂದು ಅನಿಸಿತು. ನನ್ನ ಅನುಭವಕ್ಕೆ ಅದು ಅತ್ಯಂತ ಮುಖ್ಯವೆಂದು ಅನಿಸಿತು. ಹಕ್ಕಿಗಳು ಆಗ ಹಾಡುತ್ತಿದ್ದದು ನನಗೆ ಓದಲು ಒಂದು ಹಿನ್ನೆಲೆಯ ಗಾಯನವೆಂದು ಅನಿಸಿದ್ದು ನಿಜ. ಅಂದರೆ ನನ್ನ ಸುಪ್ತವಾದ ಪ್ರಜ್ಞೆಯು ಹೊರಗಿನ ಜಗತ್ತನ್ನು ಕ್ರೋಢೀಕರಿಸಿಕೊಂಡು ಸ್ವೀಕರಿಸಿತು. ಹೊರಗಿನ ಜಗತ್ತನ್ನು ನಮ್ಮ ಸುಪ್ತವಾದ ಪ್ರಜ್ಞೆಯು ಹೀಗೆ ಸ್ವೀಕಾರ ಮಾಡುತ್ತದೆ. ಹೊರಗಿನ ಜಗತ್ತನ್ನು ನಾವು ಸ್ವೀಕಾರ ಮಾಡುವಾಗ ಅದಕ್ಕೆ ಅದರದ್ದೇ ಆದ ಒಂದು ಅನನ್ಯತೆಯು ಇದೆ. ಅದು ಎಲ್ಲವನ್ನೂ ಕ್ರೋಢೀಕರಿಸುತ್ತದೆ. ಅದು ರಂಗದ ಮೇಲೆ ಬರುವುದೂ ಇಲ್ಲ. ರಂಗದ ಹಿಂದೆ ಅದು ಇರುತ್ತದೆ. ನಮಗೆ ಮಿದುಳು ಅನೇಕ ಸೂಚನೆಗಳನ್ನು ಕೊಡುತ್ತದೆ ಎನ್ನುವುದೂ ಅಷ್ಟೇ ನಿಜ. ಆದರೆ ಯಾಕೆ ನಮಗೆ ಹೀಗೆ ಆಗುತ್ತದೆ ಎಂದು ನೋಡಬೇಕಾಗಿದೆ. ಮಿದುಳು ಎನ್ನುವುದು ಕ್ರಿಯಾಶೀಲವಾಗುವುದು ಮತ್ತು ಆಗದೇ ಇರುವುದು ಸುಮ್ಮನೆ ಅಲ್ಲ. ಅದಕ್ಕೆ ನರತಂತುಗಳು ಸೂಚನೆಗಳನ್ನು ಕೊಡುತ್ತವೆ.

1. ಜಿಜೆಕ್ – ಪ್ಯಾರಲಕ್ಸ್‌ವ್ಯೂ.

13. ವಾಸ್ತವವಾದ, ಆಧುನಿಕತೆ ಮತ್ತು ಗ್ರಾಂಶಿ, ಲುಕಾಕ್ಸ್, ರೆಮಾಂಡ್ ವಿಲಿಯಂಸ್

ಮಾರ್ಕ್ಸ್‌ವಾದ ಈಗ ಅನಗತ್ಯವಾದ ಒಂದು ಮ್ಯೂಸಿಯಂ ಎಂದು ಭಾವಿಸುವವರೂ ಇದ್ದಾರೆ. ಮಾರ್ಕ್ಸ್‌ವಾದವು ಈಗ ಜೀವಂತವಾಗಿಲ್ಲವೆಂದು ಅನೇಕರು ಹೇಳುತ್ತಾರೆ. ಹಾಗೆ ನೋಡುವುದಿದ್ದರೆ ಮಾರ್ಕ್ಸ್‌ವಾದವು ಹೇಳಿರುವ ಅನೇಕ ಸಂಗತಿಗಳು ಈಗಲೂ ಜೀವಂತವಾಗಿದೆ. ಮತ್ತು ಅದರ ಸಮಸ್ಯೆಗಳು ಬಗೆ ಹರಿದಿಲ್ಲ. ಒಂದು ದೃಷ್ಟಿಯಿಂದ ಕಮ್ಯುನಿಸ್ಟ್ ಮೆನಿಫೆಸ್ಟೋ ತುಂಬಾ ಮಹತ್ವದ ಕೃತಿ. ಅದನ್ನು ನಾವು ಮರೆಯಬಾರದು. ಯಾವುದನ್ನು ನಾವು ಬಗೆಹರಿಸಿಕೊಳ್ಳಬೇಕು ಮತ್ತು ಅದನ್ನು ಯಾವ ರೀತಿಯಲ್ಲಿ ಬಗೆ ಹರಿಸಿಕೊಳ್ಳಬೇಕು ಎನ್ನುವುದನ್ನು ಆ ಕಮ್ಯುನಿಸ್ಟ್ ಮೆನಿಫೆಸ್ಟೋ ನಮಗೆ ಹೇಳುತ್ತದೆ. ಮಾರ್ಕ್ಸ್‌ವಾದವು ಹೇಳುವುದು ಒಂದು ತಾತ್ವಿಕತೆಯನ್ನು ಮತ್ತು ಆ ತಾತ್ವಿಕತೆಗೆ ಒಂದು ದೃಷ್ಟಿಕೋನವಿದೆ. ಬಂಡವಾಳವಾದವು ಈಗ ಮಾರ್ಕ್ಸ್‌ವಾದವನ್ನು ಹೂತು ಹಾಕಿ ಎಂದೂ ಹೇಳುತ್ತದೆ. ಆದರೆ ವಿಷಯವು ಅಷ್ಟು ಸರಳವಿಲ್ಲ. ಹೊಸ ಸಂವಹನ ಮತ್ತು ಅದರ ಪಾಲನ್ನು ನಾವು ಕೆಲವರು ತೆಗೆದುಕೊಂಡಿದ್ದೇವೆ. ಆದ್ದರಿಂದ ನಾವು ಈಗ ಯಾರ ಬಳಿಗೆ ಹೋಗುವುದು ಅಗತ್ಯವೆಂದು ನೋಡುತ್ತಿದ್ದೇವೆ. ನಮ್ಮ ಈಗಿನ ಅಧ್ಯಯನ ಕ್ರಮದಲ್ಲಿ ಯಾವುದು ನಿಜವಾಗಿಯೂ ಎಡ ಮತ್ತು ಯಾವುದು ನಿಜವಾಗಿಯೂ ಬಲ ಎಂದು ಅರ್ಥವಾಗದ ವಾತಾವರಣವು ನಿರ್ಮಾಣವಾಗಿದೆ. ಅನೇಕ ಎಡಪಂಥೀಯರಲ್ಲಿಯೂ ಆಧುನಿಕತಾವಾದವನ್ನು ಒಪ್ಪಿಕೊಂಡವರು ಇದ್ದಾರೆ. ಕೆಲವು ಎಡಪಂಥೀಯರು ಎಲಿಯಟ್ಟನನ್ನು ಮತ್ತು ಉದಾರವಾದವನ್ನು ಸಮರ್ಥಿಸುತ್ತಾರೆ. ನಮ್ಮ ಈಗಿನ ಸಮಸ್ಯೆಗೆ ಯಾರನ್ನು ಕಂಡು ಪರಿಹಾರೋಪಾಯವನ್ನು ಕಂಡುಕೊಳ್ಳಬೇಕು ಎನ್ನುವುದೂ ಬಹಳ ದೊಡ್ಡದಾದ ಪ್ರಶ್ನೆಯೂ ಹೌದು. ಆದರೆ ಯಾವುದೇ ಒಂದು ಸಂಗತಿಯನ್ನು ಅರ್ಥಮಾಡಿಕೊಳ್ಳುವುದು ಅಂದರೆ ಅದರ ತಾತ್ವಿಕತೆಯನ್ನು ನಿಜವಾಗಿ ಅರ್ಥಮಾಡಿಕೊಳ್ಳುವುದೂ ಅರ್ಥವಾಗುತ್ತದೆ.

ವಾಸ್ತವವಾಗಿ ಬಕ್ತಿನ್ ಮತ್ತು ಬೆಂಜಮಿನ್ ಇಬ್ಬರೂ ಅನುಭವ ಮತ್ತು ಅದರ ರೂಪವನ್ನು ಕುರಿತು ಹೆಚ್ಚು ಮಾತಾಡುತ್ತಾರೆ. ಅವುಗಳ ನಡುವೆ ಸಂಬಂಧವು ಇದೆಯೆನ್ನುವುದು ಅವರ ನಿಲುವು. ಒಂದು ನಿರ್ದಿಷ್ಟವಾದ ಕಾಲ ಮತ್ತು ಆವರಣಗಳಲ್ಲಿ ಉಂಟಾಗುವ ಅನುಭವ ಮತ್ತು ಅವುಗಳ ಅಭಿವ್ಯಕ್ತಿಯನ್ನು ಅವರು ಗಂಭೀರವಾಗಿಯೇ ಗಮನಿಸುತ್ತಾರೆ. ಅನುಭವ ಮತ್ತು ಅದು ಪಡೆಯುವ ರೂಪಗಳು ಬಹಳ ಮುಖ್ಯವೆಂದು ಅವರ ಅಭಿಪ್ರಾಯವಾಗಿದೆ. ಬೆಂಜಮಿನ್‌ನ ಸ್ಟೋರಿಟೆಲ್ಲರ್ ಪ್ರಕಟವಾಗಿದ್ದು 1936ರಲ್ಲಿ. ಅದು ಹಳೆಯ ಕತೆಗಳ ಮಾದರಿಯನ್ನು ಮತ್ತು ಹೊಸಮಾದರಿಗಳನ್ನು ವಿವರಿಸುತ್ತದೆ. ಬೆಂಜಮಿನ್ ಮತ್ತು ಬಕ್ತಿನ್ ಇಬ್ಬರೂ ಆಧುನಿಕತೆಯ ಅನುಭವವನ್ನು ಹೇಳುತ್ತಾರೆ. ಇಬ್ಬರೂ ಎಪಿಕ್ ಮತ್ತು ಕತೆಗಳ ಮಾದರಿಯನ್ನು ವಿವರವಾಗಿಯೇ ಚರ್ಚಿಸುತ್ತಾರೆ. ನಮ್ಮ ಸಿದ್ಧಾಂತಗಳಿಗೆ ಇರುವ ಸಾಮಾಜಿಕ ಆಯಾಮವನ್ನು ಅನೇಕರು ಮರೆಯುತ್ತಾರೆ ಮತ್ತು ಅದರ ಮೂಲಕವೇ ಅವರು ಮತ್ತೆ ಬೇರೆಯದನ್ನು ಅಡ್ಡ ತಂದು ವಿವರಿಸಲು ಯತ್ನವನ್ನು ಮಾಡುತ್ತಾರೆ. ಮತ್ತು ಇದೇ ಕಾರಣದಿಂದ ಈ ಆಕ್ರಮಣವು ನಡೆಯುತ್ತದೆ ಮತ್ತು ರಾಜಕಾರಣವೂ ಕೂಡಾ ಅನೇಕವನ್ನು ತಂದು ಹಾದಿ ತಪ್ಪುವಂತೆ ನೋಡುತ್ತದೆ. ವಾಸ್ತವವಾಗಿ ಇದನ್ನು ಮತ್ತೆ ಬೇರೆ ವಿಧದಲ್ಲಿಯೂ ಹೇಳಬಹುದು : ಮಾರ್ಕ್ಸ್‌ವಾದವು ಒಂದು ಸಿದ್ಧಾಂತವಾಗುತ್ತದೆ ಎಂದರೆ ಅದಕ್ಕೆ ಅದರ ಸಮಾಜದಲ್ಲಿ ನಿರ್ದಿಷ್ಟವಾದ ಒಂದು ಜಾಗವಿದೆ ಎಂದು ಅರ್ಥ (ಬೆಂಜಮಿನ್ – ಇಲ್ಯುಮಿನಿನೇಶನ್)

ಸಮಾಜ ಮತ್ತು ಅದರ ಜೀವನದ ಕ್ರಮಗಳು ರೂಪುಗೊಳ್ಳುವುದು ವರ್ಗದಿಂದ ಎನ್ನುವುದು ಮಾರ್ಕ್ಸ್‌ವಾದದ ನಿಲುವು. ಸಮಾಜದಲ್ಲಿ ಇರುವ ವರ್ಗಗಳ ಸ್ವರೂಪಕ್ಕೂ ಬುದ್ಧಿಜೀವಿಗಳ ಚಿಂತನೆಗಳಿಗೂ ನಿಕಟವಾದ ಸಂಬಂಧವಿದೆ. ಆಧುನಿಕ ವರ್ಗಗಳು ಮತ್ತು ಲಿಂಗತಾರತಮ್ಯಗಳು ವಾಸ್ತವವಾಗಿ ಕೆಲವು ರೀತಿಯ ಅತೃಪ್ತಿಯನ್ನು ಕೊಟ್ಟಿವೆ. ಇದರಲ್ಲಿ ಬೇರೆ ಬೇರೆ ಧ್ವನಿಗಳು ಇವೆ. ಬುದ್ಧಿಜೀವಿಗಳ ಅತೃಪ್ತವಾದ ಪ್ರಜ್ಞೆಗೂ ಸಂಬಂಧವನ್ನು ಅದು ಸೂಚಿಸುತ್ತದೆ. ಅದಕ್ಕೂ ಅದರ ಹಿನ್ನೆಲೆಯಲ್ಲಿ ಇರುವ ವರ್ಗಗಳಿಗೂ ನಿಕಟವಾದ ಸಂಬಂಧವಿದೆ.

ಮಾರ್ಕ್ಸ್‌ವಾದಿಗಳಲ್ಲಿ ಚರ್ಚೆಯೂ ಇದೆ. ವಾಸ್ತವತೆ ಮತ್ತು ಆಧುನಿಕತೆಯು ಕುರಿತು ಅನೇಕರು ವಾದ ವಿವಾದವನ್ನೂ ಮಾಡಿದ್ದಾರೆ. ಜನಪ್ರಿಯಕಲೆ, ಸಹಜವಾದ, ಸಮಾಜವಾದಿ ವಾಸ್ತವ, ಮಾಧ್ಯಮಗಳು, ಆಧುನಿಕತಾವಾದ, ಆಧುನಿಕೋತ್ತರವಾದ ಮುಂತಾದವುಗಳನ್ನು ಹೇಳಿಕೊಳ್ಳುವುದು ಎಂದರೆ ಅದರಲ್ಲಿ ಮತ್ತೆ ಮತ್ತೆ ರಾಜಕಾರಣವನ್ನು ನಿರೂಪಿಸುವುದೂ ಹೌದು. ಆದರೆ ಯಾವಾಗ ನಾವು ಇದನ್ನು ಹೀಗೆ ನೋಡುತ್ತೇವೆ ಮತ್ತು ಯಾವ ರೀತಿಯಲ್ಲಿ ನೋಡುತ್ತೇವೆ

ಎನ್ನುವುದೂ ಬಹಳ ಮುಖ್ಯವಾಗಿದೆ. ಅಂದರೆ ಇದರಲ್ಲಿ ಅತ್ಯಂತ ಜಟಿಲವಾದ ಪ್ರಶ್ನೆಯೂ ಇದೆ. ಮತ್ತು ಅದರಲ್ಲಿ ಯಾವುದೇ ಸಮಸ್ಯೆಗಳು ಬಂದರೂ ಅದನ್ನು ನಾವು ನೋಡುವಾಗ ಅದರ ಸ್ವರೂಪದಲ್ಲಿ ಇರುವ ತಾತ್ವಿಕ ಗ್ರಹಿಕೆಯನ್ನು ನೋಡಬೇಕಾಗುತ್ತದೆ. ಆಧುನಿಕತೆ ಮತ್ತು ಅದರ ಪರಿಣಾಮಗಳನ್ನು ನಾವು ಭಿನ್ನವಾಗಿಯೂ ಗಮನಿಸಬೇಕಾಗುತ್ತದೆ. ಅದರಲ್ಲಿ ಬರೀ ನೆಗೆಟಿವ್ ಆದ ಭಾವನೆಗಳು ಮಾತ್ರವೇ ಇದೆ ಎಂದು ಯಾರೂ ಭಾವಿಸಬಾರದು. ಅದರಲ್ಲಿ ಅನೇಕ ಅಂಶಗಳು ಇವೆ ಮತ್ತು ಅದರ ಕುರಿತು ಮತ್ತೆ ಮತ್ತೆ ಯೋಚನೆಯನ್ನು ಮಾಡಬೇಕಾಗುತ್ತದೆ. ಸಾಮೂಹಿಕವಾದ ಪ್ರಾತಿನಿಧೀಕರಣಕ್ಕೂ ಮತ್ತು ಅದರ ಅಭಿವ್ಯಕ್ತಿಗೂ ಒಂದು ಸಂಬಂಧವಿದೆ ಮತ್ತು ಅದನ್ನು ನೋಡುವಾಗ ನಾವು ಯಾವ ರೀತಿಯಲ್ಲಿ ಗ್ರಹಿಸುತ್ತೇವೆಯೋ ಅದರಲ್ಲಿ ಅನೇಕ ಅಂಶಗಳು ಸೇರ್ಪಡೆಯಾಗಿರುತ್ತದೆ ಮತ್ತು ಅನೇಕ ಸಂದರ್ಭದಲ್ಲಿ ವ್ಯಕ್ತಿವಾದ ಮತ್ತು ಸಮಾಜವು ಜೊತೆಯಲ್ಲಿ ಇರುತ್ತದೆ. ಮತ್ತು ಅದನ್ನು ಬೇರ್ಪಡಿಸಲು ಆಗುವುದೇ ಇಲ್ಲ. ಸಮೂಹ ಮತ್ತು ಜೀವನವು ಹೇಗೆ ಅಭಿವ್ಯಕ್ತಿಯಾಗುತ್ತದೆ ಮತ್ತು ಯಾವ ರೀತಿಯಲ್ಲಿ ಅದು ವ್ಯಕ್ತವಾಗುತ್ತದೆ ಎನ್ನುವುದೂ ಅಷ್ಟೇ ಮುಖ್ಯವಾದ ಸಂಗತಿಯೂ ಆಗಿದೆ. ಇಲ್ಲಿ ಗಮನಿಸಬೇಕಾದ ಮತ್ತೆ ಕೆಲವು ಅಂಶಗಳೂ ಇವೆ. ಮತ್ತು ಅದನ್ನು ನಾವು ಸಮಾಜ ಮತ್ತು ಅದರ ಅಭಿವ್ಯಕ್ತಿಯ ಕ್ರಮದಲ್ಲಿ ಕಾಣಬಹುದು.

ಯಾವುದನ್ನು ನಾವು ಈಗ ತಾತ್ವಿಕತೆಯೆಂದು ಹೇಳುತ್ತೇವೆಯೋ ಅದರ ಮುಖಗಳು ಒಂದೇ ಆಗಿಲ್ಲ. ಮತ್ತು ಅದರ ಕ್ರಿಯೆಗಳೂ ಕೂಡಾ ಒಂದೇ ರೀತಿಯದು ಅಲ್ಲ. ಮತ್ತು ಅದು ಬೇರೆಯಾಗುತ್ತದೆ. ಮತ್ತು ಅದರ ಲಕ್ಷಣವೂ ಒಂದೇ ಅಲ್ಲ. ಆದರೆ ತಾತ್ವಿಕತೆ ಮತ್ತು ಅದರ ಪರಿಣಾಮಗಳನ್ನು ನೋಡದೇ ನಾವು ಅನೇಕ ಸರ್ತಿ ಅದನ್ನು ನಿರಾಕರಿಸುವುದು ಸರಿಯಾದ ಕ್ರಮವಲ್ಲ ಎನ್ನುವುದೂ ಮಾರ್ಕ್ಸ್‌ವಾದ ಸರಿಯಾದ ನಿಲುವು. ವಾಸ್ತವತೆ ಮತ್ತು ಅದರ ಸ್ವರೂಪಗಳನ್ನು ನಾವು ಒಂದು ಕೋನದಲ್ಲಿ ಮಾತ್ರವೇ ನೋಡಲು ಬರುವುದೂ ಇಲ್ಲ. ಅದರಲ್ಲಿ ತಕರಾರುಗಳು ಇವೆ. ವಾಸ್ತವವಾದ ಮತ್ತು ಆಧುನಿಕತಾವಾದದಲ್ಲಿ ವ್ಯತ್ಯಾಸವಿದೆ. ಆಧುನಿಕತೆಯು ಉಂಟಾಗುವುದೂ ನಿರ್ದಿಷ್ಟವಾದ ಒಂದು ನಿಲುವು ಇದ್ದಾಗ ಮಾತ್ರವೇ. ಜನಪ್ರಿಯವಾದ, ನಿಸರ್ಗವಾದ, ಸಮಾಜವಾದ, ಮಾಧ್ಯಮಗಳು, ಇತ್ಯಾದಿಗಳಲ್ಲಿ ಕೆಲವು ರಾಜಕಾರಣ ಮತ್ತು ಮತ್ತೆ ಕೆಲವು ರಾಜಕೀಯವಲ್ಲದ ನಿಲುವುಗಳನ್ನು ಹೇಳುತ್ತವೆ. ಇವುಗಳ ಬುನಾದಿಗಳೂ ಭಿನ್ನವಾಗಿದೆ. ರಾಜಕಾರಣ ಮತ್ತು ಅದರ ಬದ್ಧತೆಗೆ ಒಂದು ಸರಿಯಾದ ನಿಲುವು ಬೇಕಾಗುತ್ತದೆ. ಇವುಗಳ ಸ್ವರೂಪವೂ ಬೇರೆಯಾಗುತ್ತದೆ. ರಾಜಕೀಯ ಆಧುನಿಕತೆಗೆ ನಿರ್ದಿಷ್ಟವಾದ ಒಂದು

ನಿಲುವೂ ಇದೆ. ಅದನ್ನು ಹೀಗೆ ಹೇಳಬಹುದು : ಯಾವುದನ್ನು ಈಗ ಹೊಸ ನಿರೂಪಣೆ ಎಂದು ಹೇಳುತ್ತವೆಯೋ ಅದನ್ನು ನಾವು ನೋಡುವುದು ಎಂದರೆ ಅದರ ರಾಜಕಾರಣವು ಎಲ್ಲಿದೆ ಎಂದು ನೋಡುವುದೂ ಹೌದು. ನಿರೂಪಣೆಯ ಶಾಸ್ತ್ರವೂ ಒಂದು ಬಗೆಯಲ್ಲಿ ನಿರ್ದಿಷ್ಟವಾದ ನಿಲುವನ್ನು ಹೊಂದಿರುತ್ತದೆ. ಅದನ್ನು ಶಾಸ್ತ್ರವೇ ಅಲ್ಲವೆಂದು ಯಾರೂ ಭಾವಿಸಬಾರದು. ಯಾವುದೇ ನಿರೂಪಣೆಯನ್ನು ಒಬ್ಬರು ಮಾಡುತ್ತಿದ್ದಾರೆ ಎಂದರೆ ಅದನ್ನು ಸ್ವಾಯತ್ತವಾದ ಒಂದು ಪ್ರಕ್ರಿಯೆ ಎಂದು ಭಾವಿಸಬೇಕಾದ ಯಾವ ಅಗತ್ಯವೂ ಇಲ್ಲ. ಆಧುನಿಕತಾವಾದ; ಅದರ ಪ್ರತಿನಿಧೀಕರಣ, ಭಾಷೆ, ಮತ್ತು ಅದರ ಪ್ರಕಾರದಲ್ಲಿ ಕಾಣಿಸಿಕೊಳ್ಳುತ್ತದೆ. ಸಾಂಪ್ರದಾಯಿಕವಾದ ಕಾಮಿಡಿ, ದುರಂತ, ಲಿರಿಕ್, ಎಪಿಕ್ ಮತ್ತು ನಾಟಕೀಯತೆಯ ಸ್ವರೂಪವು ಈಗ ಇಲ್ಲವಾಗಿದೆ ಅಥವಾ ಬದಲಾಗಿದೆ. ಆದರೆ ಸೌಂದರ್ಯವೆನ್ನುವುದೇ ಪ್ರತ್ಯೇಕವಾದ ಒಂದು ವಿಷಯವೆಂದು ಹೇಳಿದವರು ಆಧುನಿಕತಾವಾದಿಗಳು. ಅವರಿಗೆ ಸೌಂದರ್ಯದ ಸ್ಥಾನಮಾನವೇ ಬಹಳ ಮುಖ್ಯವಾಯಿತು. ಹಳೆಯ ಪ್ರಕಾರಗಳು ಈಗ ಅರ್ಥಹೀನವೆಂದು ಹೇಳುವುದಕ್ಕೆ ಬಹಳ ಮುಖ್ಯವಾದ ಒಂದು ಕಾರಣವೆಂದರೆ ಅದರ ಕ್ರಿಯೆಗಳೇ ಸರಿಯಾದ ರೀತಿಯಲ್ಲಿ ಇಲ್ಲ ಎಂದು ಆಧುನಿಕತಾವಾದಿಗಳು ಹೇಳುತ್ತಾರೆ. ಸಾಮಾಜಿಕ ಜೀವನವು ಕೆಲವನ್ನು ಉಳಿಸಿಕೊಳ್ಳುತ್ತದೆ. ಮತ್ತು ಕೆಲವನ್ನು ನಿರಾಕರಿಸುತ್ತದೆ. ಹೀಗೆ ನಿರಾಕರಿಸಲು ಕಾರಣವೆಂದರೆ ಅದರ ಕ್ರಿಯೆಗಳು ಮತ್ತು ಅವುಗಳ ಅರ್ಥವಂತಿಕೆಗಳು.

ಹಾಗೆ ನೋಡುವುದಿದ್ದರೆ ಯಾವುದೇ ಸಾಂಪ್ರದಾಯಿಕವಾದ ಕಲೆಯು ಆ ಕಾಲದ ಅಗತ್ಯಗಳೂ ಆಗಿದ್ದವು ಮತ್ತು ಅದರಲ್ಲಿ ಆಯಾ ಸಮಾಜ ಮತ್ತು ಅದರ ಬಯಕೆಗಳು ಮುಖ್ಯವಾಗಿದ್ದವು. ವಾಸ್ತವವಾದ ಕೂಡಾ ಒಂದು ಸೌಂದರ್ಯದ ಅಂಶವನ್ನು ಹೇಳುತ್ತದೆ. ಅದೂ ಆಧುನಿಕವಾಗಿತ್ತು. ಮತ್ತು ಅದರ ಸಾಧ್ಯತೆಯೂ ಬೇರೆಯಾಗಿತ್ತು. ಅದರಲ್ಲಿ ಹೊಸಮೌಲ್ಯಗಳೂ ಇದ್ದವು. ಅದನ್ನು ಆಗ ಅತ್ಯಂತ ಸೆಕ್ಯುಲರ್ ಎಂದೇ ಹೇಳಿದ್ದರು. ಮತ್ತು ಅದರ ಕ್ರಿಯೆ ಮತ್ತು ಅದರ ಸ್ವರೂಪವನ್ನು ನಾವು ಒಂದು ಸಂಗತಿಯೆಂದು ಹೇಳಲು ಸಾಧ್ಯವಾಗಿರಲಿಲ್ಲ. ಅದು ಯಾವುದನ್ನು ಹೇಳುತ್ತದೆ ಮತ್ತು ಹೇಗೆ ಹೇಳುತ್ತದೆ ಯಾವ ರೀತಿಯಲ್ಲಿ ಹೇಳುತ್ತದೆ ಎನ್ನುವುದಕ್ಕೆ ಒಂದು ಇತ್ಯಾತ್ಮಕವಾದ ಸ್ವರೂಪವೂ ಇರಲಿಲ್ಲ. ನಿಜವನ್ನು ಲೇಖಕನು ನಿರೂಪಿಸಿದರೆ ಸಾಕು ಎನ್ನುವ ಭಾವನೆಯು ಮಾತ್ರವೇ ಇತ್ತು. ಅದು ಹೇಳಿದ ಮೌಲ್ಯಗಳು ಒಂದು ಬಗೆಯ ಜ್ಞಾನವನ್ನು ಮಾತ್ರವೇ ಹೇಳಿದ್ದವು. ಹೊರಗಿನ ಜ್ಞಾನ, ಅದರ ನಿರೂಪಣೆ, ಅದರ ಹಿಂದೆ ಇರುವ ಜ್ಞಾನವೂ ಭಿನ್ನವಾಗಿತ್ತು. ಅದು ನಿರೂಪಿಸಿದ ಜ್ಞಾನವು ಯಾವ ಬಗೆಯದು ಮತ್ತು ಅದರ ಜ್ಞಾನವು ಹೇಗೆ ಇತ್ತು ಎನ್ನುವುದೇ ಪ್ರಶ್ನೆಯೂ

ಆಗಿದೆ. ಅದನ್ನು ಒಂದು ಬಗೆಯ ಸಂಕಥನವೆಂದೂ ನಾವು ಭಾವಿಸಬೇಕಾದ ಅಗತ್ಯವೂ ಇದೆ. ಆದರೆ ಯಾವುದೇ ಕಲೆಯು ವಾಸ್ತವವಾಗಿದೆಯೇ ಇಲ್ಲ ಬೇರೆ ಮಾದರಿಯಲ್ಲಿ ಇದೆಯೇ ಎನ್ನುವುದನ್ನು ಗ್ರಹಿಸಲು ನಾವು ಅದರ ಆಶಯವನ್ನು ನೋಡಬೇಕಾಗುತ್ತದೆ ಮತ್ತು ಅದರ ಸ್ವರೂಪವೂ ಹೇಗಿದೆ ಎಂದು ಗ್ರಹಿಸಬೇಕಾಗುತ್ತದೆ. ಅಂದರೆ ವಾಸ್ತವವಾದದ ಹಿಂದೆ ನಿರ್ದಿಷ್ಟವಾದ ಒಂದು ಶಕ್ತಿಯು ಇದೆ. ಅದು ಯಾವುದು ಎಂದು ನಾವು ನೋಡಬೇಕಾಗುತ್ತದೆ.

ವಾಸ್ತವವಾದವು ಚರಿತ್ರೆಯ ಒಂದು ತುಣುಕು ಕೂಡಾ ಹೌದು. ಅದನ್ನು ಅದೇ ರೀತಿಯಲ್ಲಿ ನೋಡಬೇಕಾಗುತ್ತದೆ. ಅಂದರೆ ಚರಿತ್ರೆ ಮತ್ತು ಅದರ ಪರಿಣಾಮಗಳನ್ನು ನಾವು ವಾಸ್ತವವಾದದಲ್ಲಿ ಕಾಣಬಹುದು. ಅದು ದ್ವಂದ್ವಾತ್ಮಕತೆಯನ್ನು ಹೊಂದಿದೆ. ಅದರಲ್ಲಿ ನಾವು ಚರಿತ್ರೆಯ ಸಂಗತಿಗಳನ್ನು ದ್ವಂದ್ವಾತ್ಮಕವಾದ ಚಿತ್ರವನ್ನು ಹೇಳುವ ಕನ್ನಡಿಯಂತೆ ನೋಡಬೇಕಾಗುತ್ತದೆ. ಅದರಲ್ಲಿ ವೈರುಧ್ಯಗಳು ಇದ್ದೇ ಇರುತ್ತವೆ. ಅದು ಒಂದು ಕ್ಷಣವನ್ನು ಮಾತ್ರವೇ ಹೇಳುವುದೂ ಇಲ್ಲ. ಅದರಲ್ಲಿ ವೈದೃಶ್ಯಗಳು ಇವೆ. ವಾಸ್ತವವಾದ ಕಾದಂಬರಿಗಳ ಮತ್ತೊಂದು ವಿಶೇಷವೆಂದರೆ ಅದರಲ್ಲಿ ಸಾಮಾನ್ಯವಾದ ಭಾಷೆಯೂ ಇರುತ್ತದೆ. ಅದೇ ಅದರ ಶಕ್ತಿ. ಚಾರಿತ್ರಿಕತೆಯ ಅನೇಕ ಸಂಘರ್ಷಗಳನ್ನು ಅದು ಬಿಡಿಸಿ ಹೇಳಿಕೊಳ್ಳುತ್ತದೆ. ಒಂದು ದೃಷ್ಟಿಯಿಂದ ಅದು ಪ್ರಾಕ್ತನವಾದ ಭೂತಕಾಲವನ್ನು ಹೇಳುತ್ತದೆ. ಅಂದರೆ ಅದರಲ್ಲಿ ಕಳೆದ ಸಂಗತಿಗಳ ವಿಶಿಷ್ಟವಾದ ನಿರೂಪಣೆಯೂ ಇರುತ್ತದೆ. ವಾಸ್ತವವಾದವು ಅದನ್ನು ವಿಶಿಷ್ಟವಾಗಿ ನಿರೂಪಿಸುತ್ತದೆ. ವಾಸ್ತವತೆಯು ಕೆಲವು ಕೇಂದ್ರಗಳನ್ನು ಒಳಗೊಂಡಿರುತ್ತದೆ ಮತ್ತು ಅದರಲ್ಲಿ ವಿಶಿಷ್ಟವಾದ ಒಂದು ಶಕ್ತಿಯಿರುತ್ತದೆ. ಆದರೆ ಯಾವುದನ್ನು ನಾವು ಹೀಗೆ ಹೇಳುತ್ತೇವೆಯೋ ಅದರ ಬಗ್ಗೆ ರಚನೋತ್ತರವಾದವು ಕೆಲವು ಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ವರ್ಗೀಕರಣವೇ ಬೇಡವೆಂದು ಅದರ ಅಭಿಪ್ರಾಯವಾಗಿದೆ.

ರಚನೋತ್ತರವಾದವು ಮೀಡಿಯೇಶನ್ ಮತ್ತು ಅದರ ಪರಿಣಾಮಗಳನ್ನು ಹೇಳುತ್ತದೆ. ಲುಕಾಕ್ಸ್ ಕಾದಂಬರಿ ಮತ್ತು ಅದರ ಪರಿಣಾಮಗಳನ್ನು ಹೇಳುವಾಗ ಮತ್ತೆ ಕೆಲವು ವಿಷಯಗಳನ್ನು ಹೇಳುತ್ತಾನೆ. ಅವನು ಕಾದಂಬರಿ ಮತ್ತು ಸಂಸ್ಕೃತಿಯೆರಡನ್ನೂ ವಿವರಿಸುತ್ತಾನೆ. ಕಾದಂಬರಿಯೂ ಒಂದು ಬಗೆಯಲ್ಲಿ ಸಾಂಸ್ಕೃತಿಕ ಉತ್ಪಾದನೆ ಎನ್ನುವುದರಲ್ಲಿ ಎರಡು ಮಾತಿಲ್ಲ. ನಿಸರ್ಗವಾದವನ್ನು ವಾಸ್ತವವಾದವು ನಿರಾಕರಿಸಿದರೆ ಅದನ್ನು ಆಧುನಿಕವಾದವು ನಿರಾಕರಿಸಿತು. ಆಧುನಿಕತೆಯನ್ನು ಆಧುನಿಕೋತ್ತರವಾದವು ನಿರಾಕರಿಸಿತು. ಆದರೆ ಇದರಲ್ಲಿ ಭಿನ್ನತೆಗಳು ಇವೆ. ಆಧುನಿಕತೆ ಮತ್ತು ಅದರ ಪ್ರಭಾವವು ಒಂದು ಬಗೆಯದೇ

ಆದರೆ ಅದರ ಅನಂತರದ ತರ್ಕಗಳು ಬೇರೆಯಾದವು. ಆದರೆ ಆಧುನಿಕತೆಯನ್ನು ಸಮರ್ಥಿಸುವವರು ಹೇಳುವುದೇ ಬೇರೆ. ಅವರ ಪ್ರಕಾರ ಆಧುನಿಕತೆಯು ಜೀವನದ ಅತ್ಯಂತ ಮುಖ್ಯವಾದ ಮೌಲ್ಯಗಳಲ್ಲಿ ಒಂದು. ಅದರಲ್ಲಿ ವಿವಿಧ ನೆಲೆಗಟ್ಟುಗಳು ಇವೆ. ಅದನ್ನು ನೋಡುವಾಗ ನಿಜವಾಗಿಯೂ ನಾವು ಯಾವುದಕ್ಕೆ ಬದ್ಧರಾಗಿರಬೇಕೆಂದು ಅನಿಸುವುದೇ ಇಲ್ಲವೆನ್ನುವುದು ಅದರ ಪ್ರತಿಪಾದನೆಯೂ ಆಗಿದೆ.

ವಾಸ್ತವವಾದವು ಅನೇಕ ರೀತಿಯಲ್ಲಿ ತನ್ನದೇ ಆದ ಶಕ್ತಿಯನ್ನು ಹೊಂದಿದೆ ಮತ್ತು ಅದು ಚಾರಿತ್ರಿಕವಾದ ಅಂಶಗಳನ್ನು ಹೊಂದಿದೆ. ಅಂದರೆ ಅದರಲ್ಲಿ ಬರುವ ವಿವರಗಳಲ್ಲಿ ಚರಿತ್ರೆಯ ಭಾಗಗಳೂ ಇರುತ್ತವೆ. ಅದು ದ್ವಂದ್ವಾತ್ಮಕವಾದ ಪ್ರತಿಫಲನವನ್ನು ಹೊಂದಿರುತ್ತದೆ. ಅದರಲ್ಲಿ ಅನೇಕ ವೈರುಧ್ಯಗಳೂ ಇರುತ್ತವೆ. ವಾಸ್ತವವಾದವು ಯಾವುದೇ ಒಂದು ಕ್ಷಣವನ್ನು ಮಾತ್ರವೇ ಹೇಳುವುದೂ ಇಲ್ಲ. ಅದರಲ್ಲಿ ಅನೇಕ ವಿಷಯಗಳ ನಿರೂಪಣೆಯು ಚರಿತ್ರೆ ಮತ್ತು ಅದರ ವಿವಿಧ ಘಟಕಗಳನ್ನು ಹೇಳುತ್ತದೆ. ವಾಸ್ತವವಾದದಲ್ಲಿ ಇರುವುದು ಮೂಲಭೂತವಾಗಿ ಸಾಮಾನ್ಯವಾದ ಒಂದು ಭಾಷೆಯ ಕ್ರಮವು ಮಾತ್ರವೇ. ಅದರಲ್ಲಿ ಚರಿತ್ರೆಯು ನಿರೂಪಣೆಯು ಹೀಗೆಯೇ ಇರಬೇಕಾಗುತ್ತದೆ ಎಂದು ಅರ್ಥವಲ್ಲ. ಅದು ಚರಿತ್ರೆಯ ಅನೇಕ ಸಂಘರ್ಷಗಳನ್ನು ಹೇಳುತ್ತದೆ. ಮತ್ತು ಅದರಲ್ಲಿ ಯಾವುದು ಕಳೆದು ಹೋಗಿದೆಯೋ ಅದರ ಸ್ವರೂಪವೇ ದಾಖಲಾಗಿರುತ್ತದೆ. ಅಂದರೆ ಯಾವುದೇ ವಾಸ್ತವವಾದಿ ಬರಹಗಳಲ್ಲಿ ಚಾರಿತ್ರಿಕ ಕ್ಷಣಗಳ ನಿರೂಪಣೆಯು ಇರುತ್ತದೆ. ಯಾಕೆಂದರೆ ಬರಹವು ಕಳೆದುದರ ನಿರೂಪಣೆ ಮಾತ್ರವೇ ಆಗಿರುತ್ತದೆ. ಮತ್ತು ಅದರಲ್ಲಿ ವಾದವನ್ನು ಹೇಳುವುದು ಅಥವಾ ಯಾವುದೇ ವ್ಯಕ್ತಿಯ ಒಳತೋಟಿಗಳನ್ನು ನಿರೂಪಿಸುವುದು ಅದರ ಗುರಿಯೂ ಆಗಿರುವುದೂ ಇಲ್ಲ.

ವಾಸ್ತವವಾದವು ಕೆಲವನ್ನು ನಿರ್ಧಾರಾತ್ಮಕವಾಗಿ ಹೇಳುತ್ತದೆ ಮತ್ತು ಅದರ ನಿರ್ಧಾರವು ಅದರ ತಾತ್ವಿಕ ಅಗತ್ಯವೂ ಆಗಿರುತ್ತದೆ. ಆದರೆ ಯಾವುದನ್ನು ಅದು ದಾಖಲಿಸುತ್ತದೆಯೋ ಅದರ ಕುರಿತಾಗಿಯೇ ಆಧುನಿಕತಾವಾದಕ್ಕೆ ಭಿನ್ನಾಭಿಪ್ರಾಯವೂ ಇರುತ್ತದೆ. ವಾಸ್ತವವಾದದ ನಿರೂಪಣೆಯ ಬಗ್ಗೆ ಆಧುನಿಕತಾವಾದಕ್ಕೆ ಯಾವುದೇ ಸಹಮತವು ಇಲ್ಲವಾಗಿದೆ. ವಾಸ್ತವವಾದ ಮತ್ತು ಅದರ ನಿರೂಪಣೆಯ ಕ್ರಮದ ಬಗ್ಗೆ ರಚನೋತ್ತರವಾದವು ಕೆಲವು ಆಕ್ಷೇಪಗಳನ್ನು ವ್ಯಕ್ತಪಡಿಸುತ್ತದೆ. ಅಂದರೆ ರಚನೋತ್ತರವಾದದ ಪ್ರಕಾರ ಅದು ಕೇವಲ ಕೆಲವನ್ನು ಮಾತ್ರವೇ ಸತ್ಯವೆಂದು ಹೇಳುತ್ತದೆ. ಮತ್ತು ಅದು ಹೇಳುವ ಸತ್ಯಗಳ ಅರ್ಥವೂ ಅತ್ಯಂತ ಸೀಮಿತವಾದ ಒಂದು ಪ್ರಕ್ರಿಯೆಯು ಆಗಿದೆ. ಆ ರೀತಿಯ ವರ್ಗಗಳ ಅಗತ್ಯವೇ ಇಲ್ಲವೆಂದು ಅವರ ನಿಲುವು ಆಗಿದೆ. ರಚನೋತ್ತರವಾದವು ವಾಸ್ತವವಾದ ಮತ್ತು ಅದರ

ಮಾಧ್ಯಮಗಳನ್ನು ಪ್ರಶ್ನಿಸುತ್ತದೆ. ಲುಕಾಕ್ಸ್ ಕಾದಂಬರಿ ಮತ್ತು ಅದರ ಸ್ವರೂಪವನ್ನು ಕುರಿತು ಹೇಳುವಾಗ ಅದರ ಹಿಂದೆ ಇರುವ ಸಂಸ್ಕೃತಿ ಮತ್ತು ಅದರ ಪರಿವರ್ತನೆಗಳನ್ನು ನಿರೂಪಿಸುತ್ತಾನೆ. ವಾಸ್ತವ ಮತ್ತು ಅದರ ಸತ್ಯಗಳ ಸ್ವರೂಪವನ್ನು ಹೇಳುವಾಗ ಅವನು ಸಂಸ್ಕೃತಿಗಳ ನಡುವಣ ಸಂಬಂಧವನ್ನು ನಿರೂಪಿಸುತ್ತಾನೆ. ಅಂದರೆ ಅವುಗಳಿಗೆ ನಿಜವಾದ ಸಂಬಂಧವಿರುತ್ತದೆ. ಅವನ ಪ್ರಕಾರ ಈ ಸಂಬಂಧವು ಅತ್ಯಂತ ಸಂಕೀರ್ಣವಾಗಿದೆ. ಮಾರ್ಕ್ಸ್‌ವಾದವು ಕಾದಂಬರಿಯನ್ನು ಒಂದು ನಿಜವಾದ ಸಾಂಸ್ಕೃತಿಕ ಉತ್ಪಾದನೆ ಎಂದು ಹೇಳುತ್ತದೆ. ವಾಸ್ತವತೆಯು ಈ ದೃಷ್ಟಿಯಿಂದ ಮಹತ್ವದ ಸಂಗತಿಯನ್ನು ಒಳಗೊಂಡಿರುತ್ತದೆ. ಮೂಲಭೂತವಾಗಿ ಅದು ನಿರ್ದಿಷ್ಟವಾದ ತಳಹದಿಯನ್ನು ಒಳಗೊಂಡಿರುತ್ತದೆ ಮತ್ತು ಅದರ ಬುನಾದಿಯು ಇರುವುದು ಸಮಾಜದಲ್ಲಿಯೂ ಹೌದು. ಆದರೆ ಅದರಲ್ಲಿ ಬರುವ ಸಂಗತಿಗಳನ್ನು ನಾವು ಒಂದು ನಿಯಮದಲ್ಲಿ ನೋಡಲು ಸಾಧ್ಯ. ಆದರೆ ಅದರ ನಿಯಮವನ್ನು ರಚನೋತ್ತರವಾದವು ಪ್ರಶ್ನಿಸುತ್ತದೆ. ಇಲ್ಲಿ ಸಹಜವಾದ ಮತ್ತು ಅದರ ಸ್ವರೂಪವನ್ನು ನಾವು ಹೇಳಬೇಕಾಗುತ್ತದೆ. ಅಂದರೆ ಸಹಜವಾದ ಕಲೆಯಲ್ಲಿ ಹೊರಗಣ ವಿವರ ಮತ್ತು ಅದರ ನಿರೂಪಣೆಯ ಕ್ರಮವು ಬೇರೆಯಾಗುತ್ತದೆ. ಅದು ಸಂಜ್ಞೆಯನ್ನು ಸ್ವೀಕರಿಸುವ ಕ್ರಮವು ಬೇರೆಯಾಗುತ್ತದೆ. ಅಂದರೆ ಅದರಲ್ಲಿ ಭಿನ್ನವಾದ ನೆಲೆಯು ಇದೆ. ನಿಸರ್ಗವಾದ ಮತ್ತು ಅದರ ಪರಿಣಾಮವನ್ನು ನೋಡಿದವರು ಅನಂತರ ಅದನ್ನು ನಿರಾಕರಿಸಿದರು ಮತ್ತು ಅದಕ್ಕಿಂತ ಭಿನ್ನವಾದ ಒಂದು ಸಂಗತಿಯು ಇದೆ ಎಂದು ವಾಸ್ತವವಾದಿಗಳು ಹೇಳುತ್ತಾ ಹೋದರು. ಅಂದರೆ ನಿಸರ್ಗವಾದವನ್ನು ನಿರಾಕರಿಸಿದ್ದರಿಂದಲೇ ವಾಸ್ತವವಾದವು ಹುಟ್ಟಿಕೊಂಡಿತು. ಅದಕ್ಕಿರುವ ತಾತ್ವಿಕ ಮತ್ತು ರಾಜಕೀಯ ನೆಲೆಗಳನ್ನು ವಾಸ್ತವವಾದವು ನೋಡಿರುವ ಕ್ರಮವೂ ಬೇರೆ. ಅಂದರೆ ನಿಸರ್ಗವಾದವನ್ನು ಅದು ಒಪ್ಪಿಕೊಳ್ಳಲಿಲ್ಲ. ವಾಸ್ತವವಾದವು ಹುಟ್ಟಿದ್ದೇ ಒಂದು ತಾತ್ವಿಕವಾದ ನೆಲೆಗಳಲ್ಲಿ. ಅದನ್ನು ನಾವು ಈ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ.

ಬ್ರೆಕ್ಟ್ ವಾಸ್ತವವನ್ನು ನೋಡಿದ ಕ್ರಮಗಳು ಬೇರೆಯಾಗಿವೆ. ಅವನು ಅದನ್ನು ಅವನು ಗ್ರಹಿಸುವಾಗ ಅದಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ್ದ. ಸಾಮಾಜಿಕ ಚರಿತ್ರೆಯು ಅವನಿಗೆ ಬಹಳ ಮುಖ್ಯವಾಗಿತ್ತು. ಅವನಲ್ಲಿ ಅದರಲ್ಲಿಯೂ ಅವನ ರಂಗ ಪ್ರದರ್ಶನದಲ್ಲಿ ವಾಸ್ತವತೆಯು ಅತ್ಯಂತ ಸಂಕೀರ್ಣವೂ ಆಗಿದೆ. ಅಂದರೆ ಅದನ್ನು ವ್ಯಕ್ತಪಡಿಸುವುದು ಮೂಲಭೂತವಾಗಿ ಅಂಚಿನಲ್ಲಿ ಇರುವವರನ್ನು ನೋಡಿಕೊಂಡು. ಅವನಿಗೆ ಸಭ್ಯರು ಅಷ್ಟು ಮುಖ್ಯರಾಗಲಿಲ್ಲ. ಅವನ ನಾಟಕದಲ್ಲಿ ಬರುವ ಪಾತ್ರಗಳೂ ಕೂಡಾ ಭಿನ್ನ. ಅವನಲ್ಲಿ ಅತ್ಯಂತ ವ್ಯಂಗ್ಯವೂ ಇದೆ. ಅದನ್ನು ನಾವು ರಾಜಕೀಯ ವ್ಯಂಗ್ಯವೆಂದು ಹೇಳಬಹುದು. ವಾಸ್ತವವಾದವನ್ನು ನೋಡುವಾಗ ಲುಕಾಕ್ಸ್ ಅದರ

ರೂಪವನ್ನು ಕೂಡಾ ವಿವರಿಸಿದ್ದನ್ನು ಇಲ್ಲಿ ದಾಖಲಿಸಬಹುದು. ಆದರೆ ಲುಕಾಕ್ಸ್ ಕಾದಂಬರಿಯನ್ನು ಒಂದು ರೂಪವಾಗಿ ನೋಡಿದ ಕ್ರಮವನ್ನು ಬ್ರೆಕ್ಟ್ ಪ್ರಶ್ನಿಸುತ್ತಾನೆ. ಕಾದಂಬರಿಯೂ ಕೂಡಾ ಒಂದು ಬುದ್ಧಿಜೀವಿಯಾದ ಪ್ರಕ್ರಿಯೆ ಎನ್ನುವುದನ್ನು ಇಲ್ಲಿ ಮರೆಯಬಾರದು. ಕಾದಂಬರಿಯನ್ನು ನೋಡುವ ಮತ್ತು ಅದನ್ನು ವಿಶ್ಲೇಷಿಸುವ ಕ್ರಮವನ್ನು ಮಾರ್ಕ್ಸ್‌ವಾದವು ಹೇಳಿದ ಕ್ರಮ ಮಾತ್ರವೇ ವಿಶಿಷ್ಟವಾಗಿದೆ. ಅದನ್ನು ಭಿನ್ನವಾಗಿಯೂ ನೋಡಬಹುದು. ಕಾದಂಬರಿಯನ್ನು ಒಂದು ವೈಜ್ಞಾನಿಕವಾದ ಕಾದಂಬರಿಯಲ್ಲಿ ನೋಡಬಹುದು ಎನ್ನುವುದನ್ನು ಮಾರ್ಕ್ಸ್‌ವಾದವು ಹೇಳಿತು. ಮತ್ತು ಅದುವೇ ನಮಗೆ ಹೊಸದಾದ ಗ್ರಹಿಕೆಯನ್ನು ಕೊಟ್ಟಿತು. ರೂಪನಿಷ್ಠರು ಪರಿಕರವನ್ನು ಬಳಸಿಕೊಂಡು ಹೇಗೆ ಕಾದಂಬರಿಯನ್ನು ಗ್ರಹಿಸಬಹುದು ಹೇಳಿದರು ಎನ್ನುವುದನ್ನು ಲುಕಾಕ್ಸ್ ಹೇಳಿದ. ಆದರೆ ರೂಪದ ಪ್ರಶ್ನೆಗಿಂತ ಅದರ ತಾತ್ವಿಕವಾದ ಪ್ರಶ್ನೆಯೇ ಬಹಳ ಮುಖ್ಯವೆಂದು ಬ್ರೆಕ್ಟ್‌ನ ಪ್ರತಿಪಾದನೆ. ಬ್ರೆಕ್ಟ್‌ನ ವಾಸ್ತವತೆ ಮತ್ತು ಅದರ ಪರಿಣಾಮಕಾರಿಯಾದ ನಿರೂಪಣೆಯನ್ನು ಒಳಗೊಂಡಿತ್ತು ಮತ್ತು ಅದನ್ನು ಅವನು ಹೇಳುವಾಗ ಹೇಗೆ ಹೇಳಬೇಕಾಗುತ್ತದೆ ಎಂದೂ ಪ್ರತಿಪಾದಿಸಿದ್ದ. ಅವನಲ್ಲಿ ವಾಸ್ತವತೆಯು ಈ ದೃಷ್ಟಿಯಿಂದ ಬೇರೆಯಾಗಿದೆ. ಅವನು ಸಾಮಾನ್ಯರು ಹೇಗೆ ರಂಗಕ್ಕೆ ಬರಬೇಕು ಮತ್ತು ಅದರಿಂದ ನೋಡುವವರ ಮೇಲೆ ಏನು ಪರಿಣಾಮವು ಆಗಲು ಸಾಧ್ಯ ಎನ್ನುವುದನ್ನೇ ಚರ್ಚಿಸಿದ್ದ. ವಸ್ತು ಮತ್ತು ಅದರ ರೂಪದ ವಿಶ್ಲೇಷಣೆಗೆ ಲುಕಾಕ್ಸ್ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾನೆ. ಅವನ ಪ್ರಕಾರ ವಸ್ತು ಮತ್ತು ಅದರ ನಿರೂಪಣೆಯು ವಾಸ್ತವವಾದದಲ್ಲಿ ಬೇರೆಯಾಗುತ್ತದೆ.

ಇಲ್ಲಿ ಮತ್ತೆ ಆಧುನಿಕತಾವಾದದ ಮತ್ತೊಂದು ನಿಲುವನ್ನು ನೋಡಬೇಕಾಗುತ್ತದೆ. ಆಧುನಿಕತಾವಾದವು ಸಾಮಾನ್ಯರು ಮತ್ತು ಅವರ ತಲ್ಲಣಗಳನ್ನು ಹೇಳುವುದೇ ಇಲ್ಲ. ಅದರಲ್ಲಿ ಒತ್ತಡಕ್ಕೆ ಒಳಗಾದ ಜನರ ಚಿತ್ರಣವೂ ಇಲ್ಲವಾಗಿದೆ. ಅದು ಚರಿತ್ರೆಯನ್ನು ನಿರಾಕರಿಸುತ್ತದೆ. ಸಮಾಜ ಮತ್ತು ರಾಜಕಾರಣವು ಅದರಲ್ಲಿ ಬರುವುದೇ ಇಲ್ಲ. ಸಮಾಜ ಮತ್ತು ರಾಜಕಾರಣವನ್ನು ಅದು ನಿರಾಕರಿಸುತ್ತದೆ. ವ್ಯಕ್ತಿಯ ಅನುಭವಕ್ಕೆ ಕೊಡಬೇಕಾದ ಪ್ರಾಶಸ್ತ್ಯವನ್ನು ಅದು ಒಂದು ಪ್ರಮಾಣವೆಂದು ಭಾವಿಸುತ್ತದೆ. ಲುಕಾಕ್ಸ್‌ನಲ್ಲಿ ಕಲೆ ಅದರ ತಾತ್ವಿಕತೆ, ಮತ್ತು ಅದರ ಹಿಂದೆ ಇರುವ ರಾಜಕಾರಣವು ಬಹಳ ಮುಖ್ಯವಾಗುತ್ತದೆ. ರಾಜಕಾರಣ ಮತ್ತು ಅದರ ಅನನ್ಯತೆಯು ಅದಕ್ಕೆ ಮುಖ್ಯವೆಂದು ಅವನ ಅಭಿಪ್ರಾಯವೂ ಆಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ.

ಮಾರ್ಕ್ಸ್‌ವಾದಿ ವಿಮರ್ಶೆಯಲ್ಲಿ ಚರಿತ್ರೆ ಮತ್ತು ವರ್ಗದ ಪ್ರಜ್ಞೆ ಎರಡೂ ಬಹಳ ಮುಖ್ಯವಾಗಿದೆ ಮತ್ತು ಅದರ ಯಾವುದೇ ಪ್ರಕಾರಕ್ಕೆ ಸೀಮಿತವಾದ ಒಂದು

ವಿಮರ್ಶೆಯ ಪದ್ಧತಿಯು ಅಲ್ಲ. ಅದು ರೂಪವನ್ನು ನೋಡುವುದೂ ಕೂಡಾ ಸಾಮಾಜಿಕ ಹಿನ್ನೆಲೆಯಲ್ಲಿ. ಸಮಾಜವು ಮಾತ್ರವೇ ಅದಕ್ಕೆ ಅತ್ಯಂತ ಮುಖ್ಯವಾದ ಸಂಗತಿಯೂ ಹೌದು. ಸಾಮಾಜಿಕ ಜೀವನ ಮತ್ತು ಅದರ ಸಾಧ್ಯತೆಯೇ ಬಹಳ ಮುಖ್ಯವಾಗುತ್ತದೆ. ಸಾಹಿತ್ಯದ ರೂಪವನ್ನು ನೋಡುವುದರಿಂದ ಅದು ಗೈರು ಹಾಜರಿಯಾಗುವ ಸಾಧ್ಯತೆಯು ಇದೆ ಎನ್ನುವುದು ಇಲ್ಲಿ ಉಲ್ಲೇಖನೀಯ. ಆದರೆ ಯಾವುದೇ ವಾಸ್ತವವಾದಿ ಕಲೆಯನ್ನು ನೋಡಿದರೆ ಅದರಲ್ಲಿ ಪ್ರಾತಿನಿಧಿಕತೆಯು ಭಿನ್ನವಾಗುತ್ತದೆ. ಅದನ್ನು ನೋಡುವಾಗ ಅದರ ರೂಪವನ್ನು ಮಾತ್ರವೇ ನಾವು ಗಮನಿಸಬೇಕಾದ ಯಾವ ಅಗತ್ಯವೂ ಇಲ್ಲ. ಅದರ ಬದಲು ಅದು ತಳೆಯುವ ಸಾಮಾಜಿಕ ನಿಲುವನ್ನು ನೋಡಬೇಕಾಗುತ್ತದೆ. ಅಂದರೆ ಅದರಲ್ಲಿ ಭಿನ್ನತೆಯು ಇದೆ. ಮಾರ್ಕ್ಸ್‌ವಾದವು ಸಮಾಜ ಮತ್ತು ಸೂಚಕ ಹಾಗೂ ಸೂಚಿತರ ನಡುವಣ ಸಂಬಂಧವನ್ನು ನೋಡುವ ಕ್ರಮಗಳು ಬೇರೆ. ಸಾಹಿತ್ಯದ ಕೃತಿಯನ್ನು ಅದು ಅಸಹಜವೆಂದು ಹೇಳುವುದೂ ಇಲ್ಲ. ಅನುಭವ ಮತ್ತು ಸಮಾಜದ ನಡುವೆ ಕೆಲವು ಹೊಂದಾಣಿಕೆಗಳು ಇವೆ. ಅದನ್ನು ನೋಡಬೇಕೆಂದು ಮಾರ್ಕ್ಸ್‌ವಾದವು ಹೇಳುತ್ತದೆ. ವಾಸ್ತವವಾದ ಮತ್ತು ಅದರ ನಿರೂಪಣೆಯನ್ನು ನಾವು ಈ ದೃಷ್ಟಿಯಿಂದ ಬಹಳ ಗಂಭೀರವಾದದ್ದು ಎಂದು ಭಾವಿಸಿದರೂ ಅದರ ರೂಪವು ಚರ್ಚೆಗೆ ಅರ್ಹವಾದದ್ದು ಎಂದು ಲುಕಾಕ್ಸ್ ಭಾವಿಸುತ್ತಾನೆ. ಅದನ್ನು ಅತ್ಯಂತ ಕುತೂಹಲಕಾರಿಯಾದದ್ದು ಎಂದು ಹೇಳುತ್ತಾನೆ. ಅದು ಸಂಕೀರ್ಣವಾಗಿದೆ ಎಂದು ಅವನ ಅಭಿಪ್ರಾಯವಾಗಿದೆ. ಮತ್ತು ಅದನ್ನು ನೋಡುವುದೂ ಎಂದರೆ ಸಮಾಜದ ಒಂದು ಕಾಲದ ಸ್ಥಿತಿಯನ್ನು ನೋಡುವುದೂ ಹೌದು. ಅದನ್ನು ಹೀಗೆಯೂ ಹೇಳಬಹುದು : ವಾಸ್ತವವಾದವು ನಿಜವನ್ನು ತನ್ನದೇ ಆದ ರೀತಿಯಲ್ಲಿ ನೋಡುತ್ತದೆ. ಮತ್ತು ಅದಕ್ಕೆ ಪ್ರತಿಕ್ರಿಯಿಸುತ್ತದೆ. ಅದನ್ನು ನಾವು ನೋಡಬೇಕಾಗುತ್ತದೆ ಎಂದು ಅವನ ವಾದವಾಗಿದೆ. ಆದರೆ ಬ್ರೆಕ್ಟ್‌ನಲ್ಲಿ ವಿಜ್ಞಾನ ಪರವಾದ ನಿಲುವು ಹೆಚ್ಚು ಕೆಲಸವನ್ನು ಮಾಡುತ್ತದೆ. ಅದರಲ್ಲಿ ಶಾಸ್ತ್ರೀಯತೆಯು ಇದೆ ಎಂದು ಅವನ ಭಾವನೆಯು ಆಗಿದೆ. ಆದರೆ ವಾಸ್ತವತೆಯು ಮೂಲಭೂತವಾಗಿ ಜಗತ್ತನ್ನು ಪ್ರತಿನಿಧಿಸುತ್ತದೆ. ಮತ್ತು ಅದರ ಮೂಲಕವೇ ಅನೇಕವನ್ನು ಅದು ಸಾಧಿಸುತ್ತದೆ. ವಾಸ್ತವವಾಗಿ ಅದೂ ಒಂದು ಬಗೆಯ ಉತ್ಪಾದನೆಯೂ ಆಗಿದೆ. ಅದನ್ನು ನಾವು ಬರೀ ಒಂದು ರೂಪವೆಂದು ಕಾಣಬಾರದು. ಮತ್ತು ಅದರಲ್ಲಿ ಬರೀ ಕಲಾತ್ಮಕತೆಯು ಮಾತ್ರವೇ ಭಾವಿಸಬಾರದು ಎನ್ನುವುದು ಬ್ರೆಕ್ಟನ ನಿಲುವು. ಅವನಲ್ಲಿ ಅದು ಒಂದೂ ಪ್ರಯೋಗವಾಗಿದೆ.

ಬ್ರೆಕ್ಟ್ ಹೇಳುವ ಸಂಗತಿಗಳನ್ನು ನಾವು ಗ್ರಹಿಸಬೇಕು. ಅವನು ಹೇಳುವುದು ವೈಜ್ಞಾನಿಕವಾದ ನಿಲುವುಗಳನ್ನು ಕಲೆಯ ಚರ್ಚೆಯಲ್ಲಿ ಅತ್ಯಂತ ಅಗತ್ಯ. ಅದು

ಜ್ಞಾನವನ್ನು ಸೂಚಿಸುತ್ತದೆ ಮತ್ತು ಅದರ ಅಗತ್ಯವು ಬಹಳವಿದೆ. ಅದು ಭಾವುಕವಾದ ಒಂದು ನಿಲುವು ಅಲ್ಲವೆನ್ನುವುದು ಅವನ ವಾದವಾಗಿದೆ. ಅದರಲ್ಲಿ ಶಾಸ್ತ್ರೀಯತೆಯ ಅಂಶವೂ ಇದೆ ಎನ್ನುವುದು ಅವನ ವಾದ. ವಾಸ್ತವವಾದ ಎನ್ನುವುದು ಈ ದೃಷ್ಟಿಯಿಂದ ಸರಿಯಾದ ಒಂದು ಪ್ರಕ್ರಿಯೆ ಎಂದೂ ಭಾವಿಸಬೇಕಾಗುತ್ತದೆ. ಲೇಖಕನು ವಾಸ್ತವವನ್ನು ಸರಿಯಾದ ರೀತಿಯಲ್ಲಿ ಹೇಳುವುದಕ್ಕೆ ಹೊರಟರೆ ಅದರಲ್ಲಿ ಹೊಸ ಸಾಧ್ಯತೆಯೂ ದೊರೆಯುತ್ತದೆ.. ಲೇಖಕನು ತನಗೆ ಬೇಕಾದ ನಿರ್ವಚನವನ್ನು ಮಾಡುತ್ತಾನೆ. ಮತ್ತು ವ್ಯಾಖ್ಯಾನಿಸುತ್ತಾನೆ. ಬ್ರೆಕ್ಟ್ ವಾಸ್ತವತೆ ಮತ್ತು ಅದರ ಹಿಂದೆ ಇರುವ ಅನುಕರಣೆಯ ತತ್ವವನ್ನು ಎತ್ತಿಹಿಡಿಯುತ್ತಾನೆ. ಅದನ್ನು ನಿರ್ದಿಷ್ಟವಾದ ಒಂದು ರಚನೆಯೆಂದು ಹೇಳಿದರೂ ಅಂತಿಮವಾಗಿ ಅದು ಯಾವುದರ ಜೊತೆಗೆ ಮುಖಾಮುಖಿಯಾಗುತ್ತದೆ ಎನ್ನುವುದೂ ಬಹಳ ಮುಖ್ಯವಾಗಿದೆ. ವಾಸ್ತವವಾದದಲ್ಲಿ ಭಾಷೆಯೂ ಒಂದು ಸಲಕರಣೆಯೂ ಆಗಿದೆ. ಭಾಷೆಯನ್ನು ನೋಡುವಾಗ ಅದರ ಸಾಧ್ಯತೆಯು ಬೇರೆಯಾಗುತ್ತದೆ. ವಾಸ್ತವವಾದದಲ್ಲಿ ಭಾಷೆಯು ಪಾರದರ್ಶಕತೆಯನ್ನು ಸೂಚಿಸುತ್ತದೆ. ಮತ್ತು ಅದರ ಮೂಲಕವೇ ಅದು ನಿಜವನ್ನು ನೋಡಲು ಯತ್ನವನ್ನು ಮಾಡುತ್ತದೆ. ಅಂದರೆ ವಾಸ್ತವವಾದ ಮತ್ತು ಅದರ ನಿಲುವು ಭಿನ್ನವಾದದ್ದೂ ಹೌದು.

ಲುಕಾಕ್ಸ್ ರೂಪವನ್ನು ನೋಡುವಾಗ ಅದರ ಹಿಂದೆ ಇರುವ ತಾತ್ವಿಕತೆ ಮತ್ತು ವೈಜ್ಞಾನಿಕತೆಯನ್ನೂ ಅರ್ಥಮಾಡಿಕೊಳ್ಳಲು ಯತ್ನವನ್ನು ಮಾಡಿಕೊಂಡಿದ್ದ. ಆದರೆ ಆಧುನಿಕತಾವಾದವು ಭಾಷೆ ಮತ್ತು ಅದರ ಅಪರಿಚಿತೀಕರಣವನ್ನು ಹೆಚ್ಚು ನಂಬುತ್ತದೆ. ಅದಕ್ಕೆ ಭಾಷೆ ಮತ್ತು ಅದರ ಹೊಸತನವೇ ಬಹಳ ಮುಖ್ಯವಾಗಿದೆ. ಅವರಿಗೆ ಕೃತಿಯನ್ನು ನೋಡುವುದು ಅಂದರೆ ಅದನ್ನು ಅವರು ಒಂದು ಮುಚ್ಚಿಕೊಂಡ ಜಗತ್ತು ಎಂದು ಭಾವಿಸುತ್ತಾರೆ. ಆಧುನಿಕತಾವಾದ ಮತ್ತು ರಾಜಕೀಯ ಆಧುನಿಕತೆಯ ಪ್ರಶ್ನೆಯು ಈ ದೃಷ್ಟಿಯಿಂದ ಭಿನ್ನವಾದ ಪ್ರಕ್ರಿಯೆಗಳು. ಆಧುನಿಕತಾವಾದದ ರಾಜಕೀಯ ಚಿಂತಕರು ಮಂಡಿಸುವ ವಿಚಾರಗಳು ಈ ದೃಷ್ಟಿಯಿಂದ ಭಿನ್ನವಾಗಿದೆ. ಆಧುನಿಕ ರಾಜಕೀಯ ಚಿಂತಕರು ಭಾವಿಸುವಂತ ಅಭಿವೃದ್ಧಿಯು ಒಂದು ರೀತಿಯಲ್ಲಿ ಮಾತ್ರವೇ ಇದೆ. ಅವರು ವ್ಯಕ್ತಿ ಮತ್ತು ಅವನ ಸ್ವಾಯತ್ತ ವಿಚಾರಗಳು ಮಾತ್ರವೇ ಪ್ರಧಾನವಾಗಿದೆ ಎಂದು ತಿಳಿದುಕೊಂಡಂತೆಯೂ ಇದೆ. ಅವರ ತಾತ್ವಿಕತೆಯು ಎಲ್ಲಿಗೆ ಹೋಗಿದೆ ಮತ್ತು ಹೇಗೆ ಹೋಗಿದೆ ಎನ್ನುವುದೂ ಇಲ್ಲಿ ಉಲ್ಲೇಖನೀಯ. ಆಧುನಿಕ ಮಾರುಕಟ್ಟೆಯು ಮಾಡುತ್ತಿರುವ ಹಣ ಮತ್ತು ಅದರ ಚಲಾವಣೆಯು ಮಾತ್ರವೇ ಅವರಿಗೆ ಬಹಳ ಮುಖ್ಯವಾಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ಆಧುನಿಕ ಆರ್ಥಿಕ ತಜ್ಞರು ಪ್ರಭುತ್ವಕ್ಕೆ ಬೇಕಾದ

ಕೆಲವು ನೀತಿಗಳನ್ನು ಮಾತ್ರವೇ ಹೇಳುತ್ತಾರೆ. ಅದು ಬೇರೆ ಪ್ರಶ್ನೆ. ಸಂಸ್ಕೃತಿಯನ್ನು ಈಗ ಆಧುನಿಕ ಜಗತ್ತು ಹೇಗೆ ನೋಡುತ್ತದೆ ಎನ್ನುವುದೂ ಅತ್ಯಂತ ಮುಖ್ಯವಾದ ಪ್ರಶ್ನೆಯು ಆಗಿದೆ. ಜಾಗತೀಕರಣಕ್ಕೆ ಸಂಸ್ಕೃತಿಯು ಅತ್ಯಂತ ಮುಖ್ಯವಾದ ಒಂದು ಸಂಗತಿಯು ಅಲ್ಲವಾಗಿದೆ ಆರ್ಥಿಕತೆ ಮತ್ತು ಅದರ ಚಲಾವಣೆಯು ಮಾತ್ರವೇ ಅದರ ಉದ್ದೇಶವೂ ಆಗಿದೆ.

ಭಕ್ತಿನ್ ಇದರ ಜೊತೆಗೆ ಇನ್ನೊಂದು ಅಂಶವನ್ನು ನಮ್ಮ ಗಮನಕ್ಕೆ ತರುತ್ತಾನೆ. ನಾವು ಹೇಗೆ ಸಾಹಿತ್ಯದಲ್ಲಿ ಇದನ್ನು ನೋಡುತ್ತೇವೆ ಎನ್ನುವುದಕ್ಕೂ ದೊಡ್ಡದಾದ ಇತಿಹಾಸವು ಇದೆ. ರಾಷ್ಟ್ರೀಯ ಮತ್ತು ಸ್ಥಳೀಯವಾದ ಅನೇಕ ಐತಿಹ್ಯ ಮತ್ತು ಪುರಾಣಗಳು ಒಂದು ವಿಶಿಷ್ಟವಾದ ಅನುಕರಣೆಯನ್ನು ಹೊಂದಿವೆ. ಅವುಗಳು ಭಾಷೆಯಲ್ಲಿ ವ್ಯಕ್ತವಾಗುತ್ತವೆ. ಸಾಹಿತ್ಯದಲ್ಲಿ ನಗು ಮತ್ತು ಅಳು ಎನ್ನುವುದು ಎರಡು ಪರಂಪರೆಗಳಾಗಿ ಬೆಳೆದು ಬಂದಿವೆ. ಕಲಾತ್ಮಕ ಮತ್ತು ಸಾಹಿತ್ಯಕವಾದ ನೆಲೆಯಲ್ಲಿ ಹೇಳುವುದಿದ್ದರೆ ರೋಮನ್ ಪರಂಪರೆಯು ನಮಗೆ ಬೇರೆ ವಿಚಾರಗಳನ್ನು ಹೇಳುತ್ತವೆ. ನಾವು ಇಲ್ಲಿ ಮತ್ತೊಮ್ಮೆ ರೋಮನ್ ಮತ್ತು ಅದರ ಕಾನೂನುಗಳ ಪ್ರಭಾವವನ್ನು ನೆನಪುಮಾಡಿಕೊಳ್ಳಬೇಕಾಗುತ್ತದೆ. ಸಾಹಿತ್ಯ ಮತ್ತು ಅದರ ಜ್ಞಾನಕ್ಕೂ, ಅದು ರೂಪಿಸುವ ಅತ್ಯಂತ ವಿಶಿಷ್ಟವಾದ ರೂಪಗಳಿಗೂ ಒಂದು ಸಂಬಂಧವು ಇದೆ. ರೋಮನ್ ಸಂಪ್ರದಾಯ ಎನ್ನುವುದು ನಮಗೆ ಈವತ್ತು ಬೇರೆ ಥರ ಕಾಣುತ್ತದೆ. ಆದರೆ ಇದು ಅಷ್ಟು ಸರಳವಾದ ಒಂದು ಪ್ರಕ್ರಿಯೆ ಅಲ್ಲ. ಕಲಾತ್ಮಕವಾದ ಒಂದು ಪ್ರಜ್ಞೆ ಎನ್ನುವುದು ಸ್ಥಳ ಮತ್ತು ಕಾಲವನ್ನು ಹೊಂದಿರುತ್ತದೆ ಎಂದು ಈಗಾಗಲೆ ವಿವರಿಸಲಾಗಿದೆ. ಇದು ರೋಮನ್ ಪರಂಪರೆಗೂ ಅನ್ವಯವಾಗುತ್ತದೆ. ಒಂದು ಮಾತನ್ನು ನಾವು ಇಲ್ಲಿ ಹೇಳಬೇಕು: ಒಂದು ಸಂಸ್ಕೃತಿಯು ತನಗೆ ಬೇಕಾದ ಕಲೆಯನ್ನು ಸೃಷ್ಟಿ ಮಾಡುವಾಗ ಅದರಲ್ಲಿ ಅಗತ್ಯವೆನ್ನುವುದು ಇರುತ್ತದೆ. ಅದರಲ್ಲಿ ಪರಂಪರೆಯು ಇರುತ್ತದೆ. ಅದರ ಜೊತೆಗೆ ತನ್ನದೇ ಆದ ಒಂದು ಇತಿಹಾಸವೂ ಇರುತ್ತದೆ. ಒಂದು ಮಾತು ಇದೆ. ಪ್ರಕಾರಗಳು ಮತ್ತು ಸಂಕಥನಗಳು ಜೊತೆಗೆ ಇರುತ್ತವೆ. ನಾವು ಪ್ರಕಾರಗಳನ್ನು ನಾವು ಗುರುತಿಸುವುದು ಹೇಗೆ? ಈ ಪ್ರಶ್ನೆಯು ಬಹಳ ಮೊದಲಿನಿಂದಲೂ ಇದೆ. ಆದರೆ ಇದಕ್ಕೆ ನಮಗೆ ಬೇಕಾದ ಉತ್ತರವೂ ಇದೆ. ಪ್ರಕಾರ ಮತ್ತು ವಸ್ತು ಎನ್ನುವುದು ನಮಗೆ ಅರ್ಥವಾಗುವುದು ಅದರ ಭಾಷೆಯಲ್ಲಿ ಎನ್ನುವುದು ಸ್ಪಷ್ಟ. (ಭಕ್ತಿನ್– ಡಯಾಲಜಿಕಲ್ ಇಮಾಜಿನೇಶನ್)

ಇದು ಕೂಡಾ ನಮಗೆ ರಚನೆಯ ಒಂದು ಬಗೆಯನ್ನು ಹೇಳುತ್ತದೆ. ಒಂದು ಕೃತಿಯಲ್ಲಿ ವಿಡಂಬನೆ ಮತ್ತು ವ್ಯಂಗ್ಯವು ಯಾಕೆ ಬರುತ್ತದೆ ಅಥವಾ ಅದರ ಅಗತ್ಯವೇನು ಎಂದು ಕೇಳಬಹುದು. ಅದು ಕಾವ್ಯದಲ್ಲಿ ಮತ್ತು ಕಾದಂಬರಿಯಲ್ಲಿ

ಅತ್ಯಂತ ಅಗತ್ಯ. ಅದರ ಮೂಲಕ ನಾವು ವಾಚ್ಯವನ್ನು ಮೀರುತ್ತೇವೆ. ಸಾಹಿತ್ಯದ ದೃಷ್ಟಿಯಿಂದ ಅದು ಮುಖ್ಯ. ವಾಸ್ತವವಾಗಿ ಕಾಮಿಡಿ ಎನ್ನುವುದು ಹೇಗೆ ಜನರನ್ನು ರಂಜಿಸುತ್ತದೆಯೋ ಅದೇ ಮಾದರಿಯಲ್ಲಿ ಗಂಭೀರವಾದ ನಾಟಕಗಳು ಇರುವುದಿಲ್ಲ. ಗಂಭೀರ ಎನ್ನುವುದು ನಮಗೆ ದುರಂತವನ್ನು ಮಾತ್ರವೇ ಸೂಚಿಸುತ್ತವೆ. ಅವನತಿಯು ಆಗದೇ ಹೋದರೆ ಅದರಲ್ಲಿ ದುರಂತ ಎನ್ನುವುದು ಬರಲಾರದು. ವಾಸ್ತವವಾಗಿ ದುರಂತ ಎನ್ನುವುದು ರಾಚನಿಕವಾದ ವಿನ್ಯಾಸವೂ ಹೌದು. ಕಾದಂಬರಿಯಲ್ಲಿ ನಾವು ದುರಂತವನ್ನು ಇನ್ನೊಂದು ರೀತಿಯಲ್ಲಿಯೂ ಗಮನಿಸಲು ಸಾಧ್ಯವಿದೆ. ಬಹುತ್ವ ಮತ್ತು ಅದರ ಸಾಧ್ಯತೆಯು ನಮಗೆ ಕಾದಂಬರಿಯಲ್ಲಿ ಕಾಣುತ್ತದೆ. ಮೂಲಭೂತವಾಗಿ ಕಾದಂಬರಿ ಎನ್ನುವುದು ಬಹು ಸಾಧ್ಯತೆಯನ್ನು ಹೇಳುತ್ತದೆ. ಒಂದು ಅಂಶವು ನಮಗೆ ಗೊತ್ತಿರಬೇಕು: ಕಾದಂಬರಿ ಎನ್ನುವುದು ಮೂಲಭೂತವಾಗಿ ಘಟನೆಯನ್ನು ಹೇಳುತ್ತದೆ. ಘಟನೆ ಎನ್ನುವುದು ಇಲ್ಲದೆ ಹೋದರೆ ಅಲ್ಲಿ ಕಾದಂಬರಿ ಎನ್ನುವುದು ಇರಲಾರದು. ವಾಸ್ತವವಾದದಲ್ಲಿ ಇವುಗಳು ನಮಗೆ ಬೇರೆ ರೀತಿಯ ಸಂವಹನವನ್ನು ನಿರೂಪಿಸುತ್ತವೆ. ಅದರ ಸಂಕಥನದ ಮಾದರಿಯು ಕೂಡಾ ಭಿನ್ನವಾಗುತ್ತದೆ. ಅದರದು ನೇರವಾದ ಶೈಲಿ. ಅದು ಕಪಟ ರಹಿತವಾದ್ದು. ಅದರಲ್ಲಿ ರೂಪಕಗಳ ಮೆರವಣಿಗೆಯು ಇದೆ. ಅದರಲ್ಲಿ ಅಸಾಂಗತ್ಯವಿಲ್ಲ. ಲೇಖಕನು ಯಾವುದನ್ನು ಯೋಚನೆ ಮಾಡುತ್ತಾನೆಯೋ ಅದನ್ನೇ ನೇರವಾಗಿ ಹೇಳುತ್ತಾನೆ. ಪದಗಳನ್ನು ಹೇಳುವಾಗ ಅದರಲ್ಲಿ ಅರ್ಥ ಕೂಡಾ ನೇರವಾಗುತ್ತದೆ. ಈ ಕಾರಣದಿಂದ ಅದು ಭಿನ್ನವಾದ ಒಂದು ನೆಲೆಯನ್ನು ಹೇಳುತ್ತದೆ. ವಸ್ತು ಮತ್ತು ಅದರ ನಿರೂಪಣೆಯು ಇಲ್ಲಿ ಒಂದು ಪಲ್ಲಟವನ್ನು ಹೇಳುತ್ತದೆ. ಅದರ ರೂಪವನ್ನು ನೋಡಿದರೆ ನಮಗೆ ಲೇಖಕ ಯಾವ ಜಾಗದಲ್ಲಿ ನಿಂತಿದ್ದಾನೆ ಎನ್ನುವುದು ಖಚಿತವಾಗುತ್ತದೆ. ಆದರೆ ಇದೇ ಮಾತನ್ನು ನಾವು ಭಾವಗೀತೆ. ಮಹಾಕಾವ್ಯಗಳಲ್ಲಿ ಕಾಣುವುದಿಲ್ಲ. ದುರಂತದ ಸಮಗ್ರತೆಯು ಹೇಗೆ ಕ್ರಿಯೆ, ವಸ್ತು ಮತ್ತು ಕಾಲವನ್ನು ಏಕಗೊಳಿಸಿಕೊಂಡು ಇರುತ್ತದೆಯೋ ಅದನ್ನೇ ನಾವು ಕಾದಂಬರಿಗೆ ಅನ್ವಯ ಮಾಡುವುದಿಲ್ಲ. ಲೇಖಕನ ಪ್ರಜ್ಞೆಯು ವಾಸ್ತವದಲ್ಲಿ ಒಂದು ದಾರಿಯಲ್ಲಿ ಇರುತ್ತದೆ. ವಾಸ್ತವದಲ್ಲಿ ನಾವು ಒಂದು ಬಗೆಯ ಪರಿವರ್ತನೆಯನ್ನು ನೋಡುತ್ತೇವೆ.

ಹತ್ತೊಂಬತ್ತನೆಯ ಕಾಲದಲ್ಲಿ ವಾಸ್ತವ ಮತ್ತು ಅದರ ಕಾರ್ಯಗಳನ್ನು ಗ್ರಹಿಸಲಿಕ್ಕೆ ಬೇರೆ ಬೇರೆ ಪ್ರಯತ್ನವನ್ನು ಮಾಡಿದ್ದೇವೆ. ಹಾಗೆ ನೋಡಿದರೆ ನಮಗೆ ವಾಸ್ತವ ಮತ್ತು ಅದರ ಪ್ರಾತಿನಿಧ್ಯ ಎನ್ನುವುದು ಅತ್ಯಂತ ಮುಖ್ಯವಾದ ಕಲಾತ್ಮಕವಾದ ಸಾಧ್ಯತೆಯು ಆಗಿತ್ತು. ತಾತ್ವಿಕವಾಗಿ ಹೇಳುವುದಿದ್ದರೆ ವಾಸ್ತವ ಮತ್ತು ಅದರ ಮೇಲೆ ಆದ ವಿವಿಧ ಪರಿಣಾಮಗಳನ್ನು ಪ್ರಭಾವದ ಕ್ರೋಢೀಕರಣ ಎಂದು ಹೇಳಬಹುದು.

ಹತ್ತೊಂಬತ್ತನೆಯ ಶತಮಾನದಲ್ಲಿ ಇದು ಮಹತ್ವದ ತಿರುವು ಹೌದು. ಜಾಗತೀಕರಣ ಮತ್ತು ಹಣಕಾಸು ವಿನಿಮಯ ಈವತ್ತು ಕೆಲವು ಹೊಸ ಪರಿಕಲ್ಪನೆಯನ್ನು ಹುಟ್ಟು ಹಾಕಿದೆ. ಅದರಲ್ಲಿ ವಾಸ್ತವದ ವಿವರಣೆಗಳು ಹೇಗೆ ಭಿನ್ನವಾಗುತ್ತವೆ ಎನ್ನುವ ಚರ್ಚೆಯೂ ಇದೆ. ಬಂಡವಾಳವಾದ ಹೇಗೆ ತನ್ನ ಅಧಿಕಾರವನ್ನು ವಿವಿಧ ರೀತಿಯ ಪರಿಕರಗಳನ್ನು ಹೊಂದಿವೆ ಎನ್ನುವುದೂ ನಾವು ಗಮನಿಸಬೇಕಾದ ವಿಚಾರ. ಅದು ಕೆಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಅದನ್ನು ನಾವು ಯಾವುದೇ ಪರಿಣಾಮವನ್ನು ಬೀರದ ಒಂದು ಕ್ಷೇತ್ರ ಎಂದು ತಿಳಿಯಬಾರದು. ಜೇಮ್ಸನ್ ಪರಿಣಾಮ ಮತ್ತು ಪ್ರಭಾವದ ಕ್ರೋಢೀಕರಣ ಎನ್ನುವುದನ್ನು ವಿಶಿಷ್ಟವಾಗಿ ಬಳಸುತ್ತಾನೆ. ಅವನ ಪ್ರಕಾರ ವಾಸ್ತವವಾದದಲ್ಲಿ ಇದು ಹೆಚ್ಚು ಬಳಕೆಯು ಆಗುತ್ತದೆ. ಕಾದಂಬರಿಗಳಲ್ಲಿ ಈ ಪ್ರಭಾವ ಮತ್ತು ಅದರ ಕ್ರೋಢೀಕರಣವು ಬೇರೆ ಬೇರೆ ಥರ ಆಗುತ್ತದೆ. ಸಾಹಿತ್ಯ ಮತ್ತು ಕಲೆಯಲ್ಲಿ ಅತ್ಯಂತ ಮಹತ್ವದ ತಿರುವು ಹೌದು. ಆದರೆ ವಾಸ್ತವ ಎನ್ನುವುದು ಮತ್ತೊಂದು ಅರ್ಥದಲ್ಲಿ ಜೀವನ ಮತ್ತು ಅದರ ಅನುಭವಗಳ ಒಂದು ಸಾರ ರೂಪವೂ ಆಗಿರುತ್ತದೆ.

ಕಲೆ ಮತ್ತು ಅದರ ಉತ್ಪಾದನೆಯು ಹೇಗೆ ಇದೆ ಮತ್ತು ಅದರ ಜೊತೆಗೆ ಅದು ಯಾವುದರ ಪ್ರತಿ ಮಾದರಿಯು ಆಗಿದೆ ಎಂದು ಅಡರ್ನೊ ಹೇಳುತ್ತಾನೆ. ನಮಗೆ ಈವತ್ತು ಕಲೆ ಮತ್ತು ಸಂಸ್ಕೃತಿಯು ಒಂದು ಉತ್ಪಾದನೆಯು ಆಗಿದೆ ಎಂದು ಅನಿಸುತ್ತದೆ. ಆದ್ದರಿಂದ ಅದಕ್ಕೆ ಒಂದು ನಿರ್ದಿಷ್ಟವಾದ ಮೌಲ್ಯವೂ ಇದೆ. ಅದಕ್ಕೆ ವಿನಿಮಯದ ಸಾಧ್ಯತೆಯು ಇರುತ್ತದೆ. ಇನ್ನೂ ಅತ್ಯಂತ ವಿಶಾಲವಾದ ಅರ್ಥದಲ್ಲಿ ಹೇಳಬೇಕೆಂದರೆ ಈಗ ಎಲ್ಲವೂ ಒಂದು ಬಗೆಯ ಸರಕುಗಳು ಆಗಿವೆ. ಯಾರಾದರೂ ಈವತ್ತು ಕಲೆಯ ಕೆಲಸವು ಯಾವುದು ಎಂದು ಕೇಳಿದರೆ ನಮಗೆ ಸ್ವಲ್ಪ ಇರುಸು ಮುರಿಸು ಆಗುತ್ತದೆ. ನಾವು ತಬ್ಬಿಬ್ಬು ಆಗುತ್ತೇವೆ. ವಾಸ್ತವ ಎನ್ನುವುದು ಇಲ್ಲಿಯವರೆಗೆ ಯಾವ ರೀತಿಯ ಕೆಲಸವನ್ನು ಮಾಡಿದೆ ಎಂದೂ ಗಮನಿಸಬೇಕು. ಕನ್ನಡದ ಬಹುತೇಕ ವಾಸ್ತವಿಕ ಕಥನಗಳು ನಮಗೆ ಅತ್ಯಂತ ಮುಖ್ಯವಾದ ನೋಟಗಳನ್ನು ಕೊಟ್ಟಿರುವುದು ಸತ್ಯ. ಈ ಮೊದಲು ಹೇಳಿದಂತೆ ನಮಗೆ ವಾಸ್ತವ ಎನ್ನುವುದು ಸಮಾಜದ ಒಂದು ಅನುಕರಣೆಯಾಗಿಯೂ ಮುಖ್ಯವಾಗಿದೆ. ಅನುಕರಣೆ ಮತ್ತು ಅದರ ಸಿದ್ಧಾಂತವು ಇಲ್ಲಿ ಅತ್ಯಂತ ಮುಖ್ಯ.

ಜೇಮ್ಸನ್ ನಿರೂಪಣೆ ಮತ್ತು ಅದರ ಪ್ರಚೋದನೆಯನ್ನು ಹೇಳುತ್ತಾನೆ. ಕತೆಯನ್ನು ನಾವು ಹೇಳುವುದು ಅಂದರೆ ಅದು ಒಂದು ತಾತ್ಕಾಲಿಕವಾದ ಆಯಾಮ. ಆದರೆ ಅದು ಮೂಲಭೂತವಾದೆಂದು ಹೌದು. ಕತೆಯನ್ನು ನಾವು ಹೇಳುವುದು ಮತ್ತು ಅದನ್ನು ಪರಿಣಾಮಕಾರಿಯಾಗಿ ನಿರೂಪಿಸುವುದು ಅತ್ಯಂತ ಮುಖ್ಯ. ನಮಗೆ

ಇರುವ ಅತ್ಯಂತ ಮೂಲಭೂತವಾದ ಸಮಸ್ಯೆ ಎಂದರೆ ನಮ್ಮ ನಿರೂಪಣೆಯನ್ನು ಕೂಡಾ ಬಂಡವಾಳವಾದವು ವಿವರಿಸುವುದು. ಇದು ನಮಗೆ ಒಂದು ಸಿದ್ಧಾಂತದ ಪ್ರಶ್ನೆಯೂ ಆಗಿರುವುದು ನಿಜ. ಆಧುನಿಕ ಬಂಡವಾಳವು ಸಂಸ್ಕೃತಿಯನ್ನು ನಿಯಂತ್ರಣ ಮಾಡುತ್ತದೆ. ಅದರ ಜೊತೆಗೆ ಅದು ತನಗೆ ಬೇಕಾದ್ದನ್ನು ಉಳಿಸುತ್ತದೆ. ಉಳಿದುದನ್ನು ನಾಶಪಡಿಸುತ್ತದೆ. ಈಗ ನಮಗೆ ಯಾವುದು ಸಾಹಿತ್ಯದ ವಾಸ್ತವವಾಗಿದೆ ಅದರ ಹಿಂದೆ ಬೇರೆ ಸಂಗತಿಯು ಇದೆ ಎಂದು ಹೇಳಲು ಇದನ್ನು ಪ್ರಸ್ತಾಪಿಸಲಾಗಿದೆ. ಹೇಗೆ ಒಂದು ಸಾಹಿತ್ಯದ ರೂಪವು ವಾಸ್ತವವನ್ನು ಹೇಳುತ್ತದೆಯೋ ಅದರ ಹಿಂದೆ ಇರುವ ಅನೇಕ ಸಂಗತಿಗಳು ಒಂದು ವರ್ಗವು ರೂಪಿಸುವ ಕ್ರಮವೂ ಆಗಿರುತ್ತದೆ. ಹಾಗೆ ನೋಡಿದರೆ ಸೌಂದರ್ಯಶಾಸ್ತ್ರವು ತನ್ನ ಅಸ್ತಿತ್ವವನ್ನು ನಿರೂಪಿಸಲು ಒಂದು ನೀಲ ನಕ್ಷೆಯನ್ನು ಸಿದ್ಧ ಮಾಡುತ್ತದೆ. ಈ ನೀಲನಕ್ಷೆಯು ಬೆಳೆಯುತ್ತದೆ. ಚರಿತ್ರೆಯಲ್ಲಿ ಒಂದು ಜಾಗವನ್ನು ಪಡೆಯುತ್ತದೆ. ಆದ್ದರಿಂದ ಯಾವಾಗ ಚರಿತ್ರೆಯು ಬೆಳೆಯುತ್ತದೆಯೋ ಆಗ ಅದರ ಅದರ ಹಿಂದೆ ಒಂದು ಬೇರೆ ಸಂಗತಿಗಳು ಇದೆ ಎಂದು ತಿಳಿಯಬೇಕಾಗುತ್ತದೆ. ಈ ಅರ್ಥದಲ್ಲಿಯೇ ಭಾವನೆ ಮತ್ತು ಚರಿತ್ರೆ ಅಥವಾ ಭಾವನೆ ಮತ್ತು ಉತ್ಪಾದನೆಗಳಿಗೆ ಒಂದು ಸಂಬಂಧವು ಇರುತ್ತದೆ ಎನ್ನುವುದು ಸತ್ಯ.

ಜೇಮ್ಸ್‌ನ್ ಅಫೆಕ್ಟ್ ಎಂದು ಹೇಳುವಾಗ ಅದನ್ನು ತನ್ನ ಹಿಂದೆ ಇದ್ದವರು ಹೇಗೆ ಅದನ್ನು ನಿರೂಪಿಸುತ್ತಾರೆ ಎಂದು ತಿಳಿದಿದ್ದಾರೆ. ಪರಿಣಾಮ ಎನ್ನುವುದು ಭಾವನೆಗೆ ಬದಲಿಯಾಗಿ ಬಂದ ಪದ ಎಂದು ಭಾವಿಸಿದ್ದು ಸತ್ಯ. ಭಾವನೆಗಳು ಮತ್ತು ಪರಿಣಾಮಗಳ ವ್ಯತ್ಯಾಸವನ್ನು ಡೆಲ್ಯೂಜ್ ಕೂಡಾ ಹೇಳಿದ್ದಾನೆ. ಭಾವನೆ ಎನ್ನುವುದು ನಮಗೆ ಒಂದು ಹಂತದಲ್ಲಿ ಸಮಾಜವೂ ಆಗಿರುತ್ತದೆ. ಮತ್ತೊಂದು ಕಡೆಯಿಂದ ಅದು ಚಾರಿತ್ರಿಕವೂ ಆಗಿರುತ್ತದೆ ಎನ್ನುವುದು ಅವನ ನಿಲುವು. ಪರಿಣಾಮವು ಇಲ್ಲದ ಭಾವನೆಗಳು ಯಾವುದನ್ನೂ ಅನುಭವಿಸುವುದಿಲ್ಲ ಎಂದು ದಮಾಶಿಯೋ ಹೇಳುತ್ತಾನೆ. ಪರಿಣಾಮ ಎನ್ನುವುದು ಇನ್ನೊಂದು ಅರ್ಥದಲ್ಲಿ ಅಜ್ಞಾತ ಮತ್ತು ಅಮೂರ್ತ. ಬಹುತ್ವ ಎನ್ನುವುದು ಕಾರಣಗಳಲ್ಲಿಯೂ ಇರುತ್ತದೆ. ಆದರೆ ನಾವು ಬಿಕ್ಕಟ್ಟು ಮತ್ತು ಹೊಸ ರಚನೆಗಳ ನಡುವೆ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕು. ಯಾವುದನ್ನು ನಾವು ವಾಸ್ತವ ಎಂದು ಹೇಳುತ್ತೇವೆಯೋ ಅದಕ್ಕೂ ಒಂದು ಬಗೆಯ ಚರಿತ್ರೆಯು ಇರುತ್ತದೆ. ಹೀಗಾಗಿ ವಾಸ್ತವವಾದದ ಕಾದಂಬರಿಗಳಿಗೆ ಕ್ರೋಢೀಕರಣವು ಇರುತ್ತದೆ. ಒಂದು ಅಂಶವು ಇಲ್ಲಿ ಗಮನಾರ್ಹವಾಗಿದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಬಂಡವಾಳವಾದವು ತನ್ನದೇ ಆದ ಸಮಸ್ಯೆಯನ್ನು ಮತ್ತು ಇಕ್ಕಟ್ಟನ್ನು ಎದುರಿಸಿದ್ದು ಸತ್ಯ. ಪ್ರತಿಯೊಂದು ವಾಸ್ತವವು ಕೆಲವು ರೂಪಗಳನ್ನು ಪಡೆಯುತ್ತವೆ. ಅದು ಹಳೆಯ ಕ್ರಮಗಳನ್ನು ನಿರಾಕರಿಸುತ್ತವೆ.

ಒಂದು ಹೊಸದಾದ ತಿರುವು ಕಾಣಿಸುತ್ತದೆ. ಇದು ವಾಸ್ತವತೆಗೆ ಕೂಡಾ ಅನ್ವಯವಾಗುತ್ತದೆ. ನಮಗೆ ಈವತ್ತು ವಾಸ್ತವ ಎನ್ನುವುದು ಒಂದು ತಾಂತ್ರಿಕತೆ ಅಲ್ಲ. ಅದು ಸಂಪೂರ್ಣವಾದ ಅನುಕರಣೆಯೂ ಅಲ್ಲ. ಕಲೆಯು ಪ್ರತಿಕೃತಿಯೂ ಆಗುತ್ತಿಲ್ಲ. ಆದ್ದರಿಂದಲೇ ಈವತ್ತು ಯಾವುದನ್ನು ಬಂಡವಾಳವಾದವು ಯಾವುದನ್ನು ಪ್ರತಿನಿಧಿಸುತ್ತದೆ ಎಂದೂ ಗಮನಿಸಬೇಕು. ಬಂಡವಾಳವಾದವೂ ಒಂದು ಹಂತದಲ್ಲಿ ಒಂದು ಕಾಲ್ಪನಿಕವಾದ ಸಂಬಂಧವನ್ನು ಮಾತ್ರವೇ ಹೇಳುತ್ತದೆ. ಯಾವುದೇ ಕಲೆಯು ನಮಗೆ ಈವತ್ತು ಒಂದು ಸರಕಾಗಿ ಪರಿಣಮಿಸಿದೆ. ಅದನ್ನು ನಾವು ವಿವಿಧ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು ಕಲೆಯು ಹೆಚ್ಚು ಸ್ವಾಯತ್ತವಾಗಿದೆ ಎಂದು ಆಧುನಿಕೋತ್ತರವಾದಿಗಳು ಆಗಾಗ ಹೇಳುತ್ತಾರೆ. ಅದು ಅವರ ಭ್ರಾಂತಿಯ ಒಂದು ಸೂಚನೆಯೂ ಹೌದು. ಆದರೆ ವಿಷಯವು ಅಷ್ಟು ಸುಲಭವಾಗಿಲ್ಲ. ವಾಸ್ತವ ಎನ್ನುವುದು ಒಂದು ನಿರೂಪಣೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ಅದನ್ನು ನಿರೂಪಣೆ ಮಾಡುವವರು ಸ್ವಲ್ಪ ಮಟ್ಟಿಗೆ ತಮ್ಮ ಭಾವನೆಗಳು ಅತ್ಯಂತ ಸಮರ್ಪಕವಾಗಿದೆ ಎಂದು ತಿಳಿಯುತ್ತಾರೆ. ಅಷ್ಟೇ ಅಲ್ಲ ಭಾಷೆಯನ್ನು ಅವರು ಪಾರದರ್ಶಕವಾಗಿದೆ ಎಂದು ಭಾವಿಸುತ್ತಾರೆ. ಅದು ಸಮಸ್ಯೆ.

ವಾಸ್ತವ ಎನ್ನುವುದು ಮತ್ತೊಂದು ಅರ್ಥದಲ್ಲಿ ಒಂದು ಭೂತಕಾಲದ ಅನುಸಂಧಾನವೂ ಆಗಿದೆ. ನಾವು ಈವತ್ತು ಮತ್ತೊಂದು ಸಂಗತಿಯನ್ನು ಅರ್ಥ ಮಾಡಿಕೊಳ್ಳಬೇಕು: ವಾಸ್ತವ ಎನ್ನುವುದು ಅನೇಕ ಲೇಖಕರಿಗೆ ಒಂದು ವರದಾನವೂ ಆಗಿದೆ. ಅದರ ಹೆಸರಿನಲ್ಲಿ ಅವರು ಯಾವುದನ್ನೂ ಬರೆಯಬಲ್ಲರು. ವಾಸ್ತವ ಎನ್ನುವುದು ನಮ್ಮ ಬರಹಗಳಿಗೆ ನಾವೇ ವಿಧಿಸುವ ಒಂದು ಚೌಕಟ್ಟು ಮಾತ್ರ. ವಾಸ್ತವ ಎನ್ನುವುದು ಕೆಲವು ವಿಚಾರಗಳನ್ನು ಆದರ್ಶ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತದೆ. ಆದ್ದರಿಂದ ಪರಿಣಾಮ ಎನ್ನುವುದು ಒಂದು ಬಗೆಯಲ್ಲಿ ಅಸ್ಪಷ್ಟವೂ ಆಗಿರುತ್ತದೆ. ಪರಿಣಾಮ ಎನ್ನುವುದು ಮತ್ತೊಂದು ಬಗೆಯಲ್ಲಿ ಮನೋವೈಜ್ಞಾನಿಕವಾದ ಒಂದು ಪರಿಕಲ್ಪನೆಯೂ ಹೌದು. ಅದು ವಿದ್ಯಮಾನಕ್ಕೆ ಸಂಬಂಧಪಟ್ಟ ಪದವೂ ಹೌದು. ಪರಿಣಾಮ ಎನ್ನುವುದು ಒಂದು ಗುರುತು ಕೂಡಾ ಹೌದು. ನಮಗೆ ಅನೇಕ ರೀತಿಯ ಭಾವನೆಗಳು ಇರುತ್ತವೆ. ಅದರಲ್ಲಿ ಕೋಪ, ಅಳು, ದ್ವೇಷ ಇತ್ಯಾದಿಗಳು ಸೇರಿಕೊಂಡಿವೆ. ಇವುಗಳನ್ನು ನಾವು ಹೆಸರಿಸಬಲ್ಲೆವು. ಆದರೆ ಕೆಲವು ಭಾವನೆಗಳನ್ನು ನಾವು ಹೆಸರಿಸಲು ಬರುವುದಿಲ್ಲ ಎಂದು ಡೆಲ್ಯೂಜ್ ಹೇಳುತ್ತಾನೆ. ಕೆಲವು ನಮಗೆ ಅತ್ಯಂತ ಸರಳವಾದ ಪರಿಣಾಮವನ್ನು ಬೀರುತ್ತವೆ. ಆದರೆ ಮತ್ತೆ ಕೆಲವು ಭಾವನೆಗಳಿಗೆ ಯಾವುದೇ ಹೆಸರುಗಳಿಲ್ಲ. ಹಾಗೆಂದು ಅವುಗಳ ಪರಿಣಾಮವು ಇಲ್ಲವೆಂದು ಅರ್ಥವಲ್ಲ. ವಾಸ್ತವತೆ ಎನ್ನುವುದು ಒಂದು ಆವಿಷ್ಕಾರ ಮಾತ್ರವೇ ಅಲ್ಲ ಅದು

ನಮ್ಮ ಅತ್ಯಂತ ಹೆಚ್ಚು ಪ್ರಭಾವವನ್ನು ಬೀರುವ ಶಕ್ತಿಯೂ ಹೌದು. ನಮ್ಮ ಆಧುನಿಕ ಅನುಭವಗಳು ಹೇಗೆ ನಮ್ಮಲ್ಲಿ ಒಂದು ಪ್ರಚೋದನೆಯನ್ನು ಉಂಟುಮಾಡುತ್ತದೆ ಎಂದು ಯೋಚಿಸಬೇಕಾದ ಅಗತ್ಯವಿದೆ ಎಂದು ಜೇಮ್ಸನ್ ವಾದಿಸುತ್ತಾನೆ. ನಾವು ಈವತ್ತು ಬರೆಯುತ್ತಿರುವ ಬರಹಗಳು ನಾಯಕರನ್ನು ಹೆಚ್ಚು ವೈಭವೀಕರಿಸಲು ಸಾಧ್ಯವೇ ಇಲ್ಲ. ನಾವು ಬರೆಯುತ್ತಿರುವ ಬರಹಗಳಲ್ಲಿ ನಾಯಕ ಮತ್ತು ಪ್ರತಿನಾಯಕ ಎನ್ನುವ ವರ್ಗೀಕರಣವನ್ನು ಮಾಡುವುದು ಅಸಾಧ್ಯವಾಗಿದೆ. ನಮಗೆ ಈಗ ಅರ್ಥವಾಗಬೇಕಾದ ಅನೇಕ ಅಂಶಗಳೂ ಇವೆ. ಅದನ್ನು ಹೀಗೆ ಕರೆಯಬಹುದು, ಬೂರ್ಜ್ವಾವರ್ಗದ ಅಂತರ್‌ರಾಷ್ಟ್ರದ ನಾಯಕರದ್ದು ಒಂದು ಗುಂಪು. ಮತ್ತೊಂದು ಜನಸಾಮಾನ್ಯರದ್ದು. ಇನ್ನೂ ಒಬ್ಬ ಸಾಮಾನ್ಯವರ್ಗದ ನಾಯಕ. ಇವು ನಮಗೆ ಈವತ್ತು ಕಾಣಸಿಗುವ ಸಂಗತಿಯೂ ಹೌದು. ಹೇಗೆ ಐತಿಹಾಸಿಕ ಕಾದಂಬರಿಗಳು ತನ್ನ ದಿಕ್ಕನ್ನು ಬದಲಿಸಿ ಸಮಾಜ ಮತ್ತು ಅದರ ಬದಲಾವಣೆಯ ಕಾದಂಬರಿಗಳಾಗಿವೆ ಎಂದು ಲುಕಾಕ್ಸ್ ಕೂಡಾ ಹೇಳುತ್ತಾನೆ. ಐತಿಹಾಸಿಕ ಕಾದಂಬರಿಗಳಲ್ಲಿ ಬರುವ ಹುಡುಕಾಟವು ಚರಿತ್ರೆಗೆ ಸಂಬಂಧಪಟ್ಟದ್ದು ಹೌದು. ಅದರಲ್ಲಿ ಇತಿಹಾಸ ಎನ್ನುವುದು ಪ್ರಾತಿನಿಧಿಕವೂ ಆಗುತ್ತದೆ. (ಜಾರ್ಜ್ ಲುಕಾಕ್ಸ್ – ಹಿಸ್ಟಾರಿಕಲ್ ನಾವೆಲ್)

ಭಾವನೆ ಎನ್ನುವುದು ಕೂಡಾ ನಮಗೆ ಅತ್ಯಂತ ಅಗತ್ಯ. ಆದರೆ ಆ ಭಾವನೆ ಎನ್ನುವುದು ಕೂಡಾ ಆಧುನಿಕ ಜಗತ್ತಿನಲ್ಲಿ ಹಿಂದೆ ಇರುವಂತೆ ಇಲ್ಲ. ಭಾವನೆಗಳು ಬದಲಾಗುತ್ತವೆ. ಹೊಸದಾದ ಭಾವನೆ ಮತ್ತು ಅದಕ್ಕೆ ತಕ್ಕ ಪದಗಳು ಎಷ್ಟಿವೆ ಎಂದು ನೋಡಬೇಕು. ನಮ್ಮ ಸಂಪ್ರದಾಯಗಳು, ಭಾವನೆಗಳು ಯಾವುದು ಇದೆಯೋ ಅದಕ್ಕೆ ತಕ್ಕ ಪದಗಳನ್ನು ಹೇಳಿವೆ. ಅದು ಸಂಪೂರ್ಣವಾಗಿ ನಮ್ಮ ನಿಲುವನ್ನು ಹೇಳುತ್ತದೆಯೋ ಎಂದು ಕೇಳಿದರೆ ನಮ್ಮ ಭಾವನೆಗಳನ್ನು ಹೇಳುವುದಿಲ್ಲ ಎಂದು ಸ್ಪಷ್ಟ. ಭಾವನೆ ಎನ್ನುವುದಕ್ಕೆ ಕೆಲವು ಲಕ್ಷಣಗಳು ಇವೆ ಎನ್ನುವುದು ಗೊತ್ತಿದೆ. ಹಾಗೆಯೇ ಬಣ್ಣಗಳ ಬಗ್ಗೆ ಕೆಲವು ಹೆಸರುಗಳನ್ನು ಹೇಳಿವೆ. ಅದು ಸಾಂಪ್ರದಾಯಿಕವಾಗಿ ಬಂದಿವೆ. ನನಗೆ ಸಿಟ್ಟು ಬಂದಿದೆ ಎಂದು ನಾವು ಮಾತಿನಲ್ಲಿ ಹೇಳಬಲ್ಲೆವು. ಆದರೆ ಅದನ್ನು ಆ ಪದವು ಹೇಗೆ ಸೂಚಿಸುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಒಂದು ವಾಕ್ಯವನ್ನು ಇಲ್ಲಿ ಹೇಳಬಹುದು: ಯಶೋಧರ ಚರಿತ್ರೆಯಲ್ಲಿ ಬರುತ್ತದೆ. ತಟ್ಟನೆ ಪಸಾಯದಾನಂ ಕೊಟ್ಟಳ್. ಇದು ಅನುರುಕ್ತಿಯನ್ನು ಹೇಳುತ್ತದೆ. ಶೃಂಗಾರ ರಸವೂ ಹೌದು. ನಮ್ಮ ಹಿಂದಿನ ಕವಿಗಳು ಇದನ್ನು ಈ ಥರ ಹೇಳುತ್ತಿದ್ದರು. ಆದರೆ ನಾವು ಈಗ ಇದನ್ನು ಬೇರೆ ಥರ ಹೇಳುತ್ತೇವೆ. ಅವಳು ಅವನಿಗೆ ಮನಸ್ಸನ್ನು ಕೊಟ್ಟಳು. ಹೇಗೆ ಮಾತು ಅತ್ಯಂತ ಮುಖ್ಯ ಎನ್ನುವುದನ್ನು ಹೇಳಲು ಇದನ್ನು ಬಳಸಿದರು. ಅದು ಭಾಷೆಯ ಒಂದು ವರ್ತನೆಯು ಮಾತ್ರ. ಇಲ್ಲಿ ನಾವು ಇಲ್ಲಿ ಒಂದು

ಸಂಗತಿಯನ್ನು ಹೇಳಬಹುದು. ಯಾವುದು ಹವ್ಯಾಸ ಮತ್ತು ಯಾವುದು ನಮ್ಮ ಪರಂಪರೆ ಎನ್ನುವುದು ನಮ್ಮ ಅರಿವಿಗೆ ಬಂದರೆ ಆಗ ಭಾವನೆಗಳು ಮತ್ತು ಅದರ ಸ್ವರೂಪವು ನಮಗೆ ಅರ್ಥವಾಗುತ್ತದೆ. ಆದರೆ ಅವುಗಳನ್ನು ನೋಡುವಾಗ ನಾವು ಅದರ ಜೊತೆಗೆ ಯಾವುದು ಇದೆಯೋ ಅದನ್ನು ತಿಳಿಯಬೇಕಾಗುತ್ತದೆ. ಇದರಲ್ಲಿ ಕೆಲವು ಭಾವನೆಗಳ ರೂಪವಾಗಿಯೂ ಬಂದಿದೆ. ಆದರೆ ಇಲ್ಲಿ ನಮ್ಮ ಭಾವನೆ ಎಂದು ಯಾವುದನ್ನು ಹೇಳುತ್ತೇವೆಯೋ ಅದಕ್ಕೂ ಒಂದು ಮೂಲರೂಪವು ಇದೆ. (ರೇಮಾಂಡ್ ವಿಲಿಯಂಸ್ – ಕೀವರ್ಡ್ಸ್)

ಈಗ ನಮ್ಮ ಮುಂದೆ ಇರುವ ಅತ್ಯಂತ ಮುಖ್ಯವಾದ ಪ್ರಶ್ನೆಯೆಂದರೆ ಯಾವುದನ್ನು ನಾವು ನಮ್ಮ ಅನುಭವ ಎಂದು ಹೇಳುತ್ತೇವೆಯೋ ಅದು ನಮಗೆ ಯಾವುದು ಅಥೆಂಟಿಕ್ ಪ್ರಶ್ನೆಯೂ ಹೌದು. ನಾವು ಈವತ್ತಿರುವ ಆಧುನಿಕೋತ್ತರ ಕಲೆಯ ಚರ್ಚೆಯನ್ನು ಕೂಡಾ ಇದೆ ಹಿನ್ನೆಲೆಯಲ್ಲಿ ಗಮನಿಸಬೇಕು. ಅದರ ಸ್ವರೂಪವು ಅತ್ಯಂತ ಹೊಸದು ಎನ್ನುವುದನ್ನು ನಾವು ಇಲ್ಲಿ ಗಮನಿಸಬಹುದು. ಆದರೆ ಅದು ಹಳೆಯ ಚಿಂತನೆಗಳನ್ನು ಒಡೆಯುತ್ತದೆ. ಸೌಂದರ್ಯ ಮೀಮಾಂಸೆಯಲ್ಲಿ ಅದು ನಮಗೆ ಅತ್ಯಂತ ಮುಖ್ಯ ಎಂದು ಆಧುನಿಕೋತ್ತರವಾದಿಗಳು ಹೇಳುತ್ತಾರೆ. ತುಂಬಾ ತಡವಾಗಿ ಬಂದ ಒಂದು ಹೊಸಬಗೆಯ ರೋಗದಂತೆ ಇದು ಕಾಣಿಸುತ್ತದೆ ಎಂದು ಜೇಮ್ಸನ್ ಹೇಳುತ್ತಾನೆ. ಇದು ಈವತ್ತು ಇರುವ ಒಂದು ಪ್ರಕ್ರಿಯೆಯನ್ನು ಹೇಳುತ್ತದೆ. ಈವತ್ತು ಯಾವ ರೀತಿಯ ಬಂಡವಾಳವಾದವು ಇದೆಯೋ ಅದನ್ನು ಆಧುನಿಕೋತ್ತರವಾದವು ಹೇಳುತ್ತದೆ. ಜಾಗತಿಕ ಬಂಡವಾಳವಾದವು ಸೃಷ್ಟಿ ಮಾಡಿದ ಸೃಜನಶೀಲತೆಯು ಹೇಗೆ ಇದೆ ಎನ್ನುವುದನ್ನು ಇಲ್ಲಿ ಗಮನಿಸಬೇಕು. ಆಧುನಿಕೋತ್ತರ ಎನ್ನುವುದು ಒಂದು ತಾತ್ಕಾಲಿಕವಾದ ವ್ಯವಸ್ಥೆ. ಅದರ ಪರಿಣಾಮವನ್ನು ಮಾತ್ರ ನಾವು ಅಲ್ಲಗಳೆಯಲು ಸಾಧ್ಯವಿಲ್ಲ. ಆಧುನಿಕೋತ್ತರ ಎನ್ನುವುದು ಮುಕ್ತವಾಗಿದೆ. ಅದು ತೇಲುತ್ತದೆ. ಹಾಗೆಂದು ಅದು ಎಲ್ಲಿ ನಿಲ್ಲುತ್ತದೆ ಎಂದು ಹೇಳುವುದು ಸಾಧ್ಯವಿಲ್ಲ.

ವಾಸ್ತವ ಎನ್ನುವುದು ಈವತ್ತು ಹೇಗೆ ಇದೆ ಎಂದು ನೋಡಬೇಕು: ಅದು ನಮಗೆ ಕಾಣುತ್ತದೆ. ಅದು ಹೀಗೆ ಇರಲು ಒಂದು ಕಾರಣವೂ ಇದೆ. ಅದನ್ನು ನಾವು ನಮ್ಮ ಭಾಷೆಯಲ್ಲಿ ಹೇಳುತ್ತೇವೆ. ಅದು ದೃಶ್ಯಗಳ ಒಂದು ಒಕ್ಕೂಟವೂ ಆಗಿರುತ್ತದೆ. ದುರಂತ ಎನ್ನುವುದು ನಮ್ಮ ಅನುಭವಕ್ಕೆ ಬರುತ್ತದೆ. ಅದರ ಜೊತೆಗೆ ಅದು ಜೀವನದ ಒಂದು ಭಾವನೆಯನ್ನು ಹೇಳುತ್ತದೆ. ನಮ್ಮ ಭಾವನೆಗಳು ಯಾವುದನ್ನು ಪ್ರತಿನಿಧಿಸುತ್ತವೆ ಎನ್ನುವುದು ಮಾತ್ರ ಮುಖ್ಯ. ಭಾಷೆ ಎನ್ನುವುದು ಹೇಗೆ ಸಾರ್ವತ್ರಿಕವಾಗಿದೆ ಮತ್ತು ಅದು ಹೇಗೆ ನಮ್ಮ ನಡುವೆ ಒಂದು

ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ ಎಂದು ಜೇಮ್ಸನ್ ಹೇಳುತ್ತಾನೆ. ಅದು ಸಾರ್ವತ್ರಿಕ ಆದರೆ ಅದು ಜೊತೆಗೆ ಅದು ಭಾಷಿಕವಾದ ಒಂದು ಭೇದವನ್ನು ಉಂಟು ಮಾಡುತ್ತದೆ ಎಂದೂ ನಮ್ಮ ತಿಳುವಳಿಕೆಗೆ ಬರಬೇಕು. ಆಡುಭಾಷೆ ಮತ್ತು ಅದರ ಸ್ವರೂಪವು ಸಾಹಿತ್ಯದ ಅನೇಕ ಪ್ರಕಾರಗಳನ್ನು ನಿರಾಕರಿಸುತ್ತವೆ ಎನ್ನುವುದೂ ಸ್ಪಷ್ಟ. ಪ್ರಕಾರ ಎನ್ನುವುದು ನಮಗೆ ಅಭ್ಯಾಸವಾಗಿದೆ. ಒಂದು ಪದವು ಈವತ್ತು ಹೆಚ್ಚು ಚಾಲ್ತಿಯಲ್ಲಿದೆ. ಅದನ್ನು ಇಂಗ್ಲೀಷಿನಲ್ಲಿ ಆಂಗ್ಸೈಟಿ ಎಂದು ಹೇಳುತ್ತಾರೆ. ಇದು ಆಂಗ್ಯೈಷ್ ಎನ್ನುವುದರಿಂದ ಬಂದಿತು. ಇದು ಅತಿಯಾದ ದುಃಖವನ್ನು ಹೇಳುತ್ತದೆ. ಇದಕ್ಕೆ ಧಾರ್ಮಿಕವಾದ ಅರ್ಥವೂ ಇದೆ. ಇದು ಕಾರಣವೂ ಹೌದು. ಮತ್ತೊಂದು ಕಡೆಯಿಂದ ಇದು ಭಾವನೆಯನ್ನು ಸೂಚಿಸುತ್ತದೆ. ಈವತ್ತು ಇದು ಕೇವಲ ಒಂದು ವೈದ್ಯಕೀಯ ಪದವೂ ಆಗಿದೆ. ಇದರ ಹಿಂದೆ ಒಂದು ಸಂಕೇತವೂ ಇದೆ. ದುಃಖ ಎನ್ನುವ ಪದವನ್ನು ಪ್ರಜ್ಞೆಯ ಮೂಲಕವೂ ವಿವರಿಸಲಾಗಿದೆ. ಇದನ್ನು ಇನ್ನೊಂದು ಥರ ವಿವರಿಸಿದ್ದನ್ನು ಇದು ಸೂಚಿಸುತ್ತದೆ. ದುಃಖ ಎನ್ನುವುದು ನಮಗೆ ದೇಹ ಮತ್ತು ಮನಸ್ಸಿನ ಪ್ರಶ್ನೆಯನ್ನು ಹೇಳುತ್ತದೆಯೋ ಅದೇ ರೀತಿಯಲ್ಲಿ ಇದು ಪ್ರಾಚೀನವಾದ ನಾಟಕದ ಪರಂಪರೆಯನ್ನು ಹೇಳುತ್ತದೆ. ಗ್ರೀಕ್ ನಾಟಕಗಳಲ್ಲಿ ಇದು ಒಂದು ಸೂಚನೆಯಾಗಿ ಬಂದಿದೆ. ದುಃಖ ಎನ್ನುವುದನ್ನು ಕಾರಣ ರಹಿತವಾದದ್ದು ಎಂದು ಹೇಳಲು ಬರುವುದಿಲ್ಲ. ದುರಂತ ಎನ್ನುವುದು ನಮಗೆ ಒಂದು ಬಗೆಯ ದುಃಖವನ್ನು ಹೇಳುತ್ತದೆ. ಅದರ ಸ್ಥಾಯಿ ಕೂಡಾ ಅದೇ. ಅದರಲ್ಲಿ ಅಸ್ತಿತ್ವ ಮತ್ತು ಅದರ ಪ್ರಶ್ನೆಗಳು ಇವೆ. ಹಾಗೆಯೇ ಅದು ದೇಹದ ಪ್ರಶ್ನೆಯು ಮಾತ್ರವೇ ಅಲ್ಲ, ಅದು ಮನಸ್ಸು ಮತ್ತು ಅದರ ಉದ್ವೇಗದ ಪ್ರಶ್ನೆಯೂ ಆಗಿದೆ.

ನಾವು ಭಾವನೆ ಎನ್ನುವುದನ್ನು ಹೇಗೆ ಗ್ರಹಿಸುತ್ತೇವೆ ಎನ್ನುವುದರ ಸಮಸ್ಯೆಯು ಈಗಲೂ ಬದಲಾಗಿಲ್ಲ. ಆ ಸಮಸ್ಯೆಗೆ ಈವತ್ತೂ ಒಂದು ಉತ್ತರವು ದೊರೆತಿಲ್ಲ. ಭಾವನೆ, ಅಭಿವ್ಯಕ್ತಿ ಮತ್ತು ಅದರ ಸ್ವರೂಪ ಮುಂತಾದವುಗಳು ಹೆಚ್ಚು ಮುಖ್ಯವಾಗುತ್ತವೆ. ಸಮಸ್ಯೆ ಎನ್ನುವುದನ್ನು ನಾವು ಈವತ್ತು ಎಲ್ಲಾ ತತ್ವಜ್ಞಾನದ ಬರಹಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ಇದು ಶಾಸ್ತ್ರ ಮತ್ತು ಚರಿತ್ರೆಯ ಪ್ರಶ್ನೆಯೂ ಆಗುತ್ತದೆ. ಮತ್ತೊಂದು ದೃಷ್ಟಿಯಿಂದ ಇದು ನೀತಿಶಾಸ್ತ್ರದ ಪ್ರಶ್ನೆಯೂ ಆಗಿರುತ್ತದೆ. ಭಾವನೆ ಮತ್ತು ಕಾರಣಗಳ ಪ್ರಶ್ನೆಯನ್ನು ಈವತ್ತಿಗೂ ಬೇರೆ ಬೇರೆ ಥರ ನೋಡಲಾಗಿದೆ. ಇದರಿಂದ ಅನೇಕ ಸಮಸ್ಯೆಗಳು ಬಂದಿವೆ. ಹಾಗಿದ್ದರೂ ಭಾವನೆ ಮತ್ತು ಕಾರಣಗಳು ಹಾಗೂ ಪರಿಣಾಮವನ್ನು ಹೆಸರಿಸುವುದು ಒಂದು ಸಮಸ್ಯೆ. ದುಃಖ ಮತ್ತು ಅದರ ಪರಿಣಾಮವು ಏನಿದೆ ಎಂದು ಯೋಚನೆ ಮಾಡಬೇಕು. ಒಂದು ಭಾವಕ್ಕೆ ಮತ್ತೊಂದು ಪರಿಣಾಮವಿದೆ. ಎಲ್ಲವನ್ನು ನಾವು

ಒಂದೇ ಪರಿಣಾಮ ಎಂದು ಹೇಳಲು ಬರುವುದೂ ಇಲ್ಲ. ವೀರದ ಪರಿಣಾಮವು ಒಂದು ಥರ, ರತಿ ಭಾವದ ಪರಿಣಾಮವು ಮತ್ತೊಂದು. ವೀರ ಎನ್ನುವುದನ್ನು ಒಬ್ಬರು ಒಂದು ಥರ ಹೇಳಿದರೆ ಮತ್ತೊಬ್ಬರು ಮತ್ತೊಂದು ಥರ ಹೇಳಬಹುದು. ಅದರ ಅಭಿವ್ಯಕ್ತಿಯೂ ಬೇರೆ ಬೇರೆ ಥರ ಇರುತ್ತದೆ. ವೀರವನ್ನು ವ್ಯಕ್ತ ಮಾಡುವಾಗ ನಾವು ಕಣ್ಣನ್ನು ಅಗಲಿಸಬಹುದು. ಹುಬ್ಬು ಗಂಟಿಕ್ಕಬಹುದು. ಭಾವನೆಯು ಹೇಗೆ ಪ್ರಭಾವವನ್ನು ಬೀರುತ್ತದೆ ಎಂದು ಪೂರ್ವದಲ್ಲಿಯೇ ಹೇಳುವುದು ಅತ್ಯಂತ ಕಷ್ಟ.

ಭಾವನೆಯಿಂದ ಒತ್ತಡವೇ ಅಥವಾ ಒತ್ತಡದಿಂದ ಭಾವನೆಯೆ ಎನ್ನುವುದು ನಮ್ಮ ಮುಂದೆ ಇರುವ ಬೃಹತ್ ಪ್ರಶ್ನೆ. ಒತ್ತಡವು ನಮಗೆ ಭಿನ್ನವಾದ ಒಂದು ಜೀವನದ ಕ್ರಮವನ್ನು ಹುಟ್ಟು ಹಾಕಿತು ಎಂದು ಫುಕೋ ಹೇಳಿದ. ಆಧುನಿಕ ಜೀವ ವಿಜ್ಞಾನವು ಹೇಗೆ ನಮ್ಮ ನಿತ್ಯದ ಜೀವನದ ಕ್ರಮವನ್ನು ರೂಪಿಸಿತು ಎನ್ನುವುದು ಅವನ ವಾದ.

ಹಾಗೆ ನೋಡಿದರೆ ನಾವು ಈವತ್ತು ತೆಗೆದುಕೊಳ್ಳುವ ಅನೇಕ ನಿಲುವುಗಳು ರಾಜಕಾರಣವೇ ಆಗಿರುತ್ತದೆ. ರಾಜಕಾರಣ ಬಿಟ್ಟು ನಮ್ಮ ಅನನ್ಯತೆಯು ಇಲ್ಲ. ನಾವು ತೆಗೆದುಕೊಳ್ಳುವ ನಿಲುವು ರಾಜಕಾರಣವು ಆಗಿರುತ್ತದೆ ಎಂದರೆ ಅದರ ಅರ್ಥ ಸುಮ್ಮನೆ ಹೇಳುತ್ತೇವೆ ಎಂದು ಅಲ್ಲ. ಅದರ ಸಾಧ್ಯತೆಯು ಬೇರೆಯಾಗಲು ಸಾಧ್ಯ. ರಾಜಕಾರಣ ಎನ್ನುವುದು ಒಂದು ನಿಲುವು. ರಾಜಕಾರಣ ಮತ್ತು ಅದರ ಸೌಂದರ್ಯಶಾಸ್ತ್ರದ ಸ್ವರೂಪವು ಬೇರೆಯಾಗುತ್ತದೆ ಎನ್ನುವುದು ನಿಜ. ಆದರೆ ಅದನ್ನು ನಾವು ಮತ್ತೊಂದು ರೀತಿಯಲ್ಲಿ ನಮ್ಮ ಜೀವನಕ್ಕೆ ಸಲ್ಲದೆ ಇರುವ ಒಂದು ಸಂಗತಿಯೆಂದು ಭಾವಿಸಬೇಕಾಗಿಲ್ಲ. ರಾಜಕೀಯ ಸಾಹಿತ್ಯ ಮತ್ತು ರಾಜಕೀಯ ಸೌಂದರ್ಯಶಾಸ್ತ್ರ ಎಂದು ಹೇಳುತ್ತೇವೆ. ಅದನ್ನು ಭಿನ್ನವಾದ ಪ್ರತಿಕ್ರಿಯೆಗಳು ಎಂದು ಹೇಳುತ್ತೇವೆ. ರಾಜಕೀಯ ಸಾಹಿತ್ಯ ಎನ್ನುವುದು ನಮಗೆ ತರಗತಿಯಲ್ಲಿ ಚರ್ಚೆ ಮಾಡಲಾಗದೇ ಇರುವುದು ಎಂದು ಭಾವಿಸುವುದೂ ಸರಿಯಲ್ಲ. ಅದನ್ನು ನಾವು ನಮ್ಮ ಜೀವನದ ಒಂದು ಕ್ರಮವೆಂದೂ ತಿಳಿಯಬೇಕು. ನಾವು ಮತ್ತೆ ಒಂದು ಯೋಚನೆಯನ್ನು ಮಾಡುವುದು ಅತ್ಯಂತ ಸೂಕ್ತ. ಇಡೀ ಜಾಗತಿಕವಾದ ಸಾಹಿತ್ಯದಲ್ಲಿ ಅತ್ಯಂತ ಮಹತ್ವದ ಕೃತಿಗಳನ್ನು ಕೊಟ್ಟ ಟಾಲ್‌ಸ್ಟಾಯ್, ಬ್ರೆಕ್ಟ್, ನೆರೂದ ಮೊದಲಾದವರು ರಾಜಕಾರಣ ಬೇಡ ಎಂದು ಎಲ್ಲಿಯೂ ಹೇಳಿಲ್ಲ. ಅದು ಅವರ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಇವರೆಲ್ಲಾ ಉದಾರವಾದಿ ಚಿಂತನೆಗಳನ್ನು ವಿರೋಧಿಸಿದವರು. ಅವರಿಗೆ ಆಧುನಿಕ ಚಿಂತನೆಗಳು ಹೇಗೆ ಬಂಡವಾಳವಾದದ ಕೈ ಕೂಸುಗಳು ಎಂದು ಗೊತ್ತಿತ್ತು. ಅದರ ಮೂಲ ಆಶಯವು ಹೇಗೆ ಜನವಿರೋಧಿಯಾಗಿದೆ ಎನ್ನುವುದರ ಅರಿವೂ ಇತ್ತು. ಉದಾರವಾದಿ ಆಧುನಿಕತಾವಾದಿಗಳು ಕೂಡಾ ಒಂದು ಹಂತದಲ್ಲಿ

ಬಂಡವಾಳವಾದವನ್ನು ಬೆಂಬಲಿಸಿದ್ದು ಸತ್ಯ. ಹಾಗೆ ನೋಡಿದರೆ ನಮ್ಮ ಆಧುನಿಕ ಸಮಾಜ ಮತ್ತು ಅದರ ಸ್ಥಿತಿಗಳಿಗೆ ಆರ್ಥಿಕತೆಯ ಪ್ರಭಾವವಿದೆ.

ಒಂದು ಚಾರಿತ್ರಿಕ ಸನ್ನಿವೇಶದಲ್ಲಿ ಕಾದಂಬರಿಯು ಹುಟ್ಟಿದೆ ಮತ್ತು ಅದರ ಹಿನ್ನೆಲೆಯೇನು ಎಂದು ವಿವರಿಸುವಾಗ ಅವನು ಸಂಸ್ಕೃತಿಯ ಪರಿಪ್ರೇಕ್ಷ್ಯದಲ್ಲಿ ಇಟ್ಟು ನೋಡಬೇಕು ಎಂದು ಅವನು ಹೇಳುತ್ತಾನೆ. ಅವನು ತನ್ನ ಮಾತುಗಳನ್ನು ವಿವರಿಸುವಾಗ ಬಳಸಿಕೊಂಡದ್ದು ಮಾರ್ಕ್ಸ್‌ವಾದವನ್ನೇ. ಮಾರ್ಕ್ಸ್‌ವಾದಿಗಳ ಪ್ರಕಾರ ಕಾದಂಬರಿಗೆ ಆಂತರಿಕ ತರ್ಕವಿರುತ್ತದೆ. ಮೊದ ಮೊದಲಿನ ಕಾದಂಬರಿಗಳು ವಿವರಣೆ, ಚಾರಿತ್ರಿಕ ಹಿನ್ನೆಲೆ, ವಿಶಿಷ್ಟ ರೀತಿಯ ವಿಷಯದ ಆಯ್ಕೆ ಹಾಗೂ ಜೀವನ ಕ್ರಮದ ವಿವರಣೆಗಳನ್ನು ಹೊಂದಿದ್ದವು. ಈ ರೀತಿಯ ವಿಷಯಗಳ ಆಯ್ಕೆಗೆ ಯಾವುದೇ ರೀತಿಯ ಸಮರ್ಥನೆಯು ಬೇಕಿರಲಿಲ್ಲ. ಪುಸ್ತಕಗಳು ಮಾರುಕಟ್ಟೆಗೆ ಬಂದಾಗ ಖಾಸಗಿಯಾದ ಜೀವನ ಕ್ರಮವು ಮಾರುಕಟ್ಟೆಗೆ ಬಂದಂತೆ ಆಯಿತು. ಹಾಗೂ ಹೊಸ ಸಾಮಾಜಿಕ ಪರಿಸ್ಥಿತಿಯ ಸಾಮಾಜಿಕ ಅಗತ್ಯವೂ ಆಯಿತು. ಹಾಗೆ ನೋಡುವುದಿದ್ದರೆ ಆಧುನಿಕ ಜಗತ್ತಿನಲ್ಲಿ ಕಾದಂಬರಿಯು ವಹಿಸಿದ ಪಾತ್ರವೂ ಬಹಳ ಮುಖ್ಯವಾದುದು. ಕಾದಂಬರಿಯ ಜಗತ್ತು ಲೇಖಕನ ಪ್ರಜ್ಞೆ ಮತ್ತು ಓದುಗನ ಪ್ರಜ್ಞೆ ಎರಡನ್ನೂ ಕಾದಂಬರಿಯು ಒಳಗೊಳ್ಳುತ್ತದೆ. ಕಾದಂಬರಿಗಳಲ್ಲಿ ಬರುವ ಅನೇಕ ಸಂಗತಿಗಳು ವೈಜ್ಞಾನಿಕ ಅಥವಾ ಅವೈಜ್ಞಾನಿಕ ಎಂದು ಕರೆಯಲು ಬರುವುದಿಲ್ಲ. ಕಾದಂಬರಿಗಳಲ್ಲಿ ಅಸ್ತಿತ್ವದ ಅನನ್ಯತೆ ಇರುವವರು ಅಥವಾ ಇಲ್ಲದೇ ಇರುವವರು ಎಂದು ವರ್ಗೀಕರಿಸಲು ಬರುವುದಿಲ್ಲ. ಕಾದಂಬರಿಯು ಮಹಾಕಾವ್ಯದಂತೆ ನಿರೂಪಣೆಯನ್ನು ಹೊಂದಿದೆ. ಕಾದಂಬರಿಯಲ್ಲಿ ಮನುಷ್ಯನ ಅನುಭವ ಮತ್ತು ಹೊರ ಪ್ರಪಂಚದ ಅರ್ಥ ಎರಡೂ ಇರುತ್ತದೆ ಮತ್ತು ಅದು ವಿಷಯನಿಷ್ಠವೂ ಹೌದು. ಕಾದಂಬರಿ ಎನ್ನುವುದು ಅನೇಕ ಸಂದರ್ಭದಲ್ಲಿ ನೈತಿಕ ವ್ಯಾಖ್ಯಾನವೂ ಹೌದು. ರೊಮಾಂಟಿಕ್ ಯುಗದ ಕಾದಂಬರಿಗಳು ನಾಯಕನ ವಿಷಯನಿಷ್ಠ ಅನುಭವವನ್ನು ಹೇಳುತ್ತದೆ. ನಾಯಕನು ತನಗೆ ಬೇಕಾದಂತೆ ಲೋಕವನ್ನು ವ್ಯಾಖ್ಯಾನಿಸುತ್ತಾನೆ. ನಾಯಕನ ಜೀವನವು ಲಿರಿಕಲ್ ಗುಣವನ್ನು ಹೊಂದಿರುವುದಿಲ್ಲ. ಈ ಚರ್ಚೆಯ ಸಂದರ್ಭದಲ್ಲಿ ಬಂದ ಬಹಳ ಮುಖ್ಯವಾದ ಅಂಶವೆಂದರೆ ಸಾಹಿತ್ಯದ ಹಳಹಳಿಕೆಯು ಹಿಂದಿನ ದಿನಗಳನ್ನು ತುಂಬಾ ದಿವ್ಯವಾದುದು ಅಥವಾ ಯುಟೋಪಿಯಾ ಎಂದು ಭಾವಿಸಿಕೊಳ್ಳುತ್ತದೆ. ಕಾದಂಬರಿಯಲ್ಲಿ ಬರುವ ವಿಶ್ವಾತ್ಮಕತೆಯು ಮಧ್ಯಮ ವರ್ಗದ ತಾತ್ವಿಕತೆಯನ್ನು ಸೂಚಿಸುತ್ತದೆ. ಲುಕಾಕ್ಸ್ ಮತ್ತೆ ಹೀಗೆ ಹೇಳಿದ್ದಾನೆ–ಆಧುನಿಕ ಕಾದಂಬರಿಯು ವಿಜ್ಞಾನದ ಸತ್ಯವನ್ನು, ಅದರ ಜ್ಞಾನವನ್ನು ಮತ್ತು ನೀತಿಯ ವಿಷಯ ನಿಷ್ಠತೆಯನ್ನು ಏಕಕಾಲಕ್ಕೆ ಒದಗಿಸುತ್ತದೆ. ವಸ್ತು ಮತ್ತು ಪಾತ್ರಗಳ ವಿಶಿಷ್ಟತೆಯಿಂದಾಗಿ

ವಾಸ್ತವತಾವಾದವು ತನ್ನದೇ ಆದ ವೈಶಿಷ್ಟ್ಯವನ್ನು ರೂಪಿಸಿದೆ ಎಂದು ಅವನ ವಾದ. ಚಾರಿತ್ರಿಕ ಕಾದಂಬರಿಗಳು ಅತಿ ವಿಜೃಂಭಣೆಯನ್ನು ಹೊಂದಿದೆ ಎಂದೂ ಅವನು ವಾದಿಸುತ್ತಾನೆ. ಸಾಹಿತ್ಯ ಮತ್ತು ಸಂಸ್ಕೃತಿ, ಹಾಗೂ ಸಾಹಿತ್ಯಿಕ ರೂಪ ಮತ್ತು ಸಂಸ್ಕೃತಿಯನ್ನು ಅವನು ವಿವರವಾಗಿಯೇ ಚರ್ಚಿಸಿದ್ದಾನೆ. ಆದರೆ ಅವನು ಹೇಳಿದ ಅನೇಕ ಮಾತುಗಳಿಗೆ ಅನಂತರ ವಾಗ್ವಾದವು ಪ್ರಾರಂಭವಾಯಿತು. ಅದು ಬೇರೆ ಪ್ರಶ್ನೆ. ವ್ಯಕ್ತಿ ಮತ್ತು ಅವನ ಬರವಣಿಗೆಗೂ ಸಂಸ್ಕೃತಿಗೂ ಆರ್ಥಿಕತೆಗೂ ಇರುವ ಸಂಬಂಧ ಚರ್ಚೆಯು ತುಂಬಾ ಸೂಕ್ಷ್ಮವಾಯಿತು. ಸಮಾಜ ಮತ್ತು ಆರ್ಥಿಕತೆಗೆ ಸಾಹಿತ್ಯವು ಹೇಗೆ ವಾಹಕವಾಗಿದೆ ಎನ್ನುವುದು ಮುಖ್ಯ ಪ್ರಶ್ನೆಯೂ ಹೌದು. ಹೇಗೆ ಸಾಹಿತ್ಯದ ಕೃತಿಗಳು ವ್ಯಕ್ತಿ ಮತ್ತು ಜಗತ್ತಿನ ಸಂಬಂಧವನ್ನು ಸೂಚಿಸುತ್ತವೆ ಎನ್ನುವುದೂ ಪ್ರಾರಂಭವಾಗಿದ್ದು ಮಾರ್ಕ್ಸಿಸ್ಟರಿಂದಲೇ.

ಅರ್ನೆಸ್ಟ್ ಬ್ಲಾಕ್ ಹೇಳಿರುವ ಮಾತು ಇಲ್ಲಿ ಉಲ್ಲೇಖನೀಯ. ಅವನು ಹೇಳುತ್ತಾನೆ– ಎಲ್ಲಾ ಸಾಂಸ್ಕೃತಿಕ ಪಠ್ಯಗಳು ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಮುಂದೆ ಕೆಲವು ಆದರ್ಶಗಳನ್ನು ಇಡುತ್ತವೆ. ಬೈಬಲ್ ಹೇಗೆ ಆಧುನಿಕ ಪಠ್ಯಗಳ ಮೇಲೆ ಪ್ರಭಾವವನ್ನು ಬೀರಿದೆ ಮತ್ತು ಅದರ ಮೂಲಕ ಹೇಗೆ ಒಂದು ಆದರ್ಶವನ್ನು ಹೇಳಲಾಗುತ್ತದೆ ಎನ್ನುವುದು ಅವನ ಮಾತುಗಳಲ್ಲಿ ವ್ಯಕ್ತವಾಗಿದೆ. ಅವನ ಮಾತುಗಳಲ್ಲಿ ವ್ಯಕ್ತವಾದ ಮತ್ತೊಂದು ಅಂಶವೆಂದರೆ ನಾವು ಯಾವ ಪರಿಸರದಲ್ಲಿ ಬದುಕುತ್ತೇವೆಯೋ ಅದರಾಚೆಗೂ ನಾವು ಯೋಚನೆ ಮಾಡುವಂತೆ ಮಾಡುವುದೂ ಕೂಡಾ ಒಂದು ಆದರ್ಶವಾಗಿದೆ. ಯಾವುದು ನಮ್ಮ ಎದುರು ಇರುತ್ತದೆ ಎನ್ನುವುದೂ ಅಷ್ಟೇ ಮುಖ್ಯ. ಇಲ್ಲಿ ಹೇಳಬೇಕಾದ ಮತ್ತೊಂದು ಅಂಶವೆಂದರೆ ಕೃತಿಯು ಚಾರಿತ್ರಿಕ ಮತ್ತು ಅದರ ಒತ್ತಡದಿಂದ ಅಭಿವ್ಯಕ್ತಿಯನ್ನು ಭಿನ್ನವಾಗಿ ರೂಪಿಸುತ್ತದೆ. ಲುಕಾಕ್ಸ್ ಅದನ್ನು ಆಲೋಚನೆಗಳ ಸಮಗ್ರತೆ ಎಂದು ಹೇಳುತ್ತಾನೆ. ಇಲ್ಲಿಯೇ ಪ್ರಸ್ತಾವಿಸಬೇಕಾದ ಅಂಶವೊಂದಿದೆ: ಚಾರಿತ್ರಿಕ ಭೌತವಾದವು ಸಂಸ್ಕೃತಿಯನ್ನು ವಿವರಿಸಲು ಸಾಮಾಜಿಕ ಕೌಶಲವನ್ನು ಮಾನದಂಡವಾಗಿಯೇ ಬಳಸಿಕೊಳ್ಳುತ್ತದೆ. ಆದರೆ ಕಾದಂಬರಿಯೆನ್ನುವುದು ಬಹಳ ಮಹತ್ವದ್ದೂ ಹೌದು. ಅದು ಜನರನ್ನು ಪ್ರಭಾವಿಸುತ್ತದೆ ಮತ್ತು ಅದರದೇ ಆದ ಓದುಗ ವರ್ಗವನ್ನು ಅದು ಸೃಷ್ಟಿಸುತ್ತದೆ. ಕಾದಂಬರಿಯಲ್ಲಿ ಅನೇಕ ಕಡೆಗೆ ಲೇಖಕರು ಕೃತಿಯಿಂದ ಹೊರಗೆ ಇರುತ್ತಾರೆ. ಕಾದಂಬರಿಯಿಂದ ಲೇಖಕರು ಹೊರಗೆ ಇರುವಾಗ ಅದನ್ನು ಬರೆಯುವ ಕ್ರಮವು ಬೇರೆಯಾಗಿರುತ್ತದೆ. ಅದು ಅವರ ತಾತ್ವಿಕ ಪ್ರಶ್ನೆಯೂ ಆಗಿರುತ್ತದೆ. ಕಾದಂಬರಿ ಮತ್ತು ಅದರ ಸಾಧ್ಯತೆಗಳು ಪ್ರಾರಂಭವಾದುದು ಒಂದು ವಿಶಿಷ್ಟವಾದ ಚಾರಿತ್ರಿಕ ಗಳಿಗೆಯಲ್ಲಿ ಎನ್ನುವುದರ ಕುರಿತು ಮಾರ್ಕ್ಸ್‌ವಾದಕ್ಕೆ ಯಾವುದೇ ಭಿನ್ನಾಭಿಪ್ರಾಯವಿಲ್ಲ.

ಅದನ್ನು ಅದು ಗ್ರಹಿಸುವಾಗ ಆಧುನಿಕ ಯುಗದ ಅಗತ್ಯವಾಗಿ ಕಾದಂಬರಿಯು ರೂಪುಗೊಂಡಿತು ಎಂದೇ ಹೇಳುತ್ತದೆ. ಕಾದಂಬರಿಯು ಹೇಳುವುದೇ ಪರೋಕ್ಷವಾದ ಒಂದು ಜೀವನದ ವಿಧಾನವನ್ನು ಎನ್ನುವುದನ್ನು ಇಲ್ಲ ಮರೆಯಬಾರದು. ಆದರೆ ಕಾದಂಬರಿಯ ಪ್ರಭಾವವು ಬಹಳ ದೊಡ್ಡದೇ ಆಗಿತ್ತು. ಹೆಚ್ಚಿನ ಕಾದಂಬರಿಗಳ ನಿರೂಪಣೆಯನ್ನು ನೋಡಿದರೆ ಅದರ ಹಿನ್ನೆಲೆಯು ಸ್ಪಷ್ಟವಾಗುತ್ತದೆ. ಯಾವುದೇ ಕಾದಂಬರಿಯು ವಿಶಿಷ್ಟವಾಗಿ ಒಂದು ಜೀವನದ ಕಥನವನ್ನು ಹೇಳುತ್ತದೆ ಮತ್ತು ಅದನ್ನು ಅದು ನೋಡುವಾಗ ಲೇಖಕ ಕಣ್ಣಿನಿಂದ ನೋಡುತ್ತಾನೆ. ಕಾದಂಬರಿ ಮತ್ತು ಅದರ ಸಾಮಾಜಿಕ ಆವಶ್ಯಕತೆಗಳು ಆಧುನಿಕ ಜಗತ್ತಿನಲ್ಲಿ ಬೇರೆಯದೇ ಆಯಿತು. ಆದರೆ ಕಾದಂಬರಿಯೆನ್ನುವುದು ಬಹಳ ಮುಖ್ಯವಾಗಿ ಒಂದು ವರ್ಗಕ್ಕೆ ಪ್ರಿಯವಾದ ಸಂಗತಿಯೂ ಆಯಿತು. ಕಾದಂಬರಿಯನ್ನು ಲೇಖಕರು ಬರೆಯುವಾಗ ಅನುಸರಿರುವ ವಿಧಾನವೂ ಈ ಕಾರಣದಿಂದ ಭಿನ್ನವಾಗಿದೆ. ಕಾದಂಬರಿಯ ಒಳಗೆ ನಿಂತುಕೊಂಡು ಕಾದಂಬರಿಕಾರನು ಕಾದಂಬರಿಯನ್ನು ವಿವರಿಸಲು ಹೊರಟರೆ ಅದರ ಸ್ವರೂಪವೂ ಬೇರೆ ಆಗುತ್ತದೆ. ಕಾದಂಬರಿಯ ಒಳಗಿನ ಪಾತ್ರವಾಗಿ ಲೇಖಕನು ನಿರೂಪಣೆಗೆ ತೊಡಗಿದರೆ ಆಗ ಅದರ ವಸ್ತು ಮತ್ತು ಅದರ ವಿವರಣೆಯು ಬೇರೆಯಾಗುತ್ತದೆ. ಅವನು ತನ್ನ ದೃಷ್ಟಿಕೋನಕ್ಕೆ ಅನುಸಾರವಾಗಿ ಎಲ್ಲವನ್ನೂ ವಿವರಿಸಿಕೊಳ್ಳುತ್ತಾ ಹೋಗಬೇಕಾಗುತ್ತದೆ ಮತ್ತು ಕಾದಂಬರಿಯು ಸ್ವಗತದ ರೀತಿಯಲ್ಲಿ ಇರುತ್ತದೆ. ಆದರೆ ಮತ್ತೊಂದು ರೀತಿಯಲ್ಲಿ ಕಾದಂಬರಿಯ ನಿರೂಪಣೆಯು ಇರುತ್ತದೆ.

ಮತ್ತೊಂದಿದೆ–ಕಾದಂಬರಿಯು ತನ್ನ ಭೂತಕಾಲವನ್ನು ಮಾತ್ರವೇ ಒಳಗೊಳ್ಳುತ್ತವೆ. ಅದರಲ್ಲಿ ಬರುವ ಅನೇಕ ನಿಲುವುಗಳು ಗತಕ್ಕೆ ಸಂಬಂಧಿಸಿದೆ. ಆದರೆ ಮತ್ತೆ ಅದರಲ್ಲಿ ಬರುವ ಆದರ್ಶವು ಭವಿಷ್ಯವನ್ನು ಸೂಚಿಸುತ್ತದೆ ಮಾತ್ರ. ಅದರಲ್ಲಿ ಬರುವ ಅನೇಕ ಸಂಗತಿಗಳು ಲೇಖಕನ ಮನೋಭಾವವನ್ನು ಸೂಚಿಸುತ್ತದೆ. ಹಾಗೂ ಅದನ್ನು ನೋಡುವಾಗ ಲೇಖಕನ ತಾತ್ವಿಕತೆಯನ್ನೂ ಗ್ರಹಿಸಿಕೊಳ್ಳುವುದು ಅನಿವಾರ್ಯ. ಆದರೆ ಅನೇಕ ಲೇಖಕರು ಕಾದಂಬರಿಯಲ್ಲಿ ನಿರೂಪಿಸುವುದು ತಮಗೆ ಯಾವುದು ಇಷ್ಟವಾಗುತ್ತದೆ ಅದನ್ನು ಮಾತ್ರವೇ. ಕಾದಂಬರಿಕಾರರ ನಿಲುವನ್ನು ನಾವು ನೋಡುವ ಅಗತ್ಯವೇ ಇಲ್ಲವೆಂದು ನವ್ಯ ವಿಮರ್ಶಕರು ಹೇಳುತ್ತಾರೆ. ಆದರೆ ಹಾಗೆ ಹೇಳುವಾಗ ಅವರು ನಿರೂಪಿಸುವುದು ತಮಗೆ ಯಾವುದು ಇಷ್ಟವಾಗುತ್ತದೆ ಅದನ್ನು ಮಾತ್ರವೇ. ಹೀಗೆ ಮಾಡುವಾಗ ನವ್ಯ ವಿಮರ್ಶಕರು ತಮ್ಮ ನಿಲುವನ್ನು ಮಾತ್ರವೇ ವ್ಯಕ್ತ ಪಡಿಸುವುದೂ ಅಷ್ಟೇ ನಿಜ. ಕಾದಂಬರಿಯ ತಾತ್ವಿಕತೆಯು ತಮಗೆ ಅಗತ್ಯವಿಲ್ಲವೆಂದು ಅವರು ಹೇಳುತ್ತಾರೆ. ಆದರೆ ವಿಷಯವು ಹಾಗೆ ಇಲ್ಲ. ಅದರ ಸಾಧ್ಯತೆಯು ಬೇರೆಯಾಗಿಯೂ ಇರುತ್ತದೆ. ಆದ್ದರಿಂದ ನಾವು ಕಾದಂಬರಿಯನ್ನು ಓದುವುದು

ಎಂದರೆ ಕಾದಂಬರಿಯ ತಾತ್ವಿಕತೆಯೊಂದಿಗೆ ನಾವು ಮುಖಾಮುಖಿಯಾಗಿರುವುದು ಎಂದು ಅರ್ಥ. ಕಾದಂಬರಿಯ ಒಳಗೆ ನಿರೂಪಕನು ಭಾಗವಹಿಸಿದರೆ ಅದರ ಸ್ವರೂಪವನ್ನು ನಿರೂಪಕನೇ ನಿಯಂತ್ರಿಸುತ್ತಾನೆ. ಕಾದಂಬರಿಯ ವಸ್ತು ಮತ್ತು ಅದರ ನಿರೂಪಣೆಯು ಆಗ ಒಂದು ರೀತಿಯಲ್ಲಿ ಇರುತ್ತದೆ. ಆದರೆ ಯಾವಾಗ ಲೇಖಕನು ಕಾದಂಬರಿಯ ಹೊರಗೆ ಇದ್ದು ಕಾದಂಬರಿಯ ವಸ್ತುವನ್ನು ನಿರೂಪಿಸಲು ಹೋಗುತ್ತಾನೆಯೋ ಆಗ ಅದರ ಸ್ವರೂಪವು ಭಿನ್ನವಾಗುತ್ತದೆ. ಗೊಂಬೆಯಾಟದ ಥರ ಕಾದಂಬರಿಯ ವಸ್ತುವನ್ನು ಅವನು ನಿರೂಪಿಸಿಕೊಳ್ಳುತ್ತಾ ಹೋಗುತ್ತಾನೆ. ಆಗ ಲೇಖಕನ ಉದ್ದೇಶ ಮತ್ತು ಅವನ ತಾತ್ವಿಕ ದೃಷ್ಟಿಕೋನವು ವ್ಯಕ್ತವಾಗುವ ಕ್ರಮಗಳು ಬೇರೆಯಾಗುತ್ತವೆ. ಲೇಖಕನ ದೃಷ್ಟಿಕೋನ, ಅವನ ಮಾತಿನ ಚಹರೆಗಳು ಕಾದಂಬರಿಯಲ್ಲಿ ವ್ಯಕ್ತವಾಗುವ ಕ್ರಮಗಳು ಅನೇಕ ಸಂದರ್ಭದಲ್ಲಿ ಸಂಕೀರ್ಣವೂ ಆಗುತ್ತದೆ. ಅವನ ಪ್ರಜ್ಞೆ, ಅವನ ಮಾತುಗಳು, ಅವನ ನಿಲುವುಗಳು ಮತ್ತು ಅವನು ಆಯ್ಕೆಮಾಡಿಕೊಂಡ ವಸ್ತು, ಅವನ ಭಾಷೆ ಹಾಗೂ ಅವನ ಕಾದಂಬರಿಯ ಪಾತ್ರಗಳು ಎಲ್ಲವೂ ಜೊತೆಗೆ ಇರುತ್ತವೆ. ಮತ್ತು ಮುಖಾಮುಖಿಯಾಗುತ್ತವೆ. ಲೇಖಕನ ಧ್ವನಿ ಮತ್ತು ಕಾದಂಬರಿಯ ಧ್ವನಿ ಎರಡೂ ಜೊತೆಗೆ ಬರುತ್ತವೆ. ಆದರೆ ಲೇಖಕನು ಯಾವುದನ್ನು ನೋಡುತ್ತಾನೆ, ಅವನಿಗೆ ಯಾವುದು ಮುಖ್ಯವಾಗುತ್ತದೆ ಅದು ಮಾತ್ರವೇ ಕಾದಂಬರಿಯಲ್ಲಿ ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದ ಕಾದಂಬರಿಯ ವಸ್ತು ಪ್ರಪಂಚವು ಸೋಸಲ್ಪಡುತ್ತದೆ.

ಕಾದಂಬರಿಯೆನ್ನುವುದು ಭೂತಕಾಲಕ್ಕೆ ಸಂಬಂಧಪಟ್ಟಿದೆ. ಅದರ ಸ್ವರೂಪವು ಯಾವುದು ಇದೆಯೋ ಅದನ್ನು ಹೇಳುತ್ತಾ ಮುಂದಿನ ಸಂಗತಿಗಳನ್ನು ನಿರೂಪಿಸುತ್ತದೆ. ಕಾದಂಬರಿಯ ಕಾಲವು ಹೇಳುವುದು ಭಿನ್ನವಾದ ದೃಷ್ಟಿಕೋನವನ್ನು. ಕಾದಂಬರಿಯಲ್ಲಿನ ಲೋಕದೃಷ್ಟಿಯು ಕಾದಂಬರಿಯ ವಸ್ತುವನ್ನು ಮತ್ತು ಅದರ ಸಾಧ್ಯತೆಯನ್ನು ಸೂಚಿಸುತ್ತದೆ. ಅದು ಅನೇಕ ಸರ್ತಿ ಪ್ರತಿಮೆಗಳಾಗಿಯೂ ವ್ಯಕ್ತವಾಗುತ್ತದೆ. ಕಾದಂಬರಿ ಮತ್ತು ಅದರ ವಸ್ತುವು ಲೇಖಕನ ನಿಲುವನ್ನು ವ್ಯಕ್ತಪಡಿಸಿಕೊಳ್ಳುವುದರಿಂದಲೇ ಕಾದಂಬರಿಯ ಭಾಷೆಯೂ ನಿಯಂತ್ರಣಕ್ಕೆ ಒಳಗಾಗುತ್ತದೆ. ಕಾದಂಬರಿಯ ನಾಯಕನು ಜಗತ್ತಿನೊಂದಿಗೆ ಒಂದು ನಿರ್ಣಾಯಕವಾದ ಪಾತ್ರವನ್ನು ಹೊಂದಿರುತ್ತಾನೆ ಮತ್ತು ಅದು ಕಾದಂಬರಿಯ ಅಗತ್ಯವೂ ಹೌದು. ಕಾದಂಬರಿಯ ನಾಯಕನು ಕಾದಂಬರಿಯ ಮುಖೇನ ಜಗತ್ತಿನೊಂದಿಗೆ ಸ್ಥಾಪಿಸುವ ಸಂಬಂಧವೇ ಕಾದಂಬರಿಯ ತಾತ್ವಿಕತೆಯನ್ನು ಸೂಚಿಸುತ್ತದೆ. ಕಾದಂಬರಿಕಾರನ ನಿಲುವುಗಳು ಕಾದಂಬರಿಯಲ್ಲಿ ಒಂದು ಯೋಚನೆಯ ಕ್ರಮವೂ ಆಗಿರುತ್ತದೆ. ಲೇಖಕನು ತನ್ನ ಆಲೋಚನೆಯನ್ನು

ಮತ್ತು ತನ್ನ ದೃಷ್ಟಿಕೋನವನ್ನು ಕಾದಂಬರಿಯ ವಸ್ತು ಪ್ರಪಂಚದ ಜೊತೆಗೆ ಸಮೀಕರಿಸುತ್ತಾನೆ. ಲೇಖಕನ ಯೋಚನೆಯೇ ಕಾದಂಬರಿಯಲ್ಲಿ ಒಂದು ಪಾತ್ರದ ಮೂಲಕವೂ ವ್ಯಕ್ತವಾಗುವ ಸಾಧ್ಯತೆಯೂ ಇರುತ್ತದೆ. ಅದು ಅಗತ್ಯವೆಂದು ಅವನು ಭಾವಿಸುವ ಸಾಧ್ಯತೆಯೂ ಇರುತ್ತದೆ. ಆದರೆ ಯಾವಾಗ ಲೇಖಕನು ಸರಿ ಮತ್ತು ತಪ್ಪುಗಳನ್ನು ನೋಡುವ ಕ್ರಮವೇ ಬೇರೆ. ತನ್ನ ದೃಷ್ಟಿಕೋನದಲ್ಲಿ ಯಾವುದು ಸರಿಯಲ್ಲವೋ ಆಗ ಅದನ್ನು ಅವನು ನಿರಾಕರಿಸುತ್ತಾನೆ. ಕಾದಂಬರಿಯ ನಾಯಕನು ಲೇಖಕನೇ ಆದಾಗ ಅವನು ಕಾದಂಬರಿಯನ್ನು ನಿಯಂತ್ರಿಸುತ್ತಾನೆ. ಅವನಿಗೆ ಅದು ಮುಖ್ಯವಾಗಲೂಬಹುದು.

ಕಾದಂಬರಿಯಲ್ಲಿ ಮತ್ತೊಂದು ಅಂಶವೂ ಮುಖ್ಯವಾಗುತ್ತದೆ. ಯಾವಾಗ ಒಂದು ಪಾತ್ರವಾಗಿ ಲೇಖಕನು ಬಂದರೆ ಅದರ ಸ್ವರೂಪವೇ ಅವನಲ್ಲಿ ಕೇಂದ್ರೀಕರಣವಾಗುತ್ತದೆ. ಯಾವುದೇ ಒಂದು ಕಾದಂಬರಿಯಲ್ಲಿ ಬರುವ ಪಾತ್ರಗಳಿಗೆ ಅವುಗಳದೇ ಆದ ವರ್ತನೆಯು ಇರುತ್ತದೆ. ಮತ್ತು ಗುಣಧರ್ಮವೂ ಇರುತ್ತದೆ. ಅದು ವ್ಯಕ್ತಿಯ ಮಟ್ಟಿಗೆ ಸತ್ಯವೂ ಹೌದು. ಕಾದಂಬರಿಯ ಸ್ವಗತದ ಶೈಲಿಯೂ ಕೂಡಾ ಕಾದಂಬರಿಯನ್ನು ನಿಯಂತಿಸುತ್ತದೆ. ಆದರೆ ಅದನ್ನು ಲೇಖಕನು ಯಾವ ರೀತಿಯಲ್ಲಿ ಬಳಸಿಕೊಳ್ಳುತ್ತಾನೆ ಎನ್ನವುದೂ ಬಹಳ ಮುಖ್ಯ. ಕಾದಂಬರಿಯಲ್ಲಿ ಸ್ವಗತವು ಬಹಳ ಮುಖ್ಯವಾದ ಕ್ರಿಯೆ ಕೂಡಾ ಆಗಬಹುದು. ಆದರೆ ಇದರ ನೋಟವನ್ನು ಹೇಗೆ ಗ್ರಹಿಸಬೇಕು ಎನ್ನುವುದು ಬಹಳ ಮುಖ್ಯ. ಲೇಖಕನ ಉದ್ದೇಶ, ಅವನ ಪ್ರಜ್ಞೆಯು ಸಾಹಿತ್ಯದಲ್ಲಿ ಕೆಲಸವನ್ನು ಮಾಡುತ್ತದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಲೇಖಕನು ಯಾವುದನ್ನು ನೋಡುತ್ತಾನೆ, ಯಾವುದನ್ನು ತಿಳಿಯುತ್ತಾನೆ ಎನ್ನುವುದೇ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಲೇಖಕನ ನಿಲುವು ಕಾದಂಬರಿಯ ನಿಲುವಾಗಿಯೂ ಪರಿವರ್ತನೆಯಾಗುತ್ತದೆ. ಕಾದಂಬರಿಯಲ್ಲಿ ಒಂದು ಪಾತ್ರವು ಯಾವ ಗುಣವನ್ನು ಹೊಂದಿರುತ್ತದೆಯೋ ಅದನ್ನು ನಾವು ಕಾದಂಬರಿಯಲ್ಲಿ ಗಮನಿಸುವುದು ತಾತ್ವಿಕತೆಯ ದೃಷ್ಟಿಯಿಂದ ಅಗತ್ಯವೂ ಹೌದು. ಆದರೆ ನಾವು ಅದನ್ನು ಪ್ರತ್ಯೇಕವಾದ ನಿಲುವು ಎಂದು ಭಾವಿಸಬೇಕಾದ ಅಗತ್ಯವೂ ಇಲ್ಲ. ಕಾದಂಬರಿಯು ಹೇಳುವುದು ಯಾವುದನ್ನು ಎಂದು ತಿಳಿಯಬೇಕಾದರೆ ಅದರ ತಾತ್ವಿಕ ನಿಲುವನ್ನು ಗ್ರಹಿಸಲೇ ಬೇಕಾಗುತ್ತದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾದಂಬರಿಯಲ್ಲಿ ಲೇಖಕನು ಯಾವುದನ್ನು ಹೇಳಲು ಬಯಸುತ್ತಾನೆಯೋ ಅದು ಅವನ ಕೃತಿಯಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾಗಲು ಸಾಧ್ಯ. ಲೇಖಕನ ವೈಯಕ್ತಿಕ ನಿಲುವು ಅವನ ಬರಹದಲ್ಲಿ

ಹೇಗೆ ವ್ಯಕ್ತವಾಗುತ್ತದೆಯೋ ಅದನ್ನು ಅವನ ಭಾಷೆ, ಅವನ ನಿರೂಪಣಾ ಕ್ರಮ, ಅವನ ಆಶಯಗಳು ಹೇಳುತ್ತವೆ. ವ್ಯಕ್ತಿ ಮತ್ತು ಅನುಭವ ಎರಡೂ ಕೃತಿಯಲ್ಲಿ ವ್ಯಕ್ತವಾಗುವಾಗ ಅದನ್ನು ಮಾತ್ರವೇ ಮಾನದಂಡವಾಗಿ ಇಡಬೇಕಾದ ಅಗತ್ಯವೂ ಇಲ್ಲ. ಕಾದಂಬರಿಯಲ್ಲಿ ಯಾವುದು ಹೇಗೆ ವ್ಯಕ್ತವಾಗುತ್ತದೆ ಎನ್ನುವುದು ಮಾತ್ರವೆ ಮುಖ್ಯ. ಆದರೆ ನವ್ಯದ ವಿಮರ್ಶಕರು ಹೇಳುವ ರೀತಿಯಲ್ಲಿ ಅನುಭವ ಮಾತ್ರವೇ ಮುಖ್ಯವಾಗುವ ಅಗತ್ಯವಿಲ್ಲ.

ಇಲ್ಲಿ ಗಮನಿಸಬಹುದಾದ ಮತ್ತೊಂದು ಸಂಗತಿಯೂ ಇದೆ. ಲೇಖಕನ ಆಲೋಚನೆಯು ಕಾದಂಬರಿಯಲ್ಲಿ ವ್ಯಕ್ತವಾಗುವಾದ ಕೂಡಲೇ ಅದನ್ನು ಅವನು ಜೀವನ ಪೂರ್ತಿಯಾಗಿ ನಿರೂಪಿಸುತ್ತಾನೆ ಎಂದು ಹೇಳಲು ಬರುವುದೂ ಇಲ್ಲ. ಕಾದಂಬರಿಕಾರನು ಯಾವುದನ್ನು ಹೇಳುತ್ತಾನೆಯೋ ಅದು ಅವನ ಉದ್ದೇಶಿತ ನಿಲುವೂ ಹೌದು. ಕಾದಂಬರಿಯ ವಸ್ತು ಅವನ ನಿಲುವನ್ನು ಸೂಚಿಸುತ್ತದೆ. ಕಾದಂಬರಿಕಾರನ ಆಲೋಚನೆಯು ಕಾದಂಬರಿಯಲ್ಲಿ ವಿಭಿನ್ನವಾದ ಸಂವಾದವನ್ನು ಸೂಚಿಸುತ್ತದೆ. ಅವನ ನಿಲುವನ್ನು ನಾವು ಹೇಗೆ ನೋಡಬೇಕು ಎನ್ನುವುದೇ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ಕಾದಂಬರಿಯು ಹೇಳುವುದು ಒಂದು ಜೀವನದ ಕ್ರಮವನ್ನು. ಅದು ಅದಕ್ಕಿಂತ ಹೊರತಾಗಿರುವ ಸಾಧ್ಯತೆಯು ಇಲ್ಲ. ಆದ್ದರಿಂದ ಕಾದಂಬರಿಯನ್ನು ಓದುವಾಗ ಅದನ್ನು ನಮ್ಮ ಜೀವನದ ಭಾಗವೆಂಬಂತೆ ಓದುತ್ತೇವೆ. ನಮಗೆ ಯಾವುದು ಕಾಣಿಸುತ್ತದೆಯೋ ಅದನ್ನು ಮಾತ್ರವೇ ಕಾದಂಬರಿಕಾರನು ಹೇಳುತ್ತಾನೆ ಎಂದು ಅರ್ಥವಲ್ಲ. ಅವನು ಅದಕ್ಕಿಂತ ಭಿನ್ನವಾದುದನ್ನು ಹೇಳಬಹುದು. ಆದರೆ ಅದರಿಂದಲೇ ಅದು ಪೂರ್ಣವಾಯಿತು ಎಂದು ಅರ್ಥವಲ್ಲ. ಒಂದು ಸಾಮಾಜಿಕ ಜೀವನದ ಕ್ರಮವು ಒಂದೇ ಕ್ಷಣದಲ್ಲಿ ಮುಕ್ತಾಯವಾಗುವುದೂ ಇಲ್ಲ. ಅದು ಮುಂದುವರಿಯುತ್ತದೆ. ಅದಕ್ಕೆ ಚರಿತ್ರೆಯು ಇದೆ. ಅದೇ ರೀತಿಯಲ್ಲಿ ವ್ಯಕ್ತಿಗೂ ಅವನದೇ ಆದ ಚರಿತ್ರೆಯು ಇದೆ. ಜೀವನ ಎನ್ನುವುದು ಕೂಡಾ ಒಂದು ನಿಯಮವೇ ಆಗಿರುತ್ತದೆ. ಆದರೆ ಇದನ್ನು ನಾವು ನೋಡುವಾಗ ಒಂದೊಂದು ರೀತಿಯಲ್ಲಿ ನೋಡುತ್ತೇವೆ. ಆದರೆ ಇದನ್ನು ನೋಡುವುದು ಎಂದರೆ ನಾವು ನಮ್ಮ ಜೀವನವನ್ನು ಒಂದು ನಮಗೆ ಬೇಕಾದಂತೆ ಗ್ರಹಿಸುವುದು ಎಂದು ಅರ್ಥವಲ್ಲ. ಕಾದಂಬರಿಯು ತನ್ನ ಆವಶ್ಯಕತೆಗೆ ತಕ್ಕಂತೆ ಜೀವನವನ್ನು ನೋಡುತ್ತದೆ. ಆದರೆ ಹೀಗೆ ನೋಡುವಾಗ ಅದರ ಸ್ವರೂಪವು ಭಿನ್ನವಾದ ಒಂದು ರಚನೆಯಂತೆಯೂ ಭಾಸವಾಗುತ್ತದೆ. ಹೆಗೆಲ್ ಜೀವನ ಮತ್ತು ಅದರ ತಾರ್ಕಿಕತೆಯನ್ನು ವಿವರಿಸುತ್ತಾನೆ.

ಜೀವನವೇ ಮೂಲತಃ ಚಲನಶೀಲವಾದುದು. ಅದನ್ನು ಅದಕ್ಕಿಂತ ಭಿನ್ನವಾಗಿ ನೋಡಲು ಬರುವುದಿಲ್ಲ. ಅದಕ್ಕೆ ಗತಿಶೀಲತೆಯು ಇದೆ. ಅದನ್ನು ನೋಡುವಾಗ

ನಮಗೆ ಇದರ ಅರಿವು ಇರಬೇಕಾಗುತ್ತದೆ. ಆದರೆ ಅದು ತಾರ್ಕಿಕವೇ ಎಂದರೆ ಶುದ್ಧ ತಾರ್ಕಿಕವಲ್ಲ. ಅದನ್ನು ರಾಜಕೀಯ ಮತ್ತು ಸಾಮಾಜಿಕ ಆಶಯದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಕಾದಂಬರಿಯಲ್ಲಿ ಜೀವನವನ್ನು ನಾವು ನೋಡುವ ಕ್ರಮಕ್ಕೆ ಅನುಸಾರವಾಗಿ ನಮ್ಮ ತಾತ್ವಿಕತೆಯು ರೂಪುಗೊಳ್ಳುತ್ತದೆ. ಕಾದಂಬರಿ ಎನ್ನುವುದು ಒಂದು ವಿಶಿಷ್ಟವಾದ ಗ್ರಹಿಕೆಯೂ ಹೌದು. ಅದನ್ನು ಓದುವಾಗ ನಾವು ಅದನ್ನು ಸಾಮಾಜಿಕ ಜೀವನದ ಭಾಗವಾಗಿಯೇ ನೋಡುತ್ತೇವೆ. ಅದರಿಂದ ನಮಗೆ ಬೇರೆ ಜೀವನ ಮತ್ತು ಅದರ ಸಂಕೀರ್ಣತೆಯ ಅರಿವೂ ಆಗುತ್ತದೆ. ಆದರೆ ಕಾದಂಬರಿಯನ್ನು ಓದುವುದು ಅಥವಾ ಗ್ರಹಿಸುವುದು ಎಂದರೆ ಕಾದಂಬರಿಯು ಹೇಳುವ ಅನೇಕ ಸಂಗತಿಯನ್ನು ನಾವು ನಮ್ಮ ಅರಿವಿನ ಲೋಕಕ್ಕೆ ತಂದುಕೊಳ್ಳುವುದು ಎಂದೇ ಅರ್ಥ. ಆದರೆ ನಾವು ಅನೇಕ ಕಾದಂಬರಿಯನ್ನು ಗ್ರಹಿಸುವಾಗ ಅದನ್ನು ಕೇವಲ ಮನೋರಂಜನೆಯ ಭಾಗವಾಗಿ ಮಾತ್ರವೇ ನೋಡುತ್ತೇವೆ. ಕಾದಂಬರಿಯೆನ್ನುವುದೇ ಮೂಲತಃ ಒಂದು ಚಾರಿತ್ರಿಕ ಮತ್ತು ಸಾಮಾಜಿಕ ಜೀವನದ ಭಾಗವಾಗಿ ಬರುವುದರಿಂದ ಅದರ ನಿರೂಪಣೆಯಲ್ಲಿ ಭಿನ್ನತೆಯು ಇರುತ್ತದೆ. ಕಾದಂಬರಿಯು ಒಂದು ಅರ್ಥದಲ್ಲಿ ಭಿನ್ನವಾದ ಮಾದರಿಯೂ ಹೌದು. ಅದರ ಸಾಧ್ಯತೆಯು ಬೇರೆಯಾಗುತ್ತದೆ. ಅದರ ರೂಪವೇ ಮೂಲಭೂತವಾಗಿ ಭಿನ್ನವಾದ ಪ್ರಕ್ರಿಯೆಯೂ ಹೌದು. ಕಾದಂಬರಿಯನ್ನು ನಾವು ಓದುವುದು ಅದರ ಕಥನ ಗುಣದ ಕಾರಣಕ್ಕಾಗಿ. ಆದರೆ ಅದನ್ನು ಓದುವಾಗ ನಮಗೆ ಅದು ನೀಡುವ ಜೀವನದ ದರ್ಶನವೂ ನಮಗೆ ಅಷ್ಟೇ ಮುಖ್ಯವಾಗುತ್ತದೆ. ಕಾದಂಬರಿಯು ಹೇಳುವ ಭಾಷೆಯು ಸುಲಭ ಸಂವಹನವೂ ಹೌದು. ಕಾದಂಬರಿಯು ರೂಪಿಸುವ ಸಂಕಥನವನ್ನು ನಾವು ಬೇರೆಯಾಗಿದೆ.

ಕಲಾತ್ಮಕ ಭಾಷೆಯ ಪ್ರಶ್ನೆಯೆ ಮೂಲಭೂತವಾಗಿ ಬುದ್ಧಿಜೀವಿಗಳಿಗೆ ಸಂಬಂಧಪಟ್ಟದ್ದೂ ಹೌದು. ಅದು ಬೇರೆ ಪ್ರಶ್ನೆ. ಅವರು ಕಲಾತ್ಮಕತೆ, ಭಾಷೆಯ ಶೈಲಿ, ಭಾಷೆಯ ದಿಕ್ಪಲ್ಲಟ ಮುಂತಾದವುಗಳನ್ನು ಅವರು ಹೆಚ್ಚು ಬಳಸುತ್ತಾರೆ. ಕಾದಂಬರಿಕಾರರು ಮತ್ತೊಬ್ಬರು ಮಾತಾಡುವ ಭಾಷೆಯನ್ನು ಅಗತ್ಯಕ್ಕೆ ಸರಿಯಾಗಿ ಬಳಸುತ್ತಾರೆ. ಭಾಷೆ ಎನ್ನುವುದನ್ನು ಕಾದಂಬರಿಕಾರರು ಅನೇಕ ರೀತಿಯಲ್ಲಿ ಬಳಸುತ್ತಾರೆ. ಅದು ಅವರಿಗೆ ಅಗತ್ಯವೂ ಹೌದು. ಕಾದಂಬರಿಗೆ ಮಾತ್ರವೇ ಮೀಸಲಾದ ಭಾಷೆ ಎನ್ನುವುದು ಇಲ್ಲ. ಅದನ್ನು ಹಾಗೆ ನೋಡಲು ಬರುವುದೂ ಇಲ್ಲ. ಕಾದಂಬರಿಯಲ್ಲಿ ನಾವು ಬಳಸುವ ಭಾಷೆಯನ್ನು ನೋಡುವಾಗ ಅದನ್ನು ಬೇರೆ ರೀತಿಯಲ್ಲಿಯೂ ಗ್ರಹಿಸಲು ಸಾಧ್ಯ. ಕಾದಂಬರಿಯ ಜಗತ್ತನ್ನು ವಾಸ್ತವದ ಜಗತ್ತಿನೊಂದಿಗೆ ನಾವು ತಳುಕು ಹಾಕುತ್ತೇವೆ. ಅದನ್ನು ನಿಜವೆಂದು ಭಾವಿಸುತ್ತೇವೆ.

ಆದರೆ ಅದು ಲೇಖಕನ ದೃಷ್ಟಿಕೋನಕ್ಕೆ ಅನುಸಾರವಾಗಿ ಚಿತ್ರಿತವಾಗಿರುತ್ತದೆ. ಕಾದಂಬರಿಯೆನ್ನುವುದು ಅನೇಕರು ತಿಳಿದಂತೆ ಕೇವಲ ಕಥನವನ್ನು ಹೇಳುವ ಉದ್ದೇಶದಿಂದ ಮಾತ್ರವೇ ಹುಟ್ಟಿಲ್ಲ. ಅದರಾಚೆಗೂ ಅದರ ಕಾರ್ಯ ವ್ಯಾಪ್ತಿಯು ಇದೆ ಕಾದಂಬರಿಯೆನ್ನುವುದು ಕೇವಲ ಭಾವನೆಗೆ ಮಾತ್ರವೇ ಸಂಬಂಧ ಪಟ್ಟಿಲ್ಲ. ಅದು ಒಂದು ವರ್ಗದ ಜೀವನದ ಕ್ರಮವನ್ನು ವಿವರಿಸುತ್ತದೆ. ಆದರೆ ಅದನ್ನು ನಾವು ನೋಡುವಾಗ ಸೀಮಿತವಾಗಿ ನೋಡುತ್ತೇವೆ.

ಕಾದಂಬರಿಗಳು ಹೇಳುವ ಜಗತ್ತು ಒಬ್ಬನ ಗ್ರಹಿಕೆಗೆ ಮಾತ್ರವೇ ಸಂಬಂಧ ಪಟ್ಟಿಲ್ಲ. ಅದು ಪರಿವರ್ತನೆಯನ್ನು ದಾಖಲಿಸುತ್ತದೆ. ಅದರ ಆಯಾಮಗಳೂ ಕೂಡಾ ಭಿನ್ನವಾಗಿದೆ. ಲೇಖಕನ ಉದ್ದೇಶ ಮತ್ತು ಅವನ ಗ್ರಹಿಕೆಗಳು ಒಂದು ರೀತಿಯಲ್ಲಿ ಇರಲು ಸಾಧ್ಯ. ಲೇಖಕ ಉದ್ದೇಶವು ಕೃತಿಯಲ್ಲಿ ಹಾಜರಾಗುವುದಕ್ಕೆ ಕಾರಣವೂ ಇದೆ. ಅವನು ಹೇಗೆ ನೋಡುತ್ತಾನೆ ಮತ್ತು ಅವನ ಉದ್ದೇಶವೇನು ಎನ್ನುವುದೇ ಬಹಳ ಮುಖ್ಯ. ನಾವು ಇದನ್ನು ಅಷ್ಟಾಗಿ ಗಮನಿಸುವುದೂ ಇಲ್ಲ. ಲೇಖಕನು ಯಾವುದನ್ನು ನೋಡುತ್ತಾನೆಯೋ ಅದನ್ನು ವಿವರಿಸುತ್ತಾನೆ. ಅದರಲ್ಲಿ ಅವನ ಗ್ರಹಿಕೆಯೆ ಪ್ರಧಾನವಾಗಿದೆ. ಕಾದಂಬರಿಯ ಧ್ವನಿ ಮತ್ತು ಅವನ ಉದ್ದೇಶವು ಜೊತೆಗೆ ಬರುತ್ತದೆ. ಅದು ಅವನ ನಿಲುವನ್ನು ಸೂಚಿಸುತ್ತದೆ. ಪ್ರತಿಯೊಂದು ಕೃತಿಯು ಕೂಡಾ ಭೂತಕಾಲದ ಸಂಗತಿಗಳನ್ನು ನಿರೂಪಿಸುತ್ತದೆ. ಕಾದಂಬರಿಯು ಹೇಳುವುದು ಕಳೆದು ಹೋದುದನ್ನು. ಆದರೆ ಅದು ಮತ್ತೆ ಮುಂದಿನ ಸೂಚನೆಯನ್ನು ನೀಡುತ್ತದೆ. ಇದನ್ನೇ ಮತ್ತೆ ಹೇಳಬಹುದಾದ ಸಂಗತಿಯೆಂದರೆ ಕಾದಂಬರಿಯು ನೀಡುವುದು ಮುಂದಿನ ಭವಿಷ್ಯದ ಸಂಗತಿಯನ್ನು. ಆದರೆ ಇದಕ್ಕೆ ವಿಶಿಷ್ಟವಾದ ಆಯಾಮವೂ ಇರುತ್ತದೆ. ಕಾದಂಬರಿಯು ಭಿನ್ನವಾದ ಸಂಕಥನವನ್ನು ಹೇಳುತ್ತದೆ. ಅದರ ಆಯಾಮವು ಭಿನ್ನವಾಗಿರುತ್ತದೆ. ಅದು ನಿರೂಪಣೆಗೆ ಸಂಬಂಧ ಪಟ್ಟಿದೆ. ಆದರೆ ಅದರದೇ ಆದ ವಿಶಿಷ್ಟವಾದ ಕಥನದ ಶೈಲಿಯೆಂದು ಹೇಳುತ್ತೇವೆ. ಆದರೆ ಇದನ್ನು ನಾವು ಭಾಷಿಕ ವಿಶಿಷ್ಟತೆ ಎಂದೂ ಹೇಳುತ್ತೇವೆ. ಕಾದಂಬರಿಗಳು ದಿನ ನಿತ್ಯದ ವಿವರಣೆಯನ್ನು ಭಾಷೆಯಲ್ಲಿ ನಿರೂಪಿಸುತ್ತವೆ. ಅವುಗಳಿಗೆ ಅವುಗಳದೇ ನಿರೂಪಣೆಯ ಕ್ರಮವು ಇದೆ ಎಂದ ಮಾತ್ರಕ್ಕೆ ಅವುಗಳು ಮತ್ತೆ ಏನೋ ಆಗಿರುತ್ತವೆ ಎಂದು ಹೇಳಲು ಬರುವುದಿಲ್ಲ. ಅಂದರೆ ಅದು ಕಾವ್ಯ ಅಲ್ಲ. ಅದು ಆಕರ್ಷಕ ಪದಗಳ ಗುಚ್ಚವೂ ಅಲ್ಲ.

ಕಾದಂಬರಿಯು ಯಾವುದೇ ರೀತಿಯ ಲಯದ ವಿನ್ಯಾಸಗಳನ್ನು ಹೊಂದಿಲ್ಲವೆನ್ನುವುದರಿಂದ ಅದನ್ನು ಸಾಹಿತ್ಯವೇ ಅಲ್ಲವೆಂದು ಹೇಳಲು ಬರುವುದೂ ಇಲ್ಲ. ಕಾದಂಬರಿಯು ಯಾವಾಗಲೂ ವರ್ತಮಾನದ ವಿಷಯಗಳಿಗೆ ಸಂಬಂಧ ಪಟ್ಟುಕೊಂಡೇ ವಿವರಣೆಯನ್ನು ಹೇಳುತ್ತದೆ ಎಂದು ಭಾವಿಸಬೇಕಾಗಿಲ್ಲ.

ಕಾದಂಬರಿಯೆನ್ನುವುದು ಮೂಲಭೂತವಾಗಿ ಅನೇಕ ವಿಷಯಗಳನ್ನು ವಿವರಿಸುತ್ತದೆ. ಆದರೆ ಅದನ್ನು ನಾವು ಹೀಗೂ ಹೇಳಬಹುದು – ಕಾದಂಬರಿಯು ತನ್ನ ಕಥನದ ಮಾದರಿಯಲ್ಲಿಯೇ ಚರಿತ್ರೆಗೆ ಸ್ಪಂದಿಸುತ್ತದೆ. ಆದ್ದರಿಂದ ಅದರ ಆಯಾಮಗಳು ಬೇರೆ. ಕತೆ ಮತ್ತು ಚರಿತ್ರೆಯ ಸಂಗತಿಗಳು ಜೊತೆಗೆ ಇರುತ್ತದೆ. ಅದು ಅದರ ಅಗತ್ಯವೂ ಆಗಿರುತ್ತದೆ. ವಾಸ್ತವವಾದವಂತೂ ಚರಿತ್ರೆಗೆ ಪ್ರತಿಕ್ರಿಯಿಸುವ ವಿಧಾನವು ಭಿನ್ನವಾಗಿದೆ. ಅದು ದಿನ ನಿತ್ಯದ ಸಂಗತಿಗಳನ್ನು ಹೇಳುತ್ತದೆ. ಕಾದಂಬರಿಯು ಹೇಳುವ ಅನೇಕ ಸಂಗತಿಗಳನ್ನು ಸಾಹಿತ್ಯದ ಪ್ರತ್ಯೇಕತೆ ಎಂದು ಹೇಳಲು ಬರುವುದೂ ಇಲ್ಲ. ಕಾದಂಬರಿಯ ನಿರೂಪಣೆಯ ಕ್ರಮ ಅಥವಾ ಅದರ ಶೈಲಿಯನ್ನು ನಾವು ಉದ್ದೇಶ ರಹಿತವೆಂದು ಹೇಳುವಂತೆ ಇಲ್ಲ. ಯಾವುದನ್ನು ನಾವು ಭಾಷಿಕ ಅಸ್ತಿತ್ವವೆಂದು ಹೇಳುತ್ತೇವೆಯೋ ಅದರ ಸ್ವರೂಪವು ಇರುವುದು ವಾಸ್ತವಕ್ಕೆ ಪ್ರತಿಕ್ರಿಯಿಸುವ ವಿಧಾನದಲ್ಲಿ. ಭಾಷೆ ಮತ್ತು ಶೈಲಿಯನ್ನು ಕಾದಂಬರಿಯ ಸಂದರ್ಭದಲ್ಲಿ ಬೇರೆಯಾಗಿ ನೋಡಬಹುದಾದರೂ ಅದು ಕೂಡಾ ತಾತ್ವಿಕತೆಯನ್ನು ಹೊರತುಪಡಿಸಿದ್ದು ಎಂದು ಭಾವಿಸಬೇಕಾಗಿಲ್ಲ. ಅದಕ್ಕೂ ಅದರ ಕಾರಣವು ಇದ್ದೇ ಇರುತ್ತದೆ. ಕಾದಂಬರಿಯ ಶೈಲಿಯು ಮೂಲಭೂತವಾಗಿ ಸಂಕಥನವನ್ನು ಸೂಚಿಸುತ್ತದೆ. ಆದರೆ ಈ ಸಂಕಥನವನ್ನು ನಾವು ತಾತ್ವಿಕತೆಯೊಂದಿಗಿನ ಮುಖಾಮುಖಿ ಎಂದು ಹೇಳಬೇಕಾಗುತ್ತದೆ. ಲೇಖಕನು ನಿರೂಪಣೆಯಲ್ಲಿ ಭಾಗವಹಿಸುವ ಕ್ರಮವು ಬೇರೆ. ಆಂತರಿಕ ಕಾರಣಕ್ಕಾಗಿಯೇ ಕಾದಂಬರಿಯು ವಿಶಿಷ್ಟವೆಂದು ಅನಿಸುತ್ತದೆ. ಕಾದಂಬರಿಯ ಭಾಷೆಯನ್ನು ಲೇಖಕ ಉದ್ದೇಶದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕಾದಂಬರಿಯ ಭಾಷೆಯು ತನ್ನ ಅಗತ್ಯಕ್ಕೆ ಅನುಸಾರವಾಗಿ ರೂಪುಗೊಳ್ಳುತ್ತದೆ ಮತ್ತು ಅದನ್ನು ನೋಡುವಾಗ ಭಾಷೆ ಮತ್ತು ಅದರ ಆಂತರಿಕ ತರ್ಕಗಳನ್ನು ಗಮನಿಸುವುದು ಅಗತ್ಯವೂ ಆಗಿದೆ.

ಯಾವುದೇ ಕಾದಂಬರಿಯ ಭಾಷೆಯನ್ನು ನೋಡಿ ಅದನ್ನು ನಾವು ಅಥೆಂಟಿಕ್ ಅಥವಾ ಅನ್ ಅಥೆಂಟಿಕ್ ಎಂದು ಹೇಳಬೇಕಾದ ಅಗತ್ಯವೂ ಇಲ್ಲ. ಕಥನ ಮತ್ತು ಅದರ ಮೌಲ್ಯವನ್ನು ನೋಡಿಕೊಂಡು ನಾವು ಯಾವುದೇ ನಿರ್ಧಾರ ಮಾಡಬೇಕೇ ವಿನಃ ಮತ್ತೆ ಯಾವುದೇ ಕಾರಣದಿಂದ ಅಲ್ಲ. ನಮ್ಮ ಸಾಮಾಜಿಕ ಜೀವನದಲ್ಲಿ ಹೇಗೆ ಅನೇಕ ಭಾಷಿಕ ಚಹರೆಗಳು ಇವೆಯೋ ಅದೇ ರೀತಿಯಲ್ಲಿ ಕಾದಂಬರಿಯ ಭಾಷೆಯೂ ಇರುತ್ತದೆ. ಅನೇಕತೆ, ಅದರ ಸಂಯೋಜನೆ, ಅದರ ಅನುಕ್ರಮತೆಯೇ ಕಾದಂಬರಿಯಲ್ಲಿ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ಬಹುಭಾಷೆಯನ್ನು ಕಾದಂಬರಿಯು ಒಂದು ಕೇಂದ್ರಕ್ಕೆ ತಂದು ನಿಲ್ಲಿಸುತ್ತದೆ. ಆದರೆ ಇದನ್ನು ನಾವು ನೋಡುವಾಗ ಎಚ್ಚರದಲ್ಲಿ ಇರುವುದೂ ಅಗತ್ಯವೂ ಆಗಿದೆ. ಯಾಕೆಂದರೆ

ಕಾದಂಬರಿ ಈ ವಿಷಯಗಳನ್ನು ನಾವು ಕೇವಲ ಒಳಗಿನ ಕಾರಣಕ್ಕೆ ಮಾತ್ರವೇ ನೋಡಿದರೆ ಅದು ರೂಪನಿಷ್ಟರ ನಿಲುವೂ ಆಗುತ್ತದೆ. ಕಾದಂಬರಿಯಲ್ಲಿ ಭಾಷೆಯ ಸಂಕರತೆಯು ಇರುತ್ತದೆ. ಮತ್ತೊಂದು ಅನುಕ್ರಮತೆಯನ್ನು ಕಾಪಾಡುತ್ತದೆ. ಮೂರನೆಯದಾಗಿ ಅದರಲ್ಲಿ ವಿಭಿನ್ನವಾದ ಸಂಯೋಜನೆಯೂ ಇರುತ್ತದೆ. ಕಾದಂಬರಿಯ ಭಾಷೆಯು ಹೆಚ್ಚು ಸಮ್ಮಿಶ್ರವಾಗಿರುತ್ತದೆ. ಅದು ಅದರ ನಿರೂಪಣೆಗೆ ಅಗತ್ಯವಾಗಿರುತ್ತದೆ. ಹಾಗೂ ಕಾದಂಬರಿಯ ಭಾಷೆಯನ್ನು ನಾವು ಹೇಗೆ ನೋಡಬೇಕು ಎನ್ನುವುದಕ್ಕೆ ರೂಪನಿಷ್ಟರು ಒಂದು ವಾದವನ್ನು ಇಡುತ್ತಾರೆ. ಆದರೆ ಅವರು ಹೇಳಿದ ರೀತಿಯಲ್ಲಿಯೇ ಕಾದಂಬರಿಯ ಆಂತರಿಕ ಸ್ವರೂಪವಿರುವುದಿಲ್ಲ. ಅದನ್ನು ಕೃತಿಯ ತಾತ್ಕಲಿಕ ಅಗತ್ಯವೆಂದೂ, ಅದರ ಮಾತುಗಳು ಕಾದಂಬರಿಯ ರೂಪವನ್ನು ನಿರ್ಧರಿಸುತ್ತದೆ ಎಂದೂ ಹೇಳಲು ಬರುವುದಲ್ಲ. ಕಾದಂಬರಿಯು ವಾಸ್ತವವಾಗಿ ಭಾಷೆಯನ್ನು ಬಳಸುವುದೇ ಅನೇಕತೆಯನ್ನು ಸೂಚಿಸಲು. ಕೇವಲ ಕಲಾತ್ಮಕತೆಯ ಕಾರಣಕ್ಕಾಗಿಯೇ ಕಾದಂಬರಿಯಲ್ಲಿ ಅನೇಕ ಭಾಷಿಕ ಚಹರೆಗಳನ್ನು ನಾವು ಬಳಸುವುದೂ ಇಲ್ಲ. ಭಾಷೆಯ ಅನೇಕತೆಯು ಕಾದಂಬರಿಯ ಅಗತ್ಯವೂ ಆಗಿರುತ್ತದೆ ಮತ್ತು ಅದರ ಹಿಂದೆ ನಿರ್ದಿಷ್ಟವಾದ ಉದ್ದೇಶವೂ ಇರುತ್ತದೆ. ಅನೇಕತೆಯ ಕಾದಂಬರಿಯಲ್ಲಿ ಬರುವುದೇ ಅದರ ಹಿಂದೆ ಇರುವ ಆಶಯದ ಕಾರಣಕ್ಕಾಗಿ. ಮತ್ತು ಅದನ್ನು ನಾವು ನೋಡುವಾಗ ಅದನ್ನು ವೈವಿಧ್ಯತೆಯೆಂದೇ ಪರಿಗಣಿಸಬೇಕಾಗುತ್ತದೆ. ಅನೇಕ ರೀತಿಯ ಭಾಷೆಯನ್ನು ಬಳಸುವುದಕ್ಕೆ ನಾವು ಕಾದಂಬರಿಯ ಭಾಷಿಕ ಸಂಕರವೆಂದು ಹೇಳಬಹುದು ಎಂದು ಭಕ್ತಿನ್ ಹೇಳುತ್ತಾನೆ.

ಕಾದಂಬರಿಯ ಭಾಷೆಯು ಆಗಾಗ ಬದಲಾಗುತ್ತಾ ಬಂದಿದೆ. ಅದನ್ನು ಚರಿತ್ರೆಯ ಹಿನ್ನೆಲೆಯಲ್ಲಿ ಕಾಣಬಹುದು ಎಂದು ಅವನು ಮತ್ತೊಂದು ಕಡೆಗೆ ಹೇಳುತ್ತಾನೆ. ಬಹುಭಾಷೆಯೇ ಕಾದಂಬರಿಯಲ್ಲಿ ಬಹಳ ಮುಖ್ಯವೆಂದೂ ಅದುವೇ ಕಾದಂಬರಿಯ ಸಂಕಥನವನ್ನು ಪ್ರಾರಂಭಿಸುತ್ತದೆ ಎಂದೂ ಹೇಳಬಹುದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾದಂಬರಿಯು ಒಳಗೊಳ್ಳುವ ಸಾಹಿತ್ಯದ ಭಾಷೆ ಎನ್ನುವುದೇ ಮೂಲಭೂತವಾಗಿ ಸಾಮಾಜಿಕ ಭಾಷೆಯೇ ಆಗಿರುತ್ತದೆ. ಅದು ರಚಿತವಾಗಿದೆ. ಮತ್ತು ಅದು ಕಂಪೋಸ್ ಆಗಿದೆ. ಭಾಷಿಕ ಸಂಕರತೆಯೇ ಕಾದಂಬರಿಯನ್ನು ಒಂದು ಚೌಕಟ್ಟಿಗೆ ತಂದು ನಿಲ್ಲಿಸುತ್ತದೆ. ಆದರೆ ಅದನ್ನು ನೋಡುವಾಗ ಅದು ನಿಜವಾಗಿದೆಯೋ ಅಥವಾ ಬೇರೆ ರೀತಿಯಲ್ಲಿ ಇದೆಯೋ ಎಂದು ಪರಿಶೀಲಿಸುವುದೂ ಅಷ್ಟೇ ಆಗತ್ಯವೂ ಹೌದು. ಐತಿಹಾಸಿಕ ಕಾದಂಬರಿಗಳು ಇತಿಹಾಸವನ್ನು ನೋಡುವ ಕ್ರಮವು ಬೇರೆ. ಅದು ಗತವನ್ನು ಹೇಳುತ್ತದೆ ಮತ್ತು ಅದರ ಹಿಂದೆ ಗತದ ಕುರಿತಾದ ಭ್ರಮೆಯೂ ಇರುತ್ತದೆ.

ಹೀಗಿದ್ದರೂ ಕಾದಂಬರಿಯು ಹೇಳುವ ಸಂವಾದಗಳನ್ನು ನಾವು ಅನೇಕವಾಗಿದೆ ಎನ್ನುವುದನ್ನು ಮರೆಯಲಾಗುವುದಿಲ್ಲ. ಕಾದಂಬರಿಯನ್ನು ಓದುವಾಗ ನಾವು ಯಾವುದನ್ನು ಅಂಗೀಕರಿಸುತ್ತೇವೆ ಎನ್ನುವುದೂ ಮೂಲಭೂತವಾದ ಪ್ರಶ್ನೆ. ಆದರೆ ಈ ಕುರಿತು ನಾವು ಬೇರೆ ರೀತಿಯಲ್ಲಿಯೂ ಯೋಚನೆಯನ್ನು ಮಾಡಬೇಕಾಗುತ್ತದೆ. ಕಾದಂಬರಿಯ ವಸ್ತು ಮತ್ತು ಅದರ ವಿವರಗಳು ಮುಖ್ಯವಾಗುತ್ತದೆಯೇ ಅಥವಾ ಅದರ ನಿರೂಪಣೆಯೇ ಎನ್ನುವುದು ಸಮಸ್ಯಾತ್ಮಕ. ಆದ್ದರಿಂದ ಅದನ್ನು ನಾವು ಬೇರೆ ರೀತಿಯಲ್ಲಿಯೇ ನೋಡಬೇಕಾಗುತ್ತದೆ. ಅದರ ಅಗತ್ಯವೂ ಇದೆ. ಯಾವುದೇ ಕಾದಂಬರಿಯನ್ನು ಓದಿದರೂ ನಾವು ಮೊದಲು ನೋಡುವುದು ಅದರ ಆಶಯವನ್ನೇ ಮತ್ತೆ ಬೇರೆ ಯಾವುದನ್ನೂ ಅಲ್ಲವೆನ್ನುವುದು ಬಹಳ ಮುಖ್ಯವಾದ ನಿಲುವಾಗಿದೆ. ಅನೇಕರು ಹೇಳಿರುವಂತೆ ಒಬ್ಬ ಲೇಖಕನು ಯಾವ ರೀತಿಯಲ್ಲಿ ಹೇಳುತ್ತಾನೆ ಎನ್ನುವುದು ಮಾತ್ರವೇ ಮುಖ್ಯವಾಗುವುದಿಲ್ಲ. ಯಾವುದೇ ಕಲಾಕೃತಿಗೆ ಸಾಮಾಜಿಕ ಅರ್ಥವಂತಿಕೆಯು ಇದ್ದೇ ಇರುತ್ತದೆ. ಆದರೆ ಇದನ್ನು ನೋಡುವುದು ಎಂದರೆ ಕಲಾಕೃತಿಯ ರೂಪವೂ ಕೂಡಾ ಚರ್ಚೆಗೆ ಒಳಗಾಗುವುದು ಅನಿವಾರ್ಯವೂ ಹೌದು. ಸಾಹಿತ್ಯವನ್ನು ಸಾಮಾಜಿಕತೆಯಿಂದ ಬೇರೆ ಎಂದು ತಿಳಿಯುವುದು ಎಂದರೆ ಇದನ್ನು ಭಿನ್ನವಾಗಿ ಗ್ರಹಿಸುವುದೂ ಹೌದು. ಯಾಕೆಂದರೆ ಅನೇಕ ವಿಮರ್ಶಾ ಪಂಥಗಳು ಕಾದಂಬರಿಯನ್ನು ನೋಡುವಾಗ ಕಾದಂಬರಿಯ ವಸ್ತು ಮತ್ತು ಅದರ ಸಾಧ್ಯತೆಯನ್ನು ಮಾತ್ರವೇ ಒಂದು ಚೌಕಟ್ಟಿನಲ್ಲಿ ಮಾತ್ರವೇ ಗ್ರಹಿಸುವುದು ಎಂದು ಭಾವಿಸುತ್ತಾರೆ. ಆದರೆ ಕಾದಂಬರಿಯು ಈ ರೀತಿಯಲ್ಲಿ ಮಾತ್ರವೇ ಅಸ್ತಿತ್ವವನ್ನು ಪಡೆದಿದೆ ಎಂದು ಭಾವಿಸಬೇಕಾಗಿಲ್ಲ. ಕಲೆಗೆ ಸಾಮಾಜಿಕ ಆವಶ್ಯಕತೆಯು ಇದ್ದೇ ಇರುತ್ತದೆ. ನಮಗೆ ಯಾವುದೇ ಆವಶ್ಯಕತೆಯು ಇಲ್ಲದೇ ಹೋಗಿದ್ದರೆ ನಾವು ಕಾದಂಬರಿಯೆಂಬ ಪ್ರಕಾರವನ್ನು ಸ್ವೀಕರಿಸಲು ಹೋಗುತ್ತಿರಲಿಲ್ಲ. ಆದರೆ ಕಾದಂಬರಿಯನ್ನು ನಾವು ನೋಡುವಾಗ ಅದರ ಹಿಂದೆ ಇರುವ ಸಾಮಾಜಿಕ ಒತ್ತಾಯವನ್ನು ಗಮನಿಸಬೇಕಾಗುತ್ತದೆ. ಅದು ಅಗತ್ಯವೂ ಹೌದು. ಆದರೆ ಯಾವಾಗ ಇದನ್ನು ಅರ್ಥ ಮಾಡಲು ಹೋಗುವುದೇ ಇಲ್ಲವೋ ಆಗ ಅದರ ಪ್ರಸ್ತುತತೆಯು ಗೌಣವಾಗಿ ಅದರ ಸೌಂದರ್ಯ ಮತ್ತು ಅದರ ಶಿಲ್ಪ ಮತ್ತು ಬಂಧದ ಪ್ರಶ್ನೆಯು ಮುಂದಕ್ಕೆ ಬರುತ್ತದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಕಾದಂಬರಿಯನ್ನು ನಾವು ಓದುವುದು ಬರೀ ಒಂದು ಮನೋರಂಜನೆಗಾಗಿ ಎಂದು ಭಾವಿಸುವುದು ಅಗತ್ಯವೂ ಇಲ್ಲ. ಆಶಯವನ್ನು ಆಧರಿಸಿಕೊಂಡು ಸಾಹಿತ್ಯವನ್ನು ವರ್ಗೀಕರಿಸುವುದು ಒಂದು ಕ್ರಮ. ಅದನ್ನು ನೋಡುವಾಗ ಅದರ ಆಶಯವು ಯಾವ ಬಗೆಯದು

ಎನ್ನುವುದನ್ನು ನಾವು ಗ್ರಹಿಸಬೇಕಾದ ಅಗತ್ಯವೂ ಇದೆ. ಆಶಯ ಮತ್ತು ಜೀವನದ ದೃಷ್ಟಿಕೋನಗಳಿಗೆ ಒಂದು ಸಂಬಂಧವಿದೆ. ಸಮಾಜ ಮತ್ತು ಆರ್ಥಿಕತೆಯು ಜೀವನದ ದೃಷ್ಟಿಕೋನವನ್ನು ಸೂಚಿಸುತ್ತದೆ. ಸಾಹಿತ್ಯವನ್ನು ನಾವು ಒಂದು ಅರ್ಥದಲ್ಲಿ ಬಾಹ್ಯ ರಚನೆಯೆಂದು ಹೇಳಿದರೆ ಅದನ್ನು ಗ್ರಹಿಸುವ ಕ್ರಮವು ಬೇರೆಯಾಗುತ್ತದೆ. ಯಾವುದೇ ಸಾಹಿತ್ಯವನ್ನು ನಾವು ಸಾಮಾಜಿಕ ಹಿನ್ನೆಲೆಯಿಂದಲೇ ನೋಡಬೇಕಾಗುತ್ತದೆ. ಹಾಗೆಂದು ಇಡೀ ಸಾಮಾಜಿಕ ಜೀವನವನ್ನು ಸಾಹಿತ್ಯವೇ ವ್ಯಾಖ್ಯಾನಿಸುತ್ತದೆ ಎಂದು ಹೇಳುವುದು ಅಸಾಧ್ಯ. ಸಾಹಿತ್ಯವೆನ್ನುವುದು ಧಾರ್ಮಿಕ ಗ್ರಂಥವೂ ಅಲ್ಲ. ಅದು ಪ್ರತಿನಿಧಿಸುವುದು ಕೆಲವು ಪ್ರಾತಿನಿಧಿಕ ಅಂಶಗಳನ್ನು ಮಾತ್ರವೇ. ಅದರಲ್ಲಿ ಬೇರೆ ಬೇರೆ ಮಾದರಿಗಳು ಇರುತ್ತವೆ. ಅವುಗಳಿಗೆ ಸಾಮಾಜಿಕ ತಾತ್ವಿಕತೆಯೂ ಇರುತ್ತದೆ ಮತ್ತು ಅವುಗಳನ್ನು ನೋಡುವುದು ಎಂದರೆ ಜೀವನದ ಕೆಲವು ಅಂಶಗಳನ್ನು ಮಾತ್ರವೇ ನೋಡುವುದು. ಕಾದಂಬರಿಯೆನ್ನುವುದು ಜೀವನದ ಅನೇಕ ಮುಖಗಳನ್ನು ವಿವರಿಸುತ್ತದೆ. ಕಾದಂಬರಿ ಮತ್ತು ಅದರ ಸಾಧ್ಯತೆಯು ಬೇರೆಯಾಗಿರುತ್ತದೆ. ಅದನ್ನು ನೋಡುವಾಗ ಮತ್ತೆ ನಾವು ವಿವರಿಸಬೇಕಾದ್ದು ಮಹಾಕಾವ್ಯವನ್ನು. ಅದು ಸಾಮಾಜಿಕ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸಿತ್ತು. ಅದು ಮನುಷ್ಯರು ಸಮಾಜವನ್ನು ವಿಶಿಷ್ಟವಾಗಿಯೇ ನಿರೂಪಿಸಿತ್ತು. ಅದರಲ್ಲಿ ಒಂದು ಸಮಾಜದ ಅನೇಕ ಗುಣಗಳನ್ನು ನಾವು ಕಾಣಬಹುದು. ಈ ದೃಷ್ಟಿಯಿಂದ ಮಹಾಕಾವ್ಯದ ಸಂಕಥನವು ಭಿನ್ನವಾಗಿದೆ. ಅದರಲ್ಲಿ ಉಳಿದ ಪ್ರಕಾರಕ್ಕಿಂತ ಬೇರೆಯಾದ ಗುಣವಿದೆ. ಅದರಲ್ಲಿ ಯಾವುದೇ ಒಬ್ಬ ವ್ಯಕ್ತಿಯು ಮುಖ್ಯವಲ್ಲ. ಅದು ಕಟ್ಟುವ ಪ್ರತೀಕಗಳೇ ಬೇರೆ. ಅದರ ಸ್ವರೂಪವೂ ಭಿನ್ನ. ಕಾಲ ಮತ್ತು ಅದರ ಉದ್ದೇಶಗಳೇ ಭಿನ್ನವಾಗಿದೆ. ಅದರ ಹಿನ್ನೆಲೆಯಲ್ಲಿ ಸಾಮಾಜಿಕ ಏಳುಬೀಳುಗಳ ವಿಚಾರಗಳೂ ಇರುತ್ತವೆ.

ಕಾದಂಬರಿ ಮತ್ತು ಅದರ ಸ್ವರೂಪವು ಹೀಗೆ ಬೇರೆಯಾಗುತ್ತದೆ. ಕಾದಂಬರಿಯು ಹೇಗೆ ಭಿನ್ನವಾಗಿದೆ ಮತ್ತು ಅದರಲ್ಲಿ ಲೇಖಕನ ಪಾತ್ರವು ಏನಾಗಿರುತ್ತದೆ ಎನ್ನುವುದೂ ಒಂದು ಪ್ರಶ್ನೆ. ಅಭಿವ್ಯಕ್ತಿ ಮತ್ತು ಅದರ ಪ್ರಾತಿನಿಧಿಕತೆಗೆ ಇಲ್ಲಿ ಪ್ರಾಶಸ್ತ್ಯವು ಇದ್ದೇ ಇರುತ್ತದೆ. ಲೇಖಕ ಮತ್ತು ಅವನ ಜಾಗವು ಇಲ್ಲಿ ಜಿಜ್ಞಾಸೆಗೆ ಗುರಿಯಾಗುತ್ತದೆ. ಲೇಖಕನನ್ನು ಬಿಟ್ಟ ಕಾದಂಬರಿ ಮತ್ತು ಅದರ ಶೈಲಿ ಎಂದು ಹೇಳಲಾಗುವುದೇ ಎನ್ನುವುದು ನಮ್ಮ ಮುಂದೆ ಇರುವ ಪ್ರಶ್ನೆ. ಕಾದಂಬರಿ ಮತ್ತು ಅದರ ಶೈಲಿ ಎಂದು ಹೇಳುವಾಗ ನಮಗೆ ಮತ್ತೊಂದು ಅಂಶವು ಹೆಚ್ಚು ಮುಖ್ಯವಾಗುತ್ತದೆ. ಕಾದಂಬರಿ ಮತ್ತು ಅದರ ಶೈಲಿಯನ್ನು ನೋಡುವಾಗ ಅದರ ಪರಿಣಾಮವು ಏನು ಎಂದೂ ಗಮನಿಸಬೇಕಾಗುತ್ತದೆ. (ವಿವರಗಳಿಗೆ ನೋಡಿ ಲುಕಾಕ್ಸ್ ಥಿಯರಿ ಆಫ್ ನಾವೆಲ್)

ಶೈಲಿಯನ್ನು ನೋಡುವಾಗ ನಾವು ಅದರ ವಿಶಿಷ್ಟತೆಯು ಈ ಸನ್ನಿವೇಶದಲ್ಲಿ ಏನು ಎಂದು ಗುರುತಿಸಬೇಕಾಗುತ್ತದೆ. ಕಾದಂಬರಿಯ ಶೈಲಿ ಮತ್ತು ಅದರ ಹಿಂದೆ

ಇರುವ ಸನ್ನಿವೇಶವು ಅತ್ಯಂತ ಮುಖ್ಯ. ಚರಿತ್ರೆಗೆ ಮತ್ತು ಶೈಲಿಗೆ ಒಂದು ಸಂಬಂಧವು ಇದೆ. ಆದ್ದರಿಂದ ಕಾದಂಬರಿಯ ಶೈಲಿ ಎಂದರೆ ಅದು ನಿರ್ವಾತದ ಸಂಗತಿಯು ಅಲ್ಲ. ಕಾದಂಬರಿಯಲ್ಲಿ ಬರುವ ಶೈಲಿಯ ಪ್ರಶ್ನೆಯು ಯಾವತ್ತೂ ಪದ ಮತ್ತು ವಾಕ್ಯಗಳ ಸಮಸ್ಯೆಯು ಅಲ್ಲ. ಯಾವ ಪದವನ್ನು ಒಬ್ಬ ಲೇಖಕ ಹೇಗೆ ಬಳಸುತ್ತಾನೆ ಎನ್ನುವುದು ಮಾತ್ರವೇ ಶೈಲಿ ಎಂದು ಆಗುವುದಿಲ್ಲ. ಅದು ಅಭಿವ್ಯಕ್ತಿಯನ್ನು ಕೂಡಾ ಹೇಳುತ್ತದೆ. ಅದರ ಜೊತೆಗೆ ಅದರ ಹಿಂದೆ ಇರುವ ಆಲೋಚನೆಯ ಪಂಥದ ಪ್ರಶ್ನೆಯೂ ಆಗುತ್ತದೆ.

ಒಂದು ಕಾಲದಲ್ಲಿ ಯಾವ ಶೈಲಿಯು ಇರುತ್ತದೆಯೋ ಪರಿಣಾಮಗಳು ಒಂದು ಪ್ರಕಾರದ ಮೇಲೆ ಪ್ರಭಾವವನ್ನು ಬೀರುತ್ತವೆ. ನಾವು ಈ ಅಂಶಗಳನ್ನು ನಿರಾಕರಿಸುವಂತಿಲ್ಲ. ಗ್ರೀಕರು ವಾಸ್ತವವಾಗಿ ಪ್ರಶ್ನೆ ಮತ್ತು ಉತ್ತರಗಳನ್ನು ಭಿನ್ನವಾದ ರೀತಿಯಲ್ಲಿ ಕೇಳುತ್ತಾರೆ. ನಾವು ಯಾವುದನ್ನು ಜೀವನದಲ್ಲಿ ಎದುರಿಸುತ್ತೇವೆಯೋ ಅದನ್ನು ಅವರು ತಮ್ಮ ಉತ್ತರಗಳ ಮೂಲಕ ಕಂಡುಕೊಳ್ಳುತ್ತಾರೆ. ಅವುಗಳು ರಾಚನಿಕವಾಗಿ ಅತ್ಯಂತ ಮುಖ್ಯ. ಅದನ್ನು ನಾವು ಮರೆಯಬಾರದು. ಅದು ಸೃಜನಶೀಲವೂ ಹೌದು. ನಾವು ಇದನ್ನು ಅರಿಸ್ಟಾಟಲನ ಕಾವ್ಯ ಮೀಮಾಂಸೆಯಲ್ಲಿಯೂ ಕಾಣುತ್ತೇವೆ. ಅವನ ಕೆಥಾರ್ಸಿಸ್ ಸಿದ್ಧಾಂತ ಈ ದೃಷ್ಟಿಯಲ್ಲಿ ಒಂದು ಸೃಜನಾತ್ಮಕವಾದ ಪ್ರತಿಕ್ರಿಯೆ ಕೂಡಾ ಹೌದು. ಅವರು ಈ ಬಗೆಯ ಪ್ರಶ್ನೆಗಳನ್ನು ಕೇಳುವಾಗ ಅವರ ದೃಷ್ಟಿಯಲ್ಲಿ ಸ್ಥಳ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಮತ್ತೊಂದು ಅಂಶವನ್ನು ಗ್ರೀಕರು ಹೇಳುತ್ತಾರೆ– ಅದರಲ್ಲಿ ಸ್ಥಳ ಮತ್ತು ಜ್ಞಾನಕ್ಕೆ ಇರುವ ಒಂದು ಸಂಬಂಧ. ಅವರು ಅನುಭವ ಮತ್ತು ಜ್ಞಾನಕ್ಕೆ ಒಂದು ಸಂಬಂಧವು ಇದೆ ಎಂದು ಹೇಳುತ್ತಾರೆಯೋ ಅದೇ ರೀತಿಯಲ್ಲಿ ಅವರು ಅದನ್ನು ಶಾಸ್ತ್ರ ಎನ್ನುವಂತೆ ನೋಡುತ್ತಾರೆ. ಇದು ಅತ್ಯಂತ ಕುತೂಹಲದಾಯಕವೂ ಆಗಿದೆ. ಯಾವುದು ನಿಜವಾದ ಪರಿಪೂರ್ಣವಾದ ಜ್ಞಾನ ಎಂದು ಅನಿಸುತ್ತದೆಯೋ ಅದಕ್ಕೆ ವಿವಿಧ ಹಾದಿಗಳು ಇವೆ ಎನ್ನುವುದು ಸತ್ಯ. ಮನುಷ್ಯ ಮತ್ತು ಜಗತ್ತು ಎನ್ನುವುದಕ್ಕೆ ಒಂದು ಸಂಬಂಧವು ಇದೆ. ಅದೇ ರೀತಿಯಲ್ಲಿ ನಾನು ಮತ್ತು ನೀನು ಹಾಗೂ ಮಧ್ಯೆ ಜಗತ್ತು ಇರುತ್ತದೆ, ಆದ್ದರಿಂದ ಲೋಕ ಮತ್ತು ಅದರ ಗ್ರಹಿಕೆಯಲ್ಲಿ ನಮ್ಮ ಆತ್ಮ ಎನ್ನುವುದಕ್ಕೆ ಒಂದು ಮಹತ್ವವೂ ಇದೆ. ಅದರ ಮೂಲಕ ನಾವು ಜಗತ್ತನ್ನು ನಂಬುತ್ತೇವೆ. ಅದನ್ನು ಗ್ರಹಿಸುತ್ತೇವೆ. ನಮಗೆ ಬೇಕಾದ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತೇವೆ. ಒಂದು ಕಾರಣವನ್ನು ನಾವು ಇಲ್ಲಿ ಹೇಳಬೇಕು ಜಗತ್ತನ್ನು ಅರ್ಥ ಮಾಡಿಕೊಳ್ಳುವಾಗ ನಮಗೆ ಅದರ ಜೊತೆಗೆ ಒಂದು ಸಂಬಂಧವು ಸಾಧ್ಯವಾಗುತ್ತದೆ. ನಾನು, ನೀನು, ಜಗತ್ತು ಮತ್ತು ಆತ್ಮ ಎನ್ನುವ ಪ್ರಶ್ನೆಗಳು ಪರಸ್ಪರ ಸೇರಿಕೊಂಡು ಒಂದು ಏಕತೆ

ಉಂಟಾಗುತ್ತದೆ. ಅದರಲ್ಲಿ ಒಂದು ಸಮತೋಲನವು ಬರುತ್ತದೆ. ಇದರ ಅತ್ಯಂತ ಮುಖ್ಯವಾದ ಒಂದು ಅಂಶವೆಂದರೆ ಜೀವನ ಮತ್ತು ಅದರ ಸಾರ ಸರ್ವಸ್ವವನ್ನು ನಾವು ಕಾಪಾಡುವುದು. ಈ ಮಾತಿಗೆ ಒಂದು ನಿರ್ದಿಷ್ಟವಾದ ತತ್ವಜ್ಞಾನವೂ ಬೇಕಾಗುತ್ತದೆ.. ಇದರ ಜೊತೆಗೆ ಅತ್ಯಂತ ಮಹತ್ವದ ಇನ್ನೊಂದು ಪ್ರಶ್ನೆಯನ್ನು ಗ್ರೀಕರು ಕೇಳುತ್ತಾರೆ. ವಾಸ್ತವವಾಗಿ ಇಲ್ಲಿ ಪ್ರೀತಿ, ಕುಟುಂಬ ಮತ್ತು ಪ್ರಭುತ್ವದ ಪ್ರಶ್ನೆಗಳೂ ಬಂದಿವೆ. ಗ್ರೀಕರು ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಚರಿತ್ರೆಯನ್ನು ನಮಗೆ ಕಟ್ಟಿಕೊಟ್ಟಿದ್ದಾರೆ. ಯಾವುದು ನಮ್ಮ ಜೀವನವನ್ನು ಹಾಳುಮಾಡುತ್ತದೆ; ಅದು ಹೇಗೆ ಬಾಹ್ಯವನ್ನು ಸೂಚಿಸುತ್ತದೆ ಎನ್ನುವುದನ್ನು ಅವರ ತತ್ವಜ್ಞಾನವು ಹೇಳುತ್ತದೆ. ಜೀವನ ಮತ್ತು ಅದರ ಸಾಧ್ಯತೆಯನ್ನು ಅವರು ಹುಡುಕುವ ಕ್ರಮಗಳು ಬೇರೆಯಾಗಿವೆ. ಅದನ್ನು ವಿಧಿ ಮತ್ತು ಮನುಷ್ಯರ ಸಂಬಂಧ ಮೂಲಕ ಹೇಳುತ್ತಾರೆ. ಆಧ್ಯಾತ್ಮವು ನಮ್ಮನ್ನು ನಿಯಂತ್ರಣ ಮಾಡುತ್ತದೆ. ಒಂದು ಮುಕ್ತ ಎನ್ನುವ ಸ್ಥಿತಿಯು ಮನುಷ್ಯರಿಗೆ ಬೇಕಾಗುತ್ತದೆ. ಮನುಷ್ಯನು ತನ್ನ ಅಗತ್ಯವನ್ನು ರೂಪಿಸಿಕೊಳ್ಳಬಲ್ಲ. ಅದನ್ನು ಸಾಧಿಸಲು ನಮಗೆ ಶಕ್ತಿಯು ಬೇಕಾಗುತ್ತದೆ. ಯಾವುದೇ ಗಾಳಿ ಮತ್ತು ಬೆಳಕು ಇಲ್ಲದ ಒಂದು ಕೋಣೆಯಲ್ಲಿ ಹೆಚ್ಚು ಹೊತ್ತು ಕಳೆಯಲಾರೆವು. ಇದು ಒಂದು ತತ್ವಜ್ಞಾನದ ಹಾಗೆ ಕಾಣುತ್ತದೆ. ಆದರೆ ನಾವು ಮಾಡಿದ ಮೊದಲ ಕೆಲಸವೆಂದರೆ ರೂಪಗಳನ್ನು ಹುಟ್ಟುಹಾಕಿದ್ದು, ಆದ್ದರಿಂದ ಇದಕ್ಕೆ ಒಂದು ಚಾರಿತ್ರಿಕವಾದ ಮಹತ್ವವು ಇದೆ. ಆದ್ದರಿಂದ ನಾವು ಮೊದಲು ನಮ್ಮನ್ನು ನಾವೇ ಶೋಧಿಸಬೇಕಾದ ಅಗತ್ಯವಿದೆ. ಅದು ಸತ್ಯದ ಹುಡುಕಾಟವೂ ಹೌದು. ಈ ಜಗತ್ತು ಅತ್ಯಂತ ವಿಶಾಲವಾಗಿದೆ. ಅದರಲ್ಲಿ ಅಪಾಯಗಳು ಇವೆ. ಅದರ ಜೊತೆಗೆ ಅದರಲ್ಲಿ ಸುಖವೂ ಇದೆ. ಅದರ ಜೊತೆಗೆ ಅತ್ಯಂತ ವಿಸ್ತಾರವಾದ ನಿಸರ್ಗವೂ ನಮ್ಮನ್ನು ಪೋಷಿಸುತ್ತದೆ. ಅದನ್ನು ನಾವು ಹೇಗೆ ಬೇಕಾದರೂ ಹೇಳಬಹುದು. ಅದರಲ್ಲಿ ಒಂದು ಮುಖ್ಯವಾದ ಅಂಶವಿದೆ ಎಂದು ಗ್ರೀಕರು ನಂಬುತ್ತಾರೆ. ಗ್ರೀಕರು ಜಗತ್ತನ್ನು ನೋಡುವಾಗ ಒಂದು ಧನಾತ್ಮಕವಾದ ಅರ್ಥವನ್ನು ಕೊಡುತ್ತಾರೆ. ಅದನ್ನು ಅವರು ಗ್ರಹಿಸುವಾಗ ಅದರಲ್ಲಿ ಇರುವ ಸಮಗ್ರತೆಯನ್ನು ಹೇಳುತ್ತಾರೆ. ಇದಕ್ಕೆ ಚಾರಿತ್ರಿಕವಾದ ಒಂದು ಮಹತ್ವವು ಇದೆ. ಮನುಷ್ಯ ಮತ್ತು ನಿಸರ್ಗವನ್ನು ಒಂದು ಏಕತೆಯ ರೂಪದಲ್ಲಿ ಕಾಣುತ್ತಾರೆ. ಅವರ ಆಧ್ಯಾತ್ಮಿಕವಾದ ಚಿಂತನೆಯು ಅವರ ಕಾವ್ಯದ ಚರ್ಚೆಯಲ್ಲಿಯೂ ಬರುತ್ತದೆ. ಅವರು ನಿಜವಾದ ಅರ್ಥದಲ್ಲಿ ತತ್ವಜ್ಞಾನ ಮತ್ತು ಚರಿತ್ರೆಯನ್ನು ಜೊತೆಗೆ ಸೇರಿಸಿಕೊಂಡಿದ್ದಾರೆ. ಆದ್ದರಿಂದ ಅವರ ನಿಲುವುಗಳು ಮತ್ತು ಸಾಹಿತ್ಯದ ಚಿಂತನೆಗಳು ಜೊತೆಗೆ ಹೋಗುತ್ತವೆ. ಒಂದು ಅರ್ಥದಲ್ಲಿ ಕಾವ್ಯಗಳಿಗೆ ಹೆಚ್ಚು ಶಕ್ತಿಯನ್ನು ಒದಗಿಸಿದವು. ಅದರಲ್ಲಿಯೂ ಅದಕ್ಕೆ ಒಂದು ಮಹತ್ವದ ಚರಿತ್ರೆಯು ಇದೆ. ಅದು ಸೌಂದರ್ಯಶಾಸ್ತ್ರವನ್ನು ಹೇಳುತ್ತದೆ. ಅಲ್ಲಿನ ಸಂಸ್ಕೃತಿಯ

ಚಿಂತನೆಯಲ್ಲಿಯೂ ನಾವು ಕಾಣಬಹುದು. ಜಗತ್ತಿಗೆ ಅವರು ತತ್ವಜ್ಞಾನ ಮತ್ತು ರಂಗಭೂಮಿಯನ್ನು ಕೊಟ್ಟರು. ಅದರ ಮೂಲಕ ಜಗತ್ತಿನ ಸಂಸ್ಕೃತಿಗೆ ಒಂದು ಕಾಣಿಕೆಯನ್ನು ಕೊಟ್ಟರು. ಮಹಾಕಾವ್ಯಗಳು ಜೀವನವನ್ನು ಹೇಳಿದ ಕ್ರಮವನ್ನು ನಾವು ಮತ್ತೊಮ್ಮೆ ನೆನಪು ಮಾಡಿಕೊಳ್ಳಬೇಕು. ಜೀವನಕ್ಕೆ ಒಂದು ಘನತೆಯು ಇದೆ. ಅದರ ಜೊತೆಗೆ ನಮ್ಮ ಜೀವನಕ್ಕೆ ಯಾವ ಅರ್ಥವಿದೆ ಎಂದು ನಾಟಕಗಳ ಮೂಲಕ ಹೇಳುತ್ತಾರೆ. ವಾಸ್ತವಗಳ ಮೂಲಕ ಜನರು ತಮ್ಮ ಜೀವನವನ್ನು ಕಟ್ಟುತ್ತಾರೆ. ಅದೇ ರೀತಿಯಲ್ಲಿ ನಾಟಕಗಳಲ್ಲಿ ನಾಯಕನೂ ಜೀವನ ಮತ್ತು ಅದರ ಅರ್ಥವಂತಿಕೆಯನ್ನು ಹುಡುಕುತ್ತಾನೆ. ದುರಂತ ಎನ್ನುವುದೂ ಜೀವನದ ಭಾಗವಾಗಿದೆ. ಅದು ಅದೃಶ್ಯದ ರೂಪಕವೂ ಅಲ್ಲ. ಅವನ ಆತ್ಮ ಎನ್ನುವುದು ಹೇಗೆ ಒಂದು ಶಕ್ತಿಯನ್ನು ಹೊಂದಿರುತ್ತದೆ ಎನ್ನುವುದು ಗ್ರೀಕ್ ನಾಟಕಗಳ ಅತ್ಯಂತ ಮುಖ್ಯವಾದ ಒಂದು ಆಶಯವೂ ಆಗಿದೆ. ಅವನು ಭೂಮಿಯಲ್ಲಿ ಇದ್ದಾನೆ. ಅವನಿಗೆ ಕೂಡಾ ಒಂದು ವಾಸ್ತವ ಇದೆ. ಜೀವನದ ಪ್ರಶ್ನೆಗಳಿಗೆ ದುರಂತ ನಾಟಕಗಳು ಉತ್ತರವನ್ನು ಕೊಡುತ್ತವೆ. (ವಿವರಗಳಿಗೆ ನೋಡಿ: ಹಿದೇನ್ ವೈಟ್, ಟೈಂ ಅಂಡ್ ನೆರೆಟಿವ್)

ಇದರ ನಡುವೆ ಪ್ಲೇಟೋ ವ್ಯಕ್ತಿ ಮತ್ತು ಅವನ ಅನನ್ಯತೆಯನ್ನು ಹುಡುಕುತ್ತಾನೆ. ಅವನಲ್ಲಿ ಮನುಷ್ಯನಿಗೆ ಒಂದು ವಿವೇಕವೂ ಇದೆ. ವ್ಯಕ್ತಿಗೆ ಒಂದು ಶಕ್ತಿಯೂ ಇದೆ. ಮನುಷ್ಯನಿಗೆ ಶಕ್ತಿಯು ಎಲ್ಲಿಂದ ಬರುತ್ತದೆ ಎನ್ನುವುದೂ ಗ್ರೀಕರಲ್ಲಿ ಮುಖ್ಯವಾದ ಪ್ರಶ್ನೆ. ಇದು ತತ್ವಜ್ಞಾನದ ಪ್ರಶ್ನೆಯೂ ಹೌದು. ಅದರ ಜೊತೆಗೆ ಗ್ರೀಕ್ ನಾಟಕಗಳು ನಮಗೆ ಆಸೆ ಮತ್ತು ಅದರ ಪರಿವರ್ತನೆ ಹಾಗೂ ವ್ಯಕ್ತಿ ಮತ್ತು ಅವನ ವಿನಾಶವನ್ನು ಹೇಳುತ್ತದೆ. ಆದ್ದರಿಂದಲೇ ನಮಗೆ ಗ್ರೀಕರ ದೃಷ್ಟಿಕೋನವು ಅತ್ಯಂತ ಮುಖ್ಯ ಎಂದು ಅನಿಸುತ್ತದೆ. ಅವರು ಜಗತ್ತನ್ನು ಮತ್ತು ವಿಶ್ವಾತ್ಮಕ ರಚನೆಗಳನ್ನು ಹೇಳಿದರು. ಇದು ಮಹತ್ವದ್ದು ಎಂದು ಕಾಣುತ್ತದೆ.

ಒಂದು ದೃಷ್ಟಿಯಿಂದ ಗ್ರಾಂಶಿ ಮತ್ತು ಲುಕಾಕ್ಸ್ ಅತ್ಯಂತ ಪ್ರಭಾವಶಾಲಿಯಾದ ಲೇಖಕರು.

ಯಾವುದು ನಿಜ? ಯಾವುದು ವಾಸ್ತವ? ಯಾವುದು ಸತ್ಯ? ಈ ಮೂರು ಪ್ರಶ್ನೆಗಳನ್ನು ನಾವು ಬೇರೆ ಬೇರೆ ರೀತಿಯಲ್ಲಿ ಕೇಳುತ್ತೇವೆ. ಫುಕೋ ಈ ವಿಷಯದಲ್ಲಿ ತನ್ನದೇ ಆದ ಒಂದು ಚರ್ಚೆಯನ್ನು ನಮ್ಮ ಮುಂದೆ ಇಟ್ಟಿದ್ದಾನೆ. ಸತ್ಯ ಎನ್ನುವುದು ವಿಶ್ವಾತ್ಮಕವೇ ಅಥವಾ ಅದು ಬರೀ ಸ್ಥಳೀಯವಾದ್ದೇ ಎನ್ನುವುದು ಅವನ ವಾದ. ಆಧುನಿಕೋತ್ತರವಾದಿಗಳು ಇದನ್ನು ಬೇರೆ ಥರ ನಿರ್ವಚನ ಮಾಡುತ್ತಾರೆ. ಮೊದಲು ಫುಕೋ ಇದನ್ನು ಬೇರೆ ಥರ ಕೇಳುತ್ತಿದ್ದ. ದ ಆರ್ಡರ್ ಆಫ್ ಥಿಂಗ್ಸ್ ಮತ್ತು ದ

ಆರ್ಕಿಯಾಲಜಿ ಆಫ್ ನಾಲೆಜ್ ಕೃತಿಗಳಲ್ಲಿ ಅವನು ಕೇಳಿದ್ದ ಪ್ರಶ್ನೆಗಳು ಬೇರೆ ಥರ ಇರುತ್ತಿದ್ದವು. ಅವನು ಆಗ ಸ್ವಲ್ಪ ಮಟ್ಟಿಗೆ ರಚನವಾದಿಯೂ ಆಗಿದ್ದ. ಹೇಗೆ ಸಮಾಜದ ರಚನೆಗಳು ಇವೆ ಮತ್ತು ಅವು ಯಾವ ಮಾದರಿಯ ಸಂಕಥನವನ್ನು ರೂಪಿಸಿದೆ ಎಂದು ಅವನು ಅದರಲ್ಲಿ ಚರ್ಚೆಯನ್ನು ಮಾಡಿದ್ದ. ಆಗ ಅವನ ವಾದಗಳಲ್ಲಿ ಸಮಾಜದ ಚರಿತ್ರೆ ಮತ್ತು ಅದರ ಬದಲಾವಣೆಗಳು ಅತ್ಯಂತ ಮುಖ್ಯವಾಗಿದ್ದವು. ಅವನು ಅದನ್ನು ಸಾಮಾಜಿಕ ಸಂಕಥನ ಎಂದು ಕರೆದಿದ್ದ. ಸಾಮಾಜಿಕ ಅಭ್ಯಾಸಗಳಲ್ಲಿ ಕೆಲವು ಸಂಪ್ರದಾಯಗಳು ಬಂದಿವೆ. ಅವುಗಳನ್ನು ನಾವು ವರ್ಗೀಕರಣ ಮಾಡಲು ಸಾಧ್ಯವಿದೆ. ಅನಂತರ ಅವನ ವಾದವು ರಚನೋತ್ತರವಾದದ ಹತ್ತಿರ ಬಂದಿತ್ತು. ಸಂಕಥನ, ಸಾಮಾಜಿಕ ಅಭ್ಯಾಸ ಮತ್ತು ಅಧಿಕಾರಗಳ ನಡುವೆ ಒಂದು ಬಹುತ್ವವು ಇದೆ ಎಂದು ಅವನು ಹೇಳತೊಡಗಿದ.

ನಮಗೆ ಯಾವುದು ವಾಸ್ತವ ಎಂದು ಅನಿಸುತ್ತದೆಯೋ ಅದರ ಸ್ವರೂಪದ ಬಗ್ಗೆ ನಮಗೆ ಅನೇಕ ಅನುಮಾನಗಳು ಇದ್ದವು. ಆದರೆ ನಿರೂಪಣೆಯು ಅದರಲ್ಲಿ ಅತ್ಯಂತ ಮುಖ್ಯವಾದ ಒಂದು ಪಾತ್ರವನ್ನು ವಹಿಸುತ್ತದೆ. ಹಾಗೆ ನೋಡಿದರೆ ನಮಗೆ ಕಥನವನ್ನು ಹೇಳಲು ಹಿಂದೆ ಇದ್ದ ದಾರಿಗಳು ಈವತ್ತು ಬದಲಾಗಿದೆ. ಕಥನ ಮತ್ತು ಅದರ ಸಾಧ್ಯತೆಗಳು ಬೇರೆಯಾಗಿವೆ. ಹಿಂದೆ ಕತೆಯನ್ನು ಪದ್ಯದಲ್ಲಿ ಮತ್ತು ಗದ್ಯದಲ್ಲಿ ಹೇಳುವಾಗ ಅದರಲ್ಲಿ ಮೌಖಿಕತೆಯು ಪ್ರಧಾನವಾದ ಒಂದು ಭಾಗವಾಗಿತ್ತು. ಆಗ ಇದ್ದ ನಿರೂಪಣೆಗಳು ಒಂದು ಥರ ಇದ್ದರೆ ಈವತ್ತು ಕಥನವು ಬೇರೆ ಮಾರ್ಗದಲ್ಲಿ ಇವೆ. ಈವತ್ತು ಕಥನವನ್ನು ನಾವು ಓದುವುದು ಸಾಧ್ಯ ಎನ್ನುವುದು ಇಲ್ಲಿ ಮುಖ್ಯ.

ವಾಸ್ತವದ ನಿರೂಪಣೆ ಎಂದರೆ ಅವು ಜೀವನ ಮತ್ತು ಜಗತ್ತನ್ನು ವಿಶಿಷ್ಟವಾಗಿ ಅನುಸರಿಸುವುದು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಹೊರಗಿನ ವಿಚಾರಗಳನ್ನು ಅದು ಕಾದಂಬರಿಯ ಒಳಗೆ ತರುತ್ತದೆ. ಅತ್ಯಂತ ದೊಡ್ಡದಾದ ಕಾದಂಬರಿಗಳು ನಮಗೆ ಇದನ್ನು ಹೇಳುತ್ತವೆ. ಈ ಅರ್ಥದಲ್ಲಿ ಅದು ಪ್ರಾತಿನಿಧಿಕವೂ ಆಗುತ್ತದೆ. ಅದರ ಜೊತೆಗೆ ಕಾದಂಬರಿಗಳು ನಮಗೆ ಹಿಂದೆ ಏನು ನಡೆದಿದೆಯೋ ಅದನ್ನು ಹೇಳುತ್ತವೆ. ವಾಸ್ತವವಾದಲ್ಲಿ ನಮಗೆ ವಸ್ತು ಮತ್ತು ಅದರ ದೃಷ್ಟಿಕೋನವೇ ಹೆಚ್ಚು ಪ್ರಧಾನವಾಗಿದೆ. ಅದು ತನ್ನನ್ನು ತಾನೇ ಸಮರ್ಥನೆಯನ್ನು ಮಾಡಿಕೊಳ್ಳುವ ಥರ ಇರುತ್ತದೆ. ಹಾಗೆ ನೋಡಿದರೆ ನಾವು ಯಾವುದನ್ನು ವಾಸ್ತವ ಎಂದು ಕರೆಯುತ್ತೇವೆಯೋ ಅದರ ರೂಪವು ಒಂದು ಸಂವಾದಿಯಾದ ಪದವಾಗಿದೆ. ಒಂದು ಮಾತನ್ನು ಲೆವಿಸ್ಟ್ರಾಸ್ ಹೇಳಿದ್ದಾನೆ: ನಾವು ಬಳಸುವ ಅನೇಕ ಸಂಗತಿಗಳು ಬರೀ ಸಂವಾದಿಯಾದ ಒಂದು ರೂಪವಾಗಿದೆ. ಇದು ಎಲ್ಲಾ ಮಾನವಿಕ ವಿಜ್ಞಾನಗಳಿಗೆ ಅನ್ವಯವಾಗುತ್ತದೆ. ಅದರ ಜತೆಗೆ ನಮಗೆ ಒಂದು ಭೂತಕಾಲವೂ ಇದೆ. ಅದನ್ನು

ನಾವು ಗ್ರಹಿಸುವಾಗಲೇ ಆಂತರಿಕವಾದ ಒಂದು ಸಮಸ್ಯೆಯು ಪ್ರಾರಂಭವಾಗುತ್ತದೆ. ಯಾವಾಗ ನಾವು ಬರೆದು ಮುಗಿಸುತ್ತೇವೆಯೋ ಅಗ ಆದರ ಅರ್ಥವೂ ನಮಗೆ ಒಂದು ಭೂತಕಾಲವಾಗುತ್ತದೆ. ವಾಸ್ತವವನ್ನು ನಾವು ಗ್ರಹಿಸುವುದು ಮತ್ತು ಅದರ ಕುರಿತು ಬರೆಯುವುದು ಅಂದರೆ ನಮ್ಮ ಪ್ರಜ್ಞೆಯನ್ನು ವಿಸ್ತಾರ ಮಾಡುವುದು ಸತ್ಯ. ನಮಗೆ ಯಾವುದು ಹೆಚ್ಚು ಪ್ರಭಾವವನ್ನು ಬೀರುತ್ತದೆಯೋ ಅದನ್ನು ನಾವು ನಮ್ಮ ವಾಸ್ತವದಲ್ಲಿ ವಿವರಿಸುತ್ತೇವೆ. ಆದರೆ ಅದು ಸಂಪೂರ್ಣವಾಗಿ ಒಂದು ಗ್ರಹಿಕೆಯನ್ನು ಹೇಳುವುದಿಲ್ಲ. ವಾಸ್ತವವನ್ನು ಒಬ್ಬರು ಒಂದು ಥರ ವಿವರಿಸಿದರೆ ಮತ್ತೊಬ್ಬರು ಮತ್ತೊಂದು ಥರ ಹೇಳಬಹುದು. ಲಕಾನ್ ಹೇಳಿದ್ದು ಇದನ್ನು. ವಾಸ್ತವ ಎನ್ನುವುದು ಒಂದು ಬಗೆಯಲ್ಲಿ ರಚನೆಯು ಆಗಿದೆ. ಆದ್ದರಿಂದ ಅದರಲ್ಲಿ ಸತ್ಯ ಮತ್ತು ಮೌಲ್ಯಗಳು ಅತ್ಯಂತ ಮುಖ್ಯವಾಗುತ್ತದೆ. ವಾಸ್ತವವು ಒಂದು ಹಂತದಿಂದ ಪ್ರಾರಂಭವಾಗಿ ಮತ್ತೊಂದು ಕಡೆಗೆ ಮುಕ್ತಾಯವಾಗುತ್ತದೆ. ಹೊರಗೆ ಇರುವ ವಾಸ್ತವವು ಮುಕ್ತಾಯವಾಗುವುದಿಲ್ಲ. ಆದರೆ ಕಾದಂಬರಿಯಲ್ಲಿ ವಾಸ್ತವ ಒಂದು ಕಡೆಯಿಂದ ಪ್ರಾರಂಭವಾಗಿ ಮತ್ತೊಂದು ಕಡೆಗೆ ಮುಕ್ತಾಯವಾಗುತ್ತದೆ. ಅದಕ್ಕೆ ಒಂದು ನಿರ್ದಿಷ್ಟತೆಯು ಇದೆ. ನಿಜವನ್ನು ನಾವು ಸನ್ನಿವೇಶವನ್ನು ಬಿಟ್ಟು ಮಾತಾಡಲು ಬರುವುದಿಲ್ಲ. ಸನ್ನಿವೇಶವೇ ವಾಸ್ತವಕ್ಕೆ ಹೇಗೆ ಕಾರಣವಾಗುತ್ತದೆಯೋ ಅದೇ ರೀತಿಯಲ್ಲಿ ಬರಹಕ್ಕೂ ಒಂದು ಸನ್ನಿವೇಶವು ಇರುತ್ತದೆ. ಅದನ್ನು ಅನುಸರಿಸಿಕೊಂಡು ಲೇಖಕನು ಬರೆಯುತ್ತಾನೆ. ವಾಸ್ತವವು ನಿರ್ದಿಷ್ಟವಾದ ನಿರೂಪಣೆಯು ಆಗುತ್ತದೆ. ಬರಹದಲ್ಲಿ ವಾಸ್ತವವು ಒಂದು ನಿರ್ದಿಷ್ಟವಾದ ಬಗೆಯನ್ನು ಹುಟ್ಟುಹಾಕುತ್ತದೆ. ಅದರಲ್ಲಿ ನಾವು ರೊಮಾಂಟಿಕ್ ಎನ್ನಬಹುದಾದ ಸಂಗತಿಗಳನ್ನು ಕಾಣಲು ಸಾಧ್ಯವಿಲ್ಲ. ಒಂದು ಅರ್ಥದಲ್ಲಿ ಅದು ಪಾರದರ್ಶಕವಾದ ಭಾಷೆಯನ್ನು ಸೂಚಿಸುತ್ತದೆ. ಆಲೋಚನೆಯು ಕೂಡಾ ಒಂದು ಚರಿತ್ರೆಯಿಂದ ಹುಟ್ಟುತ್ತದೆ ಎಂದು ಅರ್ಥ ಮಾಡಿಕೊಳ್ಳುವುದು ಅತ್ಯಂತ ಮುಖ್ಯ. ಹಾಗೆ ನೋಡುವುದಿದ್ದರೆ ಆಧುನಿಕ ಕನ್ನಡದ ಹುಟ್ಟು ಮತ್ತು ಬೆಳವಣಿಗೆಯ ಜೊತೆಗೆ ವಾಸ್ತವವು ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿರುವುದು ಸತ್ಯ. ಅವು ನಮಗೆ ನಮ್ಮ ಸಮಾಜದ ಏಳುಬೀಳುಗಳನ್ನು ಅತ್ಯಂತ ಚೆನ್ನಾಗಿಯೇ ಹೇಳುತ್ತವೆ, ವಾಸ್ತವದಲ್ಲಿ ನಿರೂಪಣೆಯಲ್ಲಿ ಗಾಢವಾದ ಒಂದು ಅನುಕರಣೆಯನ್ನು ಹೊಂದಿರುತ್ತದೆ. ಅದರಲ್ಲಿ ಅನುಕರಣೆ ಎನ್ನುವುದು ಹೇಗೆ ಮುಖ್ಯವಾಗುತ್ತದೆ ಎಂದೂ ಗಮನಿಸಬೇಕು. ಲೋಕದ ಅತ್ಯಂತ ಸಾಮಾನ್ಯರನ್ನು ಕೂಡಾ ವಾಸ್ತವವಾದವು ನಿರೂಪಣೆ ಮಾಡುತ್ತದೆ. ವಾಸ್ತವತೆ ಎನ್ನುವುದು ಒಂದು ಪ್ರಾತಿನಿಧಿಕವಾದ ನಿಲುವು ಮಾತ್ರವೆ ಆಗಿರುತ್ತದೆ. ವಾಸ್ತವ ಎನ್ನುವುದೇ ಒಂದು ವಿಶಿಷ್ಟವಾದ ನಿಲುವು. ಅದರಲ್ಲಿ ಯಾವುದನ್ನು ಮಾರ್ಕ್ಸವಾದಿಗಳು ಮೇಲು ರಚನೆ ಎಂದು ಹೇಳುತ್ತಾರೆಯೋ ಅದರ ಚಹರೆಯು

ವಾಸ್ತವದಲ್ಲಿ ಯಥಾವತ್ತಾಗಿ ಬರುತ್ತದೆ. ಜೀವನದ ಕ್ರಮ ಎನ್ನುವುದು ಅದರಲ್ಲಿ ಒಂದು ನಮೂನೆಯು ಆಗಿರುತ್ತದೆ. ಮನುಷ್ಯರು ಮತ್ತು ಅವರ ಸಮಸ್ಯೆಗಳನ್ನು ಹೇಳುವಾಗ ಅದು ವಿಶ್ವಾತ್ಮಕವಾಗುತ್ತದೆ. ಹಾಗೆಂದು ಸ್ವಯಂಸಂಪೂರ್ಣವಾಗಿಲ್ಲ. ಅದನ್ನು ನಾವು ಗಮನಿಸಬೇಕು. ಆದರಲ್ಲಿ ಉದಾರವಾದದ ನಿಲುವು ಇರುತ್ತದೆ. ಫುಕೋ ಒಂದು ಅರ್ಥದಲ್ಲಿ ವಾಸ್ತವವನ್ನು ಒಪ್ಪಿಕೊಂಡಿದ್ದ. ಅವನು ವಾಸ್ತವವನ್ನು ಜನರ ಚರಿತ್ರೆಯ ಹಿನ್ನೆಲೆಯಲ್ಲಿ ನೋಡುತ್ತಾನೆ. ಅದನ್ನು ಅವನು ವಿಮರ್ಶಾತ್ಮಕವಾಗಿ ನೋಡುತ್ತಾನೆ. ವಾಸ್ತವ ಎನ್ನುವುದು ಒಂದು ಹಂತದವರೆಗೆ ಅತ್ಯಂತ ಉಪಯುಕ್ತ ಎಂದು ಫುಕೋ ಭಾವಿಸಿದ್ದ., ಆದ್ದರಿಂದ ಅದನ್ನು ಸಂಪೂರ್ಣವಾಗಿ ತೆಗೆದು ಹಾಕುವುದಿಲ್ಲ.

ವಾಸ್ತವದಲ್ಲಿ ವ್ಯಕ್ತಿಯು ಹೇಗೆ ತನ್ನ ನೋಟವನ್ನು ಮಾತ್ರವೇ ಹೇಳುತ್ತಾನೆ. ಪ್ರಾಪ್ ಒಂದು ಮಾತನ್ನು ಹೇಳುತ್ತಾನೆ: ನಾವು ಯಾವುದನ್ನು ಹೇಗೆ ನಿರೂಪಿಸುತ್ತೇವೆ ಎನ್ನುವುದು ಅತ್ಯಂತ ಮುಖ್ಯ. ಒಬ್ಬನ ಕತೆಯನ್ನು ಹೇಳುವಾಗ ಅವನ ಅಂತಸ್ತು, ಅವನ ಸ್ಥಾನಮಾನ, ಅವನ ಜೀವನ ಕ್ರಮ ಹಾಗೂ ಅವನ ಗುಣಗಳೂ ಕೂಡಾ ಒಂದು ಮೌಲ್ಯವನ್ನು ಹೇಳುತ್ತವೆ. ಇದನ್ನೇ ಪ್ರಾಪ್ ಹೇಳುತ್ತಾನೆ. ನಿರೂಪಣೆ ಎನ್ನುವುದೂ ಒಂದು ಬಯಕೆ ಅದನ್ನು ನಾವು ಕಾಣುತ್ತೇವೆ. ಒಂದು ಮೂಲಭೂತವಾದ ಪ್ರಶ್ನೆಯು ಇದೆ: ಅದನ್ನು ಹೀಗೆ ಹೇಳಬಹುದು– ನಾವು ಯಾರ ಹತ್ತಿರ ಯಾವುದನ್ನು ಹೇಳಬೇಕು ಎನ್ನುವುದು ನಮ್ಮ ಬಯಕೆಯನ್ನು ಸೂಚಿಸುತ್ತದೆ. ವಾಸ್ತವಕ್ಕೆ ಹತ್ತಿರ ಇರುವ ಯಾವುದೇ ಪಾತ್ರಗಳು ನಿಜವಾಗಿಯೂ ನಮಗೆ ಅನೇಕ ಮಾಹಿತಿಯನ್ನು ಒದಗಿಸುತ್ತದೆ ಎಂದು ಫುಕೋ ಭಾವಿಸುತ್ತಾನೆ. ವಾಸ್ತವವಾದಿ ಬರಲು ನಮ್ಮ ನಡುವೆ ಇರುವ ನಂಬಿಕೆ, ಸಂಪ್ರದಾಯ ಇತ್ಯಾದಿಗಳನ್ನು ಹೇಳುತ್ತದೆ.

ವಾಸ್ತವ ಎನ್ನುವುದು ನಮಗೆ ಒಂದು ಶಬ್ದ ಚಿತ್ರದ ಥರ ಇರುತ್ತದೆ,. ಅದನ್ನು ನಾವು ಗಮನಿಸಬೇಕು ಎನ್ನುವುದು ಅವನ ಪ್ರಮುಖವಾದ ವಾದ. ಅದರಲ್ಲಿ ಒಂದು ನಿರ್ದಿಷ್ಟವಾದ ವಿದ್ಯಮಾನವು ಇರುವ ಹಾಗೆ ಕಾಣುತ್ತದೆ. ಒಂದು ಚಾರಿತ್ರಿಕ ವಾಸ್ತವ ಹೇಗೆ ರೂಪುಗೊಳ್ಳುತ್ತದೆ ಎನ್ನುವುದಕ್ಕೆ ಇದು ಒಂದು ನಿದರ್ಶನವಾಗಿದೆ. ಗ್ರೇಮಾಸ್ ನಿರೂಪಣೆ ಮತ್ತು ಅದರ ಕ್ರಮಗಳನ್ನು ಹೇಳುವಾಗ ವಾಸ್ತವ ಎನ್ನುವುದು ಹೇಗೆ ಪ್ರಭಾವವನ್ನು ಬೀರುತ್ತದೆ ಎಂದು ಹೇಳುತ್ತಾನೆ. ವಾಸ್ತವತೆ ಎನ್ನುವುದು ಬರಹಕ್ಕೆ ಬರುವಾಗ ಅದರಲ್ಲಿ ಒಂದು ನಿರ್ದಿಷ್ಟವಾದ ಚೌಕಟ್ಟು ಇರುತ್ತವೆ ಅದನ್ನು ಓದುವಾಗ ನಾವು ಆಯಾಚಿತವಾಗಿ ಪುನರ್‌ರಚನೆ ಮಾಡುತ್ತೇವೆ. ಅತ್ಯುನ್ನತವಾದ ವಾಸ್ತವವು ಇರುವುದನ್ನು ಹೇಗೆ ಹೇಳುತ್ತದೆ ಎಂದು ಈ ದೃಷ್ಟಿಯಿಂದಲೂ ಗಮನಿಸಬೇಕಾಗುತ್ತದೆ. ಇರುವುದನ್ನು ಇರುವ ಹಾಗೆ ಹೇಳುವುದು ಅಂದರೆ ಅದರಲ್ಲಿ ನಮ್ಮ ವಾಸ್ತವವು ಹೇಗೆ ಇರುತ್ತದೆಯೋ ಅದನ್ನು ಮಾತ್ರವೇ ಹೇಳಬೇಕಾಗುತ್ತದೆ.

ಆಗ ಒಂದು ದೃಷ್ಟಿಕೋನವು ಮಾತ್ರವೇ ಸಾಧ್ಯವಾಗುತ್ತದೆ. ಸಂಸ್ಕೃತಿ ಮತ್ತು ಅದರ ಮೌಲ್ಯಗಳು ಹೇಗೆ ಕೆಲಸವನ್ನು ಮಾಡುತ್ತದೆ ಎನ್ನುವುದು ನಮಗೆ ಗೊತ್ತಿರಬೇಕು. ಎಡ್ಮಂಡ್ ಬರ್ಕೆಯು ಕೃತಕವಾದ್ದು ಮತ್ತು ಸಹಜವಾದ್ದು ಹೇಗೆ ಬೇರೆ ಇರುತ್ತದೆ ಎಂದು ವಿವರಿಸುತ್ತಾನೆ. ಕೃತಕವು ಕೆಲವು ಮಾದರಿಗಳನ್ನು ಹುಟ್ಟು ಹಾಕುತ್ತವೆ. ಆದರೆ ಸಹಜವು ತನ್ನಿಂದ ತಾನೇ ಒಂದು ರೂಪವನ್ನು ಹೊಂದಿರುತ್ತದೆ. ಆದರೆ ಯಾವುದು ಹಿಂದಿನಿಂದ ಬಂದಿದೆಯೋ ಅದನ್ನು ಮಾತ್ರವೇ ಒಂದು ಮೌಲ್ಯ ಎಂದು ಹೇಳುತ್ತೇವೆ. ಈ ದೃಷ್ಟಿಯಿಂದ ನಾವು ಅನೇಕವನ್ನು ಬೇರೆ ಮಾಡಲು ಸಾಧ್ಯವಾಗುತ್ತದೆ.

ತಂದೆ ಮತ್ತು ಅವನ ಹೆಸರು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಲಕಾನ್ ಒಮ್ಮೆ ವಿವರಿಸಿದ್ದ. ಅದರಲ್ಲಿ ತಂದೆಯ ನಿಯಂತ್ರಣ ಮತ್ತು ಅದರಿಂದ ಪಾರಾಗುವುದು ಹೇಗೆ ಎನ್ನುವ ಪ್ರಶ್ನೆಯು ಇದೆ. ತಂದೆಯ ಮೂಲಕ ನಾವು ನಮ್ಮನ್ನು ಹೇಗೆ ಗುರುತಿಸುತ್ತೇವೆ ಎನ್ನುವುದು ಮಾತ್ರವೇ ಮುಖ್ಯವಲ್ಲ, ಅದರ ಮೂಲಕ ನಾವು ತಂದೆಯ ಅಧಿಕಾರವನ್ನು ಒಪ್ಪುತ್ತೇವೆ ಎನ್ನುವುದು ಮುಖ್ಯ. ಇದರ ಜೊತೆಗೆ ನಾವು ಆದರ್ಶ ತಂದೆ ಮತ್ತು ಕೆಟ್ಟ ತಂದೆ ಎಂದು ವರ್ಗೀಕರಣ ಮಾಡುತ್ತೇವೆ. ನಿಜವಾದ ತಂದೆಯು ನಮಗೆ ಕಾರ್ಯವನ್ನು ಹೇರುತ್ತಾನೆ. ಅವನದು ಒಂದು ರೀತಿಯಲ್ಲಿ ಶಾಸಕರ ಮಾದರಿಯೂ ಹೌದು. ನಿಜವಾದ ತಂದೆ ಮತ್ತು ಅವನ ಆದೇಶವು ಒಂದು ಥರ ಇರುತ್ತದೆ. ಆದ್ದರಿಂದ ಇದನ್ನು ಬೇರೆಯಾಗಿ ನೋಡಬೇಕು ಎಂದು ಲಕಾನ್ ಹೇಳುತ್ತಾನೆ. ಒಂದು ದೃಷ್ಟಿಯಿಂದ ಅವನು ಭಿನ್ನವಾದ ನೆಲೆಯನ್ನು ಹೇಳುತ್ತಾನೆ. ಫ್ರಾಯ್ಡ್ ಹೇಳುವ ಒಂದು ನಿಲುವನ್ನು ಅವನು ಭಿನ್ನವಾದ್ದು ಎಂದು ಪ್ರತಿಪಾದಿಸುತ್ತಾನೆ. ತಂದೆ ಸಂಕೇತ, ಕಲ್ಪನೆ ಮತ್ತು ನಿಜವಾದ ತಂದೆ ಎಂದು ಅವನು ನಿರೂಪಿಸುತ್ತಾನೆ. ಲೇಖಕನೂ ಈ ಅರ್ಥದಲ್ಲಿ ಬರಹಕ್ಕೆ ವಾರಸುದಾರ. ಅದು ಮನಸ್ಸನ್ನು ಹೇಳುತ್ತದೆ. ಬರಹ ಮತ್ತು ಮನಸ್ಸುಗಳಿಗೆ ಇರುವ ಸಂಬಂಧವು ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದು. ಚಾರಿತ್ರಿಕವಾಗಿಯೂ ಒಬ್ಬ ವ್ಯಕ್ತಿಯು ಹೇಗೆ ತನ್ನ ಅಧಿಕಾರವನ್ನು ಸ್ಥಾಪಿಸುತ್ತಾನೆ ಎನ್ನುವುದಕ್ಕೂ ಇದು ಒಂದು ನಿದರ್ಶನವಾಗಬಹುದು. ಇದರಲ್ಲಿ ಒಂದು ವಿಶಿಷ್ಟವಾದ ಮನೋಸ್ಥಿತಿಯು ಇರುತ್ತದೆ. ಅದರ ಜೊತೆಗೆ ಬರಹ ಮತ್ತು ಬರಹಗಾರರ ಸಂಬಂಧವು ಅತ್ಯಂತ ಸಂಯೋಜನೆಯನ್ನು ಹೊಂದಿರುತ್ತದೆ. ಆದ್ದರಿಂದ ತಾತ್ವಿಕತೆ, ಬಯಕೆ ಮತ್ತು ನಿರೂಪಣೆಯ ಸಾಧ್ಯತೆಗಳು ಅತ್ಯಂತ ಭಿನ್ನವಾದ್ದು. ಅದಕ್ಕೆ ಒಂದು ಪ್ರಾತಿನಿಧ್ಯ ಎನ್ನುವುದೂ ಇರುತ್ತದೆ. ಹೀಗೆ ಹೇಳುವಾಗ ಹಳೆಯ ಮಾದರಿಯ ಬಯೋಗ್ರಾಫಿಕಲ್ ಎನ್ನಬಹುದಾದ ವಿಮರ್ಶೆ ಎಂದು ಯಾರೂ ಭಾವಿಸಬಾರದು. ಜೀವನ ಮತ್ತು

ಬರಹಕ್ಕೆ ಸಂಬಂಧವಿದೆ ಎಂದು ಮಾತ್ರವೇ ಅರ್ಥ (ನೋಡಿ : ಫುಕೋ–ಫೇಬಲ್ ಅಂಡ್ ಫಿಕ್ಷನ್)

ಕಟ್ಟು ಕತೆಗಳಿಗೆ ಮತ್ತು ವಾಸ್ತವದ ಕಥನಗಳಿಗೆ ಭಿನ್ನತೆಯು ಇರುತ್ತದೆ. ಯಾವುದು ನಡೆದಿದೆಯೋ ಅದನ್ನು ಹೇಳುವಾಗ ಅದರ ರೂಪವು ಬೇರೆ ಥರ ಇರುತ್ತದೆ. ಹಾಗೆ ನೋಡಿದರೆ ನಾವು ಕಟ್ಟು ಕತೆಗಳನ್ನು ಶೈಕ್ಷಣಿಕ ವಲಯದಲ್ಲಿ ಹೆಚ್ಚು ಚರ್ಚೆ ಮಾಡಿಲ್ಲ. ನವೀನ ಕಥನಗಳನ್ನು ನಾವು ಈವತ್ತು ಶೈಕ್ಷಣಿಕ ವಲಯದಲ್ಲಿ ಚರ್ಚೆಯನ್ನು ಮಾಡುತ್ತೇವೆ. ಹಾಗೆ ನೋಡಿದರೆ ಕಟ್ಟು ಕತೆಯನ್ನು ಫೇಬಲ್ ಎಂದು ಹೇಳುತ್ತಾರೆ. ಅದು ಫ್ರೆಂಚ್ ಭಾಷೆಯಿಂದ ಬಂದಿತು. ಕಟ್ಟು ಕತೆಗಳಲ್ಲಿ ಅನೇಕ ಐತಿಹ್ಯ ಮತ್ತು ಪುರಾಣಗಳ ಅಂಶಗಳೂ ಬರಬಹುದು. ಆದರೂ ಅದಕ್ಕೆ ಸಂಸ್ಕೃತಿಯಲ್ಲಿ ಮಹತ್ವವು ಇದೆ. ಪಂಚತಂತ್ರವು ಈ ಬಗೆಯದು. ಇಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು:

ನಾವು ಯಾವುದನ್ನು ಮಾತಾಡುತ್ತೇವೆಯೋ ಅದೆಲ್ಲ ಒಂದಲ್ಲ ಒಂದು ಅರ್ಥದಲ್ಲಿ ಕಥನವಾಗಿರುತ್ತದೆ. ಹಾಗೆ ನೋಡಿದರೆ ಕತೆ ಮತ್ತು ಅದರ ಸ್ವರೂಪವನ್ನು ಬೇರೆ ಬೇರೆ ಥರ ನೋಡಬಹುದು. ಕಟ್ಟುಕತೆಯು ಒಂದು ಥರ ಇರುತ್ತದೆ. ಕಥನವು ಮತ್ತೊಂದು ಥರ ಇರುತ್ತದೆ. ಕಥನವನ್ನು ಮತ್ತು ಕಟ್ಟು ಕತೆಯನ್ನು ಬೇರೆ ಮಾಡುವಾಗ ಅದರ ಸ್ವರೂಪವನ್ನು ಬೇರೆ ಥರ ಹೇಳಬಹುದು. ಕಥನ ಎನ್ನುವುದು ಅತ್ಯಂತ ಮುಖ್ಯವಾಗಿ ನಿರೂಪಣೆಯನ್ನು ಅತ್ಯಂತ ವಿಶಿಷ್ಟವಾಗಿ ಹೊಂದಿರುತ್ತದೆ. ಇದನ್ನು ಪುಕೋ ಹೇಳುತ್ತಾನೆ. ಅವನು ಫೇಬಲ್ ಮತ್ತು ಫಿಕ್ಷನ್ ಎನ್ನುವುದನ್ನು ಪ್ರತ್ಯೇಕ ಮಾಡುತ್ತಾನೆ. ಕಥೆ ಮತ್ತು ಕಟ್ಟು ಕತೆ ಎನ್ನುವುದು ಹೇಗೆ ಬೇರೆಯಾಗುತ್ತದೆ ಎಂದು ಅನೇಕರಿಗೆ ಗೊತ್ತಿದೆ. ಇವು ಬೇರೆಯಾಗುವುದು ಅತ್ಯಂತ ಮುಖ್ಯವಾಗಿ ಅದರ ನಿರೂಪಣೆಯ ಕಾರಣಕ್ಕೆ. ಕಟ್ಟು ಕತೆಯಲ್ಲಿ ಅನೇಕ ಅಂಶಗಳು ಇರುತ್ತವೆ. ಅದನ್ನು ನಾವು ಬಿಡಿಯಾಗಿಯೂ ಗಮನಿಸಬಹುದು. ನಮ್ಮ ಯಾವುದೇ ಮಾತುಗಳು ಒಂದು ಹಂತದಲ್ಲಿ ಕಥನವಾಗುತ್ತವೆ. ಸಂಕಥನ ಎನ್ನುವುದೇ ಒಂದು ಅರ್ಥದಲ್ಲಿ ಕಥನವನ್ನು ಸೂಚಿಸುತ್ತದೆ. ಅದನ್ನು ನಾವು ನಮ್ಮ ಮಾತಿನಲ್ಲಿ ವ್ಯಕ್ತ ಮಾಡುತ್ತೇವೆ. ನಮ್ಮ ಮಾತುಗಳು ಕೆಲವನ್ನು ಸೂಚಿಸುತ್ತವೆ. ಯಾವುದನ್ನು ನಾವು ಕಟ್ಟು ಕತೆ ಎಂದು ಹೇಳುತ್ತೇವೆಯೋ ಅದರ ಸಾಧ್ಯತೆಯು ಬೇರೆ ಇರುತ್ತದೆ. ಕಥನ ಎನ್ನುವುದನ್ನು ಅತ್ಯಂತ ಸುಲಭವಾಗಿ ನಾವು ವ್ಯಾಖ್ಯಾನ ಮಾಡುವುದು ಅತ್ಯಂತ ಕಷ್ಟ. ಆಧುನಿಕ ಕಥನ ಎನ್ನುವುದು ಭಿನ್ನವಾದ ಅರ್ಥವನ್ನು ಪಡೆದುಕೊಂಡಿದೆ. ಆದ್ದರಿಂದ ಅದು ನಮಗೆ ಒಂದು ಅಮೂರ್ತವಾದ ಅರ್ಥವನ್ನು ಕೊಡುತ್ತದೆ. ಬರೆಯುವಾಗ ಕಥನದ ಭಾಷೆಯು ಒಂದು ಥರ ಇರುತ್ತದೆ.

ಲಕಾನ್‌ನ್ನು ಮತ್ತೆ ಇಲ್ಲಿ ಉಕ್ತವಾಗಬೇಕಾದ ಅಗತ್ಯವೂ ಇದೆ. ಅವನು ಕಲ್ಪಿತ, ವಾಸ್ತವ ಮತ್ತು ಸಾಂಕೇತಿಕ ಎಂದು ವ್ಯತ್ಯಾಸ ಮಾಡುತ್ತಾನೆ. ಆದರ್ಶದ ಅಹಮಿಕೆಯು ಹೇಗೆ ಬೇರೆಯಾಗುತ್ತದೆ ಎಂದು ಅವನು ಹೇಳುತ್ತಾನೆ. ಲಕಾನ್ ಬಯಕೆ ಮತ್ತು ಅದರ ನಿಯಮವನ್ನು ಅಹಮಿಕೆಯನ್ನು ಬೇರೆ ಮಾಡಿ ನೋಡುತ್ತಾನೆ. ಪಿತೃತ್ವ ಮತ್ತು ಅದರ ಸ್ವರೂಪವನ್ನು ಮನೋವಿಜ್ಞಾನದಲ್ಲಿ ಮತ್ತೊಂದು ಥರ ಚರ್ಚೆ ಮಾಡುತ್ತಾರೆ. ಅದನ್ನು ಅಂದರೆ ಪಿತೃತ್ವ ಎರಡು ಬಗೆಯದು. ಒಂದು ದೈಹಿಕವಾಗಿ ತಂದೆಯಾಗುವುದು. ಮತ್ತೊಂದು ಬರಹದ ಮೂಲಕ ತನ್ನನ್ನು ತಾನು ಸಾಬೀತು ಮಾಡುವುದು. ನಾವು ಏನೂ ಬರೆದಿಲ್ಲವೆಂದರೆ ಬರಹದ ವಿಷಯದಲ್ಲಿ ನಾವು ನಮ್ಮ ಅಧಿಕಾರವನ್ನು ಮತ್ತು ಪಿತೃತ್ವವನ್ನು ಸಾಬೀತು ಮಾಡಿಲ್ಲ ಅಂದರೆ ಬರವಣಿಗೆ ನಮಗೆ ನಮ್ಮ ಅಧಿಕೃತತೆಯು ಮುಖ್ಯವಾಗುತ್ತದೆ.

ಆದರೆ ಹತ್ತೊಂಬತ್ತನೆಯ ಶತಮಾನ ಮತ್ತು ಇಪ್ಪತ್ತನೆಯ ಶತಮಾನದ ಕಾಲದಲ್ಲಿ ವ್ಯಕ್ತಿ ಎನ್ನುವುದನ್ನು ಬೇರೆ ಬೇರೆ ವ್ಯಾಖ್ಯಾನಕ್ಕೆ ಗುರಿಯಾಗಿರುವುದು ನಿಜ. ವ್ಯಕ್ತಿಯನ್ನು ನಾವು ತಾತ್ವಿಕವಾಗಿ ನೋಡಬೇಕೇ ಅಥವಾ ಅವನನ್ನು ಬರೀ ಒಬ್ಬ ವ್ಯಕ್ತಿಯಾಗಿ ಯಾವುದರ ಸಂಬಂಧವು ಇಲ್ಲದಂತೆ ನೋಡಬೇಕೆ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆ. ತತ್ವಜ್ಞಾನವು ನಮಗೆ ವ್ಯಕ್ತಿಯು ಇರುವುದು ಒಂದು ಸಮಾಜದ ಭಾಗವಾಗಿ ಎಂದು ಹೇಳಿಕೊಡುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ ಹಾಗೆ ನೋಡಿದರೆ ವ್ಯಕ್ತಿಯನ್ನು ನಾವು ಒಂದು ವ್ಯವಸ್ಥೆ ಮತ್ತು ಒಂದು ಸಮಾಜದ ಭಾಗವಾಗಿಯೇ ಗ್ರಹಿಸುತ್ತೇವೆ. ವ್ಯಕ್ತಿಯನ್ನು ನೋಡುವುದು ಅಂದರೆ ವ್ಯಕ್ತಿಯು ಮೇಲೆ ಹೇಳಿದ ಅಂಶದ ಹೊರತಾಗಿ ಇರುವುದಿಲ್ಲ. ಸಮಾಜ ಮತ್ತು ಅದರ ರೂಪಗಳು ರೂಪುಗೊಳ್ಳುತ್ತವೆ ಎಂದು ನೆನಪಿಟ್ಟುಕೊಳ್ಳಬೇಕಾಗುತ್ತದೆ. ಸಮಾಜದ ಅನೇಕ ಅಂಶಗಳು ವ್ಯಕ್ತಿಯ ಮೇಲೆ ಪ್ರಭಾವವನ್ನು ಬೀರುತ್ತದೆ. ಅಷ್ಟೇ ಅಲ್ಲ ಪ್ರಭುತ್ವವೂ ವ್ಯಕ್ತಿಯ ಗುಣ ಮತ್ತು ಸ್ವಭಾವವನ್ನು ನಿರ್ಧಾರ ಮಾಡುತ್ತದೆ. ಹಾಗೆ ನೋಡಿದರೆ ವ್ಯಕ್ತಿಗಳು ಸಮಾಜ ಮತ್ತು ಅದರ ಸಂಬಂಧಗಳ ಮೂಲಕ ಆಗುತ್ತಾರೆ. ಸಮಾಜ ಮತ್ತು ಅದರ ಸಂಬಂಧಗಳ ಮೂಲಕವೇ ವ್ಯಕ್ತಿತ್ವದ ಬೇರೆ ಬೇರೆ ನಿಲುವುಗಳು ವ್ಯಕ್ತವಾಗುತ್ತವೆ. ಗ್ರಾಂಶಿಯು ವ್ಯಕ್ತಿಯನ್ನು ನೋಡುವಾಗ ಅದರಲ್ಲಿ ಸಮೂಹವೂ ಇರುತ್ತದೆ ಎಂದು ಹೇಳುತ್ತಾನೆ. ಸಾಮಾಜಿಕ ರಚನೆಗಳು ಮತ್ತು ವ್ಯಕ್ತಿತ್ವಕ್ಕೆ ಒಂದು ಸಂಬಂಧವು ಇದೆ ಎಂದು ಅವನು ಭಾವಿಸುತ್ತಾನೆ. ಸಾಮಾಜಿಕ ವ್ಯಕ್ತಿತ್ವ ಮತ್ತು ಅದರ ಸ್ವರೂಪವನ್ನು ಹೇಳುವಾಗ ಅವನು ಅದಕ್ಕೆ ಒಂದು ನಿಯಮವು ಇರುತ್ತದೆ ಎಂದು ಹೇಳುತ್ತಾನೆ. ಚರಿತ್ರೆಯೊಂದಿಗೆ ನಾವು ಮುಖಾಮುಖಿ ಆಗುವುದರ ಮೂಲಕವೇ ವ್ಯಕ್ತಿತ್ವವು ಆಗುತ್ತದೆ. ಬಾಹ್ಯ ಮತ್ತು ಅದರ ಜೊತೆಗೆ ನಾವು ಇಟ್ಟುಕೊಳ್ಳುವ ಸಂಬಂಧವೇ ಅತ್ಯಂತ ಮುಖ್ಯವಾಗುತ್ತದೆ. ಮನುಷ್ಯ ಮತ್ತು ಅವನ

ಸ್ವಭಾವದಲ್ಲಿ ಎರಡು ಅಂಶಗಳು ಅತ್ಯಂತ ಮುಖ್ಯ. ಒಂದು ಅವನು ಸಮಾಜದ ಜೊತೆಗೆ ಹೇಗೆ ಬೆರೆಯುತ್ತಾನೆ ಎನ್ನುವುದು ಒಂದು ಪ್ರಮುಖವಾದ ವಿಚಾರವು ಆಗಿದೆ. ಮೊದಲು ಇದ್ದ ರೀತಿಯಲ್ಲಿ ಅನಂತರ ಇರುವುದಿಲ್ಲ. ಸಮೂಹ ಮತ್ತು ನಮ್ಮ ವ್ಯಕ್ತಿತ್ವವು ಪರಸ್ಪರ ಬೆರೆಯುವುದರಿಂದ ವ್ಯಕ್ತಿತ್ವವು ವ್ಯತ್ಯಾಸವಾಗುತ್ತದೆ ಎಂದು ಗ್ರಾಂಶಿಯು ಹೇಳುತ್ತಾನೆ. ನಮ್ಮ ಸಂವಾದಗಳು ಮತ್ತು ನಾವು ಸಮಾಜದಲ್ಲಿ ಬೆರೆಯುವ ಗುಣಗಳು ನಮಗೆ ಜೀವನದಲ್ಲಿ ವಿಶಿಷ್ಟವಾದ ನಿಲುವನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಅವನು ಹೇಳುತ್ತಾನೆ.

1. ಲುಕಾಕ್ಸ್‌ನ ಥಿಯರಿ ಆಫ್ ನಾವೆಲ್
2. ಭಕ್ತಿನ್ ನ – ಎಥಿಕ್ ಅಂಡ್ ನಾವೆಲ್
3. ಬೆಂಜಮಿನ್‌ನ – ಸ್ಟೋರಿ ಟೆಲ್ಲರ್
4. ಹಿದೇನ್ ವೈಟನ – ಟೈಮ್ ಅಂಡ್ ನೆರೆಟಿವ್
5. ಜಿಜೆಕ್ – ಲಕಾನ್ ಥಿಯರಿ
6. ಫುಕೋಸ್ – ಆರ್ಕಿಯಾಲಜಿ ಆಫ್ ನಾಲೆಜ್
7. ಗ್ರಾಂಶಿ ರೀಡರ್.

14. ಜ್ಞಾನ ಮತ್ತು ವಾಸ್ತವ

ಅಧಿಕಾರ ಎನ್ನುವುದು ಎಲ್ಲಾ ಕಡೆಗೆ ಇರುತ್ತದೆ ಎನ್ನುವುದು ಫುಕೋನಲ್ಲಿ ಮತ್ತೆ ಮತ್ತೆ ಪುನರಾವರ್ತನೆಯಾಗುತ್ತದೆ. ಜ್ಞಾನ ಮತ್ತು ಸತ್ಯದ ಪ್ರಶ್ನೆಯು ಅವನಿಗೆ ಹೆಚ್ಚು ಮುಖ್ಯವಾಗುತ್ತದೆ. ಅಧಿಕಾರವನ್ನು ಅವನು ಒಂದೇ ರೀತಿಯಲ್ಲಿ ನೋಡುವುದಿಲ್ಲ. ಅದರ ವಿವಿಧ ಆಯಾಮಗಳನ್ನು ಅವನು ಹೇಳುತ್ತಾನೆ. ಒಂದು ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲು ನಮಗೆ ಮನೋವಿಜ್ಞಾನ ಮತ್ತು ಸಮಾಜ ವಿಜ್ಞಾನವು ನೆರವಿಗೆ ಬರುತ್ತವೆ. ವಿಜ್ಞಾನಕ್ಕೂ ನಮ್ಮ ಬಳಕೆಯ ಸಮಾಜ ವಿಜ್ಞಾನಕ್ಕೂ ಈ ದೃಷ್ಟಿಯಿಂದ ದ್ವಂದ್ವಾತ್ಮಕತೆಯು ಇರುತ್ತದೆ. ಅವುಗಳ ನಡುವೆ ಕೆಲವು ಸಮಾನವಾದ ಅಂಶಗಳೂ ಇರುತ್ತವೆ. ಫ್ರಾಯ್ಡ್ ಚರಿತ್ರೆ ಮತ್ತು ಸಮಾಜಶಾಸ್ತ್ರವನ್ನು ಹಾಗೂ ಧರ್ಮವನ್ನು ನೋಡುತ್ತಾನೆ. ಅದರ ಜೊತೆಗೆ ಅನೇಕ ಸಂಗತಿಗಳು ಇರುತ್ತವೆ ಎಂದು ಅವನ ಭಾವನೆಯೂ ಆಗಿದೆ. ಸಮಾಜ ಮತ್ತು ಅದರ ಸ್ವರೂಪವನ್ನು ಈ ದೃಷ್ಟಿಯಿಂದ ಬೇರೆ ಮಾಡಬೇಕಾಗುತ್ತದೆ. ಅವನಲ್ಲಿ ವ್ಯಕ್ತಿಗೂ ಸಮಾಜಕ್ಕೂ ಚರಿತ್ರೆಗೂ ವಿವಿಧ ರೀತಿಯ ಸಂಬಂಧವು ಇರುತ್ತದೆ. ಸಮಾಜದ ಅನೇಕ ವಿಧಿನಿಷೇಧಗಳು ಮನಸ್ಸಿನ ಮೇಲೆ ಪ್ರಭಾವವನ್ನು ಬೀರುತ್ತವೆ. ಅಂದರೆ ವ್ಯಕ್ತಿಯನ್ನು ಅನೇಕ ಸಂದರ್ಭದಲ್ಲಿ ಇವುಗಳೇ ನಿಯಂತ್ರಣವನ್ನು ಮಾಡುತ್ತವೆ. ವ್ಯಕ್ತಿ ಮತ್ತು ಅವನ ಬಯಕೆಗಳು ಒಂದು ರೀತಿಯಲ್ಲಿ ಇರುತ್ತವೆ. ಅದರಲ್ಲಿ ವಿಶಿಷ್ಟತೆಯು ಮುಖ್ಯ. ವ್ಯಕ್ತಿ ಮತ್ತು ಅವನ ನಡೆ ನುಡಿಯು ಒಂದು ಬಗೆಯಲ್ಲಿ ಇರುತ್ತವೆ ಮತ್ತು ಸಮಾಜದ ಚಾರಿತ್ರಿಕ ನಡೆ ನುಡಿಗಳು ಮತ್ತೊಂದು ರೀತಿಯಲ್ಲಿ ಇರುತ್ತವೆ. ಸಾಮೂಹಿಕ ನಡೆ ಮತ್ತು ನುಡಿಗಳು ಸಾಹಿತ್ಯದಲ್ಲಿ ಕೆಲವು ಆಯ್ಕೆಯನ್ನು ಮಾಡುವಂತೆ ಮಾಡುತ್ತವೆ. ವ್ಯಕ್ತಿ ಮತ್ತು ಅವನ ಬಯಕೆಗಳನ್ನು ನಾವು ಅವನ ಲಿಬಿಡೋ ಪ್ರವೃತ್ತಿಯಿಂದ ನೋಡಬೇಕಾಗುತ್ತದೆ ಫ್ರಾಯ್ಡ್‌ನಲ್ಲಿ ನಮಗೆ ಇದಕ್ಕೆ ಸಂಬಂಧಿಸಿದ ಅನೇಕ ವಿವರಣೆಗಳು ದೊರೆಯುತ್ತವೆ. ಮತ್ತು ಅವನು ಅನೇಕವನ್ನು ವಿವರಣಾತ್ಮಕವಾಗಿ ಮತ್ತು ವಿಶ್ಲೇಷಣಾತ್ಮಕವಾಗಿಯೂ ನೋಡುತ್ತಾನೆ. ಕನಸು ಮತ್ತು ಅದರ ರಚನೆಯನ್ನು ಅವನು ವಿಶಿಷ್ಟವಾಗಿಯೂ ನೋಡುತ್ತಾನೆ. ಅದರಲ್ಲಿ ಅವನು ಹೆಚ್ಚು ಸಂದರ್ಭವನ್ನು ಗಮನಿಸುತ್ತಾನೆ. ಅದರ

ಹಿಂದೆ ಇರುವ ಸಂವೇದನೆಯು ಅವನಿಗೆ ಬಹಳ ಮುಖ್ಯವಾಗುತ್ತದೆ. ಅವನ ಪ್ರಕಾರ ಲಿಬಿಡೋ ಅನ್ನುವುದು ಮೂಲಭೂತವಾಗಿ ಸ್ವಾಯತ್ತವಲ್ಲ. ಅದು ಸಂಸ್ಕೃತಿಯನ್ನು ಹೇಳುತ್ತದೆ ಮತ್ತು ಅದರಲ್ಲಿ ಸಾಮಾಜಿಕ ಜೀವನದ ಅರ್ಥವೂ ಇರುತ್ತದೆ. ಈ ದೃಷ್ಟಿಯಿಂದ ಮನೋವೈಜ್ಞಾನಿಕ ವಿಮರ್ಶೆಯು ನಮಗೆ ಅನೇಕವನ್ನು ಸೂಚಿಸುತ್ತದೆ. ಅದು ಕೆಲಸವನ್ನು ಸಂಪೂರ್ಣವಾಗಿಯೂ ಗಮನಿಸುತ್ತದೆ. ಯಾವುದೇ ಪರಿಶೀಲನೆಗೆ ವಿವರಣೆಯು ಬೇಕಾಗುತ್ತದೆ. ವಾಸ್ತವ ಮತ್ತು ಅದರ ಅಧ್ಯಯನವೆಂದರೆ ವ್ಯಕ್ತಿ ಮತ್ತು ಅವನ ಕ್ರಿಯೆ ಮತ್ತು ಅವನ ಹಿಂದೆ ಇರುವ ಸಮಾಜದ ಪರಿಶೀಲನೆಯೂ ಹೌದು. ವಾಸ್ತವವಾದದ ಅಧ್ಯಯನವು ಈ ದೃಷ್ಟಿಯಿಂದ ಬೇರೆ ಬೇರೆ ಆನ್ವಯಿಕತೆಯನ್ನು ಹೇಳುತ್ತದೆ. ಫುಕೋ ಇದನ್ನು ಒಂದು ದಾರಿ ಎನ್ನುವ ಥರ ಬಳಸುತ್ತಾನೆ. ವಾಸ್ತವವನ್ನು ಅರ್ಥ ಮಾಡಿಕೊಳ್ಳಲು ನಾವು ಅದರ ಹಿಂದೆ ಇರುವ ಜ್ಞಾನವನ್ನು ಗ್ರಹಿಸಬೇಕು ಎಂದು ಅವನು ಹೇಳುತ್ತಾನೆ.

ವಾಸ್ತವ ಮತ್ತು ಅದರ ಕ್ರಿಯೆಗಳಲ್ಲಿ ಈ ದೃಷ್ಟಿಯಿಂದ ಭಿನ್ನವಾದ ಒಂದು ಸಂಗತಿಯನ್ನು ಹೇಳುತ್ತದೆ. ನಾವು ರಚನೆಯನ್ನು ಮಾಡುತ್ತೇವೆ ಎಂದರೆ ಅದರ ಹಿಂದೆ ಕ್ರಿಯೆಯೂ ಇದೆ ಎಂದೇ ಅರ್ಥವಾಗುತ್ತದೆ. ರಚನೆಯು ಒಂದು ಬಗೆಯಲ್ಲಿ ನಿರ್ದಿಷ್ಟವಾದ ಚಟುವಟಿಕೆಯೂ ಹೌದು. ಯಾವುದೇ ಜ್ಞಾನವು ಇಲ್ಲದೆ ಯಾವುದೆ ಕ್ರಿಯೆಯು ಅಸಾಧ್ಯ. ಮತ್ತು ನಾವು ನಮಗೆ ಬೇಕಾದ ರಚನೆಗಳನ್ನು ಮಾಡುತ್ತೇವೆ. ಸಮಾಜವು ಈ ರೀತಿಯ ಅನೇಕ ಕ್ರಿಯೆಗಳನ್ನು ಹೊಂದಿರುತ್ತವೆ. ಬಂಡವಾಳದ ರಚನೆಯು ವ್ಯಕ್ತಿಗಳನ್ನು ನೋಡುವುದು ಮತ್ತು ಗ್ರಹಿಸುವುದು ಒಂದು ರೀತಿಯಲ್ಲಿ. ಕೆಲವು ನಿಯಮಗಳು ಮತ್ತೆ ಮತ್ತೆ ಯಾಕೆ ಬರುತ್ತವೆ ಎಂದರೆ ಅದರಲ್ಲಿ ಕೆಲವು ಸಾರ ರೂಪಗಳು ಇರುತ್ತವೆ. ರಚನೆ ಮತ್ತು ನಿರಚನೆಯು ಸಹಜವಾಗಿಯೂ ನಡೆಯುತ್ತದೆ. ಒಂದು ರಚನೆಯು ಮತ್ತೊಂದು ರಚನೆಗೆ ಕಾರಣವೂ ಆಗುತ್ತದೆ. ಆದ್ದರಿಂದ ರಚನೆ ಮತ್ತು ಅದರ ವ್ಯತ್ಯಾಸಗಳೂ ಅಧ್ಯಯನ ಯೋಗ್ಯವಾಗಿವೆ. ರಚನೆಗಳನ್ನು ಸಮಾಜವು ಬದಲಿಸುತ್ತದೆ ಮತ್ತು ತನಗೆ ಬೇಕಾದ ರಚನೆಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಅದು ಪರಿವರ್ತನೆಯನ್ನು ಮಾಡುತ್ತದೆ. ವಾಸ್ತವವಾಗಿ ಅನೇಕ ರಚನೆಗಳು ತಾತ್ಕಾಲಿಕವಾದ ವಿಷಯವನ್ನು ಹೊಂದಿರುತ್ತದೆ. ಅನೇಕ ರಚನೆಗಳು ಪರಿವರ್ತನೆ ಮತ್ತು ಮುಂದುವರಿಕೆಯನ್ನು ಬೇರೆ ಬೇರೆ ವಿಧದಲ್ಲಿ ಮಾಡುತ್ತವೆ. ಅದರ ಹಿಂದೆ ಸಂವೇದನೆ ಮತ್ತು ಆಲೋಚನೆಗಳು ಇರುತ್ತವೆ. ಅನೇಕರು ಆಧುನಿಕ ರಚನೆಗಳನ್ನು ಓದುವಾಗ ಅದರ ಉದ್ದೇಶವನ್ನು ಗ್ರಹಿಸುವುದೇ ಇಲ್ಲ. ಹಾಗೆ ನೋಡುವುದಿದ್ದರೆ ಭಾಷೆ ಮತ್ತು ಅದರ ರಚನೆಗಳೇ ವಿಶ್ವಾತ್ಮಕವೂ ಆಗುತ್ತದೆ. ರಚನೆಗೆ ಇರುವ ಚಾರಿತ್ರಿಕತೆಯೂ ಈ ದೃಷ್ಟಿಯಿಂದ ಬಹಳ ಮುಖ್ಯವಾಗುತ್ತದೆ. ರಚನೆಯೂ ಕೆಲವು ಮಾದರಿಯ ಸಂವಹನವನ್ನು ಹೇಳುತ್ತವೆ ಮತ್ತು ಅನೇಕ ರಚನೆಗಳಿಗೆ

ವೈಜ್ಞಾನಿಕವಾದ ಅಂಶಗಳೂ ಇರುತ್ತವೆ. ಅದರೆ ಅದರ ಸ್ವರೂಪದಲ್ಲಿಯೇ ಅನೇಕ ಅಂಶಗಳು ಇರುತ್ತವೆ. ವಾಸ್ತವ ಎನ್ನುವುದು ಒಂದು ಬಗೆಯ ಸತ್ಯ. ಅದರಲ್ಲಿ ಘುಕೋಗೆ ಅನುಮಾನವು ಇಲ್ಲ. ಅಧಿಕಾರವನ್ನು ಕೆಲವು ಅಂಶಗಳು ರೂಪಿಸುತ್ತವೆ. ಅಧಿಕಾರ ಮತ್ತು ವಾಸ್ತವ ಎನ್ನುವುದು ಎರಡೂ ರಚನೆಗಳು. ಅದನ್ನು ಮನುಷ್ಯನು ನಿರ್ಮಾಣ ಮಾಡುತ್ತಾನೆ.

ನಮಗೆ ಎದುರಾಗಿರುವ ವಾಸ್ತವ ಮತ್ತು ಅದರ ಕುರಿತಾದ ಚಿಂತನೆಗಳು ಮಾಡುವುದಕ್ಕೆ ರಚನೆಯ ಅರಿವು ಇರಬೇಕಾಗುತ್ತದೆ. ವಾಸ್ತವವಾದ ರಚನೆಯೂ ಅದನ್ನು ಹೇಗೆ ಅರ್ಥ ಮಾಡುತ್ತೇವೆ ಎನ್ನುವುದನ್ನು ಸೂಚಿಸುತ್ತದೆ. ಬರಹ ಮತ್ತು ಅದರ ಸಾಮಾಜಿಕತೆಯನ್ನು ಕುರಿತು ಮಾತಾಡುವವರು ಇದನ್ನು ಅರ್ಥಮಾಡಿಕೊಳ್ಳಬೇಕಾದ ಅಗತ್ಯವೂ ಇದೆ. ಸಂಶೋಧಕನೂ ಇದನ್ನು ಗ್ರಹಿಸಬೇಕಾಗುತ್ತದೆ. ವಾಸ್ತವವಾಗಿ ತನ್ನ ಮನೋಸ್ಥಿತಿಗೆ ಅನುಗುಣವಾಗಿ ನಾವು ಅನೇಕವನ್ನು ನೋಡುತ್ತೇವೆ. ನಮ್ಮ ಗ್ರಹಿಕೆ ಮತ್ತು ನಮ್ಮ ಮನೋಸ್ಥಿತಿಗೆ ಕೆಲವು ರೀತಿಯ ಸಂಬಂಧಗಳೂ ಇರುತ್ತವೆ. ನಮಗೆ ಸಮಾಜ ಮತ್ತು ಅದರ ಪರಿಜ್ಞಾನವು ಇದ್ದಾಗ ನಾವು ಕೃತಿಯನ್ನು ನೋಡುವ ಮತ್ತು ಗ್ರಹಿಸುವ ಕ್ರಮಗಳು ಬೇರೆಯಾಗುತ್ತವೆ. ನಮಗೆ ಅತ್ಯಂತ ಅಗತ್ಯವಾಗಿ ಬೇಕಾಗಿರುವುದು ನಮ್ಮ ಸಮಾಜ ಮತ್ತು ಅದರ ಚರಿತ್ರೆಯ ಅರಿವು. ಈ ಅರ್ಥದಲ್ಲಿ ನಾವು ಸಮಾಜವನ್ನು ವೈಜ್ಞಾನಿಕವಾಗಿಯೂ ನೋಡಬೇಕಾಗುತ್ತದೆ. ಮತ್ತು ಅದರಲ್ಲಿ ನಾವು ಭಾವುಕತೆಯನ್ನು ಮಿಶ್ರ ಮಾಡಲು ಬರುವುದೂ ಇಲ್ಲ. ನಮ್ಮ ಮನೋಸ್ಥಿತಿ ಮತ್ತು ಅದರ ವರ್ಗವೂ ನಮಗೆ ಮುಖ್ಯವಾಗುತ್ತದೆ. ಸಾಮಾಜಿಕ ಜ್ಞಾನ ಮತ್ತು ಅದರ ಸ್ವರೂಪವು ನಮಗೆ ಅತ್ಯಂತ ಅಗತ್ಯವೂ ಆಗುತ್ತದೆ. ನಾವು ನಮ್ಮ ಸಾಮಾಜಿಕ ಜ್ಞಾನವನ್ನು ಮಾತ್ರವೇ ಸರಿಯಾಗಿಯೂ ಗ್ರಹಿಸಬೇಕಾಗುತ್ತದೆ. ಆಲೋಚನೆ ಮತ್ತು ಸಾಹಿತ್ಯಕ್ಕೆ ಸಂಬಂಧವಿರುವುದನ್ನು ನಾವು ಗಮನಿಸಲೇಬೇಕಾಗುತ್ತದೆ. ವ್ಯಕ್ತಿ ಮತ್ತು ಅವನ ಪ್ರಜ್ಞೆಯು ಚರಿತ್ರೆ ಮತ್ತು ಸಮಾಜದಿಂದ ಬಂದಿದೆ. ಸಾಮಾಜಿಕ ಜೀವನವು ಒಂದು ಬಗೆಯ ಪ್ರಜ್ಞೆಯನ್ನು ಕೊಡುತ್ತದೆ. ವ್ಯಕ್ತಿಯ ಪ್ರಜ್ಞೆಯು ಮತ್ತೊಂದು ಬಗೆಯದು. ವ್ಯಕ್ತಿಯೆಂದರೆ ಅವನು ಸಾಮಾಜಿಕ ರೂಪದ ಸಾರವೂ ಹೌದು. ಸಮಾಜದ ಅನೇಕ ಚಟುವಟಿಕೆಗಳು ನಮ್ಮನ್ನು ರೂಪಿಸುತ್ತವೆ. ಮತ್ತು ಅದರ ಜೊತೆಗೆ ನಾವು ನಮ್ಮ ಪ್ರಜ್ಞೆಯನ್ನು ರೂಪಿಸಿಕೊಂಡು ಇರುತ್ತೇವೆ. ಸಾಮಾಜಿಕತೆಯು ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದೂ ಹೌದು. ಸಮಾಜ ಮತ್ತು ವ್ಯಕ್ತಿಯ ನಡುವೆ ಒಂದು ಬಗೆಯ ಸಮತೋಲನವೂ ಇರಬೇಕಾಗುತ್ತದೆ. ಆದ್ದರಿಂದ ವ್ಯಕ್ತಿಯ ಮನೋಸ್ಥಿತಿಯು ಅತ್ಯಂತ ಸಂಕೀರ್ಣವೂ ಆಗಿರುತ್ತದೆ. ವ್ಯಕ್ತಿಯು ಅನ್ಯರಿಗೆ ಅನೇಕವನ್ನು ಹೇಳುತ್ತಾನೆ. ಅನೇಕರಿಂದ ಕಲಿಯುತ್ತಾನೆ. ಮತ್ತು ಬೆಳೆಯುತ್ತಾನೆ. ಅವನಿಗೆ ಅದು

ಅಗತ್ಯವೂ ಆಗಿರುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಪ್ರಜ್ಞೆಯು ಈ ದೃಷ್ಟಿಯಲ್ಲಿ ಸ್ವಯಂಸಂಪೂರ್ಣವಲ್ಲ. ಅದು ಸಂವಾದಿಯಾದುದು ಹೌದು. ಜ್ಞಾನಕ್ಕೂ ನಮ್ಮ ಪ್ರಜ್ಞೆಗೂ ಒಂದು ಸಂಬಂಧವಿದೆ. ಸಮಾಜವನ್ನು ಅರ್ಥ ಮಾಡಿಕೊಳ್ಳುವುದು ಅಂದರೆ ನಾವು ಸಮಾಜವನ್ನು ಜ್ಞಾನದ ಮೂಲಕ ಅರಿಯುವುದೂ ಹೌದು. ಆದ್ದರಿಂದ ವ್ಯಕ್ತಿ ಮತ್ತು ಅವನ ತಿಳುವಳಿಕೆಯು ಅತ್ಯಂತ ಮಹತ್ವದ್ದೂ ಹೌದು. ಘಟನೆ ಮತ್ತು ಅದರ ಮೌಲ್ಯಕ್ಕೆ ಸಂಬಂಧವು ಇರುವುದರಿಂದ ನಾವು ಅನೇಕವನ್ನು ಈ ಮೂಲಕವೇ ಗ್ರಹಿಸಬೇಕಾಗುತ್ತದೆ. ಭೌತಿಕ ಮತ್ತು ಬೌದ್ಧಿಕ ಸಂಗತಿಗಳು ನಮಗೆ ಮತ್ತು ನಮ್ಮ ಪ್ರಜ್ಞೆಗೆ ಹೊಸ ಆಯಾಮವನ್ನು ಕೊಡುತ್ತದೆ. ನಾವು ಪ್ರತಿಪಾದಿಸುವ ಮೌಲ್ಯಕ್ಕೂ ಸಾಮಾಜಿಕ ವಾಸ್ತವವಕ್ಕೂ ಸಂಬಂಧವಿದೆ. ಅದರಲ್ಲಿ ಮೌಲ್ಯ, ತೀರ್ಮಾನ, ತಾತ್ವಿಕತೆಗಳು ಸೇರಿಕೊಂಡಿರುತ್ತವೆ. ಒಂದು ಅಧ್ಯಯನಕ್ಕೆ ಇರುವ ಒಳ ಮತ್ತು ಹೊರ ಅಧ್ಯಯನ ಕ್ರಮವನ್ನು ಈ ದೃಷ್ಟಿಯಲ್ಲಿ ನಾವು ಬೇರೆ ಮಾಡಿಕೊಂಡು ನೋಡಬೇಕಾಗುತ್ತದೆ. ಅಧ್ಯಯನಕ್ಕೂ ವಾಸ್ತವಕ್ಕೂ ಈ ಅರ್ಥದಲ್ಲಿ ಸರಿಯಾದ ಸಂಬಂಧವೂ ಇದೆ. ಅದು ಸಮೂಹವೂ ಹೌದು ವ್ಯಕ್ತಿ ಕೇಂದ್ರಿತವೂ ಹೌದು. ವಿಷಯ ಮತ್ತು ಪರಿಸರಕ್ಕೂ ಈ ದೃಷ್ಟಿಯಿಂದ ಸಂಬಂಧವಿದೆ. ಅಧಿಕಾರದ ಕೇಂದ್ರಗಳು ಜ್ಞಾನವನ್ನು ತನ್ನ ಮಧ್ಯವರ್ತಿಗಳ ಮೂಲಕ ರೂಪಿಸುತ್ತವೆ. ಫುಕೋ ನಮ್ಮ ಅನುಭವ ಎನ್ನುವುದು ನಮ್ಮದೇ ಆದ ಅನುಭವ ಎಂದು ಹೇಳಲು ಬರುವುದಿಲ್ಲ. ಅದು ನಮ್ಮ ಭಾವನೆಗಳು. ಭಾವನೆಗಳು ನಿರ್ಮಾಣವಾಗಿರುತ್ತದೆ ಎನ್ನುತ್ತಾನೆ.

ಇಲ್ಲಿ ಮತ್ತೆ ಕೆಲವು ಸೂಕ್ಷ್ಮವಾದ ಪ್ರಶ್ನೆಗಳೂ ಇವೆ. ಮನೋರಚನೆಗೂ ವಿಶ್ವಾತ್ಮಕತೆಗೂ ಒಂದು ಸಂಬಂಧವಿದೆ. ಯಾವುದೇ ಲೋಕ ದೃಷ್ಟಿಯನ್ನು ನಾವು ಈವತ್ತು ವ್ಯಕ್ತಿಯನ್ನು ಆಧರಿಸಿಕೊಂಡು ಮಾಡುವುದು ಕಷ್ಟದಾಯಕವಾಗಿದೆ. ಅಂದರೆ ವ್ಯಕ್ತಿಯ ಮನೋಸ್ಥಿತಿಯೂ ರಚನೆಯೇ ಆಗಿದೆ. ಅದಕ್ಕೆ ಕೆಲವು ನಿಯಮಗಳು ಇರುತ್ತವೆ. ನಿಯಮವನ್ನು ಈವತ್ತು ನಾವು ವಿರೋಧಿಸುವ ಸ್ಥಿತಿಯಲ್ಲಿ ಇಲ್ಲ. ನಿಯಮವನ್ನು ನಾವು ಮಾಡಿಕೊಂಡಿದ್ದೇವೆ. ಅದು ನಮ್ಮ ಅಗತ್ಯವೂ ಆಗಿರುವುದು ನಿಜ. ಸಿದ್ಧಾಂತವೂ ಯಾಕೆ ಮಹತ್ವದ್ದು ಆಗಿದೆಯೆಂದರೆ ಈ ಕಾರಣಕ್ಕೆ. ಅದು ಲೋಕವನ್ನು ನೋಡಲು ಒಂದು ಬುನಾದಿಯನ್ನು ಹಾಕುತ್ತದೆ. ಸಿದ್ಧಾಂತವು ಮತ್ತೊಂದನ್ನು ರೂಪಿಸುತ್ತದೆ. ಅದು ಮೌಲ್ಯವನ್ನು ಹೇಳುತ್ತದೆ. ಮತ್ತು ಅದರಲ್ಲಿ ಲೋಕವನ್ನು ಕಾಣಲು ಬೇಕಾದ ಒಂದು ನಿಲುವೂ ಇರುತ್ತದೆ. ಆದರೆ ಸೃಜನಶೀಲತೆಯು ನಮಗೆ ಮತ್ತೆ ಕೆಲವು ಅಂಶಗಳನ್ನು ಪ್ರತಿಪಾದಿಸುತ್ತವೆ. ಜ್ಞಾನ ಎನ್ನುವುದು ರಚನೆಯನ್ನು ಮಾಡುತ್ತದೆ. ನಾವು ಯಾವುದನ್ನು ಅತ್ಯಂತ ಸಾಮಾನ್ಯವಾದ ರಾಜಕಾರಣ ಎಂದು ಹೇಳುತ್ತೇವೆಯೋ ಅದು ಅನೇಕವನ್ನು ನಿರ್ಧಾರ ಮಾಡುತ್ತದೆ ಎಂದು ಫುಕೋ ಭಾವಿಸುತ್ತಾನೆ. ಈ ಸಾಮಾನ್ಯವಾದ

ರಾಜಕಾರಣವು ಕೆಲವನ್ನು ನಿರೂಪಿಸುತ್ತದೆ. ತನಗೆ ಬೇಕಾದ ತಂತ್ರಗಳನ್ನು ಹೂಡುತ್ತದೆ.

ಸೃಜನಶೀಲತೆಯೂ ನಮಗೆ ಜೀವನ ಮತ್ತು ಅದರ ಕುರಿತಾದ ವಿಶಿಷ್ಟವಾದ ಧೋರಣೆಯನ್ನು ಹೇಳುತ್ತದೆ. ಆದರೆ ಸಮೂಹ ಜೀವನದ ಪ್ರಜ್ಞೆಯು ನಮಗೆ ಅನೇಕವನ್ನು ತೋರಿಸಿಕೊಡುತ್ತದೆ. ಸಮೂಹ ಪ್ರಜ್ಞೆಯು ನಮಗೆ ನಿರ್ದಿಷ್ಟವಾದ ನೋಟವನ್ನು ಹೇಳುತ್ತದೆ. ಸಮಾಜ ಮತ್ತು ಅದರ ತಿಳುವಳಿಕೆಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಲೋಕ ದೃಷ್ಟಿ ಮತ್ತು ಅದರ ಪರಿಣಾಮಗಳು ನಮಗೆ ಪ್ರಭಾವವನ್ನು ಬೀರುವುದೂ ಅಷ್ಟೇ ನಿಜ. ನಾವು ಈ ದೃಷ್ಟಿಕೋನವನ್ನು ನಿಯಂತ್ರಿಸಬೇಕಾದ ಯಾವ ಅಗತ್ಯವೂ ಇಲ್ಲ. ಸಾಮಾಜಿಕ ಜೀವನ ಮತ್ತು ಅದರ ಸ್ವರೂಪವೇ ನಮಗೆ ಬಹಳ ಮುಖ್ಯ. ಆದರೆ ಲೋಕ ದೃಷ್ಟಿಯೆಂದರೆ ಅದು ಅತಾತ್ವಿಕವಾದ ಸಂಗತಿಯೂ ಅಲ್ಲ. ಅದರ ಹಿಂದೆ ಚರಿತ್ರೆ ಮತ್ತು ಅದು ಬೆಳೆದು ಬಂದ ವಿವಿಧ ಕ್ರಮಗಳೂ ಇವೆ. ಕೆಲವು ಸರ್ತಿ ನಾವು ಸಾಮಾನ್ಯವಾದ ಸಂಗತಿಗಳನ್ನು ನೋಡಬೇಕಾಗುತ್ತದೆ. ಅದು ಉದ್ದೇಶಿತವೂ ಹೌದು. ವಿಶಿಷ್ಟವೂ ಹೌದು. ಕೆಲವು ಸಮಾಜ ಮತ್ತು ಅದರ ಸಂಘರ್ಷವನ್ನು ಹೇಳುತ್ತವೆ. ಸಾಮಾಜಿಕ ವರ್ಗ ಮತ್ತು ಲೋಕ ಗ್ರಹಿಕೆಗೆ ಸಂಬಂಧವೂ ಇದೆ. ಕೆಲವು ಸಮಾಜ ಮತ್ತು ಅದರ ಅರಿವನ್ನು ಹೇಳುತ್ತವೆ. ಕೆಲವು ಸಾಮಾಜಿಕ ಘಟನೆಗಳು ಬೌದ್ಧಿಕವಾದ ಚಟುವಟಿಕೆಗೆ ಕಾರಣವೂ ಆಗುತ್ತದೆ. ನಿಸರ್ಗ ಮತ್ತು ಮನುಷ್ಯರ ನಡುವೆ ಇರುವ ಸಮತೋಲನವು ಭಿನ್ನವಾಗಿದೆ. ಮತ್ತು ಅದರ ಅರ್ಥವೂ ಬೇರೆಯಾಗಿದೆ. ನಮ್ಮ ಮಾನಸಿಕ ರಚನೆಗೂ ಬಾಹ್ಯಕ್ಕೂ ಒಂದು ಸಂಬಂಧವಿದೆ. ಸಮಾಜಕ್ಕೂ ಭೌತಿಕತೆಗೂ ಸಂಬಂಧವಿದೆ, ಆದ್ದರಿಂದ ಅವುಗಳನ್ನು ನಾವು ನಿರ್ದಿಷ್ಟವಾಗಿಯೇ ಗ್ರಹಿಸಬೇಕಾಗುತ್ತದೆ. ಬಾಹ್ಯವು ನಮಗೆ ಪ್ರಭಾವವನ್ನು ಬೀರುತ್ತದೆ. ಉತ್ಪಾದನೆ ಮತ್ತು ಉತ್ಪಾದನೆಯ ಶಕ್ತಿಗಳ ನಡುವಣ ಸಂಬಂಧವನ್ನು ಈ ದೃಷ್ಟಿಯಿಂದಲೇ ಮಾರ್ಕ್ಸವಾದಿಗಳು ವಿವರಿಸುತ್ತಾರೆ. ಸಾಮಾಜಿಕ ಜೀವನ, ಭೌತಿಕ ಅಗತ್ಯಗಳು ಮತ್ತು ಒತ್ತಡಗಳು ಬೇರೆ ಬೇರೆ ಪ್ರಭಾವವನ್ನು ಬೀರುತ್ತವೆ. ಇದರ ಜೊತೆಗೆ ವಿವಿಧ ಸಂಸ್ಥೆಗಳು ಜ್ಞಾನವನ್ನು ಮರು ರೂಪಿಸುತ್ತವೆ. ನಮ್ಮ ಅಥೆಂಟಿಕ್ ಎನ್ನಬಹುದಾದ ಜಗತ್ತು ಸಾಂಸ್ಕೃತಿಕ ಮತ್ತು ರಾಜಕೀಯ ಆವರಣದಿಂದ ರೂಪುಗೊಂಡಿರುತ್ತದೆ ಎಂದು ಫುಕೋ ಹೇಳುತ್ತಾನೆ.

ಸಾಮಾಜಿಕತೆ ಮತ್ತು ಬರಹದ ನಡುವೆ ಕೆಲವು ರೀತಿಯಲ್ಲಿ ಸಂಬಂಧವು ಇರಬೇಕಾಗುತ್ತದೆ ಎಂದು ಮಾರ್ಕ್ಸವಾದಿಗಳು ಈ ಕಾರಣಕ್ಕೆ ನಂಬುತ್ತಾರೆ. ಅನೇಕ ಸಂದರ್ಭದಲ್ಲಿ ನಮಗೆ ವಿವರಣೆಗಳೂ ಅಗತ್ಯವಾಗುವುದು ಈ ಕಾರಣಕ್ಕೆ. ಹಳೆಯ ರಚನೆಗಳು ಹೊಸ ರಚನೆಯನ್ನು ಮಾಡುವುದೂ ಇದೇ ದೃಷ್ಟಿಯಲ್ಲಿ. ಹಳೆಯ ಅನೇಕ

ಅಂಶಗಳು ಹೊಸರಚನೆಯಲ್ಲಿ ಸೇರುತ್ತವೆ. ಮತ್ತು ಹೊಸದಾದ ಅವಕಾಶವನ್ನು ಸೃಷ್ಟಿ ಮಾಡುತ್ತವೆ. ಇದರಿಂದ ಹೊಸದಾದ ದಿಕ್ಪಲ್ಲಟವು ಆಗುತ್ತದೆ. ಚರಿತ್ರೆಯ ಅರಿವು ಈ ಕಾರಣಕ್ಕೆ ಬೇಕಾಗುತ್ತವೆ. ಅದು ಹಿನ್ನೆಲೆಯನ್ನು ಹೇಳುತ್ತದೆ. ಚರಿತ್ರೆಯ ಹಾಜರಾತಿಗೂ ಅದರ ಸಾರಕ್ಕೂ ಈ ಕಾರಣದಿಂದ ಸಂಬಂಧವಿದೆ. ಚರಿತ್ರೆಯೆಂದರೆ ಗತವನ್ನು ನಿರೂಪಿಸುವ ಒಂದು ಕತೆಯಲ್ಲ. ಅದರಲ್ಲಿಯೂ ತಾತ್ವಿಕತೆಯ ಅಗತ್ಯವೂ ಇರುತ್ತದೆ. ಅದೂ ಒಂದು ಸಹಯೋಗವನ್ನು ಹೇಳಬೇಕಾಗುತ್ತದೆ. ವಾಸ್ತವವಾಗಿ ಚರಿತ್ರೆಯ ಅಧ್ಯಯನದಲ್ಲಿ ನಾವು ಆಗಾಗ ಬಳಸುವ ಪದಗಳನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅದರಲ್ಲಿ ನಿರಂಕುಶ ಪ್ರಭುತ್ವ, ಪ್ರಜಾಸತ್ತಾತ್ಮಕ, ಆಡಳಿತಶಾಹಿ ಮುಂತಾದ ಪದಗಳು ಬರುವುದು ಬರೀ ಒಂದು ವಿವರಣೆಯನ್ನು ಮಾತ್ರವೇ ಕೊಡುವುದೂ ಇಲ್ಲ. ಅದು ಅದನ್ನು ಬೇರೆ ರೀತಿಯಲ್ಲಿಯೂ ವಿವರಿಸುತ್ತದೆ. ಅವುಗಳು ಸಮಾಜದ ರಚನೆಗಳೂ ಆಗಿವೆ. ಆದರೆ ಸಾಮಾಜಿಕ ಚರಿತ್ರೆಯಲ್ಲಿ ಸಮಾಜದ ಏಳುಬೀಳುಗಳೂ ಬಹಳ ಮುಖ್ಯವಾಗುತ್ತವೆ. ಯಾವುದನ್ನು ಸಮಾಜದ ಅಂಶಗಳು ಎಂದು ಹೇಳುತ್ತೇವೆಯೋ ಅದು ಗಾಢವಾದ ಪ್ರಭಾವವನ್ನು ಬೀರುತ್ತವೆ. ಸಾಮಾಜಿಕವಾದ ಅನೇಕ ಘಟನೆಗಳು ನಮ್ಮನ್ನು ವ್ಯಾಪಕವಾಗಿಯೇ ಆವರಿಸಿಕೊಳ್ಳುತ್ತವೆ. ಆದ್ದರಿಂದಲೇ ಸಾಮಾಜಿಕ ಸತ್ಯವು ಅತ್ಯಂತ ಮುಖ್ಯವಾದ್ದೂ ಹೌದು. ಅಧಿಕಾರವು ಎಲ್ಲವನ್ನೂ ಹೇಳುವುದಿಲ್ಲ. ಅದು ಕೆಲವನ್ನು ನಿರ್ದಿಷ್ಟ ಮಾಡುತ್ತದೆ. ಕೆಲ ಬಗೆಯ ಜ್ಞಾನವನ್ನು ಅದು ಹೊರಗೆ ಇಡುತ್ತದೆ. ವ್ಯಕ್ತಿಯು ಕೂಡಾ ಜ್ಞಾನವನ್ನು ತನಗೆ ಬೇಕಾದ ರೀತಿಯಲ್ಲಿ ಸಾಧಿಸುತ್ತಾನೆ. ನನ್ನ ಅತ್ಯಂತ ಶಕ್ತಿಯುತವಾದ ಭಾವನೆಗಳನ್ನು ಸಂಸ್ಕೃತಿ ಮತ್ತು ಚರಿತ್ರೆಯು ರೂಪಿಸುತ್ತದೆ ಎಂದು ಫುಕೋ ಹೇಳುತ್ತಾನೆ. ನಮ್ಮ ಅಥೆಂಟಿಸಿಟಿಗೆ ಅನೇಕ ಬಗೆಯ ಸಂಕಥನವು ಇರುತ್ತದೆ. ಅದರಲ್ಲಿ ಸಾಮಾಜಿಕ ಅನುಭವ ಕೂಡಾ ಸೇರಿಕೊಂಡಿದೆ. ನಮ್ಮ ಅನುಭವ ಎರಡು ಬಗೆಯದ್ದು. ಒಂದು ಸಮಾಜಕ್ಕೆ ಸಂಬಂಧ ಪಟ್ಟದ್ದು. ಇನ್ನೊಂದು ವೈಯಕ್ತಿಕವಾದ್ದು ಎಂದು ರೆಮಾಂಡ್ ವಿಲಿಯಂಸ್ ಹೇಳುತ್ತಾನೆ.

ವಿಧಿನಿಷೇಧಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗಿದೆ. ಅದಕ್ಕೂ ಸಮಾಜದಲ್ಲಿ ಒಂದು ಪಾತ್ರವು ಇದೆ. ಅವಕ್ಕೂ ಒಂದು ಸಮಾಜದಲ್ಲಿ ಸ್ಥಾನಮಾನವು ಕಲ್ಪಿತವಾಗಿದೆ. ಸಮಾಜ ಮತ್ತು ಅದರ ಸಮಸ್ಯೆಗಳನ್ನು ಈ ದೃಷ್ಟಿಯಿಂದ ನಾವು ಬೇರೆ ದೃಷ್ಟಿಕೋನದಲ್ಲಿ ನೋಡಬೇಕಾಗುತ್ತದೆ. ಸಮಾಜ ಮತ್ತು ಅದರ ಸಂಬಂಧಗಳನ್ನು ನಾವು ಈ ದೃಷ್ಟಿಯಿಂದ ಭಾವುಕವಾಗಿ ನೋಡಬೇಕಾದ ಅಗತ್ಯವಿಲ್ಲ. ರೈತರು. ಅಧಿಕಾರ ಶಾಹಿ ಮತ್ತು ಕಾರ್ಮಿಕರು ಎನ್ನುವುದೇ ಮನುಷ್ಯನ ಸತ್ಯಗಳಲ್ಲಿ ಒಂದಾಗಿದೆ. ಆದರೆ ನಾವು ಅನೇಕರು ರೈತರನ್ನು, ಕಾರ್ಮಿಕರು ಮುಂತಾದ ಸತ್ಯಗಳನ್ನು ನೋಡಲು ಹೋಗುವುದೂ ಇಲ್ಲ. ಅದನ್ನು ಗಮನಕ್ಕೆ ತರದೆ ಬೇರೆ

ಯಾವುದನ್ನೋ ಹೇಳುತ್ತಾರೆ. ಅವುಗಳು ನಮ್ಮ ರಾಜಕೀಯವಾದ ಸತ್ಯಗಳೂ ಹೌದು. ಈ ರೀತಿಯ ರಾಜಕೀಯವಾದ ಪ್ರಜ್ಞೆಯು ನಮಗೆ ಅತ್ಯಂತ ಅಗತ್ಯವೂ ಆಗಿದೆ. ರಾಜಕೀಯವು ನಮಗೆ ಅನೇಕ ನಿಯಂತ್ರಣವನ್ನು ಹೇರುತ್ತದೆ. ಆದ್ದರಿಂದ ನಾವು ಅದನ್ನು ಬಿಟ್ಟು ಮಾತಾಡಲು ಬರುವುದೇ ಇಲ್ಲ. ರಾಜಕಾರಣವೇ ಅನೇಕ ಸಂದರ್ಭದಲ್ಲಿ ನಮ್ಮ ಪ್ರಜ್ಞೆಯನ್ನು ನಿಯಂತ್ರಿಸುತ್ತದೆ. ಇವುಗಳು ಸಾಂಸ್ಕೃತಿಕವಾದ ಕ್ರಿಯೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಈ ದೃಷ್ಟಿಯಿಂದ ಸಂಸ್ಕೃತಿ ಮತ್ತು ಅದರ ಕ್ರಿಯೆಯು ಭಿನ್ನವಾಗುತ್ತದೆ. ಕೆಲವು ಸರ್ತಿ ಬೇರೆ ಬೇರೆ ಗುಂಪುಗಳು ಬೇರೆ ಅರ್ಥಗಳನ್ನು ಹೇಳುತ್ತವೆ. ಅವುಗಳು ಜೀವನವನ್ನು ನಿಯಂತ್ರಿಸುತ್ತವೆ. ಸಾಮಾಜಿಕ ಮತ್ತು ವೈಯಕ್ತಿಕವಾದ ಸಂಕಥನ ಎಂದು ಫುಕೋ ಹೇಳುತ್ತಾನೆ. ಆದರೆ ಇದೇ ವಾದವನ್ನು ಅಲಿಸನ್ ಜಾಗರ್, ರೆಮಾಂಡ್ ವಿಲಿಯಂಸ್ ಮತ್ತು ಫುಕೋ ಹೇಳುತ್ತಾರೆ.

ಕೆಲವು ಸಂಗತಿಗಳು ನಿರ್ದಿಷ್ಟವಾದ ಮೌಲ್ಯವನ್ನು ಸೂಚಿಸುತ್ತವೆ. ಮತ್ತೆ ಕೆಲವು ಯಾವುದೇ ಮೌಲ್ಯವನ್ನು ಹೇಳುವುದೂ ಇಲ್ಲ. ಕೆಲವು ಸಂಗತಿಗಳು ಜಗತ್ತಿಗೆ ಅನ್ವಯವಾಗುತ್ತವೆ, ಮತ್ತು ಕೆಲವು ಸ್ಥಳೀಯ ಮಟ್ಟದಲ್ಲಿ ಮಾತ್ರವೇ ಇರುತ್ತವೆ. ಈ ಸಂಗತಿಗಳು ಲೇಖಕನ ಮೇಲೆ ಪ್ರಭಾವವನ್ನು ಬೀರುತ್ತವೆ. ವಿಶ್ವಾತ್ಮಕತೆಯು ಲೇಖಕನ ಪ್ರಜ್ಞೆಯ ಮೇಲೆ ನಿರ್ಣಾಯಕವಾದ ಪ್ರಭಾವವನ್ನು ಬೀರುತ್ತದೆ. ಮತ್ತು ಯಾವುದು ವರ್ಗವಾಗಿದೆಯೋ ಅದರ ಪ್ರಭಾವವು ಬರಹವನ್ನು ರೂಪಿಸುತ್ತದೆ. ಹಾಗೆ ನೋಡುವುದಿದ್ದರೆ ಯಾವುದು ನಮಗೆ ಮುಖ್ಯ ಮತ್ತು ಯಾವುದು ನಮಗೆ ಅಮುಖ್ಯವೆಂದು ತೀರ್ಮಾನವನ್ನು ಮಾಡಿಕೊಳ್ಳುವುದು ನಮ್ಮ ಪ್ರಜ್ಞೆಯ ಆಧಾರದ ಮೇಲೆಯೇ. ಸಾಮಾಜಿಕ ಜೀವನ ಮತ್ತು ಅದರ ಪರಿಣಾಮಗಳು ಭಿನ್ನವಾಗಿ ರೂಪು ತಳೆಯುತ್ತದೆ. ಅದರ ಹಿಂದೆ ವಿವಿಧ ಸ್ವರೂಪಗಳೂ ಇರುತ್ತವೆ. ಸಾಮಾಜಿಕ ಅಭ್ಯಾಸಗಳು ನಮ್ಮನ್ನು ನಿರ್ದೇಶಿಸುತ್ತವೆ. ನಮ್ಮ ಒಟ್ಟಾರೆಯಾದ ಸಂಗತಿಗಳನ್ನು ನಮ್ಮ ಒಟ್ಟಾದ ಜೀವನ ಮತ್ತು ಅದರ ಸಂಗತಿಗಳು ಹೇಳುತ್ತವೆ. ಕಾಲ ಮತ್ತು ಆವಶ್ಯಕತೆಗಳೇ ಈ ದೃಷ್ಟಿಯಿಂದ ಹೆಚ್ಚು ಮುಖ್ಯವಾದ ಸಂಗತಿಯೂ ಆಗಿದೆ. ಸಮಾಜ ಮತ್ತು ಅದರ ರಚನೆಗಳು ನಮ್ಮ ಬರಹವನ್ನು ಹೇಳುತ್ತವೆ. ಮತ್ತು ಅದರಲ್ಲಿ ವ್ಯತ್ಯಾಸಗಳೂ ಇರುತ್ತವೆ. ರಚನೆಯೇ ಅನೇಕ ಕಾರಣಗಳಿಂದ ಸಾಂಕೇತಿಕವೂ ಆಗುತ್ತದೆ. ಅವುಗಳು ನಿರ್ದಿಷ್ಟವಾದ ಸತ್ಯವನ್ನು ಮಾತ್ರವೇ ಹೇಳುತ್ತದೆ ಎಂದು ಅರ್ಥವಲ್ಲ. ಯಾಕೆಂದರೆ ಕಲಾವಿದನು ಕೆಲವನ್ನು ಆಯ್ಕೆ ಮಾಡುತ್ತಾನೆ ಮತ್ತು ಕೆಲವನ್ನು ಬದಲಿಸುತ್ತಾನೆ. ಸಂಸ್ಕೃತಿಯ ಚರ್ಚೆಗೆ ಈ ಅರ್ಥದಲ್ಲಿ ಸಾಂಕೇತಿಕತೆಯೂ ಇರುತ್ತದೆ. ನಾವು ನೋಡಬೇಕಾದ್ದು ಲೇಖಕ ಮತ್ತು ಅವನ ಮನೋಸ್ಥಿತಿಯನ್ನು ಮಾತ್ರವೇ. ಚರಿತ್ರೆಯ ಸನ್ನಿವೇಶಗಳು ನಮ್ಮನ್ನು ನಿಯಂತ್ರಿಸುತ್ತವೆ. ಮನಸ್ಸು

ಮತ್ತು ನಡತೆಗೆ ಈ ದೃಷ್ಟಿಯಿಂದ ಸಂಬಂಧವೂ ಇದೆ. ಆದ್ದರಿಂದ ವ್ಯಕ್ತಿ ಮತ್ತು ಅವನ ನಡತೆಗೂ ಸಾಹಿತ್ಯಕ್ಕೂ ನೇರವಾದ ಸಂಬಂಧವೂ ಇದೆ. ಸಾಹಿತ್ಯ ಮತ್ತು ಅದರ ಚರ್ಚೆಯು ಈ ದೃಷ್ಟಿಯಿಂದ ಲೇಖಕ ಮತ್ತು ಅವನ ಮನೋಸ್ಥಿತಿಯನ್ನು ಆಧರಿಸಿಕೊಳ್ಳುವುದೂ ಅಗತ್ಯ. ಸಾಹಿತ್ಯವನ್ನು ಸಮಾಜವು ನಿರೂಪಿಸಿಕೊಳ್ಳುವುದು ಮತ್ತು ಅದರ ಅರ್ಥವನ್ನು ಹೇಳುವುದು ಅತ್ಯಂತ ಸಹಜವೂ ಆಗಿದೆ. ಸಾಹಿತ್ಯ ಮತ್ತು ಅದರ ರಚನೆಯು ಸಮಾಜದಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸುತ್ತದೆ. ನನ್ನ ಅನನ್ಯ ಅನುಭವ (ಅಥೆಂಟಿಕ್) ನನ್ನದೇ ಆಗಿದ್ದರೂ ಅದು ವ್ಯಕ್ತವಾಗುತ್ತದೆ.

ಲೇಖಕನ ಪ್ರಜ್ಞೆಯನ್ನು ಸಮಾಜದ ಪ್ರಜ್ಞೆಯ ಭಾಗವಾಗಿಯೂ ನೋಡಬೇಕಾಗುತ್ತದೆ. ಅಂದರೆ ಅದರಲ್ಲಿ ಲೇಖಕನಿಗೆ ಕೊಡಲಾದ ಒಂದು ಸನ್ನಿವೇಶವೂ ಇರುತ್ತದೆ ಮತ್ತು ಸಾಮಾಜಿಕ ರಚನೆಗಳು ಭಾಷಿಕ ರಚನೆಗಳನ್ನು ನಿಯಂತ್ರಿಸುತ್ತವೆ. ಭಾಷೆಯು ಸಮಾಜದಲ್ಲಿ ಸಂವಹನದ ಮುಖ್ಯವಾದ ಭಾಗವೂ ಆಗಿರುತ್ತದೆ. ಲೇಖಕನಿಗೂ ಭಾಷೆಯು ಸಂವಹನದ ಭಾಗವೇ ಆಗಿದೆ. ಮತ್ತು ಲೇಖಕನು ತನ್ನದೇ ಆದ ಕಾರಣವನ್ನು ಹೊಂದಿದ್ದಾನೆ. ತನ್ನ ಅಗತ್ಯವನ್ನು ಭಾಷೆಯಲ್ಲಿ ಹೇಳುತ್ತಾನೆ. ಅವನ ಆಲೋಚನೆಯು ಮಾತ್ರವೇ ಬರಹದ ಚಟುವಟಿಕೆಯಲ್ಲಿ ವ್ಯಕ್ತವಾಗುತ್ತವೆ. ಬರಹವೂ ಒಂದು ದೃಷ್ಟಿಯಲ್ಲಿ ರಚನೆಯೇ ಆಗುತ್ತದೆ. ಆ ರಚನೆಯು ಅತ್ಯಂತ ಅಗತ್ಯವೂ ಆಗುತ್ತದೆ. ಬರಹ ಮತ್ತು ಅದರ ರಚನೆಯು ಸಮಾಜ ಮತ್ತು ಅದರ ರಚನೆಯ ಭಾಗವೂ ಆಗುತ್ತದೆ. ಅದರಲ್ಲಿ ವ್ಯತ್ಯಾಸಗಳು ಇರುವುದು ಲೇಖಕ ಮತ್ತು ಅವನ ಆಲೋಚನೆಯನ್ನು ಸೂಚಿಸುವುದಕ್ಕಾಗಿಯೂ ಹೌದು. ಲೇಖಕನು ಯಾವುದನ್ನು ಅಯ್ಕೆ ಮಾಡುತ್ತಾನೆ ಅದು ಅವನ ಆಲೋಚನೆ ಮತ್ತು ಮನೋಸ್ಥಿತಿಯ ದ್ಯೋತಕವೂ ಆಗಿರುತ್ತದೆ. ಪುನರುಜ್ಜೀವನ ಕಾಲದ ಅನಂತರ ವ್ಯಕ್ತಿ ಮತ್ತು ಅವನ ವ್ಯಾಖ್ಯೆಯು ಬದಲಾಯಿತು. ವ್ಯಕ್ತಿಯು "ನಾನು" ಮತ್ತು ಸಂಸ್ಕೃತಿಯನ್ನು ನೋಡುವ ಕ್ರಮಗಳು ಬದಲಾದವು. ವ್ಯಕ್ತಿ ಮತ್ತು ಅವನ ದೇಹವನ್ನು ಗ್ರಹಿಸುವ ಚಿಂತನೆಗಳೂ ಬೇರೆಯಾದವು. ವಾಸ್ತವವಾಗಿ ನಾನು ಎನ್ನುವುದು ಆತ್ಮರತಿಯ ಭಾಗವೂ ಹೌದು. ನಾನು ಎನ್ನುವುದು ಮೂಲಭೂತವಾಗಿ ಮತ್ತೆ ಕೆಲವು ಅಂಶಗಳನ್ನು ಹೇಳುತ್ತವೆ. ಅದು ದೇಹ ಮತ್ತು ಮನಸ್ಸಿನ ಪ್ರಶ್ನೆಯೂ ಆಗಿದೆ. ನಾನು ಎನ್ನುವ ಕಲ್ಪನೆಯು ಸಾಂಸ್ಕೃತಿಕವಾಗಿ ರಚಿತವಾಗಿರುತ್ತದೆ. ಅದು ವ್ಯಕ್ತಿಯ ಪ್ರಜ್ಞೆಯನ್ನು ಹೇಳುತ್ತದೆ. ಅದರಲ್ಲಿ ವ್ಯಕ್ತಿ ಮತ್ತು ಅವನ ನಡವಳಿಕೆಯು ಮಾತ್ರವೇ ಪ್ರಧಾನವೂ ಆಗುತ್ತದೆ. ವ್ಯಕ್ತಿ; ಅವನ ಲಿಬಿಡೋ, ಅವನ ಆಲೋಚನೆ ಹಾಗೂ ಅವನ ಸ್ವ ಹಿತಾಸಕ್ತಿಯು ಕಾಣಿಸುತ್ತದೆ. ವ್ಯಕ್ತಿ ಎನ್ನುವ ಕಲ್ಪನೆಯೇ ಮಿತಿಗಳೂ ಇರುತ್ತವೆ. ವ್ಯಕ್ತಿಯ ಬಯಕೆಯನ್ನು ಸಮಾಜವು ಹತ್ತಿಕ್ಕುವುದು ನಿಜ. ವ್ಯಕ್ತಿಯು ಮುಕ್ತಾಯವಾಗುವುದು ಸಮಾಜದಲ್ಲಿ ಮಾತ್ರವೇ. ಅವನ ಸಾವು ಅವನ

ಅಸ್ತಿತ್ವವನ್ನು ಮುಕ್ತಾಯ ಮಾಡುತ್ತದೆ. ಲಿಬಿಡೋ ಮತ್ತು ಬರಹಕ್ಕೆ ಕೆಲವು ರೀತಿಯ ಸಂಬಂಧವಿದೆ. "ನಾನು" ಅಂದರೆ ನಿಸರ್ಗದ ಮೇಲೆ ಯಜಮಾನಿಕೆಯನ್ನು ಸಾಧಿಸುವುದೂ ಹೌದು. ಸಂವಹನ ಮತ್ತು ಭಾಷೆಯ ಮೇಲೆಯೂ ನಾನು ಎನ್ನುವ ಕಲ್ಪನೆಯು ಪ್ರಭಾವವನ್ನು ಬೀರುತ್ತದೆ.

ಸಾಂಸ್ಕೃತಿಕ ಮತ್ತು ಸಮಾಜ ಮತ್ತು ನಡವಳಿಕೆಯೂ ಪರಸ್ಪರ ಸಂಘರ್ಷವನ್ನು ಸೃಷ್ಟಿಸುತ್ತದೆ. ನಾನು ಮತ್ತು ನನ್ನ ಬರಹ ಎನ್ನುವುದು ಮೂಲಭೂತವಾಗಿ ನಿರ್ದಿಷ್ಟವಾದ ಮತ್ತು ಸ್ವಂತಿಕೆಯ ಪ್ರಶ್ನೆಯನ್ನು ಎತ್ತುತ್ತದೆ. ನಾನು ನನ್ನ ಬಯಕೆಯನ್ನು ನನ್ನ ಬರಹದಲ್ಲಿ ವ್ಯಕ್ತ ಮಾಡುತ್ತೇನೆ. ಲಿಬಿಡಿನಲ್ ಬಯಕೆಯು ಬರಹದಲ್ಲಿ ವ್ಯಕ್ತವಾಗುತ್ತವೆ. ಸಾಮಾಜಿಕ ಜೀವನ ಮತ್ತು ನಾನು ಎನ್ನುವುದು ಬೇರೆ ಬೇರೆ ಪ್ರಯೋಗಗಳಿಗೆ ಕಾರಣವೂ ಆಗುತ್ತದೆ. ಬರೆಯುವುದು ಅಂದರೆ ನಮ್ಮನ್ನು ವ್ಯಕ್ತ ಮಾಡುವುದೂ ಅಷ್ಟೇ ಸತ್ಯ. ಆದರೆ ಬರೆಯುವುದು ವ್ಯಕ್ತಿಯನ್ನು ತೃಪ್ತಿಗೊಳಿಸುತ್ತದೆ. ಕಲ್ಪಿತ ಸಂಗತಿ ಮತ್ತು ಅದರ ಪರಿಣಾಮವನ್ನು ಈ ದೃಷ್ಟಿಯಿಂದ ನಾವು ಭಿನ್ನವಾಗಿ ಗ್ರಹಿಸಬೇಕಾಗುತ್ತದೆ. ಕಲ್ಪಿತವಾದ ಸುಖವೂ ಬರಹದಲ್ಲಿ ಕಾಣಿಸುತ್ತದೆ. ಮಾನಸಿಕವಾದ ರಚನೆಗಳು ಬರಹದ ರಚನೆಗಳಿಗೆ ಕಾರಣವೂ ಆಗುತ್ತವೆ. ಮತ್ತು ಅದರಲ್ಲಿ ನೆಮ್ಮದಿಯೂ ದೊರೆಯುತ್ತದೆ. ಮತ್ತು ಅದು ವ್ಯಕ್ತಿಯನ್ನು ನಿರ್ದಿಷ್ಟವಾಗಿ ಬಿಡುಗಡೆ ಮಾಡುತ್ತದೆ. ಸುತ್ತಲಿನ ಜಗತ್ತನ್ನು ನೋಡಿಕೊಂಡೇ ವ್ಯಕ್ತಿಯು ಬರೆಯುತ್ತಾನೆ. ಸಮಾಜ ಮತ್ತು ಅದರ ಅರಿವೂ ಅವನಿಗೆ ಹೆಚ್ಚು ಮುಖ್ಯ. ಬರಹವು ವ್ಯಕ್ತಿಯ ಆಲೋಚನೆಯ ಕ್ರಮವನ್ನು ಹೇಳುತ್ತದೆ. ಫ್ರಾಂಕ್ ಫ್ಹಾರ್ಟ್ ಸ್ಕೂಲ್ ಚರಿತ್ರೆಯನ್ನು ನೋಡುವಾಗ ಇದನ್ನೂ ಗಮನಕ್ಕೆ ತಂದಿತ್ತು. ವ್ಯಕ್ತಿ ಮತ್ತು ಅವನ ನಡವಳಿಕೆಯು ಬರೀ ಅವನೊಬ್ಬನನ್ನು ಮಾತ್ರವೇ ಸೂಚಿಸುವುದೂ ಇಲ್ಲ. ಅದು ಸಮಾಜ, ಆರ್ಥಿಕತೆ ಮುಂತಾದವುಗಳನ್ನು ಹೇಳುತ್ತವೆ. ವ್ಯಕ್ತಿಯು ಅತೃಪ್ತನಾದರೆ ಮತ್ತು ಖಿನ್ನತೆಗೆ ಒಳಗಾದರೆ ಅವನ ವ್ಯಕ್ತಿತ್ವ ಮತ್ತು ಅವನ ಸಮಾಜವೆರಡೂ ನಮ್ಮ ಗಮನಕ್ಕೆ ಬರಬೇಕಾಗುತ್ತದೆ. ಎಷ್ಟೋ ಸರ್ತಿ ವ್ಯಕ್ತಿ ಮತ್ತು ಅವನ ನಡವಳಿಕೆಯನ್ನು ಸಮಾಜವು ತಿದ್ದುತ್ತದೆ. ವ್ಯಕ್ತಿ ಮತ್ತು ಅವನ ಪ್ರಶ್ನೆಯನ್ನು ಸಮಾಜವು ನೋಡುವ ಕ್ರಮವೂ ಬೇರೆಯಾಗಿದೆ. ಆದ್ದರಿಂದ ಅವನ ಬರಹಕ್ಕೂ ಅವನ ನಡವಳಿಕೆಗೂ ಸಂಬಂಧವಿದೆ. ಹಾಗೆ ನೋಡುವುದಿದ್ದರೆ ವ್ಯಕ್ತಿ ಮತ್ತು ಅವನ ನಡವಳಿಕೆಯನ್ನು ಬಂಡವಾಳವಾದವು ನೋಡುವ ಕ್ರಮವು ಭಿನ್ನವಾಗುತ್ತದೆ. ಅಂದರೆ ಅದು ಕೆಲವನ್ನು ಹೇರುತ್ತದೆ. ಸಮಾಜ ಮತ್ತು ಆದರ ತಾರತಮ್ಯಗಳು ಕೂಡಾ ಬರಹವನ್ನು ನಿರ್ದೇಶಿಸುತ್ತವೆ. ತಂತ್ರಜ್ಞಾನವು ಮುಂಚೂಣಿಯಲ್ಲಿ ಇರುವ ಸಮಾಜದಲ್ಲಿ ವ್ಯಕ್ತಿ ಮತ್ತು ಅವನ ನಡವಳಿಕೆಗಳು ಒಂದು ರೀತಿಯಲ್ಲಿ ಇರುತ್ತವೆ. ಯಾವುದೇ ಸಮಾಜವು ವಿಕಾಸವಾಗುತ್ತಾ ಬಂದಂತೆ ವ್ಯಕ್ತಿಯ ನಡವಳಿಕೆಯಲ್ಲಿ

ವ್ಯತ್ಯಾಸವು ಕಾಣುತ್ತದೆ. ಕ್ರಿಯೆಗಳಲ್ಲಿ ವ್ಯತ್ಯಾಸವಾಗುತ್ತದೆ. ಆದರೆ ಯಾವುದೇ ಕ್ರಿಯೆಯು ನಿರ್ದಿಷ್ಟವಾದ ಉದ್ದೇಶವನ್ನು ಹೊಂದಿರುತ್ತವೆ. ಜನರು ಮತ್ತು ಅವರ ಶಕ್ತಿಯು ಸಮಾಜದಲ್ಲಿ ಬೇರೆ ಬೇರೆ ರೀತಿಯ ನಿರ್ವಹಣೆಯನ್ನು ಮಾಡುತ್ತವೆ. ಮತ್ತು ಜನರ ಶಕ್ತಿಯೇ ಸಮಾಜದಲ್ಲಿ ಕೆಲವು ಗುಣಾತ್ಮಕವಾದ ಪರಿವರ್ತನೆಯನ್ನು ತರುತ್ತವೆ. ಯಾವುದನ್ನು ನಾವು ಲೋಕ ಗ್ರಹಿಕೆ ಎಂದು ಹೇಳುತ್ತೇವೆಯೋ ಅದು ಏಕತ್ರವೂ ಆಗಿರುತ್ತದೆ. ಅದರಲ್ಲಿ ಲೋಕ ಸಂವಾದವೂ ಇರುತ್ತದೆ ಮತ್ತು ಅದರಲ್ಲಿ ನಿರ್ದಿಷ್ಟ ಬಗೆಯ ತತ್ವಜ್ಞಾನವೂ ಇರುತ್ತದೆ. ಆಲೋಚನೆಗಳನ್ನು ಅವುಗಳೇ ನಿಯಂತ್ರಿಸುತ್ತವೆ ಮತ್ತು ಅದರಲ್ಲಿ ಜೀವನ ಮತ್ತು ಅದರದೇ ಆದ ದೃಷ್ಟಿಕೋನಗಳೂ ಇರುತ್ತವೆ. ಅಂದರೆ ಅವುಗಳ ವ್ಯಕ್ತ ರೂಪವು ಒಂದು ಬಗೆಯದೂ ಆಗಿರುತ್ತವೆ. ನಮ್ಮ ಆಲೋಚನೆ ಮತ್ತು ಅದರ ಸ್ವರೂಪವನ್ನು ಲೋಕ ದೃಷ್ಟಿಯು ಹೇಳುತ್ತದೆ. ಎದುರು ಇರುವ ವಾಸ್ತವ ಮತ್ತು ಅದರ ಗ್ರಹಿಕೆಗೆ ನಮಗೆ ಲೋಕದ ಗ್ರಹಿಕೆಯೂ ಬೇಕಾಗುತ್ತದೆ.

ವಾಸ್ತವ ಮತ್ತು ವಿಶ್ವಾತ್ಮಕತೆಗಳ ನಡುವೆ ದ್ವಂದ್ವಾತ್ಮಕತೆಯೂ ಇರುತ್ತದೆ. ಆದರೆ ಯಾವಾಗ ನಾವು ಪ್ರಗತಿಪರವಾದ ಚಿಂತನೆಯನ್ನು ಹೊಂದಿರುತ್ತೇವೆಯೋ ಆಗ ನಮ್ಮ ಆಲೋಚನೆಯೂ ಕೂಡಾ ಹೆಚ್ಚು ಮಾನವೀಯವಾಗಿರುತ್ತದೆ. ಆದರೆ ನಮಗೆ ಗೊತ್ತಿರಬೇಕಾದ ಅಂಶವೆಂದರೆ ಯಾವುದನ್ನು ನಾವು ಈವತ್ತು ತತ್ವಜ್ಞಾನವೆಂದು ಹೇಳುತ್ತೇವೆಯೋ ಅದು ಮೂಲಭೂತವಾಗಿ ವಿಶ್ವಾತ್ಮಕತೆ ಮತ್ತು ಅದರ ಅಂಶಗಳನ್ನು ಹೇಳುತ್ತವೆ. ಆದರೆ ತತ್ವಜ್ಞಾನ ಮತ್ತು ಅದರ ಗ್ರಹಿಕೆಯು ನಮಗೆ ಅತ್ಯಂತ ಅಗತ್ಯವಾಗಿದೆ. ಬಾಹ್ಯ ಮತ್ತು ಅದನ್ನು ನೋಡಲು ನಾವು ಅನುಸರಿಸುವ ವಿಧಾನವೂ ಅತ್ಯಂತ ಅಗತ್ಯವಾಗಿದೆ. ಬರಹವು ನಮಗೆ ಲೋಕ ಗ್ರಹಿಕೆಗೆ ಸಹಾಯವನ್ನು ಮಾಡುತ್ತದೆ. ಅದರಲ್ಲಿ ಚರಿತ್ರೆ ಮತ್ತು ಅದರ ನಡೆಗಳೂ ಇರುತ್ತವೆ. ಸಮಾಜ ಮತ್ತು ಅದರ ಗುಂಪು ನಮಗೆ ನಿರ್ದಿಷ್ಟವಾದ ಚಹರೆಯನ್ನು ಹೇಳುತ್ತವೆ. ನಾವು ಒಂದು ತತ್ವಜ್ಞಾನದ ಒಳಗೆ ಬದುಕುವುದು ಅತ್ಯಂತ ಅನಿವಾರ್ಯವೂ ಹೌದು. ಖಾಸಗಿ ಜೀವನ ಮತ್ತು ಅದರ ಅಭಿವ್ಯಕ್ತಿಯು ಕೂಡಾ ಅನೇಕ ತಂತ್ರ ಗಾರಿಕೆಯನ್ನು ಒಳಗೊಂಡಿರುತ್ತದೆ.

ಚರಿತ್ರೆ ಮತ್ತು ಲೋಕದೃಷ್ಟಿಯು ನಮಗೆ ಅತ್ಯಂತ ಅಗತ್ಯವಾಗುತ್ತದೆ. ಆದರೆ ಅದಕ್ಕೂ ಕೆಲವು ಮಿತಿಗಳು ಇರುತ್ತವೆ ಎನ್ನುವುದನ್ನು ಮರೆಯಬಾರದು. ವಾಸ್ತವವು ಅದರ ಸಾಧ್ಯತೆಯು ಭಿನ್ನವಾಗುತ್ತದೆ. ಈಗಿನ ನಮ್ಮ ಸಮಾಜ ಅದರ ವರ್ತಮಾನವು ಭಿನ್ನವಾಗುತ್ತದೆ. ಫ್ರಾಯ್ಡ್ ನಡತೆ ಮತ್ತು ಅದರ ಲಿಬಿಡಿನಲ್ ಸ್ವಭಾವವು ಬರಹವನ್ನು ನಿರ್ಧರಿಸುತ್ತದೆ. ಅದು ಸಾಂಸ್ಕೃತಿಕ ಸೃಜನಶೀಲತೆಗೆ ಕಾರಣವೂ ಆಗುತ್ತದೆ. ಅದು ಪ್ರಜ್ಞೆಗೆ ಸಂಬಂಧಪಟ್ಟದ್ದು. ಜೀವನ ಮತ್ತು ಅದರ ಸಾಧ್ಯತೆಯನ್ನು ನಿರ್ಧರಿಸುವುದು ನಿಜವಾಗಿಯೂ ಪ್ರಜ್ಞೆಯೇ. ಅನೇಕ ರಚನೆಗಳು

ಅನೇಕ ವಸ್ತುಗಳನ್ನು ಉತ್ಪಾದಿಸುತ್ತವೆ ಎಂದು ಗ್ರೇಮಾಸ್ ಹೇಳುತ್ತಾನೆ. ಭಾಷೆ ಮತ್ತು ಅದರ ರಚನೆಗಳು, ಚರಿತ್ರೆ ಮತ್ತು ಅದರ ರಚನೆಗಳು, ನಡತೆ ಮತ್ತು ಅದರ ಸ್ವರೂಪಗಳು ನಿರ್ದಿಷ್ಟವಾಗಿಯೇ ನಿರ್ಧಾರವಾಗುತ್ತವೆ. ಭಾವನೆಗಳು ಮತ್ತು ರಚನೆಗಳು ಜೊತೆಗೆ ಇರುತ್ತವೆ ಎಂದು ಫುಕೋ ಹೇಳುತ್ತಾನೆ. ಸಾಮಾಜಿಕ ಅಭ್ಯಾಸ ಮತ್ತು ಸಂಸ್ಥೆಗಳು ಭಾವನೆಗಳ ಸಂಕಥನಗಳು ನಿರ್ದಿಷ್ಟವಾದ ಆಲೋಚನೆಯನ್ನು ಹೇಳುತ್ತವೆ ಎಂದು ಸ್ಟುವರ್ಟ್ ಹಾಲ್ ಹೇಳುತ್ತಾನೆ.

ಅಲ್ತೂಸರ್ ಸಮಾಜ ಮತ್ತು ಅದರ ರಚನೆಯನ್ನು ಅದರ ಉತ್ಪಾದನೆಯ ಹಿನ್ನೆಲೆಯಲ್ಲಿ ನೋಡುತ್ತಾನೆ. ಮನುಷ್ಯ ಮತ್ತು ಅವನ ವರ್ತನೆಯೂ ಒಂದು ದೃಷ್ಟಿಯಲ್ಲಿ ರಚನೆಯೇ ಆಗಿದೆ. ಅದು ಮನಸ್ಸನ್ನು ಹೇಳುತ್ತದೆ. ಮಾರ್ಕ್ಸ್‌ವಾದವು ಈ ದೃಷ್ಟಿಯಲ್ಲಿ ಅತ್ಯಂತ ಮಹತ್ವದ ಅಂಶಗಳನ್ನು ಹೇಳುತ್ತದೆ. ಮನುಷ್ಯ ಮತ್ತು ಅವನ ಸೃಜನಶೀಲತೆಯನ್ನು ಈ ದೃಷ್ಟಿಯಲ್ಲಿ ನಾವು ಸಮಾಜ ಮತ್ತು ವ್ಯಕ್ತಿ ಸಂಬಂಧದ ವಿವರದಲ್ಲಿಯೇ ನೋಡಬೇಕಾಗುತ್ತದೆ. ಮನುಷ್ಯನಿಗೆ ಅವನು ಹೇಳುವ ಸಂಗತಿಗಳಿಗೆ ದ್ವಂದ್ವಾತ್ಮಕವಾದ ಸಂಬಂಧವೂ ಇದೆ. ಯಾವುದೇ ರೀತಿಯಲ್ಲಿ ನಾವು ಹೇಳಿದರೂ ನಮಗೂ ನಮ್ಮ ಬರಹಕ್ಕೂ ಸಮಾಜಕ್ಕೂ ಒಂದು ನಂಟು ಇದ್ದೇ ಇರುತ್ತದೆ. ವಾಸ್ತವವಾಗಿ ಅತ್ಯಂತ ಹೆಚ್ಚು ಚರ್ಚೆಗೆ ಒಳಗಾದ, ಗೋಲ್ಡ್‌ಮನ್ ಪ್ರತಿಪಾದಿಸಿದ ಜೆನೆಟಿಕ್ ಸ್ಟ್ರಕ್ಚುಲರಿಸಂ ಸಮಾಜವನ್ನು ಕೇಂದ್ರ ಮಾಡಿಕೊಂಡಿದೆ. ಅದು ಸಾಮಾಜಿಕ ಚಿಂತನೆ ಮತ್ತು ಸಾಹಿತ್ಯವನ್ನು ಹೇಳುತ್ತದೆ. ಸಾಮಾಜಿಕ ಜೀವನ ಮತ್ತು ಸಾಹಿತ್ಯವನ್ನು ಅದು ದ್ವಂದ್ವಾತ್ಮಕವಾಗಿಯೂ ಗ್ರಹಿಸುತ್ತದೆ. ವಾಸ್ತವವಾಗಿ ಯಾವುದೇ ರಚನೆಯು ನಿರ್ದಿಷ್ಟವಾಗಿ ಕೆಲವು ಸಂಗತಿಗಳನ್ನು ಹೇಳುತ್ತದೆ. ಅದು ಸಮಾಜವನ್ನು ಗ್ರಹಿಸುವ ಮತ್ತು ಅದರ ಅಗತ್ಯವನ್ನು ನಿರೂಪಿಸುವ ಕ್ರಮವೂ ಹೌದು. ಅದರಲ್ಲಿ ಇತ್ಯಾತ್ಮಕವಾದ ಅಂಶಗಳು ಇದ್ದೇ ಇರುತ್ತವೆ. ಅಂದರೆ ವಾಸ್ತವವಾದ ರಚನೆ ಮತ್ತು ಅದರ ಚಹರೆಗಳು ವಿಶಿಷ್ಟವೂ ಹೌದು. ಸಾಮಾಜಿಕ ಜೀವನ ಮತ್ತು ಅದರ ಅಗತ್ಯಕ್ಕೆ ತಕ್ಕಂತೆ ಬೇರೆ ಬೇರೆ ರೀತಿಯ ರಚನೆಗಳು ಇರುತ್ತವೆ. ಅದನ್ನು ನಾವು ಕಟ್ಟುತ್ತೇವೆ ಮತ್ತು ಅದನ್ನು ಒಡೆಯುತ್ತೇವೆ. ಅದು ಅಗತ್ಯವಾಗುತ್ತದೆ. ಜೀವನದ ಕೆಲವು ಅಂಶಗಳನ್ನು ಅದು ಹೇಳುತ್ತದೆ. ಹೇಗೆ ಬೇರೆ ಬೇರೆ ಸನ್ನಿವೇಶಗಳು ನಮ್ಮನ್ನು ನಿಯಂತ್ರಿಸುತ್ತದೆ. ಮತ್ತು ಹೇಗೆ ಬೇರೆ ಬೇರೆ ಸನ್ನಿವೇಶಗಳು ನಮ್ಮ ವಿವಿಧ ರಚನೆಗೆ ಕಾರಣವಾಗುತ್ತವೆ ಎನ್ನುವುದು ಮೂಲಭೂತವಾಗಿ ತಾತ್ವಿಕ ಪ್ರಶ್ನೆಗಳೇ ಆಗುತ್ತವೆ. ಬೇರೆ ಬೇರೆ ಸನ್ನಿವೇಶಗಳು ನಮಗೆ ಬೇರೆ ಅನುಭವದ ಅನುಭವನ್ನು ಕೊಡುವಾಗಲೂ ಅದು ಅರ್ಧ ರಚನೆಯು ಆಗಿರುವುದೇ ಇಲ್ಲ. ಅರ್ಧ ರಚನೆ ಅಥವಾ ಅರ್ಧ ಸಾಲು, ಅಥವಾ ಒಂದು ಅಕ್ಷರವು ಯಾವುದೇ ಸಂಗತಿಯನ್ನು ಹೇಳಲಾರದು. ಅಂದರೆ ಒಂದು ಸಣ್ಣ ಘಟಕ ಯಾವುದನ್ನು ನಿರೂಪಿಸುವುದೂ ಇಲ್ಲ. ಇಲ್ಲಿ ನಮಗೆ

ಅನೇಕ ಪ್ರಶ್ನೆಗಳು ಎದುರಾಗುತ್ತವೆ. ಘಟಕಗಳು ಮೂಲಭೂತವಾಗಿ ಯಾವುದನ್ನು ಸ್ವಯಂಸಂಪೂರ್ಣವಾಗಿಯೂ ಇರುವುದೂ ಇಲ್ಲ. ಕಾಲ ಮತ್ತು ಸನ್ನಿವೇಶಗಳು ಹಾಗೂ ತಾತ್ವಿಕತೆಗಳು ನಮಗೆ ರಚನೆಯನ್ನು ಕಟ್ಟಲು ಸಹಾಯವನ್ನು ಮಾಡುತ್ತವೆ. ರಚನೆ ಮತ್ತು ಅದರ ರೂಪವು ವಂಶವಾಹಿಯನ್ನು ಹೇಳುತ್ತವೆ. ಅಂದರೆ ಹಿಂದಿನ ರಚನೆ ಮತ್ತು ಅದರ ಪರಂಪರೆಯು ಮುಂದುವರಿಯುತ್ತವೆ. ಅದಕ್ಕೆ ಚಾರಿತ್ರಿಕತೆಯೂ ಇರುತ್ತದೆ. ಒಡೆಯುವುದು ಮತ್ತು ಪುನರ್ರಚಿಸುವುದು ನಮಗೆ ಅತ್ಯಂತ ಅಗತ್ಯವಾಗುತ್ತದೆ. ಹಾಗೆ ನೋಡುವುದಿದ್ದರೆ ಸಮಾಜ ಮತ್ತು ಅದರ ರಚನೆಗಳು ನಿಸರ್ಗವನ್ನು ವಿಶಿಷ್ಟವಾಗಿಯೇ ಹೇಳುತ್ತದೆ. ರಚನೆಯನ್ನು ಕುರಿತು ಚಾಮ್‌ಸ್ಕಿಯು ಮಾತಾಡುವಾಗ ಅದನ್ನು ಒಂದು ಗಣಿತದ ಥರ ನೋಡುತ್ತಾನೆ. ಅದನ್ನು ವೈಜ್ಞಾನಿಕವಾಗಿ ಪರಿಶೀಲನೆ ಮಾಡುತ್ತಾನೆ. (ನೋಡಿ ಫುಕೋ ರೀಡರ್ ಪುಟ 3)

ನಮ್ಮ ನಡತೆ ಮತ್ತು ಸಾಮಾಜಿಕ ನಡವಳಿಕೆಗಳು ಮೂಲಭೂತವಾಗಿ ಕೆಲವು ಸಂಗತಿಗಳನ್ನು ಹೇಳುತ್ತವೆ. ಹೇಗೆ ನಮ್ಮ ಸಮಾಜವು ಬದಲಾಗುತ್ತವೆ ಮತ್ತು ಯಾವ ರೀತಿಯಲ್ಲಿ ಬದಲಾಗುತ್ತದೆ ಮತ್ತು ಅದರ ಕಾರಣವು ಯಾವುದು ಎನ್ನುವುದೂ ಅಷ್ಟೇ ಮುಖ್ಯ. ಸಾಹಿತ್ಯ ಮತ್ತು ಅದರ ಸ್ವರೂಪವು ಹೇಗೆ ಬದಲಾಗುತ್ತದೆ ಮತ್ತು ಅದರ ಕಾರಣವು ಯಾವುದು ಯಾಕೆ ಬದಲಾಗುತ್ತದೆ ಎಂದು ಹೇಳಲು ನಮಗೆ ಜೋತಿಷ್ಯದ ಅಗತ್ಯವಿಲ್ಲ. ಅದರಲ್ಲಿ ನಾವು ಮತ್ತೆ ಬೇರೆ ಅಂಶಗಳನ್ನು ನೋಡಬೇಕಾಗುತ್ತದೆ. ಅದು ತರ್ಕ ರಹಿತವಲ್ಲ. ಅದರಲ್ಲಿ ಭಿನ್ನತೆಯು ಇರುತ್ತದೆ. ಹಾಗೂ ಅದರಲ್ಲಿ ನಿರ್ದಿಷ್ಟವಾದ ಆಶಯವು ಇರುತ್ತದೆ. ಲುಕಾಕ್ಸ್ ಸಾಹಿತ್ಯ ಮತ್ತು ಅದರ ಸ್ವರೂಪವು ಬದಲಾಗುವುದು ಸಾಮಾಜಿಕ ಅಗತ್ಯವೆಂದು ಹೇಳುತ್ತಾನೆ. ಆಶಯ ಮತ್ತು ಅದರ ಅರ್ಥವು ಬದಲಾಗುವುದು ಕೂಡಾ ಸಮಾಜಕ್ಕೆ ಲಗತ್ತಾಗಿಯೇ ಇರುತ್ತದೆ. ಆಶಯ ಮತ್ತು ಅದರ ಅಗತ್ಯಗಳು ಬೇರೆ ಬೇರೆ ಕಾರಣದಿಂದ ಅತ್ಯಂತ ಮಹತ್ವದ್ದೂ ಆಗುತ್ತದೆ. ಮಾನಸಿಕವಾದ ರಚನೆ ಮತ್ತು ಅದರ ಅಗತ್ಯಗಳು ನಮಗೆ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ಅಸ್ತಿತ್ವ ಮತ್ತು ಅದರ ಅಗತ್ಯಗಳೂ ಕೂಡಾ ಈ ದೃಷ್ಟಿಯಲ್ಲಿ ಭಿನ್ನವಾದ ಅರ್ಥವನ್ನು ಹೇಳುತ್ತವೆ. ಮಾನಸಿಕ ರಚನೆ ಮತ್ತು ಅದರ ಅರ್ಥವು ಈ ದೃಷ್ಟಿಯಿಂದ ಭಿನ್ನವಾದ ಒಂದು ಸಂಗತಿಯೂ ಆಗುತ್ತದೆ. ಚರಿತ್ರೆ ಮತ್ತು ಅದರ ವಾಸ್ತವ ನಮಗೆ ಈ ದೃಷ್ಟಿಯಲ್ಲಿ ಮಹತ್ವದ ಕೆಲವು ಸೂಚನೆಗಳನ್ನು ಕೊಡುತ್ತವೆ. ಮತ್ತು ಅದರಲ್ಲಿ ನಮಗೆ ಅನೇಕ ಅಂಶಗಳೂ ಇರುತ್ತವೆ. ಲೇಖಕನು ಅನೇಕವನ್ನು ತನ್ನ ಕೃತಿಯಲ್ಲಿ ಹೇಳುತ್ತಾನೆ. ಮತ್ತು ಅನೇಕವನ್ನು ಬಿಡುತ್ತಾನೆ. ಅದು ಅವನ ಆಯ್ಕೆಯೂ ಆಗಿರುತ್ತದೆ. ಯಾವುದನ್ನು ಈವತ್ತು

ಒಬ್ಬ ಲೇಖಕ ನೋಡುತ್ತಾನೆ ಮತ್ತು ಯಾವುದನ್ನು ನಿರಾಕರಿಸುತ್ತಾನೆ ಎನ್ನುವುದು ಮುಖ್ಯವಾದ ಪ್ರಶ್ನೆಯೂ ಆಗುತ್ತದೆ. ಸಾಹಿತ್ಯ ಮತ್ತು ಅದರ ಗುಣಮಟ್ಟವು ಬೇರೆ ಬೇರೆಯಾಗುವುದಕ್ಕೆ ಬೇರೆ ಬೇರೆ ಕಾರಣವೂ ಇರುತ್ತದೆ. ಅಂದರೆ ಸಾಹಿತ್ಯವನ್ನು ಮತ್ತು ಅದರ ಗುಣ ಮಟ್ಟವನ್ನು ಆಯಾ ಸಮಾಜವು ನಿರ್ಧಾರ ಮಾಡುತ್ತದೆ. ಒತ್ತಡ ಮತ್ತು ಅದರ ಅಭಿವ್ಯಕ್ತಿಯೂ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಆಗುತ್ತದೆ. ಲೇಖಕನು ಆಯ್ಕೆ ಮಾಡುವ ಪದಗಳು ಮತ್ತು ಮನಸ್ಸಿನ ಒತ್ತಡಗಳು ಕೆಲವು ಸೂಚನೆಗಳನ್ನು ಕೊಡುತ್ತವೆ. ಕೆಲವು ಗೆಶ್ಚರ್‌ಗಳು ನಮಗೆ ಈ ದೃಷ್ಟಿಯಲ್ಲಿ ಯಾವುದೇ ಮೇಲುನೋಟದ ತೀರ್ಮಾನವನ್ನು ಕೊಡಲು ಬಿಡುವುದೂ ಇಲ್ಲ. ಅರಿವು ಇಲ್ಲದೆಯೇ ಅನೇಕ ಗೆಶ್ಚರ್ ಬರುತ್ತದೆ. ಅದು ನಮ್ಮ ಸುಪ್ತವಾದ ಪ್ರಜ್ಞೆಯಲ್ಲಿ ಇರುತ್ತದೆ.

ವಾಸ್ತವವಾಗಿ ಈವತ್ತು ನಮ್ಮ ಪ್ರಶ್ನೆಗಳಲ್ಲಿ ವಿವಿಧತೆಯು ಇದೆ. ಆದರೆ ಇದು ಯಾವುದನ್ನು ಸೂಚಿಸುತ್ತದೆ ಎನ್ನುವುದು ಬಹಳ ಮುಖ್ಯ. ಪ್ರಜ್ಞೆ ಮತ್ತು ಅದರ ಸ್ವರೂಪವನ್ನು ಈವತ್ತು ನಾವು ನಮ್ಮ ಸಮಕಾಲೀನವಾದ ಸನ್ನಿವೇಶದಲ್ಲಿಯೇ ನೋಡಬೇಕಾಗುತ್ತದೆ. ಬರಹಕ್ಕೆ ಒಂದು ನಿಶ್ಚಿತವಾದ ಗುಣವಿದೆ. ಅದು ಆಲೋಚನೆ ಮತ್ತು ಅದರ ಸಂಕೇತವನ್ನು ಹೇಳುತ್ತದೆ. ಮತ್ತು ಯಾವುದು ಆಲೋಚನೆಯಾಗಿದೆಯೋ ಅದರ ಸ್ವರೂಪವನ್ನು ಬರಹವು ಹೇಳುತ್ತದೆ. ಅದು ಅಗತ್ಯವಾದ ಪ್ರಕ್ರಿಯೆಯೂ ಹೌದು. ಆಲೋಚನೆ ಮತ್ತು ಅದರ ಕ್ರಿಯಾಶೀಲತೆಯು ಅತ್ಯಂತ ಅಗತ್ಯವಾದ ಒಂದು ಪ್ರಕ್ರಿಯೆಯೂ ಆಗಿರುತ್ತದೆ. ಅದರ ಅಗತ್ಯಗಳೂ ಕೂಡಾ ಭಿನ್ನವಾದ್ದು ಸತ್ಯ. ಆಲೋಚನೆಯು ವ್ಯಕ್ತಿಯದೂ ನಿಜ. ಆದರೆ ಇಲ್ಲಿ ಅತ್ಯಂತ ಸೂಕ್ಷ್ಮವಾಗಿ ಗಮನಿಸಬೇಕಾದ ಕೆಲವು ಅಂಶಗಳೂ ಇವೆ. ಸಾಹಿತ್ಯವೇ ಆಗಲೀ ಇತರ ಸಂಗತಿಗಳೇ ಆಗಲಿ, ಅವುಗಳು ಮೂಲರೂಪವಾಗಿ ಪ್ರಾಯೋಗಿಕ ಮತ್ತು ನೈತಿಕವಾದ ಅನೇಕ ತಿಳುವಳಿಕೆಯನ್ನು ಹೇಳುತ್ತದೆ. ಯಾವುದು ನಮ್ಮನ್ನು ನಿರ್ದಿಷ್ಟವಾಗಿ ರೂಪುಗೊಳಿಸುತ್ತದೆ ಮತ್ತು ಅದು ಯಾಕೆ ಹಾಗೆ ರೂಪಿಸುತ್ತದೆ ಎಂದು ತಿಳಿಯಬೇಕಾಗುತ್ತದೆ. ಜೀವನ ಮತ್ತು ಮನಸ್ಸಿಗೆ ಸಂಬಂಧವೂ ಇದೆ. ಅಂದರೆ ಲೇಖಕನ ಜೀವನವನ್ನು ತಿಳಿಯದೆ ನಾವು ಅನೇಕವನ್ನು ಅರ್ಥಮಾಡಿಕೊಳ್ಳಲಾರೆವು. (ವಿವರಗಳಿಗೆ ನೋಡಿ : ಫುಕೋ – ದ ಆರ್ಕ್ಯಾಯಲಜಿ ಆಫ್ ನಾಲೆಜ್ – ದ ಯುನಿಟೀಸ್ ಆಫ್ ಡಿಸ್ಕೋರ್ಸ್)

ನಮ್ಮ ಜೀವನದಲ್ಲಿ ಯಾವುದು ಹೆಚ್ಚು ಪ್ರಭಾವಶಾಲಿಯೂ ಆಗಿದೆ ಎಂದರೆ ಹೇಳುವುದು ಅತ್ಯಂತ ಕಷ್ಟವೂ ಹೌದು. ವ್ಯಕ್ತಿಯನ್ನು ಯಾವುದು ಬರೆಯುವಂತೆ ಮಾಡಿದೆ ಮತ್ತು ಅವನು ಯಾಕೆ ಹಾಗೆ ಬರೆಯುತ್ತಾನೆ ಎನ್ನುವುದನ್ನು ಕೇಳಿದರೆ ಅದನ್ನು ವಿವರಿಸುವುದು ಅತ್ಯಂತ ಕಷ್ಟವೂ ಆಗಿದೆ. ಅಂದರೆ ಬರಹವು ಮನಸ್ಸನ್ನು

ಹೇಳುತ್ತದೆ. ಮತ್ತು ಅದರಲ್ಲಿ ಜೀವನದ ಅನೇಕ ಸಂಗತಿಗಳೂ ಇರುತ್ತವೆ. ವ್ಯಕ್ತಿ ಮತ್ತು ಅವನ ಮನೋಸ್ಥಿತಿಯು ಸಂಕೀರ್ಣವಾದ್ದು. ಮನಸ್ಸು ಮತ್ತು ಅದರ ಪರಿಣಾಮ ಹಾಗೂ ಅದರ ಕಾರ್ಯ ವ್ಯವಸ್ಥೆಯು ಸುಲಭವಾದ ಒಂದು ಪ್ರಕ್ರಿಯೆಯು ಅಲ್ಲ. ಓದುವುದು ಅಂದರೆ ಈ ದೃಷ್ಟಿಯಲ್ಲಿ ಬರೀ ಓದುವುದು ಮಾತ್ರವೇ ಅಲ್ಲ. ಅದು ಒಂದು ಮನೋಸ್ಥಿತಿಯ ಜತೆಗೆ ಅನುಸಂಧಾನವನ್ನು ಮಾಡುವ ಕ್ರಮವೂ ಆಗಿದೆ. ಅಂದರೆ ಅದರಲ್ಲಿ ವ್ಯತ್ಯಾಸವಿದೆ. ಸಂಘರ್ಷವಿದೆ. ಅನುಸಂಧಾನವೂ ಇದೆ.

ಓದುವುದು ಈ ಅರ್ಥದಲ್ಲಿ ಬರೀ ಅಕ್ಷರದ ಜೊತೆಗೆ ನಾವು ನಡೆಸುವ ಯಾಂತ್ರಿಕವಾದ ಒಂದು ಸಂಗತಿಯಲ್ಲ. ಬರಹ ಮತ್ತು ಅದರ ಸಂಕೇತಗಳನ್ನು ನಾವು ಈ ದೃಷ್ಟಿಯಿಂದ ಬರೀ ವ್ಯವಸ್ಥೆ ಎಂದು ಭಾವಿಸದೆ ಅದನ್ನು ನಾವು ಈಗ ನಮ್ಮ ಸಾಂಕೇತಿಕವಾದ ಒಂದು ಜೀವನದ ಬಹಳ ಮುಖ್ಯವಾದ ಒಂದು ಚಟುವಟಿಕೆಯೆಂದು ಭಾವಿಸಬೇಕಾಗುತ್ತದೆ. ಬರಹವನ್ನು ನಾವು ಮನಸ್ಸು ಮತ್ತು ಅದರ ಪ್ರಕ್ರಿಯೆ ಎಂದೂ ಭಾವಿಸಬೇಕಾಗುತ್ತದೆ. ಅದು ಸಮಾಜದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮನುಷ್ಯನು ಅದನ್ನು ಉತ್ಪಾದಿಸುತ್ತಾನೆ. ಅವನಿಗೆ ಅದು ಅತ್ಯಂತ ಮುಖ್ಯವಾದ ಪ್ರಕ್ರಿಯೆಯೂ ಆಗಿದೆ. ಬರಹವನ್ನು ಓದುವುದು ಅಂದರೆ ಅದು ವ್ಯಕ್ತಿ ಮತ್ತು ಅವನ ಚಟುವಟಿಕೆಯನ್ನು ಅರ್ಥಮಾಡಿಕೊಳ್ಳುವ ಒಂದು ಕೆಲಸವೇ ಆಗಿದೆ. ವ್ಯಕ್ತಿ, ಮನೋಸ್ಥಿತಿ, ಚರಿತ್ರೆ, ಸಮಾಜಗಳ ನಡುವೆ ಒಂದು ನಿರ್ಣಾಯಕವಾದ ಸಂಬಂಧವೂ ಇದೆ. ಬಯಕೆಯು ಕೆಲವನ್ನು ಉತ್ಪಾದಿಸುತ್ತದೆ. ಮತ್ತು ಅದಕ್ಕೆ ಕೆಲವು ಕಾರಣಗಳೂ ಇರುತ್ತವೆ. ಮನುಷ್ಯ ಮತ್ತು ಅವನ ಗುಣವು ಅನೇಕ ಸಂದರ್ಭದಲ್ಲಿ ಕ್ರಿಯಾಶೀಲವೂ ಅಗಿರುತ್ತದೆ. ಮನುಷ್ಯ ಮತ್ತು ಅವನ ಗುಣ ಸ್ವಭಾವಗಳು ಈ ಕಾರಣದಿಂದ ಚಾರಿತ್ರಿಕವಾಗಿಯೂ ಕಟ್ಟಲ್ಪಟ್ಟಿರುತ್ತವೆ. ಮತ್ತು ಯಾವುದನ್ನು ಸಾಹಿತ್ಯ ಮತ್ತು ಅದರ ಸಂಯೋಜನೆ ಎಂದು ಹೇಳುತ್ತೇವೆಯೋ ಅದು ಕೂಡಾ ಬೇರೆ ಬೇರೆ ವಿಧವಾದ ಚಹರೆಯನ್ನು ಪಡೆದುಕೊಂಡಿರುತ್ತವೆ. ಖಿನ್ನತೆ ಮತ್ತು ನೋವುಗಳೂ ಮನುಷ್ಯನನ್ನು ಬರೆಯುವಂತೆ ಪ್ರೇರಣೆಯನ್ನು ನೀಡುತ್ತದೆ. ಅದು ಅವನಿಗೆ ಒಂದು ಬಿಡುಗಡೆಯೂ ಆಗಿದೆ. ಮನುಷ್ಯನು ಯಾವ ಪರಿಸರದಲ್ಲಿ ಬದುಕುತ್ತಾನೆಯೋ ಅದು ಕೂಡಾ ಪ್ರಭಾವಶಾಲಿಯಾಗಿದೆ. ಪರಿಸರದ ರಚನೆಯು ನಮಗೆ ಬೇಕಾದ ಅನೇಕವನ್ನು ಬರೆಯಲಿಕ್ಕೆ ಅವಕಾಶವನ್ನು ಕೊಡುತ್ತದೆ. ಅಂದರೆ ಅದರಲ್ಲಿ ಪಥ್ಯ ಮತ್ತು ಸಾಮಾಜಿಕ ಸತ್ಯಗಳ ಪ್ರಶ್ನೆಯೂ ಬರುತ್ತದೆ.

ಸಾಮಾಜಿಕ ಸನ್ನಿವೇಶವನ್ನು ನೋಡಿಕೊಂಡು ಲೇಖಕನು ಬರೆಯುತ್ತಾನೆ. ಸನ್ನಿವೇಶವೆಂದರೆ ಅದು ಸಾಮಾಜಿಕ ಸತ್ಯಗಳ ಪ್ರಶ್ನೆ. ಅದರಲ್ಲಿ ಕಲ್ಪಿತವಾದುದು ಇರಬಹುದು ಆದರೆ ಅದು ಅಷ್ಟು ಮಾತ್ರವೇ ಆಗಿರುವುದೂ ಇಲ್ಲ. ಅದರಲ್ಲಿ ಭಿನ್ನವಾದ ಅನೇಕ ಸಮಸ್ಯೆಗಳು ಸೇರಿಕೊಂಡಿರುತ್ತವೆ. ನಾವು ನಮ್ಮ ಪರಿಸರ

ಮತ್ತು ಅದರ ರಚನೆಗಳ ಮೂಲಕವೇ ಅನೇಕವನ್ನು ಗ್ರಹಿಸುತ್ತೇವೆ. ಅದು ನಮಗೆ ಅನೇಕವನ್ನು ಹೇಳುತ್ತದೆ.

ಆದರೆ ಮನೋವೈಜ್ಞಾನಿಕ ವಿಮರ್ಶೆಯು ಸುಪ್ತಪ್ರಜ್ಞೆ ಮತ್ತು ಅದರ ಅಭಿವ್ಯಕ್ತಿಯನ್ನು ಗ್ರಹಿಸುತ್ತದೆ. ಆದರೆ ಇದರಲ್ಲಿ ನಾವು ಬಯಕೆ ಮತ್ತು ಅಭಿವ್ಯಕ್ತಿಯನ್ನು ನೋಡುವಾಗ ಬರೀ ಅಭಿವ್ಯಕ್ತಿಯನ್ನು ಮಾತ್ರವೇ ಗ್ರಹಿಸಿದರೆ ಸಾಕಾಗುವುದೂ ಇಲ್ಲ. ಈಡಿಪಸ್ ನಾಟಕದಲ್ಲಿ ಬರುವ ಅವನ ಪಾತ್ರವನ್ನು ಗ್ರಹಿಸಲು ನಮಗೆ ಬರೀ ಸಾಂಪ್ರದಾಯಿಕವಾದ ವಿಮರ್ಶೆಯು ಉಪಯುಕ್ತವಲ್ಲ. ಸಾಹಿತ್ಯದ ಅನೇಕ ಕೃತಿಗಳು ನಮಗೆ ಅಂತರಂಗವನ್ನು ಹೇಳುತ್ತವೆ. ಅದು ಬಹಳ ಅಗತ್ಯವೂ ಆಗಿರುತ್ತದೆ. ಆದ್ದರಿಂದಲೇ ಅನೇಕ ಸಾಂಪ್ರದಾಯಿಕವಾದ ವಿಮರ್ಶೆಯು ತಳೆಯುವ ಅನೇಕ ನಿರ್ಣಯಗಳು ನಮಗೆ ಬರೀ ಶೈಕ್ಷಣಿಕ ಅಗತ್ಯದಂತೆ ಕಾಣಿಸುತ್ತವೆ. ಸಮಾಜಶಾಸ್ತ್ರೀಯವಾದ ದೃಷ್ಟಿಕೋನದಲ್ಲಿ ಮನೋಸ್ಥಿತಿ ಮತ್ತು ಅದರ ಸಾಮಾಜಿಕ ನಿಲುವುಗಳ ಅಗತ್ಯವೂ ಇರುತ್ತದೆ. ಕೃತಿಯಲ್ಲಿ ಬರುವ ಪಾತ್ರಗಳು ಮತ್ತು ಅವುಗಳ ಸ್ವಭಾವಗಳು ಮನಸ್ಸು ಮತ್ತು ಅದರ ಪರಿಣಾಮವನ್ನು ಹೇಳುತ್ತವೆ. ಆದರೆ ಅದರ ಜೊತೆಗೆ ಅವುಗಳು ಕೃತಿಯಲ್ಲಿ ಹೇಗೆ ಹಾಜರಾಗುತ್ತವೆ ಎನ್ನುವುದನ್ನೂ ನೋಡಬೇಕಾಗುತ್ತದೆ. ಅವುಗಳು ಒಂದು ರೀತಿಯಿಂದ ಭೌತಿಕವಾದ ಅಸ್ತಿತ್ವವನ್ನು ಪಡೆಯುತ್ತವೆ. ಮತ್ತು ಅವುಗಳ ಸ್ವಭಾವ ಮತ್ತು ವರ್ತನೆಗಳಿಗೆ ನಿರ್ದಿಷ್ಟವಾದ ಒಂದು ಅರ್ಥವೂ ಇರುತ್ತದೆ. ಅಂದರೆ ಅವುಗಳಿಗೆ ಇರುವ ಅರ್ಥವು ಮನಸ್ಸು ಮತ್ತು ಅದರ ನಿರೂಪಣೆಯನ್ನು ಮಾಡುತ್ತವೆ. ವಸ್ತು ಮತ್ತು ಅದರ ಆಯ್ಕೆಯು ಸಮಾಜವನ್ನು ಹೇಳುತ್ತದೆ ಎನ್ನುವುದು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ.

ನಮ್ಮ ಗಮನವು ಇರಬೇಕಾದ್ದು ಈ ದೃಷ್ಟಿಯಿಂದ ಕೃತಿ ಮತ್ತು ಅದರ ವಸ್ತುವುದು ಯಾವ ರೀತಿಯದು ಎನ್ನುವುದರ ಬಗೆಗೆ. ನಮಗೆ ಮನುಷ್ಯ ಮತ್ತು ಅವನ ನಿಜವಾದ ಸ್ವರೂಪವು ಮುಖ್ಯವಾಗುತ್ತದೆ. ಅದನ್ನು ಲೇಖಕನು ಹೇಗೆ ಹೇಳುತ್ತಾನೆ ಮತ್ತು ಅದನ್ನು ಅವನು ಹೇಳುವಾಗ ತಳೆಯುವ ನಿಲುವು ಯಾವುದು ಎನ್ನುವುದು ಮಾತ್ರವೇ ಮುಖ್ಯವಾಗುತ್ತದೆ. ಮನೋಸ್ಥಿತಿಯೆನ್ನುವುದು ನಿಜವಾಗಿಯೂ ನಿರ್ಮಾಣವಾಗುತ್ತದೆ. ಮತ್ತು ಅದು ಸಮಾಜ ಮತ್ತು ಪರಿಸರವನ್ನು ಅವಲಂಬಿಸುತ್ತದೆ. ಅದರಲ್ಲಿ ವ್ಯಕ್ತವಾಗುವುದು ಜೀವನ ಮತ್ತು ಅದರ ಅರ್ಥಗಳು ಮಾತ್ರವೇ. ಲೇಖಕ ಮತ್ತು ಅವನ ಮನೋಭಾವವು ಹೀಗೆ ಬೇರೆ ಬೇರೆ ರೀತಿಯಲ್ಲಿ ರೂಪುಗೊಳ್ಳುತ್ತದೆ. ಲೇಖಕನು ಸಮಾಜ ಮತ್ತು ಬಾಹ್ಯದ ಅನೇಕ ನಿಯಮವನ್ನು ಮೀರಿ ಇರುವುದು ಸಾಧ್ಯವಿಲ್ಲ. ಅವನು ಅದರ ಮೂಲಕವೇ ಅನೇಕವನ್ನು ಗ್ರಹಿಸುತ್ತಾನೆ. ಅದನ್ನು ಕ್ಷಣಗಳು ಮತ್ತು ಅದರ ಅರಿವು ಎಂದೂ ಹೇಳಬೇಕಾಗುತ್ತದೆ. ಅದರ ಜೊತೆಗೆ ಕೆಲವು ರೀತಿಯಲ್ಲಿ ಕೇಂದ್ರಗಳು ಇರುತ್ತವೆ. ಯಾವುದನ್ನು ಲೇಖಕ ಕೇಂದ್ರ

ಮಾಡಿಕೊಳ್ಳುತ್ತಾನೆ ಮತ್ತು ಅದರ ಮೂಲಕ ಅವನು ನಿರೂಪಿಸುವ ಸಂಗತಿಗಳು ಯಾವುವು ಎನ್ನುವುದು ಮಾತ್ರವೇ ಬಹಳ ಮುಖ್ಯ. (ವಾಟ್ ಇಸ್ ಎನ್ ಆಥರ್)

ಸಮಾಜ ಮತ್ತು ಅದರ ಅರಿವು ಹೆಚ್ಚು ಅಗತ್ಯವೂ ಆಗುತ್ತದೆ. ನಮಗೆ ಸಾಮಾಜಿಕ ಜೀವನ ಮತ್ತು ಅದರ ವಾಸ್ತವವಾದ ಅರಿವು ಇರಬೇಕಾಗುತ್ತದೆ. ವಾಸ್ತವವು ಕೆಲವನ್ನು ನಿರ್ಮಾಣ ಮಾಡುತ್ತದೆ. ಅದು ಅಗತ್ಯವೂ ಆಗಿರುತ್ತದೆ. ಯಾಕೆಂದರೆ ನಿಜವೆನ್ನುವುದು ನಮಗೆ ಅಗತ್ಯವಾದ ಒಂದು ಪರಿಕರವೂ ಆಗಿದೆ. ಅನೇಕ ಅಂಶಗಳನ್ನು ರಚನೆಯು ನಿರ್ಮಾಣ ಮಾಡುತ್ತದೆ. ಮತ್ತು ಅದುವೇ ವಾಸ್ತವವಾದ ಸೂಚನೆಯನ್ನು ಕೊಡುವುದೂ ನಿಜ. ರಚನೆ ಮತ್ತು ಅದಕ್ಕೆ ಯಾವುದನ್ನು ನಾವು ಅನ್ವಯಿಸಬೇಕು ಎನ್ನುವುದೇ ಮುಖ್ಯ. ಯಾವುದು ಹೊಸತು ಮತ್ತು ಯಾವುದು ಅತ್ಯಂತ ಹಳೆಯದು ಎನ್ನುವುದೂ ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಹಳೆಯ ರಚನೆಗೆ ಹೊಸದಾದ ಅಂಶಗಳು ಸೇರಿಕೊಂಡು ಮತ್ತೆ ಹೊಸದಾದ ರಚನೆಯು ಆಗುತ್ತದೆ. ಅಂದರೆ ರಚನೀಕರಣ ಮತ್ತು ನಿರಚನೀಕರಣದ ಪ್ರಕ್ರಿಯೆಗಳು ನಡೆಯುತ್ತವೆ. ಆಂಶಿಕ ಅಗತ್ಯ ಮತ್ತು ಅದರ ಪುನರೂಪೀಕರಣವನ್ನು ನಾವು ಬೇರೆ ರೀತಿಯಲ್ಲಿಯೂ ನೋಡಬೇಕಾಗುತ್ತದೆ. ಅಂದರೆ ಅದರಲ್ಲಿ ಮೌಲ್ಯ ಮತ್ತು ಅದರ ಸ್ವರೂಪವನ್ನು ಈ ದೃಷ್ಟಿಯಿಂದ ಗಮನಿಸಬೇಕಾಗುತ್ತದೆ. ಮತ್ತೊಂದು ಅಂಶವೂ ಇದೆ. ಕೆಲವು ಸಾಮಾಜಿಕ ಅಂಶಗಳು ಚರಿತ್ರೆ ಮತ್ತು ಅದರ ಪರಿಣಾಮದಿಂದ ಹುಟ್ಟಿರುತ್ತವೆ. ಅವುಗಳಿಗೆ ಅವುಗಳೇ ಆದ ಅರ್ಥವೂ ಇರುತ್ತದೆ. ವಾಸ್ತವವಾಗಿ ಯಾವುದನ್ನು ಸಮಾಜವೆಂದು ಕರೆಯುತ್ತಿದ್ದೇವೆಯೋ ಅದು ರಚನೆಯು ಆಗಿದೆ. ಅದರಲ್ಲಿ ಕೆಲವು ಸಂಗತಿಗಳು ಸೇರ್ಪಡೆಯು ಆಗುತ್ತದೆ. ಮತ್ತು ಕೆಲವು ಸಂಗತಿಗಳು ನಿರಾಕರಣೆಗೆ ಗುರಿಯಾಗುತ್ತವೆ. ಅಂದರೆ ನಿರಾಕರಣೆ ಮತ್ತು ಹೊಸ ರಚನೆಗಳ ನಡುವೆ ಬೇರೆ ಬೇರೆ ಸಂಗತಿಗಳು ಸೇರುತ್ತವೆ. ಯಾವುದನ್ನು ಯಾವುದಕ್ಕೆ ಅನ್ವಯಿಸಬೇಕಿದೆ ಎಂದು ನಾವು ಯೋಚನೆಯನ್ನು ಮಾಡಬೇಕಾಗುತ್ತದೆ. ಯಾವುದೇ ಸಮಾಜಕ್ಕೆ ಹೊಸತು ಸೇರಿದರೆ ಅದರಲ್ಲಿ ಬದಲಾವಣೆಯು ಆಗುತ್ತದೆ. ಅದರಲ್ಲಿ ಹೊಸತು ಸೇರ್ಪಡೆಯಾದರೆ ಹೊಸತು ಕಾಣಿಸಿಕೊಳ್ಳುತ್ತದೆ. ಹೊಸ ಅಂಶಗಳು ಹೊಸದಾದ ರಚನೆಗೆ ಕಾರಣವೂ ಆಗುತ್ತದೆ. ಬೇರೆ ಬೇರೆ ರಚನೆಗಳು ಅವುಗಳ ಸ್ವರೂಪವನ್ನು ನೋಡುವಾಗ ನಾವು ಅದರ ಹಿನ್ನೆಲೆಯನ್ನೂ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಸನ್ನಿವೇಶ ಮತ್ತು ರಚನೆಗಳಿಗೆ ದ್ವಂದ್ವಾತ್ಮಕತೆಯೂ ಇರುತ್ತದೆ. ಹೊಸಮೌಲ್ಯವು ಬರುವಾಗ ಅದರ ಅರ್ಥವೂ ಬೇರೆಯಾಗುತ್ತದೆ ಮತ್ತು ಹೊಸತರ ಜೊತೆಗೆ ಮುಖಾಮುಖಿಯೂ ಆಗುತ್ತದೆ. ಹೊಸತು ಮತ್ತು ಹಳೆಯದರ ನಡುವೆ ಸಂಘರ್ಷವಾಗುತ್ತದೆ. ಮೌಲ್ಯ ಮತ್ತು ವಿವರಣೆಗಳ ನಡುವೆಯೇ ಕೆಲವು ಸಂಗತಿಗಳು ನಡೆಯತ್ತವೆ. ಜ್ಞಾನಕ್ಕೆ ಮತ್ತು ವಾಸ್ತವಕ್ಕೆ ಈ ಬಗೆಯ ಸಂಬಂಧವು ಇರುತ್ತದೆ. (ಫುಕೋ ಅಂಡ್ ದ ರಿಯಾಲಿಟಿ ಸಾಗಾ ಜರ್ನಲ್ಸ್)

ರಚನೆಯು ವಾಸ್ತವವಾಗಿ ವಿಶ್ವಾತ್ಮಕತೆಯ ಜೊತೆಗೆ ಸಂಬಂಧವನ್ನು ಕಲ್ಪಿಸುತ್ತವೆ. ಮತ್ತು ಅದರ ಅಗತ್ಯವೂ ಇದೆ. ಒಂದು ಚಾರಿತ್ರಿಕ ರಚನೆಯು ಮತ್ತೊಂದು ರಚನೆಯೊಂದಿಗೆ ಹೊಂದಾಣಿಕೆಯನ್ನೂ ಮಾಡಿಕೊಳ್ಳುತ್ತವೆ. ಆದರೆ ರಚನೆಯೂ ಕೂಡಾ ಒಂದು ರೀತಿಯಲ್ಲಿ ಹೊಂದಾಣಿಕೆಯೂ ಆಗುತ್ತದೆ. ಯಾಕೆಂದರೆ ಅದು ಗುಂಪಿನಿಂದ ಕೂಡಿರುತ್ತವೆ. ರಚನೆಯು ಕೂಡಾ ಒಂದು ಬಗೆಯ ಅಭಿವ್ಯಕ್ತಿಯೂ ಹೌದು. ಅದನ್ನು ಕಲೆ ಮತ್ತು ತತ್ವಜ್ಞಾನವು ಹೇಳುತ್ತದೆ. ಮತ್ತು ಸಾಹಿತ್ಯ ಮತ್ತು ಅದರ ರಚನೆಗಳು ಮೂಲಭೂತವಾಗಿ ಒಂದು ಪ್ರತಿಕ್ರಿಯೆಯೂ ಹೌದು. ಸಾಹಿತ್ಯ ಮತ್ತು ಅದರ ರಚನೆಯು ಮಾತ್ರವೇ ಸಂವಾದದ ಬಗೆಯದೂ ಹೌದು. ಅದನ್ನು ಮನಸ್ಸು ಮತ್ತು ಅದರ ರಚನೆಯೊಂದಿಗೆ ನೋಡಬೇಕಾಗುತ್ತದೆ. ಮನಸ್ಸು ಮತ್ತು ಅದರ ರಚನೆಯು ಯಾವಾಗಲೂ ವ್ಯಕ್ತಿಯಿಂದ ರಚಿತವಾಗುತ್ತದೆ. ಮತ್ತು ಅದರಲ್ಲಿ ಅವನ ಅಭಿಪ್ರಾಯವೂ ಸೇರಿಕೊಂಡಿರುತ್ತದೆ. ಸ್ವಗತ ಮತ್ತು ಅದರ ಮಾದರಿಗಳು ಒಂದು ರೀತಿಯಲ್ಲಿ ಇರುತ್ತವೆ. ಸಂವಾದವು ಮತ್ತೊಂದು ಬಗೆಯಲ್ಲಿ ಇರುತ್ತವೆ. ಆದರೆ ಅವರೆಡೂ ಲೋಕ ಮತ್ತು ಅದರ ಸತ್ವವನ್ನು ಹೇಳುತ್ತವೆ. ವಾಸ್ತವ ಎನ್ನುವುದು ಯಾವಾಗಲೂ ಒಂದು ಬಗೆಯಲ್ಲಿ ಇರುವುದಿಲ್ಲ. ಅದು ಅನೇಕ ರೀತಿಯಲ್ಲಿ ಇರುತ್ತದೆ. ನಮಗೆ ಯಾವುದು ಕಾಣುತ್ತದೆಯೋ ಅದು ಮಾತ್ರವೇ ವಾಸ್ತವವು ಅಲ್ಲ.

ಸಾಹಿತ್ಯ ಮತ್ತು ಅದರ ಅಭಿವ್ಯಕ್ತಿಯು ಈ ದೃಷ್ಟಿಯಲ್ಲಿ ಭಿನ್ನವಾದುದೂ ಹೌದು. ಅದರ ಹಿಂದೆ ರಾಜಕಾರಣ, ಸಮಾಜ, ಮನೋವಿಜ್ಞಾನ ಮತ್ತು ಇತರ ಅಂಶಗಳೂ ಸೇರಿಕೊಂಡು ಬೇರೆ ಸಂಗತಿಗಳನ್ನು ಹೇಳುತ್ತವೆ. ಹಾಗೆ ನೋಡುವುದಿದ್ದರೆ ಬರೆಯುವುದು ಮತ್ತು ಓದುವುದು ಎರಡೂ ಸಮಾಜ ಮತ್ತು ಅದರ ಪ್ರತಿಕ್ರಿಯೆಗಳೇ ಆಗಿರುತ್ತವೆ. ಓದುವುದು ಅಂದರೆ ಒಂದು ನಿರ್ದಿಷ್ಟವಾದ ರೀತಿಯ ಸಂಬಂಧವನ್ನು ನಾವು ಸ್ಥಾಪಿಸಿಕೊಳ್ಳುವುದೂ ನಿಜ. ಬರೆಯುವುದು ಮತ್ತು ಓದುವುದೂ ಕೂಡಾ ಸಮಾಜವನ್ನು ಹೇಳುತ್ತವೆ. ಸಾಹಿತ್ಯ ಮತ್ತು ಅದರೊಡನೆ ನಾವು ಸಂಬಂಧವನ್ನು ಸ್ಥಾಪಿಸಿಕೊಳ್ಳುವುದು ಅಂದರೆ ನಿಜವಾದ ಅರ್ಥದಲ್ಲಿ ಸಮಾಜ ಮತ್ತು ಅದರ ಜೊತೆಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದೂ ಹೌದು. ಆದರೆ ಸಾಹಿತ್ಯವನ್ನು ಕಲಿಸುವ ಸಂಸ್ಥೆಗಳು ಕೆಲವನ್ನು ಓದಲು ಸೂಚಿಸುತ್ತವೆ. ಆದರೆ ಸಾಹಿತ್ಯ ಮತ್ತು ಇತರ ರಚನೆಗಳಿಗೆ ಕೆಲವು ರೀತಿಯ ಪ್ರಾಶಸ್ತ್ಯವಿರುತ್ತದೆ. ಸಮಾಜ ಮತ್ತು ಅದರ ಚಹರೆಗಳು ಬದಲಾಗುತ್ತಾ ಬಂದಂತೆ ಅದರ ಪರಿಣಾಮವು ಕಲೆಯ ಮೇಲೆ ಆಗುತ್ತದೆ. ಅದು ಅನಿವಾರ್ಯವೂ ಆಗುತ್ತದೆ. ಸಾಹಿತ್ಯವನ್ನು ಒಂದು ಅನನ್ಯವಾದ ಘಟಕವೆಂದು ಹೇಳಬೇಕಾಗಿಯೂ ಇಲ್ಲ. ಅದು ಭಿನ್ನವಾಗುತ್ತದೆ. ಅದರ ಅರ್ಥವೂ ಬೇರೆಯಾಗುತ್ತದೆ. ಕಾದಂಬರಿಯು ನಿಜವಾಗಿಯೂ ನಿರ್ದಿಷ್ಟವಾದ ಓದುಗರನ್ನು ಸೆಳೆದಿದೆ. ಮತ್ತು ಹೀಗೆ ಸೆಳೆದ ಸಂಗತಿಗಳಲ್ಲಿ ಕಾವ್ಯವೂ ಸೇರಿತ್ತದೆ. ಕಾವ್ಯದ ರಚನೆಗೆ

ಕೇಳುಗರೂ ಕಾರಣ. ಅದು ಹೊಸ ಓದುಗರನ್ನು ಸೆಳೆಯಿತು ಮತ್ತು ಅದರಲ್ಲಿ ಹೊಸದಾದ ಅಗತ್ಯಗಳೂ ಇದ್ದವು. ಅಂದರೆ ಅವುಗಳನ್ನು ನಾವು ನೋಡಿಕೊಳ್ಳುವ ಕ್ರಮಗಳು ಭಿನ್ನವಾಗುತ್ತವೆ. ಸಾಹಿತ್ಯ ಮತ್ತು ಸಮಾಜದ ಸಂಬಂಧವನ್ನು ಅರ್ಥಮಾಡಿಕೊಳ್ಳಲು ನಮಗೆ ಸರಿಯಾದ ಪರಿಕರವು ಇಲ್ಲದೆ ಹೋದರೆ ಅದು ವಿಫಲವಾಗುತ್ತದೆ. ಅದನ್ನು ಗ್ರಹಿಸಲು ನಮಗೆ ಬುದ್ಧಿಜೀವಿಗಳ ಚರಿತ್ರೆಯೂ ಅಗತ್ಯವಿದೆ.

ಆಯ್ಕೆ ಮತ್ತು ಪರಿಸರ ಹಾಗೂ ವ್ಯಕ್ತಿತ್ವ ಮತ್ತು ಅದರ ಚಹರೆಗಳಲ್ಲಿ ಉಂಟಾಗುವ ಭಿನ್ನತೆಗಳೂ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ. ವಾಸ್ತವವಾಗಿ ಯಾವುದೇ ವ್ಯಕ್ತಿಯು ತನ್ನ ಮಟ್ಟಿಗೆ ತಾನೇ ನಿರ್ಧರಿಸುವುದು ಅತ್ಯಂತ ಕಷ್ಟದಾಯಕವೂ ಹೌದು. ಅದರಲ್ಲಿ ವ್ಯತ್ಯಾಸಗಳಿವೆ. ಮತ್ತು ಅದರ ಸ್ವಭಾವ ಮತ್ತು ಅದರ ಸ್ವರೂಪವನ್ನು ಆಯಾ ಸನ್ನಿವೇಶದ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಅದರ ಅರ್ಥವೂ ಭಿನ್ನವಾಗುತ್ತದೆ. ಅದರಲ್ಲಿ ಕ್ರಿಯೆ ಮತ್ತು ಅದರ ಚಹರೆಗಳೂ ಮುಖ್ಯವಾಗುತ್ತದೆ. ವ್ಯಕ್ತಿವಾದಿ ಚಿಂತನೆ ಮತ್ತು ವ್ಯಕ್ತಿವಾದಿ ಗ್ರಹಿಕೆಗಳ ಒಂದು ಬಗೆಯವು. ಅದರಲ್ಲಿ ಚಿಂತನೆಯು ವ್ಯಕ್ತಿಯನ್ನು ಒಂದು ಘಟಕವಾಗಿ ಮಾತ್ರವೇ ನೋಡುತ್ತದೆ. ವ್ಯಕ್ತಿಯನ್ನು ಅದು ಪ್ರತ್ಯೇಕ ಮಾಡುತ್ತಾ ಬಂದಿದೆ. ವ್ಯಕ್ತಿ ಮತ್ತು ಅವನ ಆಲೋಚನೆಯನ್ನು ಅದು ಹೇಳುವ ಕ್ರಮಗಳು ಭಿನ್ನವಾಗಿವೆ. ಅಂದರೆ ವ್ಯಕ್ತಿ ಮತ್ತು ಅವನ ಸ್ವಭಾವವನ್ನು ಅದು ಹೇಳುವ ಕ್ರಮಗಳು ಬೇರೆಯಾಗುತ್ತದೆ. ಅದರಲ್ಲಿ ಭಿನ್ನವಾದ ಮತ್ತೆ ಕೆಲವು ಸಂಗತಿಗಳು ಸೇರಿಕೊಂಡಿವೆ. ವ್ಯಕ್ತಿಯನ್ನು ಅದು ಒಂದು ಪ್ರತ್ಯೇಕವಾದ ಮೌಲ್ಯವನ್ನು ಧರಿಸುವವನು ಎಂದು ಹೇಳುತ್ತದೆ. ಅಂದರೆ ಅದರಲ್ಲಿ ವ್ಯಕ್ತಿಯನ್ನು ಗ್ರಹಿಸುವಾಗ ವ್ಯಕ್ತಿ ಮತ್ತು ಅವನ ಕ್ರಿಯೆಯನ್ನು ಮಾತ್ರವೇ ಒಂದು ನಿರ್ದಿಷ್ಟವಾದ ಪ್ರಜ್ಞಾವಂತ ಸ್ಥಿತಿಯೆಂದು ಅದು ಭಾವಿಸುತ್ತದೆ. ಅಂದರೆ ಅದು ಪ್ರಜ್ಞೆಯನ್ನು ನೋಡಿಕೊಳ್ಳುವ ಕ್ರಮವು ಬೇರೆಯಾಗಿದೆ. ಪ್ರಜ್ಞೆ ಮತ್ತು ಅದರ ಸ್ಥಿತಿಯನ್ನು ಅದು ಗ್ರಹಿಸುವಾಗ ಒಂದು ಸಿದ್ಧಾಂತ ರಹಿತವಾಗಿಯೂ ನೋಡುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಚಿಂತನೆಯನ್ನು ವಾಸ್ತವವಾಗಿ ಬರೀ ಒಂದು ಮೌಲ್ಯವನ್ನು ಮಾತ್ರವೇ ಹೇಳುತ್ತಾನೆ ಮತ್ತು ಅದು ಅದುವೇ ಸರ್ವತಂತ್ರ ಸ್ವತಂತ್ರವೆಂದು ಹೇಳಲು ಬರುವುದೂ ಇಲ್ಲ. ವ್ಯಕ್ತಿ ಮತ್ತು ಅವನ ಜೀವನವು ಹೇಗೆ ಭಿನ್ನವಾಗುತ್ತದೆ ಎನ್ನುವುದನ್ನು ಹೇಳಲು ಅದು ಬರೀ ಒಂದು ಮಾನದಂಡವನ್ನು ಮಾತ್ರವೇ ಬಳಸುತ್ತದೆ. ಆಧುನಿಕತೆ ಮತ್ತು ಅದರ ಸ್ವರೂಪವನ್ನೂ ವ್ಯಕ್ತಿವಾದವು ನೋಡುವ ಕ್ರಮವು ಬೇರೆಯಾಗಿದೆ. ಅದು ವ್ಯಕ್ತಿಯ ಆಧುನಿಕತೆಯನ್ನು ಮಾತ್ರವೇ ಪ್ರಧಾನವೆಂದು ಗಣಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ಗುಣವು ಆಧುನಿಕ ಸನ್ನಿವೇಶದಲ್ಲಿ ಚಿಂತನೆಯ ಕ್ರಮದಲ್ಲಿ ಹೇಗೆ ವ್ಯಕ್ತವಾಗುತ್ತದೆ ಎನ್ನುವುದು ಮಾತ್ರವೇ ಅದರಲ್ಲಿ ಮುಖ್ಯ. ಆಧುನಿಕತಾವಾದಿಗಳು

ವ್ಯಕ್ತಿಯನ್ನು ಮಾತ್ರವೇ ಒಂದು ನಿಯಂತ್ರಣ ರೂಪವಾದ ಸಂಗತಿಯೆಂದು ಹೇಳುತ್ತದೆ. ಅಂದರೆ ವ್ಯಕ್ತಿಯೇ ನಿರ್ದಿಷ್ಟವಾಗಿ ಒಂದು ವಿಶಿಷ್ಟವಾದ ಘಟಕವೆಂದೂ ಅದನ್ನು ಮಾತ್ರವೇ ನೋಡಿದರೆ ಸಾಕು ಎಂದೂ ಅದು ಭಾವಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಅವನ ನಡೆ ನುಡಿಯನ್ನು ಮತ್ತು ಅದರ ಸ್ವಭಾವವನ್ನು ಅದು ಗ್ರಹಿಸುವ ರೀತಿಯು ಬೇರೆಯಾಗುತ್ತದೆ. ವ್ಯಕ್ತಿಯೇ ಇಲ್ಲಿ ಒಂದು ಮುಖ್ಯವಾದ ವಿಷಯ. ಅದನ್ನು ನೋಡಿದರೆ ಸಾಕು ಎಂದೇ ಭಾವಿಸಲಾಗುತ್ತದೆ. ಸತ್ಯಕ್ಕೂ ತಾತ್ವಿಕತೆಗೂ ಒಂದು ಸಂಬಂಧವು ಇದೆ ಎಂದು ಫುಕೋ ಹೇಳುತ್ತಾನೆ. ತಾತ್ವಿಕತೆ ಎನ್ನುವುದು ಅವನಲ್ಲಿ ಸಂಕಥನದ ಒಂದು ಮಾದರಿಯು ಆಗುತ್ತದೆ.

ವ್ಯಕ್ತಿಯ ಸ್ವಾತಂತ್ರ್ಯವನ್ನು ಮಾತ್ರವೇ ಅದು ನಿರ್ದಿಷ್ಟವಾದ ಅರ್ಥದಲ್ಲಿ ಗುರುತಿಸುತ್ತದೆ. ಅಂದರೆ ವ್ಯಕ್ತಿ ಮತ್ತು ಅದರ ಚಹರೆಗಳನ್ನು ವ್ಯಕ್ತಿ ಮತ್ತು ಅವನ ಗ್ರಹಿಕೆಗೆ ಕಾರಣವು ಆಗುತ್ತದೆ. ವ್ಯಕ್ತಿಯನ್ನು ವಿವರಿಸುವುದು ಮಾತ್ರವೇ ಇಲ್ಲಿ ಮುಖ್ಯ. ಸಿದ್ಧಾಂತ ಮತ್ತು ಅದರ ಸಂಘರ್ಷಗಳನ್ನು ಅದು ವ್ಯಕ್ತಿಯ ಹಂತದಲ್ಲಿ ಮಾತ್ರವೇ ನೋಡುತ್ತದೆ. ಸಿದ್ಧಾಂತ ಮತ್ತು ಅದರ ಅನ್ವಯನ್ನು ಕೂಡಾ ಅದು ನೋಡುವುದು ಬೇರೆ ರೀತಿಯಲ್ಲಿ. ವ್ಯಕ್ತಿ ಮತ್ತು ಅವನ ಹಿಂದೆ ಇರಬಹುದಾದ ಕೆಲವು ಒತ್ತಡಗಳನ್ನು ಅದು ಅಷ್ಟಾಗಿ ಗ್ರಹಿಸುವುದೇ ಇಲ್ಲ. ವ್ಯಕ್ತಿಯೆಂದರೆ ಅವನ ಪಾಡಿಗೆ ಅವನು ಸ್ವತಂತ್ರನಲ್ಲ. ಅವನು ವಿಶೇಷವಾಗಿ ಕೆಲವು ಮಾದರಿಯ ರಚನೆಯ ಭಾಗವೂ ಆಗಿರುತ್ತಾನೆ. ಸಾಮಾಜಿಕ ಗುಂಪು ಮತ್ತು ಅದರ ಪ್ರಭಾವವು ವ್ಯಕ್ತಿಯ ಮೇಲೆ ಆಗುತ್ತದೆ. ಚರಿತ್ರೆ ಮತ್ತು ಅದರ ಸ್ವರೂಪ ಹಾಗೂ ಅದರ ಪಲ್ಲಟದಲ್ಲಿ ವ್ಯಕ್ತಿಯು ಹೆಚ್ಚು ವಾಹಕನು ಮಾತ್ರವೇ ಆಗಿರುತ್ತಾನೆ. ಅಂದರೆ ಅವನ ವ್ಯಕ್ತಿತ್ವ ಮತ್ತು ಅದರ ಸ್ವರೂಪವು ಒಂದು ಪರಿಕರವೂ ಹೌದು. ಅಂದರೆ ಅದರಲ್ಲಿ ವ್ಯಕ್ತಿಯನ್ನು ನೋಡುವ ಮತ್ತು ಗ್ರಹಿಸುವ ಕ್ರಮವನ್ನು ಸಾಮಾಜಿಕ ವರ್ಗಗಳ ಹಿನ್ನೆಲೆಯಲ್ಲಿ ಮಾತ್ರವೇ ನೋಡಬೇಕಾಗುತ್ತದೆ. ಸಾಮಾಜಿಕ ವರ್ಗಗಳು ಕೆಲವನ್ನು ಸೂಚಿಸುತ್ತವೆ. ಮತ್ತು ಅದರಲ್ಲಿ ಭೂತಕಾಲ, ವರ್ತಮಾನ, ಭವಿಷ್ಯದ ಸಂಗತಿಗಳೂ ಸೇರಿಕೊಂಡಿರುತ್ತವೆ. ವ್ಯಕ್ತಿವಾದ ಮತ್ತು ಅದರ ಸ್ವರೂಪವನ್ನು ನೋಡುವುದು ಅಂದರೆ ಈ ಕಾರಣದಿಂದ ಅವನ ವ್ಯಕ್ತಿತ್ವ ಮತ್ತು ಅವನ ಚರಿತ್ರೆಯ ಹಿನ್ನೆಲೆಯನ್ನೂ ನೋಡಬೇಕಾಗುತ್ತದೆ. ಆದರೆ ಇಲ್ಲಿ ಅನೇಕ ಪ್ರಶ್ನೆಗಳು ಬರುತ್ತವೆ. ಅಂದರೆ ವ್ಯಕ್ತಿಯನ್ನು ಒಂದು ಸಮಗ್ರವಾದ ಮತ್ತು ಪ್ರತ್ಯೇಕವಾದ ವ್ಯಕ್ತಿತ್ವ ಎಂದು ಭಾವಿಸಬೇಕಾದ ಅಗತ್ಯವಿದೆಯೇ? ವ್ಯಕ್ತಿ ಮತ್ತು ಅವನ ಜೀವನದ ಪ್ರಶ್ನೆಯನ್ನು ನಾವು ಈವತ್ತು ಯಾವ ರೀತಿಯಲ್ಲಿ ನೋಡಬೇಕು ಎನ್ನುವುದೂ ಮುಖ್ಯವಾದ ಪ್ರಶ್ನೆಯೂ ಹೌದು. ಅಂದರೆ ವ್ಯಕ್ತಿ ಮತ್ತು ಅವನ ಸಮಸ್ಯೆಯನ್ನು ನಾವು ಈವತ್ತು ನೋಡಬೇಕಾದರೆ ಅದರಲ್ಲಿ ಸಮಾಜ ಮತ್ತು ಅದರ ಅರಿವಿನ ಪ್ರಶ್ನೆಯೇ ಮುಖ್ಯವಾಗಬೇಕಾಗುತ್ತದೆ. ನಾವು ವ್ಯಕ್ತಿ ಮತ್ತು ಅವನ

ಸಮಸ್ಯೆಯನ್ನು ನೋಡುವುದು ಮತ್ತು ಗ್ರಹಿಸುವುದರಲ್ಲಿಯೂ ತಪ್ಪುಗಳಿವೆ. ವ್ಯಕ್ತಿ ಮತ್ತು ಅವನ ಅಸ್ತಿತ್ವವನ್ನು ಮಾತ್ರವೇ ನಾವು ಮಾನದಂಡವಾಗಿ ನೋಡಿದರೆ ಅದರ ಅರ್ಥವು ಬೇರೆಯಾಗುತ್ತದೆ ಮತ್ತು ಅದರಲ್ಲಿ ಅವನನ್ನು ಒಂದು ಪ್ರತ್ಯೇಕ ಘಟಕವಾಗಿ ನೋಡಲಾಗುತ್ತದೆ. ವ್ಯಕ್ತಿ ಮತ್ತು ಅವನ ಚಿಂತನೆಯನ್ನು ಮಾತ್ರವೇ ಬಹಳ ಮುಖ್ಯವೆಂದು ಗಣಿಸಿದರೆ ಅದರ ಅರ್ಥವು ಬೇರೆಯಾಗುತ್ತದೆ. ಮತ್ತು ಅವನ ವ್ಯಕ್ತಿತ್ವವನ್ನು ಸ್ವಯಂಸಂಪೂರ್ಣವಾಗಿದೆ ಎಂದು ಗ್ರಹಿಸಲಾಗುತ್ತದೆ. ವ್ಯಕ್ತಿ ಮತ್ತು ಅವನ ವ್ಯಕ್ತಿತ್ವವನ್ನು ನೋಡಿದರೆ ಅದರ ಸ್ವರೂಪವೂ ಬೇರೆಯಾಗುತ್ತದೆ. ಸ್ವಾತಂತ್ರ್ಯ ಎನ್ನುವುದು ಒಂದು ಬಗೆಯಲ್ಲಿ ನಮಗೆ ಶಕ್ತಿಯೂ ಹೌದು. ಅದನ್ನು ಧನಾತ್ಮಕವಾದ್ದು ಎಂದು ಹೇಳುತ್ತಾನೆ. ಆಧುನಿಕೋತ್ತರವಾದಿಗಳು ಸ್ವಾತಂತ್ರ್ಯವನ್ನು ನೋಡುವ ಕ್ರಮವು ಬೇರೆ ಘುಕೋನ ಮೊದಲ ಕೆಲಸಕ್ಕಿಂತ ಕೊನೆಯ ಕೆಲಸಗಳಲ್ಲಿ ಇದರ ಚಿಂತನೆಗಳು ನಮಗೆ ಕಾಣಿಸುತ್ತವೆ. ಅದುವೇ ಆಧುನಿಕೋತ್ತರದ ಮೇಲೆ ಪ್ರಭಾವವನ್ನು ಬೀರಿದೆ. ಆಧುನಿಕೋತ್ತರವಾದಿಗಳು ಸ್ವಾತಂತ್ರ್ಯವನ್ನು ಅನುಮಾನದಿಂದ ನೋಡುತ್ತಾರೆ.

ವ್ಯಕ್ತಿ ಒಂದು ನಿರ್ದಿಷ್ಟವಾದ ಮೌಲ್ಯವನ್ನು ಮಾತ್ರವೇ ಪ್ರಸ್ತುತಪಡಿಸುತ್ತಾನೆ. ಮತ್ತು ಅದು ಬಹಳ ಮುಖ್ಯವೆಂದು ಅವರು ಭಾವಿಸುತ್ತಾರೆ. ವ್ಯಕ್ತಿಯು ತನ್ನದೇ ಆದ ಪಾತ್ರವನ್ನು ವಹಿಸುತ್ತಾನೆ. ಆದರೆ ಅದರಲ್ಲಿ ವ್ಯಕ್ತಿಯನ್ನು ಸಮಾಜದ ಒಂದು ಭಾಗವೆನ್ನುವ ಕಲ್ಪನೆಯೇ ಇಲ್ಲ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ವ್ಯಕ್ತಿ ಮತ್ತು ಅವನ ಮೌಲ್ಯವನ್ನು ಮಾತ್ರವೇ ನೋಡುವವರು ವ್ಯಕ್ತಿ ಮತ್ತು ಅವನ ನಡವಳಿಕೆಯನ್ನು ಮಾತ್ರವೇ ಗಮನಿಸುತ್ತಾರೆ. ಆದರೆ ವ್ಯಕ್ತಿ ಕೇಂದ್ರಿತ ಚಿಂತನೆಯು ಒಂದು ವಿಷಯ ನಿಷ್ಟವಾದ ಸಂಗತಿಯು ಮಾತ್ರವೇ ಆಗಿದೆ. ವ್ಯಕ್ತಿ ಮತ್ತು ಅವನ ಚಿಂತನೆಯು ಕ್ರಮವು ಮೂಲಭೂತವಾಗಿ ಕೆಲವು ಸಂಗತಿಗಳನ್ನು ಹೇಳುತ್ತವೆ. ಅದು ವ್ಯಕ್ತಿಯ ಕುರಿತಾಗಿ ಕೆಲವು ನಿರೂಪಣೆಯನ್ನು ಮಾಡುತ್ತವೆ. ಮತ್ತು ವ್ಯಕ್ತಿ ಮತ್ತು ಅವನ ಸ್ವಭಾವವನ್ನು ಆಧುನಿಕತೆ ಗ್ರಹಿಸಿದ ಕ್ರಮವು ಬೇರೆಯಾಗಿದೆ. ಅದರಲ್ಲಿ ವ್ಯಕ್ತಿಯ ನಿಲುವುಗಳೇ ಪ್ರಧಾನವಾಗುತ್ತದೆ. ಮತ್ತು ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೂ ಇದೆ. ವ್ಯಕ್ತಿಯನ್ನು ನೋಡುವಾಗ ಅವನೇ ಅನೇಕ ಸಂಗತಿಗಳ ವಾರಸುದಾರನೆಂದು ಅದು ವಿವರಿಸುತ್ತದೆ. ವಿಷಯ ನಿಷ್ಟತೆ ಮತ್ತು ವಸ್ತುನಿಷ್ಟತೆಯು ಈ ಚರ್ಚೆಯಲ್ಲಿ ಬೇರೆಯಾಗುತ್ತದೆ. ಮತ್ತು ಸ್ವಾತಂತ್ರ್ಯದ ಪ್ರಶ್ನೆಯನ್ನು ಈ ಸಂಗತಿಗಳು ನೋಡುವ ಕ್ರಮವು ಬೇರೆಯಾಗುತ್ತದೆ. ಮತ್ತು ಇದರಲ್ಲಿ ಸ್ವಾತಂತ್ರ್ಯವನ್ನು ವಿವರಿಸುವ ಕ್ರಮವು ಬೇರೆಯಾಗುತ್ತದೆ. ವಿವರಣೆ ಮತ್ತು ಅದರ ಅರ್ಥವೂ ಇಲ್ಲಿ ನಿರ್ದಿಷ್ಟವಾಗುತ್ತದೆ. ಅಂದರೆ ವ್ಯಕ್ತಿಯನ್ನು ನಾವು ಬರೀ ವಿಷಯನಿಷ್ಟವಾಗಿ ಮಾತ್ರವೇ ನೋಡುವುದು ಅಸಾಧ್ಯ. ಆಧುನಿಕತೆಯು ಅದರ

ಸಿದ್ಧಾಂತವನ್ನು ನೋಡುವುದು ಬರೀ ಒಂದು ಗ್ರಹಿಕೆಯ ಕ್ರಮವಾಗಿ ಮಾತ್ರವೇ. ಅದರಲ್ಲಿ ವ್ಯತ್ಯಾಸವಿದೆ.

ಇಲ್ಲಿ ನೋಡಬೇಕಾದ ಮತ್ತೊಂದು ಅಂಶವೂ ಇದೆ. ಆಧುನಿಕತೆಯು ಹೇಗೆ ವ್ಯಕ್ತಿಯನ್ನು ಸ್ವೀಕರಿಸುತ್ತದೆ ಎನ್ನುವುದೂ ಬಹಳ ದೊಡ್ಡದಾದ ಪ್ರಶ್ನೆಯೂ ಹೌದು. ಆಧುನಿಕತೆಯಲ್ಲಿ ವ್ಯಕ್ತಿಯ ವಾಹಕನು ಮಾತ್ರವೇ ಆಗಿದ್ದಾನೆ ಮತ್ತು ಅವನ ವ್ಯಕ್ತಿತ್ವವವನ್ನು ಈ ದೃಷ್ಟಿಯಿಂದ ನೋಡಬೇಕಾದ ಕ್ರಮವೂ ಬೇರೆಯಾಗುತ್ತದೆ. ವ್ಯಕ್ತಿ ಮತ್ತು ಅವನ ಗ್ರಹಿಕೆಗಳು ಆಧುನಿಕತೆಯಲ್ಲಿ ಬೇರೆ ಬೇರೆ ಆಗುತ್ತದೆ. ವ್ಯಕ್ತಿಯು ಇದರಲ್ಲಿ ಘಟಕ ಮಾತ್ರವೇ ಆಗಿರುವುದರಿಂದ ಅದರ ಅರ್ಥವೂ ಬೇರೆಯಾಗುತ್ತದೆ. ಆದರೆ ವಾಸ್ತವವಾಗಿ ವ್ಯಕ್ತಿಯು ಬರೀ ಸ್ವಾಯತ್ತವೆನ್ನಬಹುದಾದ ಸಂಗತಿಯು ಅಲ್ಲ. ವ್ಯಕ್ತಿಯು ಅರೆ ಸಾಮಾಜಿಕನೂ ಆಗಿರುತ್ತಾನೆ. ಸಾಮಾಜಿಕ ಗುಂಪು ಮತ್ತು ವ್ಯಕ್ತಿಗೆ ಸಂಬಂಧವು ಇರುತ್ತದೆ ಮತ್ತು ವ್ಯಕ್ತಿಯು ಗುಂಪಿನಿಂದ ಅನೇಕವನ್ನು ಪಡೆಯುತ್ತಾನೆ. ಅಂದರೆ ವ್ಯಕ್ತಿ ಮತ್ತು ಅವನ ಸಾಧ್ಯತೆಯು ಬೇರೆಯಾಗುತ್ತದೆ. ವ್ಯಕ್ತಿಯನ್ನು ಆಧುನಿಕತೆಯು ಯಾವ ರೀತಿಯಲ್ಲಿ ನೋಡುತ್ತದೆ ಮತ್ತು ಅದನ್ನು ಹೇಗೆ ಸ್ವೀಕರಿಸುತ್ತದೆ ಎನ್ನುವುದು ಒಂದು ಬಗೆಯ ನಿಲುವು ಆಗಿದ್ದರೆ ವ್ಯಕ್ತಿ ಮತ್ತು ಅವನ ಸಾಧ್ಯತೆಯು ಮತ್ತೊಂದು ರೀತಿಯಲ್ಲಿ ಇರುತ್ತದೆ. ಅಂದರೆ ವ್ಯಕ್ತಿಯು ಅವನ ಚರಿತ್ರೆಯನ್ನು ಮತ್ತು ಅವನ ಅಗತ್ಯವನ್ನು ತನಗೆ ಬೇಕಾದ ಕ್ರಮದಲ್ಲಿ ಕಟ್ಟುತ್ತಾನೆ. ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟವನ್ನು ಮಾಡುತ್ತಾನೆ. ಚರಿತ್ರೆಯು ಬದಲಾಗುತ್ತಾ ಹೋದರೆ ವ್ಯಕ್ತಿಯ ಜೀವನ ಮತ್ತು ಅವನ ಸ್ವಭಾವಗಳೂ ಬದಲಾಗುತ್ತವೆ. ಅಂದರೆ ವ್ಯಕ್ತಿ ಮತ್ತು ಅವನ ಅಗತ್ಯಗಳು ಅನೇಕವನ್ನು ಹೇಳುತ್ತವೆ. ಅವನು ಅದನ್ನು ಸಾಧಿಸಲು ಯತ್ನವನ್ನು ಮಾಡುತ್ತಾನೆ. ಅವನಿಗೆ ಅದು ಹೆಚ್ಚಿನ ಮಹತ್ವದ್ದೂ ಆಗುತ್ತದೆ. ಆದರೆ ವ್ಯಕ್ತಿಯನ್ನು ಸಮಾಜ ಮತ್ತು ಅವನ ವರ್ಗವು ನಿಯಂತ್ರಿಸುತ್ತದೆ. ಅವನ ಜೀವನವನ್ನು ಅದು ನಿರೂಪಿಸುತ್ತದೆ. ವರ್ಗ ಮತ್ತು ವಿಶ್ವಾತ್ಮಕತೆಗೆ ಕೆಲವು ರೀತಿಯ ಸಂಬಂಧವೂ ಇದೆ. ಅದನ್ನು ಹೀಗೆ ಹೇಳಬಹುದು. ವ್ಯಕ್ತಿಯನ್ನು ನಾವು ನೀತಿ ಮತ್ತು ಅವನ ನಡವಳಿಕೆಯನ್ನು ಆಧರಿಸಿಕೊಂಡು ವ್ಯಾಖ್ಯಾನಿಸುತ್ತೇವೆ. ವ್ಯಕ್ತಿ ಮತ್ತು ಅವನ ಸಾಮಾಜಿಕ ವಾಸ್ತವವು ಈ ದೃಷ್ಟಿಯಿಂದ ಬಹಳ ಮುಖ್ಯವಾದ ಸಂಗತಿಯೂ ಆಗಿದೆ. ರೊಮಾಂಟಿಕ್ ಯುಗವು ವ್ಯಕ್ತಿಯನ್ನು ನೋಡಿದ ಮತ್ತು ಅದನ್ನು ಚಿತ್ರಿಸಿದ ಕ್ರಮವು ಬೇರೆಯಾಗಿದೆ. ವ್ಯಕ್ತಿಯನ್ನು ಅದು ಉದಾರವಾಗಿಯೂ ನೋಡಿತು. ಅದರಲ್ಲಿ ನೈತಿಕತೆಯು ಹೆಚ್ಚು ಮುಖ್ಯ.

ದೇವರನ್ನು ರೊಮಾಂಟಿಕ್ ಯುಗವು ಸೃಷ್ಟಿಕರ್ತ ಮತ್ತು ಜೀವನವನ್ನು ಕೈಹಿಡಿದು ನಡೆಸುವವನು ಎಂದು ಭಾವಿಸುತ್ತದೆ. ಅದರೆ ಇಲ್ಲಿ ಮತ್ತೆ ಅದು ಬಾಹ್ಯ ಮತ್ತು ಅಂತರಂಗ ಶುದ್ಧಿಯನ್ನು ಮಾತ್ರವೇ ಹೇಳುತ್ತದೆ. ಜನಾಂಗ ಮತ್ತು ವಿಶ್ವಾತ್ಮಕತೆಯನ್ನು

ಅದು ಹೇಳುವ ಕ್ರಮಗಳು ಬೇರೆಯಾಗಿವೆ. ಅಂದರೆ ವ್ಯಕ್ತಿಯನ್ನು ರೊಮ್ಯಾಂಟಿಕ್ ಯುಗವು ಗ್ರಹಿಸುವ ಕ್ರಮವು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಜನಾಂಗ ಮತ್ತು ಲೋಕವನ್ನು ಅದು ಗ್ರಹಿಸುವುದು ಈ ದೃಷ್ಟಿಯಿಂದ ಬೇರೆಯಾಗುತ್ತದೆ. ಆಧುನಿಕತೆಗಿಂತ ಭಿನ್ನವಾದ ಒಂದು ಕ್ರಮವು ಇದರಲ್ಲಿದೆ. ಅದು ಲೋಕವನ್ನು ನೋಡುವುದು ಮತ್ತು ಗ್ರಹಿಸುವುದು ಭಿನ್ನವಾಗಿಯೂ ಹೌದು ಫುಕೋನ ದೃಷ್ಟಿಯಲ್ಲಿ ವಾಸ್ತವ ಮತ್ತು ಜ್ಞಾನದ ಸಂಬಂಧವೂ ನಿಕಟ. ಜ್ಞಾನವು ನಮಗೆ ವಾಸ್ತವವನ್ನು ಅರ್ಥಮಾಡಿಕೊಳ್ಳಲು ಬೇಕಾದ ಪರಿಕರವೂ ಹೌದು.

1. ಫುಕೋ – ಆರ್ಕಿಯಾಲಜಿ ಆಫ್ ನಾಲೆಜ್
2. ಫುಕೋ ರೀಡರ್
3. ವಿಲಿಯಂಸ್ – ಕಲ್ಚರ್ ಅಂಡ್ ಸೊಸೈಟಿ.

15. ಸಾಮಾಜಿಕ ಜ್ಞಾನ ಮತ್ತು ಅದರ ಸಮರ್ಥನೆ

ಜ್ಞಾನ ಎನ್ನುವುದು ನಮಗೆ ಸಿಕ್ಕುವುದು ಒಂದು ವಿವಿಧ ಶಾಲಾ ಕಲಿಕೆಗಳಲ್ಲಿ. ಶಾಲೆಗಳು ನಮಗೆ ನಿರ್ದಿಷ್ಟವಾದ ಜ್ಞಾನವನ್ನು ಕೊಡುತ್ತವೆ. ಆದರೆ ಜ್ಞಾನವನ್ನು ನಾವು ನಮ್ಮ ಅಗತ್ಯಕ್ಕೆ ತಕ್ಕಂತೆ ಸೃಷ್ಟಿ ಮಾಡುತ್ತೇವೆ. ಸಂಸ್ಥೆಗಳು ಸೃಷ್ಟಿಸುವ ಜ್ಞಾನವು ಒಂದು ರೀತಿಯಲ್ಲಿ ಇರುತ್ತದೆ. ನಾವು ನಮ್ಮ ಜ್ಞಾನವನ್ನು ಬೇರೆ ಬೇರೆ ಉತ್ಪಾದಿಸುತ್ತೇವೆ. ಜ್ಞಾನವು ಒಂದು ಶಕ್ತಿಯೂ ಹೌದು. ನಮ್ಮ ಆಲೋಚನೆಯಿಂದ ಜ್ಞಾನವನ್ನು ಪಡೆಯುತ್ತೇವೆ. ನಾವು ನಮ್ಮ ಆಲೋಚನೆಯನ್ನು ಇನ್ನೊಬ್ಬರಿಗೆ ಹೇಳುವುದು ಹೇಗೆ ಎನ್ನುವುದು ಅತ್ಯಂತ ಮುಖ್ಯವಾದ ಸಮಸ್ಯೆ. ಚದುರಿಹೋದ ವಿವರಣೆಗಳನ್ನು ನಾವು ಮೊದಲು ನಮ್ಮದನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಅದು ಅಗತ್ಯವೂ ಹೌದು. ಆದರೆ ಇದೇ ಪ್ರಕ್ರಿಯೆಯು ನಮಗೆ ಒಬ್ಬ ರೈತನಲ್ಲಿ ಕಾಣಿಸುವುದಿಲ್ಲ ರೈತರ ಸಾಮಾನ್ಯವಾದ ಮಾತುಗಳು ಬೇರೆ ಥರ ಇರುತ್ತವೆ. ಫುಕೋ ಇದನ್ನು ಹೇಳುವಾಗ ಕಾಲ ಮತ್ತು ಅದರ ನಿಯಂತ್ರಣವನ್ನು ಹೇಳುತ್ತಾನೆ. ಅದು ನಮಗೆ ಸೂಚನೆಗಳನ್ನು ಕೊಡುತ್ತದೆ. ವಾಸ್ತವವಾಗಿ ನಮಗೆ ಆಲೋಚನೆಗಳು ನಮಗೆ ಬಂದಾಗ ಅದರ ರೂಪವು ಒಂದು ಥರವಿರುತ್ತದೆ. ಹಾಗೆ ನೋಡಿದರೆ ಈವತ್ತು ನಮ್ಮ ಸಂಶೋಧನೆಗಳನ್ನು ಮಾಡುವಾಗ ನಮ್ಮ ಜ್ಞಾನ ಮತ್ತು ಅದರ ಪರಿಧಿಯು ಎಷ್ಟು ಇದೆಯೋ ಅದಕ್ಕೆ ಅನುಸಾರವಾಗಿಯೇ ನಾವು ಶೈಕ್ಷಣಿಕವಾಗಿ ನಮ್ಮ ವಿದ್ಯಾರ್ಥಿಗಳನ್ನು ಬೆಳೆಸುತ್ತೇವೆ. ನಮಗೆ ಯಾವುದೇ ಜ್ಞಾನ ಇಲ್ಲದೇ ಹೋದರೆ ನಾವು ಯಾವುದನ್ನೂ ಹೇಳಲಾರೆವು. ಹಾಗೆ ನೋಡಿದರೆ ನಮ್ಮ ಜ್ಞಾನಗಳು ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಥರ ರೂಪುಗೊಳ್ಳುವುದಕ್ಕೆ ಬೇರೆ ಬೇರೆ ಕಾರಣಗಳು ಇರುತ್ತವೆ. ಮನೋವಿಜ್ಞಾನವು ಅದರಲ್ಲಿ ಒಂದು ಶಿಸ್ತು. ಆದರೆ ಅದರ ಬೆಳವಣಿಗೆಯೇ ಕುತೂಹಲದಾಯಕ. ಅದೇ ರೀತಿಯಲ್ಲಿ ಗ್ರೀಕ್ ನಾಣ್ಯಗಳು ಒಂದು ಕಾಲದಲ್ಲಿ ಒಂದು ಥರ ಇತ್ತು. ಇನ್ನೊಂದು ಕಾಲಕ್ಕೆ ಬಂದಾಗ ಮತ್ತೊಂದು ರೂಪವನ್ನು ತಳೆಯಿತು. ಅವುಗಳು ಬದಲಾದಾಗ ಮೌಲ್ಯಗಳ ಪಲ್ಲಟವೂ ಕಾರಣವಾಗಿರುತ್ತವೆ. ಈ ದೃಷ್ಟಿಯಿಂದ ಜ್ಞಾನ ಮತ್ತು ಅದರ ಚರಿತ್ರೆಯು ಅತ್ಯಂತ ಕುತೂಹಲದಾಯಕವೂ ಆಗಿರುತ್ತವೆ. ಪಾಪ ನಿವೇದನೆ ಮತ್ತು

ಜ್ಞಾನವು ಹೇಗೆ ಜೊತೆಗೆ ಸೇರಿಕೊಂಡವು ಎಂದು ಫುಕೋ ವಿವರಿಸುತ್ತಾನೆ. ಜ್ಞಾನವು ಕೆಲವೊಮ್ಮೆ ಸಿದ್ಧಾಂತದ ಮೂಲಕವೇ ಬೆಳೆಯುತ್ತದೆ. ಆದರೆ ಜ್ಞಾನ ಮತ್ತು ಅದರ ಬೆಳವಣಿಗೆಗಳು ಆಯಾ ಸನ್ನಿವೇಶವನ್ನು ನಿರೂಪಿಸುವಾಗ ಅದು ಕಾಲವನ್ನು ಬಿಟ್ಟು ಇರಲು ಸಾಧ್ಯವಾಗುವುದೂ ಇಲ್ಲ. ಜ್ಞಾನವೂ ಕೆಲವು ಸಂದರ್ಭದಲ್ಲಿ ತನ್ನದೇ ಆದ ಕಾರಣದಿಂದ ತಪ್ಪನ್ನು ಮಾಡುತ್ತವೆ. ನಮ್ಮ ಕೌಶಲಗಳು ಬದಲಾಗುತ್ತಾ ಹೋದಂತೆ ಜ್ಞಾನವೂ ಬದಲಾಗುತ್ತವೆ. ಸಿದ್ಧಾಂತವು ಒಂದರಿಂದ ಮತ್ತೊಂದಕ್ಕೆ ಚಲಿಸುತ್ತದೆ. ಹಾಗೆ ನೋಡಿದರೆ ಯಾವುದೇ ತಿಳುವಳಿಕೆಗಳು ಒಂದು ನಿರ್ವಾತದಲ್ಲಿ ಬೆಳೆಯುವುದೂ ಇಲ್ಲ. ಅದಕ್ಕೆ ಕೆಲವು ತಳಹದಿಗಳು ಇರುತ್ತವೆ. ಮನೋವಿಜ್ಞಾನ ಮತ್ತು ಅದರ ಬೆಳವಣಿಗೆ ಹೇಗೆ ಕಾಲಾನುಕ್ರಮದಲ್ಲಿ ಬೆಳೆಯುತ್ತಾ ಬಂತು ಎನ್ನುವುದನ್ನು ಫುಕೋ ಹೇಳುತ್ತಾನೆ. ಆದರೆ ಅವನ ಮತ್ತೊಂದು ಮಾತಿಗೆ ಹೆಚ್ಚು ಪ್ರಾಮುಖ್ಯತೆಯು ಇದೆ: ಜ್ಞಾನವೂ ಅಭ್ಯಾಸದಿಂದ ಬರುತ್ತದೆ. ಒಬ್ಬ ತಜ್ಞ ವೈದ್ಯನು ರೋಗಿಯು ಹೇಳುವ ಲಕ್ಷಣವನ್ನು ಗಮನಿಸಿಕೊಂಡೇ ಅವನಿಗೆ ಔಷಧಿಯನ್ನು ಕೊಡಬಲ್ಲ. ಜ್ಞಾನಕ್ಕೂ ನಮ್ಮ ಸಂವೇದನೆಗೂ ಸಂಬಂಧವಿದೆ. ಕಾಮ ಮತ್ತು ಲೈಂಗಿಕ ಸಂಬಂಧಗಳಿಗೆ ಒಂದು ಚರಿತ್ರೆಯು ಇದೆ. ಅಷ್ಟೇ ಅಲ್ಲ ಅದಕ್ಕೂ ಜ್ಞಾನಕ್ಕೂ ಸಂಬಂಧವಿದೆ ಎಂದು ಫುಕೋ ಹೇಳುತ್ತಾನೆ. ಆದರೆ ಆಲೋಚನೆ ಎನ್ನುವುದು ಅತ್ಯಂತ ಮುಖ್ಯವಾಗಿ ಒಂದು ಕಾರಣವನ್ನು ಅವಲಂಬಿಸಿಕೊಂಡು ಇರುತ್ತದೆ ಎಂದು ಕಾಂಟ್‌ನ ವಾದ, ಆದರೆ ಹೆಗೆಲ್ ವಿಶ್ವಾತ್ಮಕತೆ ಮತ್ತು ಜ್ಞಾನ ಹಾಗೂ ಸತ್ಯಕ್ಕೆ ಸಂಬಂಧವಿದೆ. ಎಂದು ಭಾವಿಸುತ್ತಾನೆ. ನಾವು ಯಾವುದನ್ನು ಅಭ್ಯಾಸ ಮಾಡುತ್ತೇವೆಯೋ ಅದರ ಜ್ಞಾನವು ಮಾತ್ರವೇ ನಮಗೆ ಇರಲು ಸಾಧ್ಯ. ನಾವು ಯಾವುದಾದರೂ ಒಂದು ಗೋಡೆಯನ್ನು ಕಟ್ಟಿಕೊಂಡು ಜ್ಞಾನವನ್ನು ರೂಪಿಸುವುದು ಅಸಾಧ್ಯ. ಅಷ್ಟೇ ಅಲ್ಲ; ಅದರ ಮೂಲಕ ನಾವು ಯಾವುದನ್ನು ಸಾಧ್ಯವಾಗಿಸುವುದೂ ಇಲ್ಲ. ಜ್ಞಾನ ಮತ್ತು ಸಿದ್ಧಾಂತಕ್ಕೆ ಸಂಬಂಧವಿದೆ ಎಂದು ಡೆಲ್ಯೂಷೆ ಹೇಳುತ್ತಾನೆ. ಅವನ ನಿಲುವಿನ ಪ್ರಕಾರ ಸಿದ್ಧಾಂತ ಎನ್ನುವುದು ಒಂದು ಬಗೆಯ ಪರಿಕರದ ಪೆಟ್ಟಿಗೆಯಂತೆ ಇರುತ್ತದೆ. ಅದರ ಉಪಯೋಗವಂತೂ ಇದ್ದೇ ಇರುತ್ತದೆ. ನಾವು ಸಿದ್ಧಾಂತವನ್ನು ಮತ್ತೆ ಮತ್ತೆ ಬಳಸುತ್ತೇವೆ. ಅದರ ಅಗತ್ಯವು ಇದೆ. ಡೆಲ್ಯೂಷೆಯು, 'ಸಿದ್ಧಾಂತಕ್ಕೆ ಒಂದು ಲೋಕದ ದೃಷ್ಟಿಯು ಇದೆ. ಅದಕ್ಕೆ ಒಂದು ಚಟುವಟಿಕೆಯು ಇದೆ. ಅದಕ್ಕಾಗಿಯೇ ನಾವು ಬದುಕುವುದಿಲ್ಲ. ಆದರೆ ಅದು ಇದೆ. ಮತ್ತು ಅದರ ಉಪಯೋಗವನ್ನು ನಾವು ಮಾಡಿಕೊಳ್ಳುತ್ತೇವೆ. ನಮಗೆ ಅದರ ಉಪಯೋಗವು ಇಲ್ಲವಾದರೆ ಅದನ್ನು ಬಿಡುತ್ತೇವೆ ಅಷ್ಟೆ.. ಸಿದ್ಧಾಂತವು ಈ ಅರ್ಥದಲ್ಲಿ ದ್ವಿಗುಣವಾಗುತ್ತದೆ' ಎನ್ನುತ್ತಾನೆ. ಆದರೆ ಫುಕೋನ ಒಂದು ವಾದವನ್ನು ಡೆಲ್ಯೂಷೆಯು ಒಪ್ಪುತ್ತಾನೆ. ಸಿದ್ಧಾಂತವು ಒಂದು ಹಂತದಲ್ಲಿ ಅಧಿಕಾರವನ್ನು ನಿರಾಕರಿಸುತ್ತದೆ ಅಂದರೆ ಪ್ರಭುತ್ವವನ್ನು

ಸಮರ್ಥಿಸುವುದು ಅದರ ಉದ್ದೇಶವೂ ಅಲ್ಲ. ಯಾವಾಗ ಸಿದ್ಧಾಂತವು ಒಂದು ಹಂತವನ್ನು ತಲುಪುತ್ತದೆಯೋ ಅದರ ಅನಂತರ ಅದು ಪ್ರಯೋಗವನ್ನು ಕಳೆದುಕೊಳ್ಳುತ್ತವೆ. ಫುಕೋ ಅನೇಕ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಾನೆ ಎನ್ನುವುದು ಅವನಿಗೂ ಗೊತ್ತು. ಅವನು ಒಂದು ಉದಾಹರಣೆಯನ್ನು ಕೊಡುತ್ತಾನೆ. ಫುಕೋ ಪ್ರಶ್ನೆಯನ್ನು ಕೇಳುವ ವಿಚಾರಗಳನ್ನು ಕುರಿತು ಹೇಳುತ್ತಾನೆ ಆದರೆ ಅದರಲ್ಲಿ ಅವನು ಹೇಳಿದ್ದು ಡೆಲ್ಯೂಷೆಗೆ ಹೆಚ್ಚು ಮುಖ್ಯವಾಗುತ್ತದೆ. ಕಿಂಡರ್ ಗಾರ್ಡನ್‌ನಲ್ಲಿ ಮಕ್ಕಳು ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಆದರೆ ಅವರು ಕೇಳುವ ಪ್ರಶ್ನೆಗಳು ಬಹಳ ಮುಖ್ಯವಾದದ್ದು ಬಾಯಿ ಮುಚ್ಚಿ ಕುಳಿತುಕೋ ಎಂದರೆ ಅಲ್ಲಿಂದ ಅವರ ಮನಸ್ಸು ಮುದುಡುತ್ತದೆ. ಆದ್ದರಿಂದ ಯಾವಾಗ ಮಕ್ಕಳು ಪ್ರಶ್ನೆಯನ್ನು ಕೇಳುತ್ತಾರೋ ಆಗ ಅವರ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟರೆ ಅಲ್ಲಿಗೆ ಅವರ ಕಲಿಕೆಯು ಪ್ರಾರಂಭವಾಗುತ್ತದೆ ಎನ್ನುವುದು ಅವನ ಅಭಿಪ್ರಾಯ.

ಇನ್ನೊಂದನ್ನು ನಾವು ಸಹಿಸದೆ ಹೋದರೆ ಮಾತ್ರವೇ ಅಲ್ಲಿ ಒಂದು ನಿರಾಕರಣೆ ಪ್ರಾರಂಭವಾಗುತ್ತದೆ. ಉದ್ದಗಲಕ್ಕೂ ನಾವು ಅನ್ಯವನ್ನು ತಿರಸ್ಕರಿಸಿದ್ದೇವೆ. ಆದ್ದರಿಂದ ನಮಗೆ ಅನ್ಯವನ್ನು ನೋಡುವ ಮತ್ತು ಗ್ರಹಿಸುವ ಕ್ರಮವು ಇಲ್ಲವೆನ್ನುವುದನ್ನು ಫುಕೋ ಕೂಡಾ ಹೇಳಿದ್ದಾನೆ. ಅಂದರೆ ಅರ್ಥವು ಇಷ್ಟೇ: ನಮ್ಮ ಮಾತುಗಳು ನಿಯಂತ್ರಣವನ್ನು ಹೊಂದಿವೆ. ಇದಕ್ಕಿರುವ ಉತ್ತರವನ್ನು ಫುಕೋ ವಿವರಿಸಿದ್ದಾನೆ. ಜೈಲಿನಲ್ಲಿ ಯಾವಾಗ ಕೈದಿಗಳು ಮಾತಾಡಲು ಪ್ರಾರಂಭ ಮಾಡುತ್ತಾರೆಯೋ ಆಗ ಅವರ ಅಸ್ತಿತ್ವವು ಬೇರೆಯಾಗುತ್ತದೆ. ಅವರ ಅಸ್ತಿತ್ವಕ್ಕೆ ಭಿನ್ನವಾದ ಅರ್ಥವೂ ಬರುತ್ತದೆ. ಅಂದರೆ ಕೈದಿಗಳು ಮಾತಾಡಲು ಪ್ರಾರಂಭ ಮಾಡಿದರೆ ಅವರಿಗೆ ಕಾನೂನು ಮತ್ತು ಅದರ ಪರಿಜ್ಞಾನವು ದೊರೆಯುತ್ತವೆ. ಇಲ್ಲವಾದರೆ ಅವರು ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಆದ್ದರಿಂದ ಫುಕೋ ಸಂಕಥನವು ಅತ್ಯಂತ ಮುಖ್ಯವೆಂದು ಹೇಳುತ್ತಾನೆ. ಸಂಕಥನವು ಇಲ್ಲವಾದರೆ ಅಲ್ಲಿ ಯಾವುದೇ ಬಗೆಯ ಜ್ಞಾನವು ಸಿಗಲಾರದು. ಮಾತು ಮತ್ತು ಅದರ ಅಗತ್ಯವನ್ನು ಫುಕೋ ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದು ಎಂದು ಭಾವಿಸುತ್ತಾನೆ. ನಮ್ಮನ್ನು ನಾವು ಹಾಜರುಪಡಿಸುವುದು ಅತ್ಯಂತ ಮುಖ್ಯ. ನಮ್ಮನ್ನು ನಾವು ಪ್ರಸ್ತುತ ಪಡಿಸುವುದು ನಿಜವಾಗಿಯೂ ಅತ್ಯಂತ ಮುಖ್ಯ. ಆದರೆ ಇಲ್ಲಿ ಮತ್ತೆ ಒಂದು ಪ್ರಶ್ನೆಯನ್ನು ಡೆಲ್ಯೂಷೆ ಎತ್ತಿಕೊಳ್ಳುತ್ತಾನೆ: 'ಬುದ್ಧಿಜೀವಿಗಳು ಈ ದೃಷ್ಟಿಯಿಂದ ಅತ್ಯಂತ ಮುಖ್ಯವಾದ ಒಂದು ಪಾತ್ರವನ್ನು ವಹಿಸುತ್ತಾರೆ. ಪರವಾಗಿ ಮಾತಾಡುವುದು ಅಂದರೆ ಅದು ಮುಖ್ಯ.' ಅವನು ಪ್ರಾತಿನಿಧಿಕತೆ ಮತ್ತು ಅದರ ಅಗತ್ಯವನ್ನು ಅವನು ಹೇಳುತ್ತಾನೆ. ಒಂದು ಹಂತದವರೆಗೆ ಲೇಖಕರು ಮತ್ತು ಬುದ್ಧಿಜೀವಿಗಳು ಕೆಲಸವನ್ನು ಮಾಡಬೇಕಾಗುತ್ತದೆ

ಯಾಕೆಂದರೆ ಅವರಿಗೆ ಕೆಲವು ಮಾದರಿಯ ಜ್ಞಾನವು ಇರುತ್ತದೆ. ಸೈದ್ಧಾಂತಿಕವಾದ ಕ್ರಿಯೆ ಮತ್ತು ಪ್ರಾಯೋಗಿಕವಾದ ಕ್ರಿಯೆ ಒಂದಕ್ಕೊಂದು ಪೂರಕವಾಗಿರುತ್ತದೆ. ಆದರೆ ಫುಕೋ ಇದಕ್ಕೆ ಬೇರೆ ಉತ್ತರವನ್ನು ಕೊಡುತ್ತಾನೆ.

ಫುಕೋನ ಪ್ರಕಾರ ಲೇಖಕರು ಮತ್ತು ಬುದ್ಧಿಜೀವಿಗಳು ಕೂಡಾ ಒಂದು ಸಮಾಜದಲ್ಲಿ ನಿರ್ದಿಷ್ಟವಾದ ಪಾತ್ರವನ್ನು ವಹಿಸುತ್ತಾರೆ. ಆದ್ದರಿಂದ ಅವರು ನಡೆಸುವ ಸಂಕಥನಗಳು ಒಮ್ಮೊಮ್ಮೆ ಒಂದು ವ್ಯವಸ್ಥೆಯ ಭಾಗವೂ ಆಗಬಹುದು. ಅವನ ಕ್ರಿಯೆ ಮತ್ತು ಚಟುವಟಿಕೆಯು ವ್ಯವಸ್ಥೆಯನ್ನು ಮೇಲು ನೋಟಕ್ಕೆ ಕ್ರಾಂತಿಕಾರಕವಾಗಿ ಕಂಡರೂ ಅದು ಕ್ರಾಂತಿಕಾರಕವೇ ಆಗಿರಬೇಕಾಗಿಲ್ಲ. ಇದನ್ನು ಇನ್ನೊಂದು ಥರ ಹೇಳಬಹುದು: ಕೆಲವು ಲೇಖಕರು ಅಧಿಕಾರವನ್ನು ಪೂಸಿ ಹೊಡೆಯುತ್ತಾರೆ. ಅವರು ಸತ್ಯವನ್ನೇ ಹೇಳುತ್ತಾರೆ ಎಂದು ಭಾವಿಸಬೇಕಾಗಿಲ್ಲ. ರೂಪಕದ ಭಾಷೆಯನ್ನು ಹೇಳುವುದಿದ್ದರೆ ಅವರು ಗುಟ್ಟಾಗಿ ಪ್ರೀತಿಸುವ ಪ್ರೇಯಸಿಯಂತೆ ಸರಕಾರವನ್ನು ಪ್ರೀತಿಸುತ್ತಾರೆ. ಅವರೂ ಇನ್ನೊಂದು ರೂಪದ ರಾಜಕಾರಣಿಗಳು. ಅವರಿಗೂ ಪ್ರಭುತ್ವಕ್ಕೂ ಒಂದು ನಿಕಟವಾದ ನಂಟು ಇರುತ್ತದೆ. ಯಾರು ಸತ್ಯವನ್ನು ಹೇಳದೆ ಮುಚ್ಚಿ ಇಡುತ್ತಾರೆಯೋ ಅವರನ್ನು ನಂಬುವುದು ಅತ್ಯಂತ ಕಷ್ಟ. ಅವರ ಪ್ರಜ್ಞೆಯೇ ಅನುಮಾನವನ್ನು ಉಂಟು ಮಾಡುತ್ತದೆ. ಸಮೂಹವು ನಮಗೆ ಜ್ಞಾನವನ್ನು ಉತ್ಪಾದಿಸಲು ಎಷ್ಟು ಸಹಾಯವನ್ನು ಮಾಡುತ್ತದೆ ಎಂದು ಯೋಚಿಸಬೇಕೆನ್ನುವುದು ಫುಕೋನ ನಿಲುವು. ಇನ್ನು ಹೆಚ್ಚು ಒತ್ತುಕೊಟ್ಟು ಗಮನಿಸಬೇಕಾಗುತ್ತದೆ ಯಾಕೆಂದರೆ ಡೆಲ್ಯೂಷೆಗಿಂತ ಭಿನ್ನವಾದ ವಾದವನ್ನು ಫುಕೋ ಮಂಡಿಸುವ ಹಾಗೆ ಕಾಣಿಸುತ್ತದೆ. ಒಬ್ಬ ಅತ್ಯಂತ ಹೆಚ್ಚು ತಿಳುವಳಿಕೆಯು ಇರುವವನಿಗೆ ಅಧಿಕಾರ ಮತ್ತು ಅದರ ನಿಯಂತ್ರಣದ ಅರಿವು ಇರುತ್ತದೆ. ಆದರೆ ಅಧಿಕಾರ ಮತ್ತು ಅದರ ಪ್ರತಿನಿಧಿಯಾಗಿ ಒಬ್ಬ ವ್ಯಕ್ತಿಯು ಕೆಲಸವನ್ನು ಮಾಡುತ್ತಾನೆ ಎಂದರೆ ಅವನ ಆಲೋಚನೆಯು ಕೂಡಾ ಭಿನ್ನವಾಗುತ್ತದೆ. ಪ್ರಜ್ಞೆ ಮತ್ತು ಅದರ ಜವಾಬ್ದಾರಿಯನ್ನು ಒಬ್ಬ ವ್ಯಕ್ತಿಯು ಹೇಗೆ ಹೊಂದಿದ್ದಾನೆ ಎನ್ನುವುದೂ ಅತ್ಯಂತ ಮುಖ್ಯ. ಪ್ರಜ್ಞೆ ಮತ್ತು ಸಂಕಥನಗಳು ಒಂದು ಅರ್ಥದಲ್ಲಿ ಒಂದು ವ್ಯವಸ್ಥೆಯ ಭಾಗವೂ ಆಗಬಹುದು. ವ್ಯಕ್ತಿಯು ಒಂದು ಪ್ರಭುತ್ವದ ಪರಿಕರವೂ ಆಗುವ ಅಪಾಯಗಳೂ ಇರುತ್ತವೆ. ಆದ್ದರಿಂದ ವ್ಯಕ್ತಿ ಮತ್ತು ಅವನ ಅವಕಾಶಗಳನ್ನು ಕುರಿತು ನಾವು ಹೆಚ್ಚು ಯೋಚಿಸಬೇಕಾಗುತ್ತದೆ. ಆದ್ದರಿಂದಲೇ ಒಂದು ತಾತ್ವಿಕತೆ ಮತ್ತು ಅದರ ಪ್ರಯೋಗವನ್ನು ನಾವು ಒಟ್ಟಾಗಿ ಮಾತಾಡಲು ಬರುವುದಿಲ್ಲವೆಂದು ಫುಕೋನ ನಿಲುವು.

ಪ್ರಯೋಗವೆಂದರೆ ಅದು ಪ್ರಯೋಗವು ಮಾತ್ರವೇ. ಪ್ರಯೋಗವು ಒಂದು ಹಂತದಲ್ಲಿ ಅದು ಸ್ಥಳೀಯವೂ ಆಗಿರುತ್ತದೆ ಮತ್ತು ಅದರ ಸ್ವರೂಪವನ್ನು ನಾವು ಇದ್ದಕ್ಕಿದ್ದಂತೆ ವಿಶ್ವಾತ್ಮಕ ಮಾಡಲು ಬರುವುದಿಲ್ಲವೆಂದು ಅವನ ನಿಲುವು. ನಾವು

ನಮ್ಮ ಎಚ್ಚೆತ್ತ ಪ್ರಜ್ಞೆಯೊಂದಿಗೆ ಇರಬೇಕಾಗುತ್ತದೆ. ಅದನ್ನು ಪ್ರಜ್ಞಾಪೂರ್ವಕವಾಗಿಯೇ ನೋಡುವುದು ಅಗತ್ಯವಾಗುತ್ತದೆ. ಇಲ್ಲಿ ಬೂರ್ಜ್ವಾಗಳ ಜ್ಞಾನ ಮಾದರಿಗಳು ಬೇರೆಯಿರುತ್ತವೆ ಎಂದು ಫುಕೋ ಹೇಳಿರುವುದೂ ಇಲ್ಲಿ ಉಲ್ಲೇಖನೀಯ.

ಅಧಿಕಾರದ ಜೊತೆಗೆ ಜಗಳವೆಂದರೆ ಅದು ಒಂದರಲ್ಲೊಂದು ಸಿದ್ಧಾಂತದ ಸ್ಥಳೀಯವಾದ ಸಂಘರ್ಷ ಎನ್ನುವುದು ಅವನ ಅಭಿಪ್ರಾಯ. ಅಧಿಕಾರವೆಂದರೆ ಅದು ಅಧಿಕಾರವೇ. ಅದಕ್ಕೆ ಬೇರೆ ಪದವಿಲ್ಲ. ಅದು ನಿಯಂತ್ರಣವನ್ನು ಮಾಡುತ್ತದೆ. ನಿಯಂತ್ರಣವೇ ಅದರ ಗುರಿ. ವಾಸ್ತವವಾಗಿ ಇಲ್ಲಿ ಒಂದು ಉದಾಹರಣೆಯನ್ನು ಫುಕೋ ಕೊಡುತ್ತಾನೆ: ಕೈದಿಯೊಬ್ಬನಿಗೆ ಸರಿಯಾದ ಊಟ, ಸರಿಯಾದ ಪ್ರೀತಿಯು ಸಿಕ್ಕಿದರೆ ಹೇಗೆ ಇರುತ್ತದೆ? ಅಧಿಕಾರವು ತನ್ನ ಚಲಾವಣೆಯನ್ನು ಮಾತ್ರವೇ ನೋಡುತ್ತದೆ. ಅದನ್ನು ಅದು ಒಂದು ಕೌಶಲವೆಂದು ಭಾವಿಸುತ್ತದೆ. ಪ್ರಭುತ್ವವು ತನ್ನ ನೈತಿಕವಾದ ನಿಲುವನ್ನು ಒಂದು ಹಕ್ಕು ಎಂದು ಭಾವಿಸುತ್ತದೆ. ಕೈದಿಗೆ ಪ್ರಭುತ್ವವು ಹೇಳುವುದೇ ಬೇರೆ. ಅದು ಹೇಳುತ್ತದೆ: ನೀನು ದರೋಡೆ ಮಾಡಿದ್ದಿಯಾ ಅದಕ್ಕಾಗಿಯೇ ನಿನಗೆ ಈ ಶಿಕ್ಷೆಯನ್ನು ಕೊಡುತ್ತಿದ್ದೇನೆ. ನಿನಗೆ ಶಿಕ್ಷೆಯನ್ನು ಕೊಡುವುದು ನನ್ನ ಹಕ್ಕು ದರೋಡೆಯನ್ನು ಮಾಡುವುದು ಕ್ರಿಮಿನಲ್ ಚಟುವಟಿಕೆ. ಅದನ್ನು ಅಧಿಕಾರವು ಅತ್ಯಂತ ಖುಶಿಯಿಂದ ಹೇಳಿಕೊಳ್ಳುತ್ತದೆ. ಆದರೆ ಅದಕ್ಕೆ ಅದು ಕೊಡುವ ಒಂದು ಚೌಕಟ್ಟು ಮಾತ್ರವೇ ಬೇರೆ. ಅದು ಹೇಳುವುದು ಭಿನ್ನವಾದ ಧ್ವನಿಯಲ್ಲಿ ಎಂದು ಗಮನಿಸಬೇಕಾಗುತ್ತದೆ. ಆದರೆ ನೋಡಬೇಕಾದದ್ದು ಬೇರೆಯಿದೆ. ಅದು ಕೇಡು ಮತ್ತು ಒಳ್ಳೆಯದನ್ನು ಭಿನ್ನವಾಗಿ ಹೇಳುತ್ತದೆ. ನಿಯಮ ಮತ್ತು ನಿಯಮೇತರ ಎನ್ನುವುದರ ನಡುವೆ ಇರುವ ತಾರತಮ್ಯವನ್ನು ಈ ದೃಷ್ಟಿಯಿಂದ ನೋಡಬೇಕಾಗುತ್ತದೆ. ಇದಕ್ಕೆ ಅತ್ಯಂತ ಮಜಾ ಎನ್ನಿಸಬಹುದಾದ ಉತ್ತರವನ್ನು ಡೆಲ್ಯೂಷೆ ಕೊಡುತ್ತಾನೆ: ಇದಕ್ಕೆ ಉಲ್ಟಾ ರೀತಿಯಲ್ಲಿ ನಾವು ನೋಡಬೇಕು. ಕೈದಿಗಳನ್ನು ಮಕ್ಕಳ ಥರ ನೋಡುವುದಲ್ಲ. ಮಕ್ಕಳನ್ನು ಕೈದಿಗಳ ಥರ ನೋಡುವುದನ್ನು ನಾವು ಬಿಡಬೇಕಾಗುತ್ತದೆ. ಒಂದು ರಿಫಾರ್ಮ್ ಆಗಬೇಕಾಗುತ್ತದೆ. ಅವನ ಪ್ರಕಾರ ಸ್ಕೂಲ್ ಎನ್ನುವುದು ಜೈಲಿನಂತೆ ಮತ್ತು ಜೈಲು ಎನ್ನುವುದು ಸ್ಕೂಲಿನಂತೆ ಇದೆ. ಯಾವಾಗ ಮನುಷ್ಯನು ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡು ಮಾತಾಡಲು ಪ್ರಾರಂಭ ಮಾಡುತ್ತಾನೆಯೋ ಮತ್ತು ತನಗೆ ತೋಚಿದಂತೆ ವರ್ತಿಸುತ್ತಾನೆಯೋ ಅದರಲ್ಲಿ ನಿಜವಾಗಿಯೂ ಹೊಸದಾದ ಸಾಧ್ಯತೆಯು ಸಿಕ್ಕುತ್ತದೆ. ಆದರೆ ಅವನು ಮಾತಾಡುವುದು ಯಾವುದರ ಪರ ಎನ್ನುವುದು ಅವನಿಗೆ ಹೆಚ್ಚು ಖಚಿತವಾಗಬೇಕಾಗುತ್ತದೆ. ಫುಕೋನ ಒಂದು ಅಭಿಪ್ರಾಯವನ್ನು ಅವನು ಮತ್ತೆ ನೆನಪು ಮಾಡಿಕೊಳ್ಳುತ್ತಾನೆ: ನ್ಯಾಯ ಎನ್ನುವುದರ ವಿರುದ್ಧ ಯಾವುದೇ ಜನಪ್ರಿಯವಾದ ನ್ಯಾಯವು ಇರುವುದಿಲ್ಲ.

ಫುಕೋ ಇದನ್ನು ಮತ್ತೆ ಮುಂದುವರಿಸುತ್ತಾನೆ: ಜನರು ಈಗ ಹೇಗೆ ಇದ್ದಾರೆ ಎಂದರೆ ಜನರಿಗೆ ಈವತ್ತು ನ್ಯಾಯ ಬಗ್ಗೆ ಯಾವುದೇ ಭರವಸೆಯು ಇಲ್ಲವಾಗಿದೆ. ಅಧಿಕಾರಗಳು ಎಂದರೆ ಅದು ನ್ಯಾಯಾಲಯಗಳು ಅಲ್ಲ. ನ್ಯಾಯಾಲಯಗಳ ವಿರುದ್ಧ ಈವತ್ತು ನಾವು ಹೋರಾಟವನ್ನು ಮಾಡುತ್ತಿದ್ದೇವೆ ಎಂದರೆ ಅದು ನಿರ್ದಿಷ್ಟವಾದ ಅಧಿಕಾರದ ವಿರುದ್ಧ ನಾವು ಹೋರಾಟವನ್ನು ಮಾಡುತ್ತಿರುವುದು. ಕೋರ್ಟು ಮತ್ತು ಅದರ ಸಂಹಿತೆಗಳು ಈವತ್ತು ಒಂದು ವರ್ಗದ ಹಿತಾಸಕ್ತಿಯನ್ನು ಮಾತ್ರವೇ ಹೇಳುತ್ತವೆ. ಆದರೆ ಅವುಗಳ ಹಿತಾಸಕ್ತಿಯು ಮಧ್ಯಮವರ್ಗ ಅಥವಾ ಕೆಳವರ್ಗದ ಬಗ್ಗೆ ಅಲ್ಲ. ಸತ್ಯವು ಅನ್ವೇಷಣೆಗೆ ಸಂಬಂಧಪಟ್ಟಿದೆ ಎಂದು ಫುಕೋ ಹೇಳುತ್ತಾನೆ. ಅದಕ್ಕೆ ಒಂದು ನಿರ್ದಿಷ್ಟವಾದ ರೂಪ ಎನ್ನುವುದು ಇಲ್ಲ. ಅದು ನಮ್ಮ ಗ್ರಹಿಕೆಗೆ ಮಾತ್ರವೇ ಬರುತ್ತದೆ ಎಂದು ಫುಕೋ ಹೇಳುತ್ತಾನೆ. ಬೇರೆ ಬೇರೆ ಘಟನೆಗಳನ್ನು ನೋಡಿಕೊಂಡು ನಾವು ಯಾವುದು ಸತ್ಯ ಎಂದು ಹೇಳುತ್ತೇವೆ. ಸತ್ಯ ಎನ್ನುವುದು ಒಂದು ಬಗೆಯಲ್ಲಿ ಸಂವಾದಿಯೂ ಹೌದು ಎನ್ನುವುದು ಅವನ ವಾದ. ಸುಳ್ಳು ಮತ್ತು ಸತ್ಯಗಳ ನಡುವೆ ಅಂತರವು ಇದೆ ಎಂದು ಅವನು ಗುರುತಿಸುತ್ತಾನೆ. ಸಾಂಪ್ರದಾಯಿಕವಾಗಿ ಸತ್ಯವನ್ನು ನಾವು ವಾಸ್ತವ ಎಂದು ಕರೆಯುತ್ತೇವೆ.

ಬೂರ್ಜ್ವಾ ತಾತ್ವಿಕತೆಯನ್ನು ಮಾತ್ರವೇ ಅದು ಹೇಳುತ್ತದೆ. ಆದರೆ ಇದನ್ನು ನಾವು ಈವತ್ತು ಒಂದು ಜಾಗತಿಕವಾದ ಮಟ್ಟದಲ್ಲಿ ನೋಡಬೇಕು ಎನ್ನುವುದು ಡೆಲ್ಯೂಷೆಯ ನಿಲುವು. ಜನಾಂಗವಾದ ಮತ್ತು ಅದರ ಒತ್ತಡಗಳೂ ಈವತ್ತು ಜಾಗತಿಕವಾದ ಮಟ್ಟದಲ್ಲಿದೆ ಎಂದು ಅವನು ಹೇಳುತ್ತಾನೆ. ಒತ್ತಡಕ್ಕೆ ಸಿಕ್ಕಿದವರ ಏಕತೆಯು ಹೆಚ್ಚು ಅಗತ್ಯವೆಂದು ಅವನು ಪ್ರತಿಪಾದಿಸುತ್ತಾನೆ. ಜಾಗತಿಕವಾದ ಅಧಿಕಾರದ ಕೇಂದ್ರಗಳನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಈ ವಾಸ್ತವವನ್ನು ಈವತ್ತು ಅರ್ಥಮಾಡಿಕೊಂಡದ್ದು ಕಮ್ಯುನಿಸ್ಟ್ ಪಾರ್ಟಿಗಳು ಎನ್ನುವುದರ ಬಗ್ಗೆ ಅವನಿಗೆ ಅನುಮಾನವೂ ಇಲ್ಲ. ನಿಜವಾಗಿಯೂ ಈವತ್ತು ಜೈಲಿನಲ್ಲಿ, ಶಾಲೆಗಳಲ್ಲಿ, ಬ್ಯಾರಕ್‌ಗಳಲ್ಲಿ, ಫ್ಯಾಕ್ಟರಿಗಳಲ್ಲಿ ಏನು ನಡೆಯುತ್ತದೆ ಎಂದು ನೋಡಬೇಕಾಗುತ್ತದೆ. ಆದರೆ ಅಧಿಕಾರದ ಕೇಂದ್ರವನ್ನು ಬಿಟ್ಟು ನಾವು ಯೋಚನೆಯನ್ನು ಮಾಡುವುದು ಅಸಾಧ್ಯ ಎನ್ನುವುದು ಫುಕೋನ ಅಭಿಪ್ರಾಯ. ಯಾವುದನ್ನು ನಾವು ಪ್ರಭುತ್ವ ಎಂದು ಹೇಳುತ್ತೇವೆಯೋ ಅದರ ಸ್ವರೂಪವನ್ನು ಒಂದು ಸರಕಾರವು ಮಾತ್ರವೇ ನಿರ್ದೇಶಿಸುವುದಿಲ್ಲ. ಅದರ ಹಿಂದೆ ಒಂದು ಆಳುವ ವರ್ಗ ಮತ್ತು ಅದರ ಆಕಾಂಕ್ಷೆಗಳೂ ಇರುತ್ತವೆ. ಆದ್ದರಿಂದ ನಮ್ಮ ವಿಶ್ಲೇಷಣೆಯು ಭಿನ್ನವಾಗುತ್ತವೆ. ಆದರೆ ಇದರಲ್ಲಿ ಒಂದು ನಿರ್ದಿಷ್ಟವಾದ ದಿಕ್ಕು ಇರುತ್ತದೆ. ಅನೇಕ ರೀತಿಯ ಪ್ರಭುತ್ವಗಳು ಇರುತ್ತವೆ. ಉದಾಹರಣೆಗೆ ಮನೆಯನ್ನು ಬಾಡಿಗೆ ಕೊಟ್ಟವನು ಕೆಲವು ನಿರ್ದೇಶನ ನೀಡುತ್ತಾನೆ. ಪತ್ರಿಕೆಯಲ್ಲಿ ವರದಿ ಮಾಡುವವನು ತನ್ನ ಸಣ್ಣಬಾಸ್‌ಗೆ

ತಲೆತಗ್ಗಿಸಬೇಕಾಗುತ್ತದೆ. ಇವರ ವಿರುದ್ಧ ಹೋರಾಟವನ್ನು ಮಾಡುವುದು ಕೂಡಾ ಮುಖ್ಯವಾದ ಒಂದು ವಿಷಯವೇ ಆಗಿರುತ್ತದೆ. ಕೆಲವು ನಾವು ಹೇಳದ ವಿಷಯಗಳು ಇರುತ್ತವೆ. ಹಾಗೆ ನೋಡಿದರೆ ಬರಹವೆನ್ನುವುದೇ ನಮಗೆ ಬಹಳ ದೊಡ್ಡದಾದ ಆಯುಧ. ನಾವು ಒತ್ತಡಕ್ಕೆ ಸಿಕ್ಕಿದ ಅನೇಕ ಅಂಶಗಳನ್ನು ಹೇಳಲು ಸಾಧ್ಯವಾಗುತ್ತದೆ. ಫುಕೋ ಅದನ್ನು ವಿದ್ರೋಹಾತ್ಮಕವಾದ ಕ್ರಿಯೆ ಎಂದು ಹೇಳುತ್ತಾನೆ. ಆದರೆ ಇದಕ್ಕೂ ಡೆಲ್ಯೂಷೆ ಉತ್ತರವನ್ನು ಕೊಡುತ್ತಾನೆ: "ಆದರೆ ನಮಗೆ ಗೊತ್ತಿರುತ್ತದೆ: ಯಾರು ನಮ್ಮನ್ನು ಶೋಷಣೆ ಮಾಡುತ್ತಾರೆ ಮತ್ತು ಯಾರು ನಮ್ಮನ್ನು ಬಳಸಿಕೊಂಡು ಲಾಭವನ್ನು ಮಾಡುತ್ತಾರೆ ಅಂತ. ಅಧಿಕಾರಕ್ಕೆ ಅತ್ಯಂತ ಚೆನ್ನಾಗಿ ಒಂದು ಅಂಶವು ಗೊತ್ತಿರುತ್ತದೆ. ಅದು ತನ್ನ ಸ್ವಹಿತಾಸಕ್ತಿಯನ್ನು ಹೇಗೆ ಉಳಿಸಿಕೊಳ್ಳಬೇಕು ಎಂದು ಅದು ಅರ್ಥಮಾಡಿಕೊಂಡಿರುತ್ತದೆ. ವಾಸ್ತವವಾಗಿ ಹಣವನ್ನು ಹೂಡಿಕೆ ಮಾಡುವಾಗಲೇ ಅದರ ಲಾಭ ಮತ್ತು ನಷ್ಟವನ್ನು ಯೋಚನೆ ಮಾಡಿರುತ್ತಾರೆ. ಅದು ಪ್ರಜ್ಞಾಪೂರ್ವಕವಾಗಿರಬಹುದು ಇಲ್ಲವೇ ಅಪ್ರಜ್ಞಾಪೂರ್ವಕವಾಗಿರಬಹುದು ಆದರೆ ಅದು ಆಗುತ್ತದೆ. ನಮ್ಮ ಆಸಕ್ತಿಯನ್ನು ಅದು ನಿರ್ದೇಶಿಸುತ್ತದೆ. ಬಯಕೆ ಮತ್ತು ಅದರ ಹೂಡಿಕೆಗಳು ನಮ್ಮ ಮೇಲೆ ಪ್ರಭಾವವನ್ನು ಬೀರುತ್ತದೆ" ಅಧಿಕಾರಕ್ಕೆ ಅಂಥಾ ವ್ಯತ್ಯಾಸವು ಇಲ್ಲ. ಬಯಕೆಯನ್ನು ಪ್ರಚೋದಿಸುವುದು ಬಂಡವಾಳವಾದದ ಗುಣ. ಈ ವಿಷಯದಲ್ಲಿ ಅಂದರೆ ಅಧಿಕಾರವನ್ನು ಹೇಳುವಾಗ ನಾವು ಒಬ್ಬ ಪೋಲೀಸನಿಗೂ ಒಬ್ಬ ಪ್ರಧಾನಮಂತ್ರಿಗೂ ಅಂಥಾ ವ್ಯತ್ಯಾಸವು ಇಲ್ಲ. ನಿಜವಾಗಿಯೂ ಒಂದು ವರ್ಗವು ನಮಗೆ ನಿರ್ದಿಷ್ಟವಾದ ಒಂದು ಬಯಕೆಯನ್ನು ಹುಟ್ಟಿಸುತ್ತದೆ ಎಂದು ಫುಕೋ ಹೇಳುತ್ತಾನೆ: 'ಬಯಕೆ, ಅಧಿಕಾರ, ಮತ್ತು ಆಸಕ್ತಿಗಳ ವಿಚಾರವು ಅತ್ಯಂತ ಸಂಕೀರ್ಣವಾಗಿದೆ' ಆದರೆ ಇನ್ನೂ ಮತ್ತೊಂದು ವಿಚಾರವನ್ನು ಹೇಳಬೇಕೆಂದರೆ ಅಧಿಕಾರವು ನಮಗೆ ಬರೀ ಅಧಿಕಾರವನ್ನು ಮಾತ್ರವೇ ಹೇಳುವುದಿಲ್ಲ. ಅದು ನಮಗೆ ಅದರ ಆಸಕ್ತಿಯನ್ನು ಸೂಚಿಸುತ್ತದೆ. ಆದರೆ ಬಹಳ ಹಿಂದೆಯೇ ನಾವು ಶೋಷಣೆ ನಡೆಯುತ್ತದೆ ಎಂದು ಅರ್ಥಮಾಡಿಕೊಂಡಿದ್ದೇವೆ. ಆದ್ದರಿಂದ ಈವತ್ತು ನಾವು ಸ್ಥಳ, ಕಾಲ, ಮತ್ತು ಸಿದ್ಧಾಂತ ರಹಿತವಾದ ಹೋರಾಟಗಳನ್ನು ಮಾಡಬೇಕಾಗುತ್ತದೆ. ಅಧಿಕಾರ ಮತ್ತು ಅದರ ಚಹರೆಗಳು ಯಾವುದು ಎಂದು ಶೋಧನೆ ಮಾಡಬೇಕಾಗುತ್ತದೆ. ಇದಕ್ಕೆ ಪ್ರತಿಯಾಗಿ ಡೆಲ್ಯೂಷೆ ಮತ್ತೊಂದು ಮಾತನ್ನು ಹೇಳುತ್ತಾನೆ: 'ಈವತ್ತು ಕ್ರಾಂತಿಕಾರಕವಾದ ಚಟವಟಿಕೆಗಳು ಬಹುಕೇಂದ್ರದಲ್ಲಿ ನಡೆಯುತ್ತವೆ. ನಮಗೆ ಒಂದು ನಿರ್ದಿಷ್ಟವಾದ ಹೋರಾಟದ ನೆಯ್ಗೆಯು ಇದೆ.'

ಫುಕೋ ಹೇಳುತ್ತಾನೆ: 'ಸರಿ, ಆದ್ದರಿಂದ ಈವತ್ತು ನೀವು ಯಾವ ಬಗೆಯ ಶೋಷಣೆಯ ಕುರಿತು ಹೋರಾಟವನ್ನು ಮಾಡುತ್ತಿದ್ದೀರಿ ಎಂದು ನಿಗದಿ ಮಾಡಿಕೊಳ್ಳಿ. ಅದರ ತಾತ್ವಿಕತೆಯು ಏನು ಎಂದು ಹೇಳಿ. ಒಂದು ನಿರ್ದಿಷ್ಟವಾದ

ಚಟುವಟಿಕೆಯನ್ನು ಸ್ಥಳದಲ್ಲಿ ಹಾಕಿಕೊಳ್ಳಿ. ರೈತರು ಈವತ್ತು ಬಂಡವಾಳಶಾಹಿಗಳ ಶೋಷಣೆಗೆ ಗುರಿಯಾಗುತ್ತಾರೆ. ಮಹಿಳೆಯರು, ಹೊಮೋಸೆಕ್ಷುವಲ್ಸ್, ಕೈದಿಗಳು, ಆಸ್ಪತ್ರೆಯಲ್ಲಿ ರೋಗಿಗಳು, ಬೇರೆ ಬೇರೆ ಮಾದರಿಯ ಅಧಿಕಾರದ ಕೆಳಗೆ ಸಿಕ್ಕಿ ಹಾಕಿಕೊಂಡಿದ್ದಾರೆ. ಅಲ್ಲೆಲ್ಲಾ ನಿರ್ದಿಷ್ಟವಾದ ಅಧಿಕಾರಗಳು ಇವೆ. ಯಜಮಾನರುಗಳ ಜಾಗವನ್ನು ಪಲ್ಲಟ ಮಾಡಬೇಕಾದ ಅಗತ್ಯವಿದೆ. ಈ ಮೇಲೆ ಹೇಳಿದ ಅನೇಕ ಸಂಗತಿಗಳು ರೈತರ ಹೋರಾಟದ ಜೊತೆಗೆ ನಡೆಯಬೇಕಾಗುತ್ತದೆ. ಯಾಕೆಂದರೆ ಇಂದು ಒಂದೇ ಅಧಿಕಾರವು ನಿಯಂತ್ರಣವನ್ನು ಮಾಡುತ್ತದೆ. ಆದರೆ ಇವುಗಳು ಸಮಗ್ರವಾದ ಒಂದು ಸಿದ್ಧಾಂತವಲ್ಲ. ಅದರ ಬದಲಿಗೆ ಇದು ಸತ್ಯವನ್ನು ಹುಡುಕುವ ಒಂದು ಯತ್ನವೂ ಹೌದು. ನಾವು ಅಧಿಕಾರ ಮತ್ತು ಅದರ ಮೂಲವು ಯಾವುದು ಎಂದು ಹುಡುಕಬೇಕಾಗಿದೆ. ಅಧಿಕಾರ ಮತ್ತು ಅದರ ರೂಪವು ಆನ್ವಯಿಕವೂ ಆಗಿದೆ. ಕೊನೆಗೆ ಡೆಲ್ಯೂಷೆ ಹೇಳುತ್ತಾನೆ: 'ವಾಸ್ತವವಾಗಿ ಪ್ರತಿಯೊಂದು ಹೋರಾಟವೂ ಮೂಲಭೂತವಾಗಿ ಆಂಶಿಕವೇ ಆದರೂ ಕೊನೆಯದಾಗಿ ಅದು ಕಾರ್ಮಿಕರ ಹೋರಾಟದಲ್ಲಿಯೇ ಮುಕ್ತಾಯವಾಗುತ್ತದೆ. ಇಲ್ಲವೇ ಆಗಬೇಕಾಗುತ್ತದೆ. ಇದು ವಾಸ್ತವ' (ಮಿಶಯಲ್ ಫುಕೋ ಮತ್ತು ಗಿಲ್ಲಿಸ್ ಡೆಲ್ಯೂಷೆ 1977 ಇಂಟಲೆಕ್ಚುವಲ್ ಅಂಡ್ ಪವರ್ – ಕೌಂಟರ್ ಮೆಮರಿ ಪ್ರಾಕ್ಟೀಸ್ : ಸೆಲೆಕ್ಟಡ್ ಇಂಟರ್ ವ್ಯೂಸ್ ಸಂ: ಡಿ.ಎಫ್. ಬೌಚಾರ್ಡ್ ಕಾರ್ನಲ್ ಯುನಿರ್ವಸಿಟಿ ಪ್ರೆಸ್ 205– 217) ಹಾಗೆ ನೋಡಿದರೆ ಜ್ಞಾನವೇ ನಮಗೆ ಬೇರೆ ಬೇರೆ ತೊಡಕುಗಳನ್ನು ತಂದು ಹಾಕುತ್ತದೆ. ಅದರಲ್ಲಿ ಅನೇಕ ಸಮಸ್ಯೆಗಳು ಇರುತ್ತವೆ. ಕೆಲವು ಜ್ಞಾನಗಳು ನಮಗೆ ಉಪಯೋಗಕ್ಕೆ ಬರುವುದೂ ಇಲ್ಲ. ಅವುಗಳು ಕಡತದಲ್ಲಿ, ಪುಸ್ತಕಗಳಲ್ಲಿ ಹಾಯಾಗಿ ಮಲಗಿರುತ್ತವೆ. ಮಾರ್ಕ್ಸ್‌ವಾದ ಮತ್ತು ಮನೋವಿಜ್ಞಾನವು ನಮಗೆ ಬೇರೆ ಪರಿಕರಗಳನ್ನು ಕೊಡುತ್ತವೆ. ಅದರಲ್ಲಿ ವಿವಿಧ ರೀತಿಯ ಸಂಕಥನಗಳು ಇರುತ್ತವೆ. ಅದನ್ನು ನಾವು ಗಮನಿಸಬೇಕಾಗುತ್ತದೆ.

1. ಫುಕೋ ರೀಡರ್

2. ಮಿಶಯಲ್ ಫುಕೋ ಅಂಡ್ ಗಿಲ್ಲಿಷ್ ಡೆಲ್ಯೂಷೆ 1997

ಇಂಟಲೆಕ್ಚುವಲ್ ಅಂಡ್ ಪವರ್ – ಕೌಂಟರಿಮೆಮೊರಿ

ಪ್ರಾಕ್ಟೀಸ್ : ಸೆಲೆಕ್ಟೆಡ್ ಇಂಟರ್‌ವ್ಯೂಸ್

(ಎಡಿಟರ್ : ಡಿ.ಎಫ್. ಬೌಚಾರ್ಡ್ ಕಾರ್ನೆಲ್ ಯುನಿರ್ವಸಿಟಿ ಪ್ರೆಸ್)

16. ಕಾರ್ಮಿಕರು ಸಿದ್ಧಾಂತ ಮತ್ತು ಅದರ ಮೌಲ್ಯಗಳ ವಿವೇಚನೆ

ಮಾರ್ಕ್ಸ್‌ವಾದದ ಪ್ರಕಾರ ಎಲ್ಲಿ ಸಂಪನ್ಮೂಲದ ಕೊರತೆಯು ಆಗುತ್ತದೆಯೋ ಅಗ ಅದರ ಪರಿಣಾಮವು ಜನರ ಮೇಲೆ ಆಗುತ್ತದೆ. ಅದರಲ್ಲಿಯೂ ಅದು ಹೆಚ್ಚು ಪರಿಣಾಮವನ್ನು ಬೀರುವುದು ಕಾರ್ಮಿಕರ ಮೇಲೆ. ಯಾರೋ ಒಂದಿಬ್ಬರ ಖಾಸಗಿ ಆಸಕ್ತಿ ಮತ್ತು ಅವರು ಹಣವನ್ನು ಚಲಾಯಿಸುವ ರೀತಿಯನ್ನು ನೋಡಿ ನಾವು ಇಡೀ ಸಮಾಜವೇ ಅಭಿವೃದ್ಧಿಯಾಯಿತು ಎಂದು ಹೇಳುವುದು ಕಷ್ಟ. ಹಣವೆನ್ನುವುದನ್ನು ನಾವು ವಿವರಿಸುವುದು ಕಷ್ಟ. ಖಾಸಗಿಯಾದ ಅಭಿವೃದ್ಧಿಯೇ ಸಾಮಾಜಿಕ ಅಭಿವೃದ್ಧಿ ಎಂದು ಹೇಳಲು ಬರುವುದೂ ಇಲ್ಲ. ಒಂದು ಸಮಾಜವು ಜನರ ಪರವಾಗಿ ಇಲ್ಲದೆ ಹೋದರೆ ಕಾರ್ಮಿಕ ವರ್ಗದ ಪರಿಸ್ಥಿತಿಯನ್ನು ಹೇಳುವುದು ಅಸಾಧ್ಯ. ಬಂಡವಾಳವಾದಿ ವ್ಯವಸ್ಥೆಯಲ್ಲಿ ಕಾರ್ಮಿಕರು ಉತ್ಪನ್ನದ ಹೆಚ್ಚಿನ ಭಾಗವನ್ನು ಪಡೆಯುವುದಿಲ್ಲವೆನ್ನುವುದೂ ಅಷ್ಟೇ ಸತ್ಯ. ಹಾಗೆ ನೋಡುವುದಿದ್ದರೆ ಕಾರ್ಮಿಕರು ಪಡೆಯುವ ವೇತನವು ಉತ್ಪನ್ನದ ಅರ್ಧ ಭಾಗದಷ್ಟೂ ಆಗುವುದಿಲ್ಲ. ಲಾಭದ ನಾಲ್ಕನೆಯ ಒಂದು ಭಾಗವೂ ಕಾರ್ಮಿಕರಿಗೆ ತಲುಪುವುದೂ ಇಲ್ಲ. ರಾಜಕೀಯ ಆರ್ಥಿಕ ತಜ್ಞರ ಪ್ರಕಾರ ಕಾರ್ಮಿಕರ ಒಟ್ಟು ಶ್ರಮವನ್ನು ಲೆಕ್ಕ ಹಾಕದೇ ಬಂಡವಾಳ, ಅದರ ಹೂಡಿಕೆ, ಅದರ ಲಾಭ, ಹಾಗೂ ಅದರ ಒಟ್ಟು ಉತ್ಪಾದನೆಯನ್ನು ಲೆಕ್ಕ ಹಾಕಬೇಕು. ಆದರೆ ಅದು ಆಗುವುದೂ ಇಲ್ಲ.

ಬಂಡವಾಳವು ಒಂದು ಉದ್ಯಮ ಕ್ಷೇತ್ರಕ್ಕೆ ಪ್ರವೇಶಿಸುವಾಗ ಅದರ ಬೆಲೆ ಅದರ ಹಿಂದಿನ ಶಕ್ತಿ ಎರಡೂ ನಮ್ಮ ಗಮನಕ್ಕೇ ಬರಬೇಕು. ಹಣವು ಒಂದು ಸಂದರ್ಭದಲ್ಲಿ ಮನುಷ್ಯರನ್ನು ಸುಖದ ಕಡೆಗೆ ತಳ್ಳಿತು. ಕಾರ್ಮಿಕರ ಶಕ್ತಿಯನ್ನು ನಾವು ಮನಗಾಣುವುದೇ ಇಲ್ಲ. ಅವರು ತಮ್ಮ ಜೀವನವನ್ನು ಉತ್ಪಾದನೆಗೆ ಬಲಿ ನೀಡುತ್ತಾರೆ. ಮನುಷ್ಯರಾಗಿ ಅವರು ತಮ್ಮ ಜೀವನವನ್ನು ವ್ಯವಸ್ಥೆಗೆ ಬಲಿ ನೀಡುತ್ತಾರೆ. ರಾಜಕೀಯ ಅರ್ಥಶಾಸ್ತ್ರಜ್ಞರ ಪ್ರಕಾರ ಕಾರ್ಮಿಕರ ದುಡಿಮೆಗೆ ಕೇವಲ ನಿಗದಿತ

ಬೆಲೆಯಿದೆ. ಆದರೆ ಅದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ ನಾವು ಅನೇಕ ವಿಷಯಗಳನ್ನು ನೋಡುವುದೇ ಇಲ್ಲ. ಬಂಡವಾಳವಾದವು ತನ್ನ ಲಾಭಕ್ಕೆ ತನ್ನ ಕಾರ್ಮಿಕರನ್ನೇ ಬಲಿ ತೆಗೆಯುತ್ತದೆ. ಅಷ್ಟೇ ಅಲ್ಲ ಅದು ಏನು ಮಾಡುತ್ತದೆ ಎಂದರೆ ಕಾರ್ಮಿಕರಿಗಾಗಿ ಕಾನೂನನ್ನು ರೂಪಿಸುತ್ತದೆ. ಕಾರ್ಮಿಕರು ಎಷ್ಟು ಹೊತ್ತು ಕೆಲಸವನ್ನು ಮಾಡಬೇಕು ಎನ್ನುವುದನ್ನು ನಿರ್ಧರಿಸುವುದು ಬಂಡವಾಳವಾದವೇ. ಅದರೊಂದಿಗೆ ಅವರು ಕಾರ್ಮಿಕರನ್ನು ಆಶ್ರಯಿಸುವುದು ಕೂಡಾ ಸ್ವ ಲಾಭಕ್ಕಾಗಿ. ಆದರೆ ಕಾರ್ಮಿಕರು ಬಂಡವಾಳಿಗನನ್ನು ಆಶ್ರಯಿಸುವುದು ತಮ್ಮ ಹಸಿವೆಯನ್ನು ನೀಗಿಸುವುದಕ್ಕಾಗಿ ಮಾತ್ರ.

ತಮಾಷೆಯ ವಿಷಯವೆಂದರೆ ಬಂಡವಾಳಿಗರು ತಾವೇ ಕಾರ್ಮಿಕರಿಗಿಂತ ಶ್ರೇಷ್ಠವೆಂದು ಭಾವಿಸಿಕೊಳ್ಳುವುದು. ಹಾಗೂ ಅವರು ತಮ್ಮ ಶಕ್ತಿಯನ್ನು ಪ್ರದರ್ಶಿಸುವುದು ತಮ್ಮ ಸ್ಪರ್ಧೆಗಾಗಿ ಎನ್ನುವುದೂ ಇಲ್ಲಿ ಉಲ್ಲೇಖನೀಯ. ಕಾರ್ಮಿಕನು ತನ್ನ ಎಲ್ಲಾ ಶಕ್ತಿಯನ್ನು ಬಳಸಿಕೊಳ್ಳುವುದು ಹಾಗೂ ತನ್ನ ಸಮಯವನ್ನು ಮೀಸಲಿಡುವುದು ಬಂಡವಾಳಿಗರನ್ನು ಉದ್ಧಾರ ಮಾಡುವುದಕ್ಕೆ. ಆದರೆ ಬಂಡವಾಳಿಗರು ತಮ್ಮ ಸಮಯವನ್ನು ಮೀಸಲಿಡುವುದು ಲಾಭ ಮತ್ತು ಮೋಜಿಗಾಗಿ. ವ್ಯಕ್ತಿಗಳಾಗಿ ಅವರಿಗೆ ಉತ್ಪಾದನೆಯ ಜೊತೆಗೆ ನೇರ ಸಂಪರ್ಕವಿಲ್ಲ. ಆದರೆ ಕಾರ್ಮಿಕರಿಗೆ ಅದು ಇದೆ. ಬಂಡವಾಳಿಗರು ಆದಾಯ ಹಾಗೂ ಲಾಭವನ್ನು ಮಾತ್ರವೇ ಲೆಕ್ಕ ಹಾಕುತ್ತಾರೆ. ಹಾಗಾಗಿ ಅವರದು ಕೇವಲ ವರ್ತಮಾನದ ದೃಷ್ಟಿ. ಆದರೆ ಅವರು ಅದನ್ನು ಪಡೆಯುವುದು ಕಾರ್ಮಿಕರ ಶಕ್ತಿಯಿಂದ ಎಂಬುದನ್ನು ಮರೆಯುತ್ತಾರೆ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು– ಅದು ಕಾರ್ಮಿಕರು ಅಂದರೆ ಕೇವಲ ಬಿಡಿಯಾದ ವ್ಯಕ್ತಿಗಳು ಅಲ್ಲ. ಅವರೆಂದರೆ ಉತ್ಪಾದಕ ಶಕ್ತಿಗಳು ಮಾತ್ರ. ನಾವೀಗ ಮತ್ತೊಂದು ಅಂಶವನ್ನು ಗಮನಿಸಬೇಕು ಕಾರ್ಮಿಕರು ಯಾಕೆ ದುಡಿಯುತ್ತಾರೆ ಎಂದು ಕೇಳಿದರೆ ಅದರ ಸ್ವರೂಪವನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯ. ಅವರು ದುಡಿಯುವುದು ತಮ್ಮ ಹಸಿವೆಯನ್ನು ನೀಗುವುದಕ್ಕಾಗಿ. ಬಂಡವಾಳವೆಂದರೆ ಉತ್ಪಾದನೆಗೆ ಹಾಕುವ ಮೊತ್ತ. ಆದರೆ ಅದರಲ್ಲಿ ಕಾರ್ಮಿಕರನ್ನೂ ಒಂದು ಬಂಡವಾಳವೆಂದು ಹೇಳುವುದಿಲ್ಲ. ಅದು ನಮ್ಮ ಮುಂದೆ ಇರುವ ಸಮಸ್ಯೆಯೂ ಹೌದು.

ಬಂಡವಾಳಿಗರು ತಾವು ಕೂಲಿಯನ್ನು ಎಷ್ಟು ಕೊಟ್ಟಿದ್ದೇವೆ ಎಂದು ಮಾತ್ರವೇ ಲೆಕ್ಕ ಹಾಕಿ ಅದರ ಲಾಭವನ್ನು ಮಾತ್ರವೇ ಗಮನಕ್ಕೆ ಇಟ್ಟುಕೊಂಡು ಉಳಿದದ್ದೂ ತಮ್ಮ ಪಾಲು ಎಂದು ಮಾತ್ರವೇ ಗಮನಿಸುತ್ತಾರೆ. ಆದರೆ ಕಾರ್ಮಿಕರ ದೇಹ ಮತ್ತು ಅವರ ಮನಸ್ಸು ಉತ್ಪಾದನೆಯಲ್ಲಿ ಎಷ್ಟು ಬಳಕೆಯಾಗಿದೆ? ಅದರಲ್ಲಿ ಅವರ ನೋವು ಎಷ್ಟು? ಅದಕ್ಕೆ ಯಾವುದನ್ನು ನೀಡಬೇಕು ಎನ್ನುವುದನ್ನು ಬಂಡವಾಳಿಗರು

ಮರೆಯುತ್ತಾರೆ. ಇದನ್ನು ನಾವು ಹೀಗೂ ಗಮನಿಸಬೇಕು–ವಾಸ್ತವವಾಗಿ ಕಾರ್ಮಿಕರಿಗೆ ತಾವು ಯಾವ ಸನ್ನಿವೇಶದಲ್ಲಿ ಬದುಕುತ್ತಿದ್ದೇವೆ ಎನ್ನುವುದರ ಅರಿವೇ ಇರುವುದಿಲ್ಲ. ಅವರು ದುಡಿಯುತ್ತಾರೆ ಆದರೆ ಅದರ ಪರಿಣಾಮವು ಅವರ ತಿಳುವಳಿಕೆಯ ಒಳಗೆ ಬರುವುದಿಲ್ಲ. ಈ ವಿಷಯದಲ್ಲಿ ಬಂಡವಾಳಿಗರಿಗೆ ಉದಾರವಾದ ಮನಸ್ಸೂ ಇಲ್ಲ. ಕಾರ್ಮಿಕರಿಗೆ ಸರಿಯಾದ ವೇತನವನ್ನು ಕೊಟ್ಟು ಉಳಿದ ಲಾಭದಲ್ಲಿ ಕಂದಾಯ ಮತ್ತು ಆದಾಯವನ್ನು ಲೆಕ್ಕ ಹಾಕಬೇಕು. ಆದರೆ ಆಗುವುದು ಇದಕ್ಕಿಂತ ವ್ಯತಿರಿಕ್ತವಾಗಿ. ಜನರ ಗಮನವಿರುವುದು ಯಾವಾಗಲೂ ಲಾಭದ ಕಡೆಗೆ ಮಾತ್ರವೇ. ಒಂದು ಚಾರಿತ್ರಿಕ ವ್ಯಂಗ್ಯವೆಂದರೆ ಕಾರ್ಮಿಕರನ್ನು ಗಮನದಲ್ಲಿ ಇಟ್ಟುಕೊಂಡು ಯಾರೂ ರಾಜ್ಯವನ್ನು ಕಟ್ಟುವುದಿಲ್ಲ. ಬಂಡವಾಳವಾದವಿರಲಿ ಅಥವಾ ಜಮೀನುದಾರಿ ಪದ್ಧತಿಯಿರಲಿ ಕಾರ್ಮಿಕರ ಜೀವನದ ಪರಿಸ್ಥಿತಿಯು ಬದಲಾಗುವುದಿಲ್ಲ. ಕಾರ್ಮಿಕನು ಯಾಕೆ ಹೆಚ್ಚು ಕ್ರಿಯಾಶೀಲನಾಗುತ್ತಾನೆಂದರೆ ಅವನಿಗೆ ದುಡಿಯದೆ ಬೇರೆ ಗತ್ಯಂತರವಿಲ್ಲ. ರಾಜಕೀಯ ಅರ್ಥಶಾಸ್ತ್ರದಲ್ಲಿ ಕಾರ್ಮಿಕನು ಉದ್ದಿಮೆಗೆ ಲಾಭವನ್ನು ತರುವವನು ಮಾತ್ರ. ಆದರೆ ಅದನ್ನು ನಾವು ಮನಗಾಣುವುದಿಲ್ಲ. ಕಾರ್ಮಿಕನದು ಕೂಲಿಯನ್ನು ಪಡೆಯುವ ಒಂದು ಘಟಕ ಮಾತ್ರವೆಂದು ಹೇಳುವುದೇ ಸಮಂಜಸವಲ್ಲ. ಕಾರ್ಮಿಕರ ಶೋಷಣೆಗೆ ಒಂದು ಇತಿಮಿತಿ ಅನ್ನುವುದೇ ಇಲ್ಲ. ಅದಕ್ಕೆ ಒಂದು ಬೌಂಡರಿ ಅನ್ನುವುದೇ ಇಲ್ಲ. ಕಾರ್ಮಿಕರನ್ನು ಯಾವಾಗಲೂ ಒಂದು ಉತ್ಪಾದನೆಯ ಭಾಗವಾಗಿ ಮಾತ್ರವೆ ನೋಡುವುದರಿಂದ ಕಾರ್ಮಿಕರ ಅಸ್ತಿತ್ವಕ್ಕೆ ಯಾವ ಬೆಲೆಯೂ ಇಲ್ಲ. ಹೀಗಾಗಿ ಯಾವುದೇ ಒಂದು ಉತ್ಪಾದನೆಯಲ್ಲಿ ಕಾರ್ಮಿಕರಿಗೆ ಕೊಡುವ ತರಬೇತಿಯು ಒಂದು ಭಾಗ ಮಾತ್ರವೇ ಆಗಿರುತ್ತದೆ.

ಬಂಡವಾಳವಾದವು ಕಾರ್ಮಿಕರ ನಡುವೆ ತನಗೆ ಬೇಕಾದ ರೀತಿಯಲ್ಲಿ ಸಂಘರ್ಷವನ್ನು ಉಂಟುಮಾಡುತ್ತದೆ. ಅದರಿಂದ ಅದಕ್ಕೆ ಅನುಕೂಲವಿದೆ.ಮಾಸಿಕ ವೇತನ ಮತ್ತು ದಿನಕೂಲಿಗಳ ನಡುವೆ ಬಹಳ ವ್ಯತ್ಯಾಸವಿದೆ. ಮಕ್ಕಳ ಮಾರಾಟ, ಹೆಂಗಸರ ಮಾರಾಟ, ಹಾಗೂ ಜೀತದಾಳುಗಳ ಮಾರಾಟವು ಒಂದು ಸಮಾಜದಲ್ಲಿ ಯಾಕೆ ನಡೆಯುತ್ತದೆ ಎಂದರೆ ಕೆಲಸದಾಳುಗಳು ಕಡಿಮೆ ಬೆಲೆಗೆ ಸಿಗುತ್ತಾರೆ. ವಾಸ್ತವವಾಗಿ ಕೆಲಸಗಾರರು ಎಂದು ಯಾರನ್ನು ಕರೆಯುತ್ತಾರೋ ಅವರು ಸರಕುಗಳಲ್ಲ. ಆದರೆ ಅವರನ್ನು ಹಾಗೆ ಭಾವಿಸಲಾಗುತ್ತದೆ. ಆಳುಗಳಿಗೆ ಅವರದೇ ಆದ ಜೀವನ ಕ್ರಮವಿದೆ. ಆದರೆ ನಾವು ಅದನ್ನು ಯೋಚಿಸಲು ಹೋಗುವುದೇ ಇಲ್ಲ. ಕೆಲಸಗಾರರು ದುಡಿಯುವುದು ಅವರ ದೈನಂದಿನ ಆಹಾರಕ್ಕಾಗಿ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಇದನ್ನು ಮತ್ತೆ ಹೇಳಿದ್ದು ಯಾಕೆಂದರೆ ದುಡಿಮೆ ಮತ್ತು ಉಪವಾಸ ಎರಡೂ ಕಾರ್ಮಿಕರಿಗೆ ಗೊತ್ತು. ಮತ್ತು ಅದನ್ನು ಅವರ ದೇಹವು ಹೊಂದಾಣಿಕೆಯನ್ನು ಮಾಡಿಕೊಂಡಿರುತ್ತದೆ. ದುಡಿಮೆ ಅಂದರೆ ದೇಹ ಹಾಗೂ

ಹಸಿವೆಯ ಪ್ರಶ್ನೆ. ಆಹಾರಕ್ಕಾಗಿ ಅವರು ಕಷ್ಟವನ್ನು ಪಡುತ್ತಾರೆ. ಇರುವ ಪ್ರಶ್ನೆ ಎಂದರೆ ಅವರು ಜೀವನವನ್ನು ವಸ್ತುವಾಗಿಯೋ ಸರಕಾಗಿಯೋ ನೋಡುತ್ತಾರೆ. ಕೈಗಾರಿಕೋದ್ಯಮಿಗಳು ಕೈಗಾರಿಕೆಗಳನ್ನು ಒಂದು ಆಟವಾಗಿಯೂ ಪರಿವರ್ತಿಸುತ್ತಾರೆ. ಅವರಿಗೆ ಅದು ಒಂದು ಯುದ್ಧ. ಈ ಆಟಕ್ಕೆ ದಾಳವಾಗುವುದು ಆಳುಗಳು. ಆಳುಗಳಿಗೆ ತಾವು ಬಂಡವಾಳದ ಕೂಸುಗಳು ಎಂದು ತಿಳಿದಿರುವುದಿಲ್ಲ. ಕೈಗಾರಿಕಾ ಸಂಸ್ಕೃತಿಯಲ್ಲಿ ಹಣವೆನ್ನುವುದು ವಿಶಿಷ್ಟವಾದ ಸಂವೇದನೆಯನ್ನು ಹುಟ್ಟು ಹಾಕಿತು. ಹಾಗೆ ನೋಡಿದರೆ ನಮಗೆ ಹಣವನ್ನು ಬಳಸಲು ಬೇರೆ ಬೇರೆ ಮಾರ್ಗವಿದೆ. ಆದರೆ ಕೈಗಾರಿಕಾ ಸಂಸ್ಕೃತಿಯಲ್ಲಿ ಸಂಪನ್ಮೂಲವನ್ನು ಗುರುತಿಸುವ ಕ್ರಮ ಬೇರೆ.

ರಾಜಕೀಯ ಅರ್ಥಶಾಸ್ತ್ರದಲ್ಲಿ ಅತ್ಯಂತ ಮುಖ್ಯವಾದ ಪ್ರಶ್ನೆಯು ಬಂದಿದೆ. ಅದರ ಕಾರ್ಮಿಕರು ಮತ್ತು ಅವರ ಶಕ್ತಿಗೆ ಇರುವ ಬೆಲೆಯ ಪ್ರಶ್ನೆ. ಕಾರ್ಮಿಕರು ಮತ್ತು ಅದರ ಶಕ್ತಿಯು ಹೇಗೆ ಒಂದು ಮೌಲ್ಯವಾಗಿ ಪರಿವರ್ತನೆಯು ಆಗುತ್ತದೆ ಎಂದು ಮಾರ್ಕ್ಸ್ ಅದರಲ್ಲಿ ಹೇಳುತ್ತಾನೆ. ಅವರ ಶಕ್ತಿಯು ಹೇಗೆ ವ್ಯಕ್ತವಾಗುತ್ತದೆ ಮತ್ತು ಅದರಲ್ಲಿ ಮೌಲ್ಯವು ಹೇಗೆ ಇರುತ್ತದೆ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆ. ಆಧುನಿಕ ಬಂಡವಾಳವಾದವು ಕಾರ್ಮಿಕರನ್ನು ಬಳಸುತ್ತದೆ. ಹಾಗೆ ನೋಡಿದರೆ ವ್ಯಕ್ತಿ ಮತ್ತು ಅವನ ಶಕ್ತಿಯು ಅನೇಕವನ್ನು ಸೃಷ್ಟಿ ಮಾಡುತ್ತದೆ. ಅದು ಮೌಲ್ಯವಾಗಿ ರೂಪುಗೊಳ್ಳುತ್ತದೆ. ಕಾರ್ಮಿಕರು ಎರಡು ಥರ ಇರುತ್ತಾರೆ: ಒಂದು ಮೂರ್ತ ರೂಪದ ಕಾರ್ಮಿಕರು. ಮತ್ತೊಂದು ಅಮೂರ್ತ ರೂಪದ ಕಾರ್ಮಿಕರು. ಮಾರ್ಕ್ಸ್ ಕಾರ್ಮಿಕರು ಮತ್ತು ಅವರ ಸ್ವರೂಪವನ್ನು ಹೇಳುವಾಗ ಅವರು ಮಾಧ್ಯಮವೂ ಆಗಿರುತ್ತಾರೆ ಎಂದು ಹೇಳುತ್ತಾನೆ. ಅವರು ಮಾಧ್ಯಮವು ಮಾತ್ರವೇ ಆಗಿರುವಾಗ ಅವರ ಅರ್ಥವು ಬೇರೆಯಾಗುತ್ತದೆ. ಮತ್ತೊಂದು ರೀತಿಯಲ್ಲಿ ಕಾರ್ಮಿಕರು ನೇರವಾಗಿ ಭಾಗವಹಿಸುತ್ತಾರೆ. ಒಂದು ಉತ್ಪಾದನೆಯನ್ನು ಅವರ ಮಾಡುತ್ತಾರೆ. ಅದನ್ನೇ ಅವರು ಮಾರಾಟವನ್ನು ಮಾಡುತ್ತಾರೆ. ಕಾರ್ಮಿಕರು ಒಂದು ಮಾಧ್ಯಮವಾಗಿ ಕೆಲಸವನ್ನು ನಿರ್ವಹಿಸುವಾಗ ಒಂದು ವ್ಯವಸ್ಥೆಗೆ ಮಾಧ್ಯಮವಾಗುತ್ತಾರೆ. ಆದರೆ ನೇರವಾಗಿ ಇರುವಾಗ ಅವರ ಕಾರ್ಯವನ್ನು ನಾವು ನೇರವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಒಂದು ಯಜಮಾನಿಕೆಗೆ ಪೂರಕವಾಗಿ ಅವರು ಕೆಲಸವನ್ನು ಮಾಡುವಾಗ ಅವರ ಶಕ್ತಿಗೆ ತಕ್ಕ ಬೆಲೆಯು ಸಿಗುತ್ತದೆ ಎಂದು ಹೇಳಲು ಬರುವುದಿಲ್ಲ. ಬಂಡವಾಳವಾದಿ ರಚನೆಯು ಹಾಗೆ ಇರುತ್ತದೆ. ಅದನ್ನು ನಾವು ಮರೆಯುವಂತೆ ಇಲ್ಲ. ಆದ್ದರಿಂದ ನಾವು ಮೊದಲ ನೋಟಕ್ಕೆ ಎಲ್ಲವನ್ನು ತೀರ್ಮಾನ ಮಾಡಲು ಆಗುವುದಿಲ್ಲವೆಂದು ಮಾರ್ಕ್ಸ್ ಹೇಳುತ್ತಾನೆ. ವಸ್ತು ಮತ್ತು ಅದರ ವಿನಿಮಯದ ಮೌಲ್ಯವು ನಮಗೆ ಅನೇಕವನ್ನು ಸೂಚಿಸುತ್ತವೆ ಎನ್ನುವುದು ಅವನ ಅಭಿಪ್ರಾಯವೂ ಆಗಿದೆ. ವಿನಿಮಯ ಮತ್ತು ಅದರ ಗುಣಾತ್ಮಕವಾದ ಸ್ವರೂಪವು ವಿನಿಮಯವನ್ನು

ಹೇಳುತ್ತದೆ. ಯಾವುದೇ ಉಪಯೋಗಕ್ಕೆ ಬಾರದಿರುವ ವಸ್ತುವಿಗೆ ಯಾವುದೇ ವಿನಿಮಯದ ಮೌಲ್ಯವು ಇರುವುದಿಲ್ಲ. ಎರಡನೆಯದಾಗಿ ವಿನಿಮಯವೂ ಕಾಲ ಮತ್ತು ಸ್ಥಳವನ್ನು ಹೊಂದಿರುತ್ತವೆ. ಆದ್ದರಿಂದಲೇ ನಮಗೆ ಇದರಲ್ಲಿ ಅನೇಕ ವೈರುಧ್ಯಗಳು ಕಾಣಿಸುತ್ತವೆ. ಯಾವುದೇ ವಸ್ತುವಿಗೆ ಒಂದು ಪರಂಪರಾಗತವಾದ ಮೌಲ್ಯ ಎನ್ನುವುದು ಇರುವುದಿಲ್ಲ ಎಂದು ಅವನು ಹೇಳುತ್ತಾನೆ. ಸಹಜವಾದುದನ್ನು ವ್ಯಕ್ತಿಯು ಪಲ್ಲಟ ಮಾಡುತ್ತಾನೆ. ಅದರ ಮೂಲಕ ವಸ್ತುವಿಗೆ ಹೊಸರೂಪವು ಬರುತ್ತದೆ. ಆದರೆ ಎಲ್ಲವೂ ಹೀಗೆ ಆಗುತ್ತವೆ ಎಂದು ಅರ್ಥವಲ್ಲ. ಅಗತ್ಯವಾದದ್ದನ್ನು ನಾವು ಪಲ್ಲಟ ಮಾಡುತ್ತೇವೆ. ಯಾವುದಕ್ಕೆ ಉಪಯೋಗ ಎನ್ನುವುದು ಇದೆಯೋ ಅದರ ಅಸ್ತಿತ್ವಕ್ಕೆ ಬೆಲೆಯು ಇರುತ್ತದೆ. ಕೆಲವನ್ನು ಅತ್ಯಂತ ಸಹಜವಾದ ಸಂಗತಿಗಳು ಎಂದು ಮಾರ್ಕ್ಸ್ ಹೇಳುತ್ತಾನೆ. ಯಾವಾಗ ಅದಕ್ಕೆ ಮೌಲ್ಯವು ಬರುತ್ತದೆಯೋ ಆಗ ಸಾಧ್ಯತೆಯು ಬೇರೆಯಾಗುತ್ತದೆ. ವಸ್ತುವು ಹೇಗೆ ಮೌಲ್ಯವನ್ನು ಸೂಚಿಸುತ್ತದೆ ಎನ್ನುವುದು ಇಲ್ಲಿ ಮುಖ್ಯ. ಆದ್ದರಿಂದ ವಸ್ತು ಮತ್ತು ಅದರ ಮೌಲ್ಯವು ಆಯಾ ಸನ್ನಿವೇಶದಲ್ಲಿ ಬೇರೆಯಾಗುತ್ತದೆ.

ಅಮೂರ್ತವಾದ ಕಾರ್ಮಿಕರ ಶಕ್ತಿ ಎನ್ನುವುದು ಹೇಗೆ ಮೌಲ್ಯವನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದೂ ಮಾರ್ಕ್ಸ್‌ನ ಗಮನದಲ್ಲಿ ಇದೆ. ಸಾಮಾಜಿಕ ಅಗತ್ಯಗಳು ಮತ್ತು ಮೌಲ್ಯಗಳು ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾಗಿದೆ. ಮನುಷ್ಯ ಮತ್ತು ಅವನ ಶಕ್ತಿ, ಅವನ ಕೆಲಸ, ವಸ್ತುವು ಒಡೆದುಕೊಳ್ಳುವ ಸ್ಥಾನಮಾನ ಮೌಲ್ಯವನ್ನು ನಿರ್ಧಾರ ಮಾಡಲು ಸಹಕಾರವನ್ನು ನೀಡುತ್ತವೆ, ನಮ್ಮ ಕೆಲಸದಿಂದ ಅಮೂರ್ತವಾದುದು ಮೂರ್ತತೆಗೂ ಬರುತ್ತದೆ. ಉಪಯೋಗ ಮತ್ತು ಅದರ ಸ್ವರೂಪವು ಇಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಮಾರ್ಕ್ಸ್ ವಿನಿಮಯವನ್ನು ಶೂನ್ಯ ಎಂದು ಪರಿಗಣಿಸುವುದೂ ಇಲ್ಲ. ಕಾರ್ಮಿಕರು ಮತ್ತು ಅವರ ಉತ್ಪಾದನೆ ಹಾಗೂ ಬಂಡವಾಳವಾದದ ರೂಪಗಳನ್ನು ಮಾರ್ಕ್ಸ್ ದ್ವಂದ್ವಾತ್ಮಕವಾಗಿಯೇ ಗ್ರಹಿಸುತ್ತಾನೆ. ಹೆಚ್ಚು ಉತ್ಪಾದನೆ ಮತ್ತು ಮೌಲ್ಯಗಳು ಅವನ ಗಮನದಲ್ಲಿ ಇದೆ. ಒಂದು ವಸ್ತು ಮತ್ತು ಅದರ ಶಕ್ತಿಯು ಹೇಗೆ ಕೆಲಸವನ್ನು ಮಾಡುತ್ತದೆ ಎಂದು ಅವನು ವಿವರಿಸುತ್ತಾನೆ. ವಾಸ್ತವವಾಗಿ ಬಂಡವಾಳವಾದವು ವ್ಯಕ್ತಿ ಮತ್ತು ಅವನ ಶ್ರಮಕ್ಕೆ ಸರಿಯಾದ ಒಂದು ಬೆಲೆಯನ್ನು ಕೊಡುವುದೂ ಇಲ್ಲ. ಇದರಲ್ಲಿ ಸಮಸ್ಯೆಯು ಇರುತ್ತದೆ. ಬೂರ್ಜ್ವಾ ಮಾರುಕಟ್ಟೆಯು ಕೆಲವನ್ನು ನಿಯಂತ್ರಿಸುವುದೂ ಅಷ್ಟೇ ನಿಜ. ಇಲ್ಲಿ ಮತ್ತೊಂದು ವ್ಯಂಗ್ಯವನ್ನು ನಾವು ಗಮನಿಸಬೇಕು: ಅವರ ಮಾರುಕಟ್ಟೆಯು ಇರುವುದು ಒಂದು ಥರ. ಅದನ್ನು ಭ್ರಮಾ ಜಗತ್ತಿನ ಹಾರುವಿಕೆ ಎಂದು ಹೇಳುತ್ತಾರೆ. ಅದು ಜಾಗತಿಕ ಸತ್ಯವನ್ನು ಕಲ್ಪಿತವಾದ ಸತ್ಯವೆಂಬಂತೆ ಬಿಂಬಿಸುತ್ತದೆ. ಆಧುನಿಕ ಮಾರುಕಟ್ಟೆಯು ಹೇಗಿದೆ ಎಂದರೆ ಅದರಲ್ಲಿ

ಭ್ರಮೆಗಳು ಹೆಚ್ಚು ಕಾಣಿಸುತ್ತವೆ. ಅದರ ಮೂಲಕ ಕೆಲವರು ಮಾತ್ರವೇ ಜಗತ್ತನ್ನು ನಿಯಂತ್ರಿಸುತ್ತಾರೆ.

ಮುಕ್ತ ಮಾರುಕಟ್ಟೆಯು ತಾನು ಸ್ವಯಂ ಸಂಪೂರ್ಣ ಎಂದು ಹೇಳಿಕೊಳ್ಳುತ್ತದೆ. ಮುಕ್ತವಾದ ಸ್ಪರ್ಧೆಯನ್ನು ಅದು ವಿವರಿಸುತ್ತದೆ. ಆದರೆ ಮಾರುಕಟ್ಟೆಯ ವಕಾಲತ್ತು ವಹಿಸಿದವರು ಮಾತ್ರವೇ ಇದನ್ನು ಹೇಳುತ್ತಾರೆ. ಆದರೆ ಇದರಲ್ಲಿ ಎಲ್ಲಾ ಜನರ ಒಳಿತು ಎನ್ನುವುದೇ ಇಲ್ಲವೆಂದು ಹೇಳಲಾಗುತ್ತದೆ. ಆರ್ಥಿಕತೆಯು ಇದರಲ್ಲಿ ತಪ್ಪಾದ ನೆಲೆಯನ್ನು ಪಡೆಯುತ್ತದೆ. ಮಾರುಕಟ್ಟೆ ಮತ್ತು ಅದರ ವಿಫಲತೆಯು ಈವತ್ತು ಎದ್ದು ಕಾಣುತ್ತದೆ. ಆಧುನಿಕ ಮಾರುಕಟ್ಟೆಯು ಬೇರೆ ಬೇರೆ ಕಾರಣಗಳಿಂದ ಸೋಲನ್ನು ಕಂಡಿವೆ. ಪ್ರಭುತ್ವ ಮತ್ತು ಮಾರುಕಟ್ಟೆಯ ನಡುವಣ ಸಂಬಂಧವು ಒಂದೇ ರೀತಿಯಲ್ಲಿ ಇಲ್ಲ. ಮಾಹಿತಿಯು ನಮಗೆ ಸರಿಯಾಗಿ ದೊರೆಯುವುದೂ ಇಲ್ಲ. ಮೂರನೆಯದಾಗಿ ಬಾಹ್ಯ ಮತ್ತು ಅದರ ರೂಪವನ್ನು ನಾವು ನಿರ್ಧರಿಸುವುದು ಅತ್ಯಂತ ಕಷ್ಟ.

ಮಾರ್ಕ್ಸ್ ಮೂರು ಅಂಶಗಳನ್ನು ಗಮನಿಸುತ್ತಾನೆ: ಮಾರುಕಟ್ಟೆ ಮತ್ತು ಅದರ ಅವಕಾಶಗಳು ಇರುವುದು ಒಂದನೆಯ ಅಂಶ. ಎರಡನೆಯಾಗಿ ಅದರ ಸೀಮಾರೇಖೆಗಳು, ಮೂರನೆಯದಾಗಿ ಕಾರ್ಮಿಕರು ಮತ್ತು ಮಾರುಕಟ್ಟೆಯ ಸಂಬಂಧ. ಕೊಳ್ಳುವ ಸ್ವಾತಂತ್ರ್ಯ ಮತ್ತು ಮಾರುವ ಸ್ವಾತಂತ್ರ್ಯ. ಕಾರ್ಮಿಕರು ಮತ್ತು ಅವರ ಶಕ್ತಿ, ಸಮಾನತೆ, ವಸ್ತು ಮತ್ತು ಅದರ ಒಡೆತನ, ವಿನಿಮಯ, ಸಂಬಂಧಗಳು, ಸ್ವಾರ್ಥ ಮಾರುಕಟ್ಟೆಯ ಮೇಲೆ ವಿವಿಧ ಪ್ರಭಾವವನ್ನು ಬೀರುತ್ತದೆ. ಹಣ ಮತ್ತು ಅದರ ಒಡೆತನವೂ ಇಲ್ಲಿ ಮುಖ್ಯವಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಎಲ್ಲರಿಗೂ ಸಂಪನ್ಮೂಲದ ಬಗ್ಗೆ ಒಂದು ಬಗೆಯ ಆಸಕ್ತಿಯು ಇರುತ್ತದೆ. ಹಣ ಇರುವವನು ಮಾರುಕಟ್ಟೆಯಲ್ಲಿ ಮುಂಚೂಣಿಗೆ ಬರುತ್ತಾನೆ. ಅವನು ಕಾರ್ಮಿಕರ ಶಕ್ತಿಯನ್ನು ಕೊಂಡುಕೊಳ್ಳುತ್ತಾನೆ. ಕಾರ್ಮಿಕರು ತಮ್ಮ ಶಕ್ತಿಯನ್ನು ಮಾರುತ್ತಾರೆ. ಯಾವುದು ಹೀಗೆ ಮಾರುಕಟ್ಟೆಯಲ್ಲಿ ಮಾರಲ್ಪಡುತ್ತದೆಯೋ ಅದರ ಲಾಭವನ್ನು ಬಂಡವಾಳವಾದಿಯು ಅನುಭವಿಸುತ್ತಾನೆ. ಅದನ್ನು ರಾಚನಿಕವಾದ ಅನುಕೂಲ ಎಂದು ಹೇಳುತ್ತಾನೆ. ಅತ್ಯಂತ ಕಡಿಮೆ ಬೆಲೆಗೆ ಕಾರ್ಮಿಕರ ಶಕ್ತಿಯು ದೊರೆಯುವಾಗ ಬಂಡವಾಳವಾದಿ ಲಾಭವನ್ನು ಹೆಚ್ಚು ಮಾಡಿಕೊಳ್ಳುತ್ತಾನೆ. ಹಾಗಿದ್ದರೆ ಯಾಕೆ ಕಾರ್ಮಿಕರು ತಮ್ಮ ಶಕ್ತಿಯನ್ನು ಮಾರುಕಟ್ಟೆಯಲ್ಲಿ ಕಡಿಮೆ ಮಾರುತ್ತಾರೆಂದರೆ ಅವರಿಗೆ ಬೇರೆ ದಾರಿಗಳು ಇರುವುದೂ ಇಲ್ಲ. ಒಮ್ಮೆ ಉದ್ಯೋಗವು ದೊರೆತರೆ ಸಾಕಪ್ಪಾ ಎಂದು ಅವರಿಗೆ ಅನಿಸುತ್ತದೆ.

ವಾಸ್ತವವಾಗಿ ಕೊಳ್ಳುವವನಿಗೆ ತಾನು ಕೊಂಡುಕೊಳ್ಳುತ್ತಿರುವ ವಸ್ತುವಿನ ನಿಜವಾದ ಧಾರಣೆಯು ಯಾವುದು ಎಂದು ತಿಳಿಯುವುದೇ ಇಲ್ಲ. ಇದಕ್ಕೆ

ಒಂದು ಉದಾಹರಣೆಯನ್ನು ಕೊಡಬಹುದು: ಮೊದಲು ಒಂದು ಬಗೆಯ ಚಾಕಲೇಟ್‌ನ್ನು ಮಾರುಕಟ್ಟೆಗೆ ಬಿಡುತ್ತಾರೆ. ಅದರ ಉದ್ದ ಮತ್ತು ಅಗಲ ಹಾಗೂ ದಪ್ಪ ಒಂದು ರೀತಿಯಲ್ಲಿ ಇರುತ್ತದೆ. ಅದನ್ನು ತೂಕಕ್ಕೆ ಹಾಕಿದರೆ 100 ಗ್ರಾಂ ಎಂದು ಭಾವಿಸೋಣ. ಸ್ವಲ್ಪ ಸಮಯವು ಆದ ಮೇಲೆ ಅದರ ತೂಕವು ಕಡಿಮೆಯಾಗುತ್ತದೆ. ಅದರ ಬದಲು ಅದರ ಅಗಲವು ಮಾತ್ರವೇ ಹೆಚ್ಚಾಗುತ್ತದೆ. ಆಕರ್ಷಕವಾದ ಒಂದು ಕವರು ಬರುತ್ತದೆ. ಅದಾದ ಸ್ವಲ್ಪ ಸಮಯದಲ್ಲಿ ಅದರ ಸ್ವರೂಪವು ಬದಲಾಗುತ್ತದೆ. ಚಾಕಲೇಟ್ ಜನರಿಗೆ ಹಿಡಿಸಿದರೆ ಅದರ ಮಾರುಕಟ್ಟೆ ಮತ್ತು ಅದರ ಸ್ವರೂಪವು ಬದಲಾಗುತ್ತದೆ. ಅದರ ಏರಿಳಿತವನ್ನು ನಿರ್ಧಾರ ಮಾಡುವುದು ಬಂಡವಾಳಶಾಹಿ. ವಾಸ್ತವವಾಗಿ ನಾವು ಕೊಳ್ಳುವ ಆ ಚಾಕಲೇಟ್ ಹೇಗೆ ಇರಲಿ ಅದರ ರುಚಿಯು ನಮಗೆ ಹಿಡಿಸಿದರೆ ಅದರಿಂದ ಮುಕ್ತವಾಗಲಾರೆವು. ಇನ್ನೊಂದು ಉದಾಹರಣೆಯನ್ನು ನಾವು ಕೊಡಬಹುದು: ಈವತ್ತು ಕೋಕ್ ತುಂಬಾ ಜನಪ್ರಿಯವಾಗಿದೆ. ಅದರ ಬದಲು ಬೇರೆ ಉತ್ಪನ್ನ ನಮಗೆ ಹಿಡಿಸಲಿಲ್ಲವಾದರೆ ಮಾತ್ರವೇ ನಾವು ಬೇರೆ ಬ್ರಾಂಡ್‌ಗೆ ಹೋಗುತ್ತೇವೆ. ಇದನ್ನು ನಾವು ಮಾರುತಿ ಕಂಪೆನಿಗೆ ಅನ್ವಯವನ್ನು ಮಾಡಬಹುದು ಇಲ್ಲವೇ ಸ್ಯಾಂಸಂಗ್ ಮೊಬೈಲಿಗೂ ಅನ್ವಯಮಾಡಬಹುದು. ಯಾವುದೋ ಕಂಪೆನಿಯ ಬಿಡಿಭಾಗಗಳು ಬೇರೆ ಬೇರೆ ಕಡೆಗೆ ಸಿಗುತ್ತವೆ. ಆದರೆ ಅದನ್ನು ಯಾರು ಮಾಡುತ್ತಾರೆ ಎಂದು ತಿಳಿಯುವುದೂ ಇಲ್ಲ. ನೇರ ಕಾರ್ಮಿಕರು ಇರುವುದಿಲ್ಲ. ಅಂದರೆ ಸೂಚಕರು ಅನಾಮಿಕರಾಗಿ ಉಳಿಯುತ್ತಾರೆ. ನಮಗೆ ತಿಳಿಯುವುದು ಮಧ್ಯದಲ್ಲಿ ಇರುವ ಬ್ರಾಂಡ್ ಮತ್ತು ಅದರ ಹೆಸರು ಮಾತ್ರವೇ. ಈ ತರಹದ ಕಂಪೆನಿಗಳಲ್ಲಿ ಯಾರು ಯಾವ ಕೆಲಸವನ್ನು ಮಾಡುತ್ತಾರೆ ಎನ್ನುವುದು ನಮಗೆ ಮತ್ತು ಬೇರೆ ಬೇರೆ ಕೆಲಸವನ್ನು ಮಾಡುತ್ತಿರುವವರಿಗೆ ಗೊತ್ತಿರುವುದೂ ಇಲ್ಲ. ಅನೇಕ ಬ್ರಾಂಡ್ ನಮ್ಮ ಜೀವನದ ಶೈಲಿಯೊಂದಿಗೆ ಸರಿಯಾಗಿಯೇ ಬೆರೆತುಕೊಂಡಿವೆ.

ಈಗ ಮಾರುಕಟ್ಟೆಯಲ್ಲಿ ಮತ್ತೊಂದು ವಿದ್ಯಮಾನವು ನಡೆಯುತ್ತದೆ. ಯಾವುದಾದರೂ ವಸ್ತುವನ್ನು ನಾವು ಕೊಳ್ಳುವುದಕ್ಕೆ ಇಷ್ಟಪಟ್ಟರೂ ಕೊಂಡುಕೊಳ್ಳಲು ಸಾಧ್ಯವಾಗದೇ ಹೋದರೆ ಆ ಕಂಪೆನಿಯವರು ನಮಗೆ ಯಾವುದಾದರೂ ಬ್ಯಾಂಕಿಗೆ ಒಪ್ಪಂದ ಮಾಡಿಕೊಳ್ಳುವಂತೆ ಪ್ರೇರಣೆಯನ್ನು ನೀಡುತ್ತಾರೆ. ಇದರಿಂದ ಕಂಪೆನಿಗೆ ಮತ್ತು ಬ್ಯಾಂಕಿಗೆ ಲಾಭವಾಗುತ್ತದೆ. ಮಾರುಕಟ್ಟೆಯಲ್ಲಿ ಮತ್ತೊಂದು ಸಂಗತಿಯು ನಡೆಯುತ್ತದೆ: ಯಾವುದಾದರೂ ಹಳೆಯ ಕಂಪೆನಿಗಳು ನಷ್ಟದಲ್ಲಿ ಇದ್ದರೆ ಆ ಕಂಪೆನಿಯನ್ನು ಬೇರೆಯವರು ಕೊಂಡುಕೊಳ್ಳುತ್ತಾರೆ. ಕಂಪೆನಿ ಮತ್ತು ಅದರ ಹೆಸರೇ ಮಾರಾಟವಾಗುತ್ತವೆ. ಮಾರುಕಟ್ಟೆಯಲ್ಲಿ ಮತ್ತೆ ಅದೇ ಹೆಸರು ಚಾಲ್ತಿಗೆ ಬರುತ್ತವೆ. ಹೊಸದಾದ ವಿನ್ಯಾಸವು ಹೇಗೆ ಮತ್ತೆ ಚಾಲ್ತಿಗೆ ಬರುತ್ತದೆಯೋ ಆಗ ಅದರ

ವ್ಯಾಪಾರ ಮತ್ತು ಉದ್ದಿಮೆಗಳೂ ಬೇರೆಯಾಗುತ್ತವೆ. ಈಗ ಅನೇಕ ಕಂಪನಿಗಳು ಹೊರಗುತ್ತಿಗೆ ಮೂಲಕವೇ ಕೆಲಸವನ್ನು ಮಾಡಿಸುವುದರಿಂದ ಕಾರ್ಮಿಕರು ಮತ್ತು ಅವರ ಅರ್ಥಗಳು ಬೇರೆಯಾಗಿವೆ. ಈ ದೃಷ್ಟಿಯಿಂದ ಕಂಪೆನಿಗಳು ತಮ್ಮ ಕೆಲಸವನ್ನು ರಾಚನಿಕವಾಗಿ ಬದಲಾವಣೆಯನ್ನು ಮಾಡಿಕೊಂಡಿವೆ. ವಾಸ್ತವವಾಗಿ ಈಗ ಮಾರುಕಟ್ಟೆ ಮತ್ತು ಅದರ ತಂತ್ರಗಳೂ ವ್ಯತ್ಯಾಸವಾಗಿವೆ. ಕೇವಲ ನೂರು ರೂಪಾಯಿ ಇರುವ ಚಪ್ಪಲಿಯು ಪ್ರತಿಷ್ಠಿತ ಕಂಪೆನಿಗಳ ಹೆಸರಿನಲ್ಲಿ ಇನ್ನೂರು ರೂಪಾಯಿಗೆ ಮಾರಾಟವಾಗುತ್ತವೆ. (ವಿವರಗಳಿಗೆ ನೋಡಿ : ದಮಶರ ಆಫ್ ಲೇಬರ್.)

ಜಗತ್ತನ್ನು ಅರ್ಥಮಾಡಿಕೊಳ್ಳಲು ಬೇಕಾದ ಪರಿಕರಗಳು ಅದರಲ್ಲಿ ಇವೆ. ಜ್ಞಾನ ಎನ್ನುವುದಕ್ಕೆ ನಾವು ಮರಳುವುದು ಎನ್ನುವುದೇ ನಮಗೆ ಭಿನ್ನವಾದ ಹಾದಿಯನ್ನು ತೋರಿಸುತ್ತದೆ. ಜೀವನ ಎಂದರೆ ಅದು ಜ್ಞಾನವಲ್ಲ. ಹಣ ಎಂದರೆ ಅದು ಪುಸ್ತಕಗಳು ಅಲ್ಲವೆನ್ನುವುದು ಒಂದು ವಾದ. ಯಾವುದನ್ನು ನಾವು ಚಾರಿತ್ರಿಕವಾದ ಜ್ಞಾನ ಎಂದು ಹೇಳುತ್ತೇವೆಯೋ ಅದಕ್ಕೆ ಒಂದು ಮುಖವಾಡ ಇದೆ. ಅದನ್ನು ಮರೆಮಾಚಲು ಆಗುವುದೂ ಇಲ್ಲ. ಇಲ್ಲಿ ಮತ್ತೊಂದು ಮಾತನ್ನು ನಾವು ಹೇಳಬೇಕು ಜ್ಞಾನ ಎಂದರೆ ಅದು ಒಂದು ಪರಿಕಲ್ಪನೆಯು ಅಲ್ಲ. ಜ್ಞಾನದಲ್ಲಿ ತಾರತಮ್ಯಗಳು ಇವೆ. ಈ ದೃಷ್ಟಿಯಿಂದ ನಾವು ಸ್ಥಳೀಯವಾದ ಜ್ಞಾನವನ್ನು ನಿರಾಕರಿಸಲು ಬರುವುದೂ ಇಲ್ಲ. ಬರಹ ಎನ್ನುವುದು ಪ್ರಾತಿನಿಧಿಕ ಎನ್ನುವುದನ್ನು ಫುಕೋ ಒಪ್ಪುತ್ತಾನೆ. ಆದ್ದರಿಂದ ಬರಹದಲ್ಲಿ ಏನು ಬಂದಿದೆಯೋ ಅದನ್ನು ಮಾತ್ರವೇ ಒಪ್ಪುವುದು ಸಾಧ್ಯವಿಲ್ಲ. ಯಾವುದನ್ನು ನಾವು ನಿರೂಪಿಸುತ್ತೇವೆಯೋ ಅದರ ನಿರೂಪಣೆಯ ಕಾರಣಕ್ಕೆ ಬೇರೆಯಾಗುತ್ತದೆ. ಅವನ ಪ್ರಕಾರ ನಾವು ಯಾರಿಗೆ ಏನು ಸೂಚಿಸುತ್ತೇವೆ ಎನ್ನುವುದು ಅತ್ಯಂತ ಮುಖ್ಯ. ಈ ದೃಷ್ಟಿಯಲ್ಲಿ ಭಾಷೆಯೂ ಒಂದು ಮಾತ್ರವೇ ಪರಿಕರವು ಆಗಿರುತ್ತದೆ. ಬರೆಯುವುದಕ್ಕಿಂತ ಪೂರ್ವದಲ್ಲಿ ಬರಹವು ರೂಪವನ್ನು ಹೊಂದಿರಲಿಲ್ಲ, ಇದನ್ನು ನಾವು ಗಮನಿಸಬೇಕು. ರೂಪನಿಷ್ಟರು ಇದನ್ನು ಒಪ್ಪುವುದಿಲ್ಲ. ಚರಿತ್ರೆ ಮತ್ತು ಅದರ ಸ್ವರೂಪವು ಈ ದೃಷ್ಟಿಯಿಂದ ಭಿನ್ನವಾಗುತ್ತದೆ. ಅದಕ್ಕೆ ಒಂದು ಸೈದ್ಧಾಂತಿಕವಾದ ಸಮಸ್ಯೆ ಇದೆ ಎಂದು ಫುಕೋ ಭಾವಿಸುತ್ತಾನೆ. ಚರಿತ್ರೆಯೆನ್ನುವುದು ನಿರಂತರವಾಗಿ ಬಂದಿಲ್ಲ. ಅದು ಬದಲಾವಣೆಗೆ ಒಳಗಾಗಿದೆ. ಅನೇಕ ಜ್ಞಾನಗಳನ್ನು ನಾವು ಅನರ್ಹ ಎಂದು ಘೋಷಿಸಿದ್ದೇವೆ, ಇದರಿಂದ ನಮಗೆ ಕೆಲವು ಜ್ಞಾನವು ಮಾತ್ರವೇ ಮುಖ್ಯವಾಯಿತು. ಹಾಗೆ ನೋಡಿದರೆ ಕೆಲವು ಜ್ಞಾನವು ಕೆಲವರಿಗೆ ಮಾತ್ರವೇ ಅಗತ್ಯವಿರುತ್ತದೆ. ಹಾಗೆ ನೋಡಿದರೆ ನಮಗೆ ಜ್ಞಾನವು ಒಂದು ಪೆಟ್ಟಿಗೆಯಲ್ಲಿ ತುಂಬಿ ಯಾರೋ ಕೊಡುವುದಿಲ್ಲ. ಇದರ ಮೂಲ ಇರುವುದು

ಜ್ಞಾನದಲ್ಲಿ ಎನ್ನುವುದು ನಿರ್ವಿವಾದ ಎನ್ನುವುದು ಫುಕೋನ ವಾದ. ವಾಸ್ತವ ಎನ್ನುವುದು ಸತ್ಯದ ಮತ್ತೊಂದು ರೂಪ.

ಯಾವುದನ್ನು ಜ್ಞಾನ ಎಂದು ಹೇಳುತ್ತೇವೆಯೋ ಅದರ ಅಗತ್ಯವು ಮನುಷ್ಯನಿಗೆ ಮಾತ್ರವೇ ಹೆಚ್ಚು ಇರುತ್ತದೆ. ಜ್ಞಾನವನ್ನು ನಾವು ಉತ್ಪಾದಿಸಿಕೊಳ್ಳುತ್ತೇವೆ. ಅದು ಮನಸ್ಸಿಗೆ ಸಂಬಂಧಪಟ್ಟದ್ದೂ ಹೌದು. ಜಗತ್ತಿನ ಮತ್ತು ಅದರ ಅಸ್ತಿತ್ವವನ್ನು ಕುರಿತು ನಾವು ಎರಡು ಥರ ಯೋಚನೆ ಮಾಡುತ್ತೇವೆ. ನಮಗೆ ಜಗತ್ತು ಇದೆ, ಅದು ಇರುತ್ತದೆ. ಆದ್ದರಿಂದ ಅದರ ಸ್ವರೂಪವನ್ನು ನಾವು ಇರುವ ಹಾಗೆ ನೋಡಿದರೆ ಸಾಕು ಎಂದು ಭಾವಿಸುವುದು ಒಂದು ಕ್ರಮ. ಮತ್ತೊಂದು ಈ ಜಗತ್ತು ಇದೆ. ಆದರೆ ಅದು ನಮ್ಮ ಅನ್ವಯಕ್ಕೆ ಅನುಗುಣವಾಗಿ ಇರುತ್ತದೆ ಎನ್ನುವುದು ಮತ್ತೊಂದು ಕ್ರಮ. ಅತ್ಯಂತ ಮಹತ್ವದ ಕಾರಣಕ್ಕೆ. ನಾವು ಒಂದು ವಸ್ತುವನ್ನು ಮತ್ತೊಂದು ವಸ್ತುವಿಗಿಂತ ಬೇರೆ ಮಾಡುವುದು ಅಗತ್ಯವೂ ಹೌದು ಎನ್ನುವುದು ಕಾಂಟ್‌ನ ವಾದ. ಆದ್ದರಿಂದ ಇದರ ಬಗ್ಗೆ ನಮಗೆ ಜ್ಞಾನವು ಬೇಕಾಗುತ್ತದೆ. ನಮಗೆ ಮನಸ್ಸು ಇರುವುದರಿಂದ ನಾವು ಆಲೋಚನೆಯನ್ನು ಮಾಡಬಲ್ಲೆವು ನಮಗೆ ಅದು ಸಾಧ್ಯವೂ ಆಗುತ್ತದೆ. ಆದ್ದರಿಂದ ನಮ್ಮ ಆಲೋಚನೆ ಎನ್ನುವುದು ಅತ್ಯಂತ ಮುಖ್ಯವಾದದ್ದು ಎನ್ನುವುದು ಅವನ ವಾದವಾಗಿದೆ. ಹಾಗೆ ನೋಡಿದರೆ ಯಾವುದನ್ನು ಈವತ್ತು ನಮ್ಮ ಜ್ಞಾನವೆಂದು ಹೇಳುತ್ತೇವೆಯೋ ಅದು ಬದಲಾಗಲು ಅನೇಕ ಕಾರಣವೂ ಇದೆ. ಆಲೋಚನೆ ಮತ್ತು ಅದರ ಸ್ವರೂಪಗಳು ಬೇರೆ ಬೇರೆ ಕಾರಣದಿಂದ ಬದಲಾಗುತ್ತದೆ. ಜನಾಂಗ, ಚರಿತ್ರೆ, ಮನುಷ್ಯನ ವ್ಯಕ್ತಿತ್ವ, ಕಾರಣಗಳು ಅವನಲ್ಲಿ ಮುಖ್ಯವಾಗುತ್ತವೆ.

1. ಫುಕೋ ರೀಡರ್

2. ಕಾಂಟ್ ಕ್ರೆಡಿಟ್ ಆಫ್ ಜಜ್‌ಮೆಂಟ್.

17. ಸಾಮಾಜಿಕ ಸಮರ್ಥನೆ

ಇದರ ಬಗ್ಗೆ ಫುಕೋ ಅಬ್‌ನರ್ಮಲ್ ಕೃತಿಯಲ್ಲಿ ಚರ್ಚೆಯನ್ನು ಮಾಡುತ್ತಾನೆ. ಪ್ರಭುತ್ವವು ನಮ್ಮನ್ನು ನಿಯಂತ್ರಣ ಮಾಡುತ್ತದೆ. ಪ್ರಭುತ್ವವವು ತನ್ನ ಹಿತಾಸಕ್ತಿಗಾಗಿ ಯುದ್ಧವನ್ನು ಮಾಡುತ್ತದೆ. ಜನಾಂಗೀಯ ಕಲಹಗಳನ್ನು ನಾವು ಕಾಣುತ್ತೇವೆ. ಪ್ರಭುತ್ವ ಮತ್ತು ಜನಾಂಗವು ಒಂದಾಗಿದೆ. ಆದ್ದರಿಂದ ಇದನ್ನು ನಾವು ಮತ್ತೆ ಪುನರ್ರಚನೆ ಮಾಡಬೇಕಾದ ಅಗತ್ಯವೂ ಇದೆ. ಹತ್ತೊಂಬತ್ತನೆಯ ಶತಮಾನದಲ್ಲಿಯಂತೂ ಅಧಿಕಾರವು ನಮ್ಮನ್ನು ಪೂರ್ತಿಯಾಗಿ ಆವರಿಸಿದೆ.

ನಾವು ಚರಿತ್ರೆಯನ್ನು ನೋಡುವಾಗ ಅದರ ಸಾಧ್ಯತೆಯನ್ನು ಎರಡು ಥರ ಗ್ರಹಿಸುತ್ತೇವೆ. ಆದರೆ ಚರಿತ್ರೆ ಎನ್ನುವುದು ನಮಗೆ ಅತ್ಯಂತ ಮಹತ್ವದ ಒಂದು ಶಿಸ್ತು ಕೂಡಾ ಹೌದು. ಸಂಸ್ಕೃತಿ ಮತ್ತು ಅದರ ವಿಶ್ಲೇಷಣೆಯಲ್ಲಿ ನಮಗೆ ನೆರವಾಗುವುದು ನಮಗೆ ಚರಿತ್ರೆಯೇ. ಚರಿತ್ರೆಯನ್ನು ಅನೇಕರು ಅನೇಕ ರೀತಿಯಲ್ಲಿ ಬಳಸಿದ್ದು ಸತ್ಯ. ನವ ಚಾರಿತ್ರಿಕವಾದವು ಚರಿತ್ರೆಯನ್ನು ಬಳಸಿದೆ. ಆದರೆ ಚರಿತ್ರೆಯನ್ನು ಅದು ಒಂದು ಸಂವಾದಿಯಾದ ರೂಪದಲ್ಲಿ ಬಳಸಿದೆ. ಚರಿತ್ರೆ ನಮಗೆ ಒಂದು ಸಂಬಂಧವನ್ನು ಹೇಳುತ್ತದೆ. ಅಷ್ಟೇ ಅಲ್ಲ; ಅದು ನಮಗೆ ಒಂದು ಸಂವೇದನೆಯನ್ನು ರೂಪಿಸುತ್ತದೆ. ಅದು ಕಳೆದು ಹೋಗಿರುವುದು ಸತ್ಯ. ಆದರೆ ಅದರ ಜೊತೆಗೆ ಅದು ನಮಗೆ ಭಿನ್ನವಾದ ಒಂದು ಭೂತವನ್ನು ಮಾತ್ರವೇ ಹೇಳುತ್ತದೆ ಎಂದು ಅರ್ಥವಲ್ಲ. ಅದು ಒಂದು ಭೂತವನ್ನು ಮತ್ತು ಭವಿಷ್ಯವನ್ನು ಹೇಳುತ್ತದೆ. ಅದಕ್ಕೆ ಒಂದು ಚಹರೆಯು ಇದೆ ಎನ್ನುವುದೂ ಸತ್ಯ. ಚರಿತ್ರೆಯನ್ನು ನಮಗೆ ಹೊರತಾದ ಒಂದು ಪ್ರಕ್ರಿಯೆ ಎಂದು ಭಾವಿಸಬೇಕಾಗಿಲ್ಲ. ಕೈಗಾರಿಕೆ ಎನ್ನುವುದು ನಮಗೆ ಚರಿತ್ರೆಯನ್ನು ಬದಲು ಮಾಡಿತು. ಅಷ್ಟೇ ಅಲ್ಲ ಸಂಸ್ಕೃತಿಯನ್ನು ನೋಡುವ ಕ್ರಮವನ್ನು ಭಿನ್ನವಾಗಿಸಿತು. ಅದರ ಜೊತೆಗೆ ಅದು ನಮಗೆ ಹೊಸದಾದ ಸಂವೇದನೆಯನ್ನು ಹೇಳಿತು. ಕೈಗಾರಿಕೆ ಎನ್ನುವುದು ನಮಗೆ ನಮ್ಮ ಭಾವನೆಗಳನ್ನು ಬದಲು ಮಾಡಿದ್ದು ಮಾತ್ರವೇ ಅಲ್ಲ, ಅದು ಲೋಕವನ್ನು ಹೊಸತಾಗಿ ನೋಡಲು ಅವಕಾಶವನ್ನು ಕಲ್ಪಿಸಿತು. ಹದಿನೆಂಟು

ಮತ್ತು ಹತ್ತೊಂಭತ್ತನೆಯ ಶತಮಾನದಲ್ಲಿ ಅತ್ಯಂತ ಹೆಚ್ಚು ಚಾಲ್ತಿಗೆ ಬಂದ ಸಂಸ್ಕೃತಿಯ ಪ್ರಶ್ನೆಗಳು ಸಮಾಜವನ್ನು ಭಿನ್ನವಾಗಿ ನೋಡಿತು. ಆದರೆ ಸಂಸ್ಕೃತಿ ಎನ್ನುವುದನ್ನು ನಾವು ಅತ್ಯಂತ ಸಾಧಾರಣವಾದ ಒಂದು ಪರಿಭಾಷೆಯಾಗಿ ಅನೇಕರು ಬಳಸಿದರು. ಅದರಲ್ಲಿಯೂ ಈವತ್ತು ಅದನ್ನು ಹೆಚ್ಚು ವ್ಯಾಪಕವಾಗಿ ಅನೇಕರು ಬಳಸುತ್ತಿದ್ದಾರೆ. ಅದನ್ನು ಒಂದು ವಿನ್ಯಾಸ ಎನ್ನುವ ಅರ್ಥದಲ್ಲಿ ಬಳಸುತ್ತಿದ್ದಾರೆ. ಆದ್ದರಿಂದ ಅನೇಕರು ಈವತ್ತು ಸಂಸ್ಕೃತಿಯನ್ನು ಒಂದು ಆಕರ್ಷಕವಾದ ಪರಿಕಲ್ಪನೆ ಎನ್ನುವಂತೆ ಹೇಳುತ್ತಿದ್ದಾರೆ. ಅದಕ್ಕೆ ಹೊಸ ಆಯಾಮವು ಹೇಗೆ ಇದೆ ಎಂದು ಅನೇಕರು ಯೋಚನೆ ಮಾಡುವುದಿಲ್ಲ. ಹಾಗೆ ನೋಡಿದರೆ ನಮಗೆ ಕೈಗಾರಿಕೆ ಎನ್ನುವುದು ಅತ್ಯಂತ ಸರಳವಾದ ಒಂದು ಕಲ್ಪನೆಯು ಅಲ್ಲ. ಅದು ಅನೇಕವನ್ನು ಬದಲು ಮಾಡಿದೆ. ಅದರ ಜೊತೆಗೆ ಸಂಸ್ಕೃತಿಯನ್ನು ಕುರಿತು ಹೇಳುವಾಗ ಅದರಲ್ಲಿ ಬೇರೆ ಅರ್ಥವೂ ಇತ್ತು. ಅದು ಬೇರೆ ಪ್ರಶ್ನೆ. ಸಾಮಾಜಿಕವಾದ ವಿವರಣೆಯಲ್ಲಿ ಫುಕೋ ಒಂದು ಶಿಸ್ತುಬದ್ಧತೆಯನ್ನು ಕಾಪಾಡುತ್ತಾನೆ. ಸಮಾಜವು ಹೇಗೆ ಇದೆ ಎಂದು ವಿವರಿಸುತ್ತಾನೆ. ಸಮಾಜ ಎನ್ನುವುದು ಅತ್ಯಂತ ಸಂಕೀರ್ಣವಾಗಿದೆ ಎನ್ನುವ ಅರಿವು ಅವನಿಗೆ ಇದೆ. ಆದ್ದರಿಂದ ತತ್ವಜ್ಞಾನ ಮತ್ತು ಪಾಸಿಟಿವಿಸ್ಟಿಕ್ ಸಿದ್ಧಾಂತವನ್ನು ಅವನು ಹೇಳುತ್ತಾನೆ. ಈ ಅರ್ಥದಲ್ಲಿ ಅವನು ಸಾಂಪ್ರದಾಯಿಕವಾದ ಚರಿತ್ರೆಕಾರರ ಥರ ಯೋಚನೆಯನ್ನು ಅವನು ಮಾಡುವುದಿಲ್ಲ. ಅವನಿಗೆ ಸಾಮಾಜಿಕ ಜ್ಞಾನ ಮತ್ತು ಅದರ ಕೌಶಲಗಳೂ ಅತ್ಯಂತ ಮುಖ್ಯವಾಗುತ್ತವೆ. ಆದರೆ ಪರಿಸ್ಥಿತಿಯು ಬೇರೆ ಇದೆ ಎಂದು ಫುಕೋ ಹೇಳುತ್ತಾನೆ. ನಾವು ಹೇಗೆ ಜೀವಿಸಬೇಕು ಎಂದು ತೀರ್ಮಾನವನ್ನು ಮಾಡುವುದು ಅಧಿಕಾರ.

ಹದಿನೆಂಟನೆಯ ಶತಮಾನವು ಹೇಗೆ ಉತ್ಪಾದನೆಗಳನ್ನು ಬದಲಿಸಿತು. ಜನಸಾಮಾನ್ಯರು ಕೂಡಾ ಇಲ್ಲಿ ಇದನ್ನು ಅತ್ಯಂತ ಮುಖ್ಯವಾದ ಒಂದು ಪ್ರಕ್ರಿಯೆ ಎಂದು ಭಾವಿಸಿದರು. ಕೈಗಾರಿಕೆ ಎನ್ನುವುದು ಒಂದು ಸಂಸ್ಥೆಯಾಗಿ ಬಂದುದು ಇಲ್ಲಿ ಅತ್ಯಂತ ಮುಖ್ಯ. ಕೈಗಾರಿಕೆ ಮತ್ತು ಅದರ ಉತ್ಪನ್ನವು ಅತ್ಯಂತ ಮಹತ್ವದ್ದು. ಅದರ ಜೊತೆಗೆ ಅದು ನಮಗೆ ಬೇರೆ ಬೇರೆ ಚಟುವಟಿಕೆಯನ್ನು ಸೂಚಿಸಿತು. ಯಾವುದನ್ನು ನಾವು ಕೈಗಾರಿಕಾ ಕ್ರಾಂತಿ ಎಂದು ಹೇಳುತ್ತೇವೆಯೋ ಅದು ಪಶ್ಚಿಮದಲ್ಲಿ; ಬದಲಾದ ಸನ್ನಿವೇಶದಲ್ಲಿ ತನ್ನದೇ ಆದ ಪ್ರಭಾವವನ್ನು ಸೂಚಿಸಿತ್ತು ಎನ್ನುವುದೂ ಅಷ್ಟೇ ಸತ್ಯ. ನಮಗೆ ಸಾಹಿತ್ಯ ಮತ್ತು ಸಮಾಜವನ್ನು ಕುರಿತು ಮಾತಾಡುವಾಗ ಇದರ ಅರಿವು ಇರಬೇಕಾಗುತ್ತದೆ. ಒಂದು ಅರ್ಥದಲ್ಲಿ ಸಮಾಜ ಮತ್ತು ಬುದ್ಧಿಜೀವಿಗಳ ನಡುವೆ ಒಂದು ಅಂತರವು ಉಂಟಾದ್ದರಿಂದ ಅನೇಕ ಲೇಖಕರು ಒಂದು ಖಾಲಿಯಾದ ಅವಕಾಶದಲ್ಲಿ ವಾಸ ಮಾಡತೊಡಗಿದರು. ಅದರಲ್ಲಿ ವೈರುಧ್ಯಗಳು ಮತ್ತು ವಿವಿಧ

ರೀತಿಯ ಸಂಘರ್ಷಗಳೂ ಇದ್ದವು ಎನ್ನುವುದರ ಅರಿವು ಅವನಿಗೆ ಇದೆ. ಅದನ್ನು ಅವನು ಮತ್ತೊಂದು ವಾದದ ಮೂಲಕ ವಿವರಿಸುತ್ತಾನೆ. ಹೇಗೆ ಸಮಾಜವು ಸಹಜವಾದ ಜನರನ್ನು ಬಯಸುತ್ತದೆ ಮತ್ತು ಅಸಹಜವಾದ ಜನರನ್ನು ಅದು ಹೇಗೆ ನೋಡುತ್ತದೆ ಎಂದು ವಿವರವಾಗಿ ಚರ್ಚೆಯನ್ನು ಮಾಡಿದ್ದಾನೆ. ಅಸಹಜ ಎನ್ನುವುದು ಕೂಡ ಒಂದು ಕಲ್ಪನೆಯು ಮಾತ್ರ. ಒಂದು ಸಮಾಜದ ನಿಯಮದಲ್ಲಿ ಯಾರು ಭಾಗವಹಿಸುವುದಿಲ್ಲವೋ ಅವರನ್ನು ನಾವು ಅಸಹಜ ಎಂದು ಕರೆದೆವು. ಸಹಜರನ್ನು ಸಮಾಜವು ಒಪ್ಪಿದೆ. ಆದರೆ ಅಸಹಜರನ್ನು ಅದು ನಿರಾಕರಿಸಿದೆ. ಅದರ ಜೊತೆಗೆ ಜನಾಂಗ ಎಂದು ಯಾವುದನ್ನು ಕರೆಯುತ್ತಿದ್ದೇವೆಯೋ ಅದು ಕೂಡಾ ಸಮಾಜದಲ್ಲಿ ಮಾನ್ಯತೆಯನ್ನು ಪಡೆದಿದೆ. ಜನಾಂಗ ಎಂದರೆ ಅದು ವಾಸ್ತವವಾಗಿ ಜೈವಿಕವಾದ ಒಂದು ಕ್ರಿಯೆ. ಇಂದು ಜನಾಂಗವು ತನ್ನದೇ ಆದ ಜನಾಂಗದ ಸಂಪ್ರದಾಯಗಳನ್ನು ಉಳಿಸಿಕೊಂಡಿದೆ. ಅದರ ಜೊತೆಗೆ ಅದು ತನ್ನ ಜನಾಂಗವನ್ನು ಬೆಳೆಸುತ್ತದೆ. ಆದ್ದರಿಂದ ಸಮಾಜ ಮತ್ತು ಜನಾಂಗಕ್ಕೆ ಅತ್ಯಂತ ನಿಕಟವಾದ ಸಂಬಂಧವು ಇದೆ ಎಂದು ಫುಕೋ ಭಾವಿಸುತ್ತಾನೆ. ಪ್ರಭುತ್ವಕ್ಕಾಗಿ ನಾವು ಜೀವಿಸುವುದು ಮತ್ತು ಅದಕ್ಕಾಗಿ ಹೋರಾಟದಲ್ಲಿ ಸಾಯುವುದು ಕೂಡಾ ಕಾಣಿಸಿಕೊಳ್ಳುತ್ತದೆ. ನಮಗೆ ನಮ್ಮ ಜೀವನದ ಮೇಲೆ ಯಾವುದೇ ಹಕ್ಕು ಇಲ್ಲವಾಗಿದೆ ಎಂದು ಫುಕೋ ಹೇಳುತ್ತಾನೆ.

ಎಡ್ಮಂಡ್ ಬರ್ಕೆಯು 'ಯಾವುದನ್ನು ನಾವು ತಡೆ ಹಿಡಿಯಲಾರೆವು' ಎಂದು ಹೇಳುತ್ತಾನೆ. ಅವನು ರಾಜಕಾರಣ ಮತ್ತು ಚರಿತ್ರೆಯು ಹೇಗೆ ಜೊತೆಗೆ ಹೋಗುತ್ತದೆ ಎನ್ನುವುದನ್ನು ವಿವರಿಸಿದ್ದ. ಅನುಭವ ಮತ್ತು ಅದರ ಬದಲಾವಣೆಯು ಹೇಗೆ ಬದಲಾಗುತ್ತದೆ ಮತ್ತು ಅದರ ಕಾರಣಗಳು ಏನು ಎನ್ನುವುದು ಸ್ಪಷ್ಟ. ಆಲೋಚನೆಯು ಬದಲಾಗಲು ಬೇರೆ ಬೇರೆ ಕಾರಣಗಳು ಇರುವುದು ಸ್ಪಷ್ಟ. ಅನುಭವ ಮತ್ತು ಆಲೋಚನೆಗೆ ಒಂದು ಸಂಬಂಧವು ಇದೆ. ಅನುಭವ ಎನ್ನುವುದು ಮನುಷ್ಯನಿಗೆ ಅತ್ಯಂತ ಅಗತ್ಯವಾಗಿದೆ. ವೈಯಕ್ತಿಕವಾದ ಅನುಭವ ಅನೇಕ ಸಂದರ್ಭದಲ್ಲಿ ಒಂದು ಮಾನದಂಡವೂ ಆಗಿರುತ್ತದೆ. ಅಷ್ಟೇ ಅಲ್ಲ; ನಾವು ಅನುಭವದ ಮೂಲಕವೂ ಅನೇಕವನ್ನು ಕಲಿಯುತ್ತೇವೆ. ಕೈಗಾರಿಕೆಗಳು ಮನುಷ್ಯರ ಕೌಶಲವನ್ನು ಬದಲು ಮಾಡುತ್ತದೆ. ವ್ಯಕ್ತಿ ಮತ್ತು ಅವನ ನಾಗರಿಕ ಸ್ವಭಾವವು ಒಂದು ಸಂದರ್ಭದಲ್ಲಿ ಬೇರೆ ಥರ ಆಗುತ್ತದೆ. ನಾಗರಿಕ ಎನ್ನುವುದು ಮನುಷ್ಯನ ಒಂದು ಗುಣವಾಗಿ ಪರಿವರ್ತನೆಯು ಆಗುತ್ತದೆ. ನಾಗರಿಕ ಎನ್ನುವುದು ಆಧುನಿಕ ಜಗತ್ತಿನಲ್ಲಿ ಒಂದು ವ್ಯಾಖ್ಯೆಯಾಗಿದೆ. ವ್ಯಕ್ತಿ ಮತ್ತು ನಾಗರಿಕವಾದ ಒಂದು ಜಗತ್ತು ಹೇಗೆ ಪರಸ್ಪರ ಜೊತೆಗೆ ಹೋಗುತ್ತದೆ ಆಧುನಿಕ ಜಗತ್ತಿನ ಪಲ್ಲಟದಲ್ಲಿಯೂ ನಾವು

ಗುರುತಿಸಬಹುದು. ಆಧುನಿಕ ನಾಗರಿಕ ಜಗತ್ತು ವ್ಯಕ್ತಿಯ ಗುಣಮಟ್ಟವನ್ನು ಬದಲು ಮಾಡುವುದರಲ್ಲಿ ಹೆಚ್ಚು ಆಸಕ್ತವಾಗಿದೆ. ನಾಗರಿಕರು ಕೆಲವನ್ನು ಅನುಸರಿಸಬೇಕು ಎಂದು ಆಧುನಿಕ ಪ್ರಭುತ್ವವು ನಂಬುತ್ತದೆ. ನಾಗರಿಕ ಜಗತ್ತು ಯಾವ ಮೌಲ್ಯವನ್ನು ನಂಬುತ್ತದೆಯೋ ಅದನ್ನು ಅದು ವ್ಯಕ್ತಿಯ ಮೇಲೆ ಹೇರುತ್ತದೆ. ಅಂದರೆ ಆಧುನಿಕ ಪ್ರಭುತ್ವವು ವ್ಯಕ್ತಿಯನ್ನು ಒಂದು ಪರಿಕರವನ್ನಾಗಿ ಮಾಡುತ್ತದೆ. ಅದಕ್ಕೆ ಬೇಕಾದ ನಿಯಮವನ್ನು ರೂಪಿಸುತ್ತದೆ ಎನ್ನುವುದು ಅಷ್ಟೇ ಸತ್ಯ. ಆಧುನಿಕ ನಾಗರಿಕತೆಯನ್ನು ಕಟ್ಟುವುದು ಅಂದರೆ ಅದನ್ನು ನಾವು ಇಟ್ಟಿಗೆಯಲ್ಲಿ ಕಟ್ಟುವುದೂ ಅಲ್ಲ ಎಂದು ಅರ್ಥಮಾಡಿಕೊಳ್ಳುವುದು ಸೂಕ್ತ. ಮರಗಳಿಂದ ಮತ್ತು ಇಟ್ಟಿಗೆಯಿಂದ ನಾವು ಯಾವುದನ್ನೂ ಕಟ್ಟುವುದು ಅಸಾಧ್ಯ. ಪ್ರಜಾಪ್ರಭುತ್ವವನ್ನು ಮತ್ತು ನಾಗರಿಕ ಜಗತ್ತನ್ನು ನಾವು ಕಟ್ಟುವುದು ಅಂದರೆ ಅದು ಯಾವುದೇ ಯಂತ್ರಗಳಿಂದ ರಚನೆಯನ್ನು ಮಾಡುವುದೂ ಅಲ್ಲ. ಆದರೆ ಒಂದು ಸಮಾಜದಲ್ಲಿ ಮತ್ತು ಒಂದು ಸಂಸ್ಕೃತಿಯಲ್ಲಿ ಮನುಷ್ಯರು ತಮ್ಮದೇ ಆದ ಒಂದು ಪಾತ್ರವನ್ನು ವಹಿಸುತ್ತಾರೆ. ನಮಗೆ ಈಗ ಇರುವ ಸಂವಿಧಾನ ಮತ್ತು ಅದರ ಆಶಯವೂ ಅದನ್ನು ಹೇಳುತ್ತದೆ. ಸಂಸ್ಥೆಗಳು ನಮಗೆ ಹೇಗೆ ಇರಬೇಕು ಎಂದು ನಿಯಂತ್ರಣಗಳನ್ನು ಹೇರುತ್ತವೆ. ನಾವು ಇದರ ಮೂಲಕ ಯಾವುದನ್ನು ಕಲಿಸುತ್ತಿದ್ದೇವೆ ಮತ್ತು ಯಾಕೆ ಇದನ್ನು ಕಲಿಸುತ್ತಿದ್ದೇವೆ ಎನ್ನುವುದು ನಮಗೆ ಸಮಸ್ಯೆ. ಜನರಿಗೆ ನಾವು ವಿವಿಧ ತರಬೇತಿಯನ್ನು ಕೊಡುತ್ತಿದ್ದೇವೆ. ನಾವು ಯಾವ ಕೆಲಸವನ್ನು ಮಾಡಬೇಕು ಎಂದು ಕೆಲವು ಸಂಸ್ಥೆಗಳು ಹೇಳುತ್ತವೆ. ಅದಕ್ಕೆ ಸರಿಯಾಗಿ ನಾವು ನಮ್ಮ ಆಲೋಚನೆಯನ್ನು ರೂಪಿಸುತ್ತೇವೆ. ಅಧಿಕಾರವು ಕೆಲವನ್ನು ರೂಪಿಸುತ್ತದೆ. ಅದರ ಹಿಂದೆ ಒಂದು ರಾಜಕೀಯವಾದ ಉದ್ದೇಶವೂ ಇರುತ್ತದೆ ಎನ್ನುವುದು ಅವನ ವಾದ. 'ನಿರಂಕುಶ ಪ್ರಭುತ್ವ ಎನ್ನುವುದು ಹೇಗೆ ಇದೆ ಎಂದರೆ ಅದರಲ್ಲಿ ಪ್ರಜೆಗಳ ಅಭಿಪ್ರಾಯಕ್ಕೆ ಯಾವುದೇ ಬೆಲೆಯು ಇಲ್ಲವಾಗಿದೆ. ಅದು ಖಡ್ಗದ ಮೇಲೆ ನಿಂತಿದೆ' ಎಂದು ಫುಕೋ ಹೇಳುತ್ತಾನೆ.

ನಮಗೆ ಸಂಸ್ಥೆಗಳ ಋಣವೂ ಇರುತ್ತದೆ ಎನ್ನುವುದು ಸತ್ಯ. ನಾವು ಒಂದು ಗಂಟೆ ಒಬ್ಬರ ಜೊತೆಗೆ ಕಳೆಯುತ್ತಿದ್ದೇವೆ ಎಂದರೆ ಅದರ ಅರ್ಥ ಅಲ್ಲಿ ನಾವು ನಮ್ಮ ಅವಕಾಶಗಳನ್ನು ಬಳಸುತ್ತಿದ್ದೇವೆ ಎಂದು ಮಾತ್ರ. ವರ್ಷವನ್ನು ಲೆಕ್ಕ ಹಾಕಿದರೆ ಒಂದು ಗಂಟೆ ಎನ್ನುವುದು ಅತ್ಯಂತ ಸಣ್ಣ ಘಟಕವೂ ಹೌದು. ಸಣ್ಣ ಅವಕಾಶ ಮತ್ತು ಸಣ್ಣ ಕಾಲವನ್ನು ಅದು ಸೂಚಿಸುತ್ತದೆ. ನಾವು ಏನು ಮಾತಾಡಿದ್ದೇವೆ ಅದನ್ನು ನಾವು ಪುಸ್ತಕದ ರೂಪದಲ್ಲಿ ತರಬಹುದು, ಇಲ್ಲವೇ ಅದನ್ನು ಧ್ವನಿ ಮುದ್ರಿಕೆ ಮಾಡಬಹುದು ಅಥವಾ ಅದನ್ನು ಅಲ್ಲಿಯೇ ಬಿಡಬಹುದು. ಆದರೆ ಅದಕ್ಕೆ ಅರ್ಥಗಳು ಇರುತ್ತವೆ ಎನ್ನುವುದು ಸತ್ಯ. ಶಿಕ್ಷಣ ವಲಯ ಎನ್ನುವುದು ವಾಸ್ತವವಾಗಿ

ಇರುವುದು ಒಂದು ವಿನಿಮಯದ ಮೂಲಕ ಎನ್ನುವುದೂ ಅಷ್ಟೇ ಸತ್ಯ. ಯಾವುದನ್ನು ಈವತ್ತು ಶಿಕ್ಷಣ ಎಂದು ಹೇಳುತ್ತೇವೆಯೋ ಅದು ಮುಂದುವರಿಕೆಯ ರೂಪದಲ್ಲಿ ಇರುತ್ತವೆ. ಅದರ ಅನಂತರ ನಾವು ಸಂಶೋಧನೆಯನ್ನು ಕಲಿಯುತ್ತೇವೆ. ಇಲ್ಲಿ ಒಂದು ಅಂಶವನ್ನು ನಾವು ಇಲ್ಲಿ ಹೇಳಬೇಕು: ಇದನ್ನು ಫುಕೋ ಹೇಳುತ್ತಾನೆ: ಒಮ್ಮೆ ಮನೋವಿಜ್ಞಾನವು ಸಂಶೋಧನೆಯನ್ನು ಮಾಡಲು ಚರಿತ್ರೆಯನ್ನು ಆಕರವಾಗಿ ಇಟ್ಟುಕೊಂಡಿತ್ತು. ಚರಿತ್ರೆಗೆ ಒಂದು ವಂಶಾವಳಿಯನ್ನು ಅದು ರೂಪಿಸಿತು. ಅದಕ್ಕೆ ಬೇರೆ ಬೇರೆ ರೀತಿಯ ನಾಣ್ಯಗಳು ಸಹಾಯವನ್ನು ಮಾಡಿದವು. ಪ್ರಾಚೀನವಾದ ಚರಿತ್ರೆಗೆ ನಾಣ್ಯವು ಹೇಗೆ ಸಹಾಯವನ್ನು ಮಾಡಿದವು ಎಂದರೆ ಅದರ ಮೂಲಕ ಗ್ರೀಕಿನ ಬಗ್ಗೆ ನಮಗೆ ಕೆಲವು ಪ್ರಮೇಯಗಳೂ ದೊರೆತವು. ಇದರ ಮತ್ತೊಂದು ಆಯಾಮವನ್ನು ನಾವು ನೋಡಬಹುದು: ಲೈಂಗಿಕ ಸಂಬಂಧ ಮತ್ತು ಪಾಪ ಪ್ರಜ್ಞೆಗೆ ಒಂದು ಇತಿಹಾಸವು ಇದೆ. ಲೈಂಗಿಕ ಸಂಬಂಧ ಮತ್ತು ಅದರ ಮೂಲಕ ಬೆಳೆದು ಬಂದ ನೈತಿಕ ಜ್ಞಾನಗಳಿಗೆ ಅದರದೇ ಆದ ಆಯಾಮವೂ ಇದೆ. ಗಂಡು ಮತ್ತು ಹೆಣ್ಣಿನ ಸಂಬಂಧಗಳನ್ನು ನೀತಿಯು ಬೇರೆ ಥರ ನಿರೂಪಣೆ ಮಾಡುತ್ತದೆ. ನೀತಿ ಎನ್ನುವುದು ವಾಸ್ತವವಾಗಿ ಒಂದು ರಚನೆಯು ಮಾತ್ರ. ಆದರೆ ಅದರ ಹಿಂದೆ ಪಶ್ಚಿಮದಲ್ಲಿ ಇದ್ದ ನಿರೂಪಣೆಗೂ ಪಾಪ ನಿವೇದನೆಗೂ ಒಂದು ಸಂಬಂಧವು ಇದೆ. ನೀತಿ ಮತ್ತು ನಿಯಮಗಳು ಹೇಗೆ ಲೈಂಗಿಕ ಅಪರಾಧಗಳನ್ನು ತಡೆಗಟ್ಟುತ್ತವೆ ಎನ್ನುವುದನ್ನೂ ಇಲ್ಲಿ ಗಮನಿಸಬೇಕು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಈ ನಿಯಮಗಳು ಹೇಗೆ ಬೇರೆ ಸಂಗತಿಗಳನ್ನು ಒಳಗೊಂಡವು ಎಂದು ನಾವು ಗಮನಿಸಬೇಕು. ಅಂದರೆ ನೈತಿಕತೆಗೆ ಒಂದು ಸಿದ್ಧಾಂತವೂ ಇದೆ. ಆದರೆ ಆ ಸಿದ್ಧಾಂತವೂ ಮನುಷ್ಯ ಮತ್ತು ಅವನ ಸುಖವನ್ನು ಹೇಳುವುದಿಲ್ಲ. ಅದರ ಬದಲು ಅದು ನಿಯಂತ್ರಣವನ್ನು ಹೇರುತ್ತದೆ. ಆದರೆ ನಾವು ಅಧ್ಯಯನ ಮಾಡುವಾಗ ಕೆಲವು ಪುಸ್ತಕಗಳು ನಮಗೆ ಬೇಕಾಗುತ್ತವೆ. ಕೆಲವು ಪುಸ್ತಕಗಳು ನಮಗೆ ಅಗತ್ಯ ಇಲ್ಲ. ಅಂಥಾ ಪುಸ್ತಕಗಳು ಕವಾಟಿನಲ್ಲಿ ಮಲಗುತ್ತವೆ. ಅದರ ಜೊತೆಗೆ ನಾವು ಪುಸ್ತಕವನ್ನು ಯಾಕೆ ಓದುತ್ತೇವೆ ಎಂದರೆ ಅದರಲ್ಲಿ ನಮಗೆ ಒಂದು ಬಗೆಯ ಜ್ಞಾನವು ದೊರೆಯುತ್ತವೆ ಎನ್ನುವ ಕಾರಣಕ್ಕೆ.

ಹದಿನಾರನೆಯ ಶತಮಾನದ ಅನಂತರ ಜ್ಞಾನ ಎನ್ನುವುದು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದು ಸತ್ಯ. ಜ್ಞಾನ ಮತ್ತು ಗದ್ಯದ ಬೆಳವಣಿಗೆಗೆ ಒಂದು ಸಂಬಂಧವು ಇದೆ. ಅದನ್ನು ನಾವು ಮರೆಯಬಾರದು. ಜ್ಞಾನವನ್ನು ಅನೇಕವು ಪ್ರಸ್ತುತ ಪಡಿಸುತ್ತವೆ ಎನ್ನುವುದೂ ನಿಜ. ಅದನ್ನು ನಾವು ಒಂದೊಂದು ವಿಷಯದಲ್ಲಿ ನೋಡುತ್ತೇವೆ. ಅದರ ಜೊತೆಗೆ ನಾವು ಯಾವುದರಲ್ಲಿ ಯಾವ ಬಗೆಯ ಜ್ಞಾನವನ್ನು ಪಡೆಯುತ್ತೇವೆ

ಮತ್ತು ಹೇಗೆ ಅದನ್ನು ನಮ್ಮ ಕ್ರಿಯೆಗಳಲ್ಲಿ ವ್ಯಕ್ತ ಮಾಡುತ್ತೇವೆ ಎನ್ನುವುದು ಅತ್ಯಂತ ಮುಖ್ಯವಾದ ಪ್ರಶ್ನೆ. ನಮಗೆ ಯಾವುದರಲ್ಲಿ ಯಾವ ಬಗೆಯ ಜ್ಞಾನವು ಇದೆಯೋ ಅದನ್ನು ವ್ಯಕ್ತ ಮಾಡಲು ನಾವು ವಿವಿಧ ವಿಧಾನವನ್ನು ಅಳವಡಿಸಿಕೊಳ್ಳುತ್ತೇವೆ. ಜ್ಞಾನವು ಒಂದು ಬಗೆಯಲ್ಲಿ ನಮಗೆ ಖುಶಿಯನ್ನು ಕೊಡುತ್ತದೆ. ಅದನ್ನು ವ್ಯಕ್ತ ಮಾಡುವಾಗ ಅದರಲ್ಲಿ ವಿವಿಧತೆಯೂ ಇರುತ್ತದೆ. ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು – ಒಂದು ಚಿತ್ರವು ನಮಗೆ ಒಂದು ಅನುಭವವನ್ನು ಕೊಡುತ್ತದೆ. ಚಿತ್ರವು ಒಂದು ಅವಕಾಶವನ್ನು ಅನುಕರಣೆ ಮಾಡುತ್ತದೆ. ಅವಕಾಶ ಎನ್ನುವುದನ್ನು ನಾವು ಈವತ್ತು ಅತ್ಯಂತ ಹೆಚ್ಚು ಗಮನವಿಟ್ಟು ನೋಡಬೇಕು.

ಒಂದು ಅರ್ಥದಲ್ಲಿ ಹದಿನಾರು ಮತ್ತು ಹದಿನೇಳನೆಯ ಶತಮಾನದಲ್ಲಿ ಅನೇಕ ಬದಲಾವಣೆಗಳು ಆಗಿರುವುದು ನಮಗೆ ಬೇರೆ ಸೂಚನೆಗಳನ್ನು ಕೊಡುತ್ತದೆ ಎನ್ನುವುದೂ ಸತ್ಯ. ಆದರೆ ಹೊರಗಿನ ಅನೇಕ ಸತ್ಯಗಳು ಕಲೆಯೊಳಗೆ ಬರುವಾಗ ಅದರ ಅರ್ಥವು ಪಲ್ಲಟವಾಗುತ್ತದೆ. ಗದ್ಯ ಮತ್ತು ಅದರ ಸಂವಹನವು ಒಂದು ಬಗೆಯಲ್ಲಿ ಇರುತ್ತದೆ. ಅದು ನಮಗೆ ಸಂವಹನದ ದೃಷ್ಟಿಯಿಂದ ಹೆಚ್ಚು ಅನುಕೂಲವೂ ಹೌದು. ಗದ್ಯ ಮತ್ತು ಅದರ ಪ್ರಾತಿನಿಧಿಕತೆಗೆ ಒಂದು ವಿಶಿಷ್ಟವಾದ ಅರ್ಥವೂ ಇದೆ. ಅದನ್ನು ನಾವು ಇಲ್ಲಿ ಹೇಳಬಹುದು. ಗದ್ಯವು ಅನುಕರಣೆಗೆ ಹೆಚ್ಚು ಸಮೀಪವೂ ಇದೆ. ಅದರ ಅಭಿವ್ಯಕ್ತಿ ಮತ್ತು ಅದರ ರೂಪವು ಬೇರೆ. ಯಾವ ವಸ್ತುವಿನ ಕುರಿತು ನಾವು ಹೇಳುತ್ತೇವೆಯೋ ಅದರ ಅಭಿವ್ಯಕ್ತಿಯನ್ನು ನಾವು ಗದ್ಯದಲ್ಲಿ ಹೇಳುತ್ತೇವೆಯೋ ಹೊರತು ಅದನ್ನು ಪದ್ಯದಲ್ಲಿ ಹೇಳುವುದಿಲ್ಲ. ಅಂದರೆ ಗದ್ಯವು ನಮಗೆ ನಿತ್ಯದ ಅಭಿವ್ಯಕ್ತಿ. ಕಾವ್ಯವು ನಿತ್ಯದ ಅಭಿವ್ಯಕ್ತಿಯು ಅಲ್ಲ. ಗದ್ಯವು ಇಬ್ಬರ ಸಂಬಂಧವನ್ನು ನಿರೂಪಿಸುತ್ತದೆ. ನಮ್ಮ ಆಲೋಚನೆಯು ಹೇಗೆ ಇದೆಯೋ ಅದನ್ನು ಸಾಧ್ಯವಾದಷ್ಟು ಹೆಚ್ಚು ಸ್ಪಷ್ಟವಾಗಿ ಹೇಳಲು ಸಾಧ್ಯವಾಗುವುದು ಇದರಲ್ಲಿ. ಗದ್ಯದಲ್ಲಿ ನಾವು ಯಾವುದನ್ನಾದರೂ ಹೇಳುವುದು ಅಂದರೆ ಅದು ನಮ್ಮ ಭಾವನೆಗೆ ಹೆಚ್ಚು ನಿಷ್ಠವಾಗುವುದು ಎಂದು ಅರ್ಥವಾಗುತ್ತದೆ. ರೂಪಕದಲ್ಲಿ ಹೇಳಬೇಕೆಂದರೆ ಗದ್ಯ ಎನ್ನುವುದು ಹೆಚ್ಚು ಆತ್ಮನಿಷ್ಠವಾದ್ದು. ಗದ್ಯ ಮತ್ತು ಪದ್ಯಗಳಿಗೆ ವ್ಯತ್ಯಾಸವು ಇದೆ. ಅದನ್ನು ನಾವು ಬೇರೆ ಥರ ಹೇಳಬಹುದು. ಅದು ನಿಜವಾದ ಜೀವನದ ಹತ್ತಿರವಿದೆ. ಪದ್ಯವು ರೂಪಕದ ಜೊತೆ ಇರುತ್ತದೆ. ಹಾಗೆ ನೋಡಿದರೆ ಗದ್ಯವು ಮನುಷ್ಯನ ಸ್ವಭಾವದಲ್ಲಿ ಇದೆ. ಯಾವುದು ರೂಪದಲ್ಲಿ ಇರುತ್ತದೆಯೋ ಅದೇ ರೀತಿಯಲ್ಲಿ ನಾವು ಹೇಳಲು ನಮಗೆ ಗದ್ಯವು ಅವಕಾಶವನ್ನು ಕಲ್ಪಿಸುತ್ತದೆ. ಹೊರ ಜಗತ್ತಿನ ಜೊತೆಗೆ ನಾವು ಸುಲಭವಾಗಿ ಒಂದು ಸಂಬಂಧವನ್ನು ಸ್ಥಾಪಿಸಿಕೊಳ್ಳಬಲ್ಲೆವು. ಯಾವುದು ಗದ್ಯ ಯಾವುದು ವಾಸ್ತವ ಮತ್ತು ಯಾವುದು ನಿಜವಾದ ಪದ್ಯ. ಆದರೆ

ಪುಸ್ತಕಗಳು ಎಲ್ಲವನ್ನು ಬಿಡಿಸಿ ಹೇಳುತ್ತವೆ ಎಂದು ಭಾವಿಸಲು ಸಾಧ್ಯವಿಲ್ಲ. ಅದರ ಜೊತೆಗೆ ಪುಸ್ತಕಗಳು ಸಮಾಜದ ಜೊತೆಗೆ ಒಂದು ಬಗೆಯ ಸಂಬಂಧವನ್ನು ಸ್ಥಾಪಿಸುತ್ತವೆ. ಆದರೆ ನಮಗೆ ಗೊತ್ತಿಲ್ಲದ ಅನೇಕ ಸಮಾಜಗಳು ಇವೆ. ಅವುಗಳ ಜೊತೆಗೆ ನಾವು ಪುಸ್ತಕಗಳ ಮೂಲಕ ಸಂಬಂಧವನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ.

ಯಾವಾಗ ಕ್ರಿಶ್ಚಿಯನ್ ಪರಂಪರೆಯು ಬಂತೋ ಆಗ ಕಾಲ ಮತ್ತು ಅವಕಾಶಗಳ ಕಲ್ಪನೆಯು ಬೇರೆ ಆಗಿರುವುದು ನಿಜ. ಜಗತ್ತು ಮತ್ತು ಕಾಲದ ಕಲ್ಪನೆಯು ಒಂದು ಎಂದಾಯಿತು. ಹಿಂದೆ ಇದ್ದ ಕಾಲದ ಕಲ್ಪನೆಯು ವ್ಯತ್ಯಾಸವಾಯಿತು. ಆದರೆ ನಾವು ಕಾಲವನ್ನು ಗಣನೆ ಮಾಡುವುದು ಭಿನ್ನವಾದ ಕ್ರಮದಲ್ಲಿ. ನಾವು ಈವತ್ತು ಏನು ಮಾಡುತ್ತಿದ್ದೇವೆ ಎಂದು ನೋಡಬೇಕು: ನಾವು ಅತ್ಯಂತ ಹೆಚ್ಚು ದೊಡ್ಡದು ಎಂದು ಯಾವುದು ಇದೆಯೋ ಅದರ ಬಗ್ಗೆ ಹೆಚ್ಚು ವಿವರಿಸುತ್ತೇವೆ. ಅದರ ಮೂಲಕ ಒಂದು ಮಹಾನ್ ನಿರೂಪಣೆಯನ್ನು ಮಾಡುತ್ತೇವೆ. ಇದಕ್ಕೆ ಸಂಬಂಧ ಪಡದೆ ಇರುವ ಅನೇಕ ಸಂಗತಿಗಳು ಇವೆ: ಅದು ನಮ್ಮ ಕಾಲದ ಅಡಿಯಲ್ಲಿ ಜಾರಿ ಹೋಗುತ್ತವೆ. ನಾವು ಮಾಡುತ್ತಿರುವ ಅನೇಕ ಸಂಕಥನಗಳು ಅತ್ಯಂತ ಸಾಮಾನ್ಯವಾದ ರೂಪವನ್ನು ಹೊಂದಿವೆ. ಅದನ್ನೇ ನಾವು ಲೋಕ ಎಂದು ಹೇಳುತ್ತೇವೆ. ಜನಪ್ರಿಯವಾದದ್ದು ಯಾವುದು ಇದೆಯೋ ಅದನ್ನು ನಾವು ಸಂಸ್ಕೃತಿಯೆನ್ನುವ ಹೆಸರಿನಲ್ಲಿ ಚಾಲ್ತಿಗೆ ತರುತ್ತೇವೆ. ನಮ್ಮ ನಿತ್ಯದ ಅನೇಕ ಸಂಜ್ಞೆಗಳು ಹೇಗೆ ನಮ್ಮ ನಮ್ಮ ಮನೋಸ್ಥಿತಿಯನ್ನು ಹೇಳುತ್ತದೆ ಎಂದು ಯೋಚನೆ ಮಾಡಲು ಹೋಗುವುದಿಲ್ಲ. ನಮ್ಮ ಜೀವನದಲ್ಲಿ ನಮಗೆ ಸಂಪ್ರದಾಯದ ಮೂಲಕ ಬಂದ ಅನೇಕ ಸಂಗತಿಗಳ ಬಗ್ಗೆ ಹೆಚ್ಚು ಯೋಚನೆ ಮಾಡಲು ಮತ್ತು ಅದರ ಕುರಿತು ಅಧ್ಯಯನ ಮಾಡಲು ಹೋಗುವುದೇ ಇಲ್ಲ.

ನಾವು ಅಧಿಕೃತವಾದ ಸಂಕಥನಗಳನ್ನು ರೂಪಿಸುತ್ತೇವೆ ಎಂದರೆ ಸಣ್ಣ ಕಥನಗಳನ್ನು ಮುಖ್ಯವಾದ ಸಂಕಥನಗಳು ಎಂದೇ ನಮಗೆ ಗೊತ್ತಿರುವುದಿಲ್ಲ. ನಾವು ಇದನ್ನು ವಿಮರ್ಶೆ ಮಾಡುವುದೇ ಇಲ್ಲ. ಒಂದು ಮಾತನ್ನು ಫುಕೋ ಹೇಳುತ್ತಾನೆ: 'ನಾವು ಎಲ್ಲವನ್ನೂ ಒಂದು ಜಾಗತಿಕವಾದ ಮಟ್ಟದ ನಿರೂಪಣೆ ಎಂದು ಭಾವಿಸುವುದು ಸರಿಯಲ್ಲ. ಯಾವುದನ್ನು ನಾವು ಜಾಗತಿಕ ಮಟ್ಟದ ಸಿದ್ಧಾಂತಗಳು ಎಂದು ಹೇಳುತ್ತೇವೆಯೋ ಅದರ ಸ್ವರೂಪವು ಕೂಡಾ ಅನೇಕ ಸಂದರ್ಭದಲ್ಲಿ ಸ್ಥಳೀಯವೂ ಆಗಿರುತ್ತದೆ. ಅನೇಕವು ನಮಗೆ ಬೇರೆ ಬೇರೆ ಪರಿಕರವನ್ನು ಕೊಡುತ್ತವೆ. ಅನೇಕ ಸಿದ್ಧಾಂತಗಳು ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ರೀತಿಯ ಅನ್ವಯವನ್ನು ಹೊಂದಿರುವುದೂ ಅಷ್ಟೇ ಸತ್ಯ. ನಮಗೆ ಈ ದೃಷ್ಟಿಯಿಂದ ಹಿಂದೆ ಇದ್ದ ಜ್ಞಾನಗಳು ಬೇಕಾಗುತ್ತವೆ. ಹಳೆಯ ಜ್ಞಾನವನ್ನು ನಾವು ಬೇರೆ ಥರ

ಮುಂದುವರಿಸುತ್ತೇವೆ. ನಾವು ಜ್ಞಾನಕ್ಕೆ ಯಾಕೆ ಹಿಂದಿರುಗಿ ನೋಡಬೇಕೆಂದರೆ ಅದರ ಮೂಲಕವೇ ಮತ್ತೊಂದು ಜ್ಞಾನಮಾದರಿಯನ್ನು ಕಟ್ಟುವುದು ನಮಗೆ ಸಾಧ್ಯವಾಗುತ್ತದೆ. ಅದು ಒಂದು ಸಾಧ್ಯತೆಯೂ ಹೌದು' ಇದನ್ನೇ 'ಜ್ಞಾನದ ಹಿಂತಿರುಗುವಿಕೆ' ಎಂದು ಫುಕೋ ಹೇಳುತ್ತಾನೆ.

ನಮಗೆ ಈವತ್ತು ಕೆಲವು ವಾದಗಳೂ ಇವೆ: ನಮಗೆ ಬೇಕಾಗಿರುವುದು ಜೀವನ. ಜ್ಞಾನವು ಬೇಕಾಗಿಲ್ಲ. ಮತ್ತೊಂದು ವಾದವೂ ಇದೆ: ನಮಗೆ ಈಗ ಅತ್ಯಂತ ಅಗತ್ಯವಾಗಿ ಇರುವುದು ವಾಸ್ತವವೇ ಹೊರತು ಮತ್ತೇನೂ ಅಲ್ಲ. ಪುಸ್ತಕದಿಂದ ನಮಗೆ ಏನು ಉಪಯೋಗವು ಇದೆ ಇತ್ಯಾದಿ. ಇದು ಒಂದು ಅತ್ಯಂತ ಮುಖ್ಯವಾದ ಆಶಯವಾಗಿ ಕೆಲಸವನ್ನು ಮಾಡುತ್ತಿದೆ. ಅಂದರೆ ಇವು ಒಂದು ರೀತಿಯಲ್ಲಿ ಜ್ಞಾನವನ್ನು ಪ್ರಶ್ನೆ ಮಾಡುತ್ತಿವೆ. ಇದರ ಅರ್ಥವು ಇಷ್ಟೆ: ನಾವು ಈವತ್ತು ಚರಿತ್ರೆಯನ್ನು ಹೇಳುತ್ತೇವೆ. ಅದರ ಬದಲಿಗೆ ನಾವು ವರ್ತಮಾನದ ಅಗತ್ಯವನ್ನು ಮಾತ್ರವೇ ಹೆಚ್ಚು ಅಂಗೀಕಾರ ಮಾಡುತ್ತೇವೆ. ಯಾವುದು ಈವತ್ತು ನಾವು ನವೀನವಾದ ಒಂದು ವ್ಯವಸ್ಥೆ ಎಂದು ಹೇಳುತ್ತೇವೆಯೋ ಅದನ್ನು ಸಂಭ್ರಮದಿಂದ ಅಂಗೀಕಾರ ಮಾಡುತ್ತೇವೆ. ಹಣ ಮತ್ತು ಅದರ ವ್ಯವಸ್ಥೆಯು ನಮಗೆ ಈವತ್ತು ಒಂದು ಮುಖವಾಡವು ಆಗಿದೆ. ಹಣವು ನಮಗೆ ಏನು ಮಾಡುತ್ತದೆ ಎಂದರೆ ನಮ್ಮ ಈ ತನಕದ ಜ್ಞಾನದ ಮಾದರಿಗಳನ್ನೂ ನಿರಾಕರಿಸುತ್ತದೆ. ಇಲ್ಲಿ ಜ್ಞಾನಕ್ಕೂ ಒಂದು ವಂಶಾವಳಿ ಎನ್ನುವುದು ಇರುತ್ತದೆ ಎನ್ನುವುದನ್ನು ನಾವು ಮರೆಯಬಾರದು.

ಸ್ಥಳೀಯವಾದ ಅನೇಕ ಜ್ಞಾನ ಮಾದರಿಗಳು ಬಹು ನಿರೂಪಣೆಯ ಜ್ಞಾನ ಮಾದರಿಗಳಿಂದ ನಿರಾಕರಣೆಗೆ ಗುರಿಯಾಗಿದೆ. ಜ್ಞಾನದಲ್ಲಿ ಶ್ರೇಣೀಕರಣವು ಉಂಟಾಗಿದೆ. ಅಷ್ಟೇ ಅಲ್ಲ ಕೆಲವನ್ನು ಈಗಾಗಲೇ ಒರಸಿ ಹಾಕಲಾಗಿದೆ. ನಾವು ಚಾರಿತ್ರಿಕವಾಗಿ ಬೆಳೆದು ಬಂದಿರುವ ಜ್ಞಾನಕ್ಕೂ ಒಂದು ನಿಯಮವು ಇದೆ. ಹಾಗೆಯೇ ಅದಕ್ಕೂ ಒಂದು ಪರಂಪರೆಯು ಇದೆ. ಕೆಲವು ಜ್ಞಾನವನ್ನು ನಾವು ಉಪಯೋಗಕ್ಕೆ ಬಾರದ್ದು ಎಂದು ತೀರ್ಮಾನ ಮಾಡಿದ್ದೇವೆ. ಅರ್ಹತೆಯನ್ನು ಹೊಂದಿರುವ ಜ್ಞಾನ ಮತ್ತು ಯಾವುದೇ ಅರ್ಹತೆಯನ್ನು ಹೊಂದದೇ ಇರುವ ಜ್ಞಾನ ಎಂದು ಹೇಳಲು ನಮಗೆ ಯಾವ ಮಾನದಂಡವಿದೆ? ನಮಗೆ ಕೆಲವು ಅತ್ಯಂತ ಸಾಮಾನ್ಯವಾಗಿ ಬಂದಿರುತ್ತದೆ. ಅತ್ಯಂತ ಸಾಮಾನ್ಯವಾಗಿ ನಮಗೆ ಇರುವ ಜ್ಞಾನವು ಒಂದು ಥರವಿದ್ದರೆ ಕೆಲವು ಅತ್ಯಂತ ವಿಶಿಷ್ಟವಾದ ಜ್ಞಾನವು ಇರುತ್ತದೆ. ಅದನ್ನು ನಾವು ಸಾಧನೆ ಮಾಡಿ ಪಡೆಯುತ್ತೇವೆ. ವೈದ್ಯಕೀಯ ಜ್ಞಾನ ಮತ್ತು ಸಾಮಾನ್ಯವಾದ ಜ್ಞಾನಕ್ಕೆ ವ್ಯತ್ಯಾಸವೂ ಇದೆ. ಒಂದು ವೇಳೆ ಒಂದು ಜ್ಞಾನಕ್ಕೆ ಯಾವುದೇ ಅರ್ಥವಿಲ್ಲ ಎಂದಾದರೆ ಅದು ಪುನರ್ ಹಾಜರಾಗುವುದೂ ಇಲ್ಲ. ಅದು ಮತ್ತು ಅನ್ವಯವಾಗುವುದು ನಮ್ಮ

ಅಗತ್ಯಕ್ಕೆ ಅನುಗುಣವಾಗಿ. ಅನ್ವಯವಾಗುವುದು ಅಂದರೆ ಅದು ನಮ್ಮ ಸಾಧ್ಯತೆ ಕೂಡಾ ಆಗಿದೆ. ಅಗತ್ಯವಿದ್ದರೆ ಮಾತ್ರವೇ ಆ ಜ್ಞಾನವನ್ನು ಒಂದು ಸ್ಥಳ ಮತ್ತು ಕಾಲಕ್ಕೆ ಅನ್ವಯ ಮಾಡುತ್ತೇವೆ. ಅದು ಒಂದು ಬಗೆಯಲ್ಲಿ ನಮ್ಮ ಮಟ್ಟಿಗೆ ಅಧಿಕೃತವೂ ಆಗುತ್ತದೆ. ಆದರೆ ನಮ್ಮಲ್ಲಿ ಅಸ್ತಿತ್ವದಲ್ಲಿ ಇರುವ ಜ್ಞಾನಗಳು ತುಂಬಾ ಇರುತ್ತವೆ.

ನಮಗೆ ಇರುವ ಕೆಲವು ಜ್ಞಾನಗಳು ನಿರ್ದಿಷ್ಟವಾದ ನಿಯಂತ್ರಣಕ್ಕೆ ಗುರಿಯಾಗುತ್ತವೆ. ನಮಗೆ ಗೊತ್ತಿರುವ ಜ್ಞಾನವನ್ನು ನಾವು ಎಷ್ಟೋ ಸರ್ತಿ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದರಲ್ಲಿಯೂ ಈವತ್ತು ನಾವು ಜ್ಞಾನ ಮತ್ತು ಅದರ ವಿಶಿಷ್ಟತೆಯನ್ನು ನೋಡುವ ಕ್ರಮಗಳು ಬೇರೆಯಾಗುತ್ತವೆ. ತಂತ್ರಜ್ಞಾನ ಮತ್ತು ಅದರ ಪ್ರಯೋಗಗಳು ಒಂದು ರೀತಿಯಲ್ಲಿ ಇವೆ. ತಂತ್ರಜ್ಞಾನ ಮತ್ತು ಅದನ್ನು ಗ್ರಹಿಸುವ ಕ್ರಮವು ಒಂದು ಥರ ಇದೆ. ಆದರೆ ಮೊಬೈಲ್ ಮತ್ತು ಅದರ ಪ್ರಯೋಗಗಳು ಒಂದು ಸ್ಥಳದಲ್ಲಿ ಒಂದು ಥರ ಇದ್ದು ಮತ್ತೊಂದು ಸ್ಥಳದಲ್ಲಿ ಮತ್ತೊಂದು ಥರ ಇರಲು ಸಾಧ್ಯವೇ ಇಲ್ಲ. ನಮಗೆ ಇರುವ ಕೆಲವು ಸಾಮಾನ್ಯವಾದ ಜ್ಞಾನ ಮತ್ತು ಅದರ ರೂಪಗಳು ಒಂದು ಥರ ಇರುತ್ತದೆ. ಒಂದು ಮಾತನ್ನು ನಾವು ಇಲ್ಲಿ ಹೇಳಬಹುದು: ನಾವು ಕೆಲವು ಜ್ಞಾನವನ್ನು ಒಂದು ಮಾರ್ಜಿನ್ ಒಳಗೆ ಇಡುತ್ತೇವೆ. ಮತ್ತೆ ಕೆಲವು ಜ್ಞಾನವನ್ನು ಮಾರ್ಜಿನ್ ಹೊರಗೆ ಇಡುತ್ತೇವೆ. ನಮಗೆ ಯಾವುದು ಪಾಂಡಿತ್ಯ ಪೂರ್ಣವಾದ ಒಂದು ಜ್ಞಾನ ಮತ್ತು ಯಾವುದು ಅಪರಿಪೂರ್ಣವಾದ ಜ್ಞಾನ ಎಂದು ಹೇಳುವುದು ಆಯಾ ಸಂದರ್ಭವನ್ನು ಹೊಂದಿರುತ್ತದೆ. ಜ್ಞಾನ ಎನ್ನುವುದು ಒಂದು ನಿಯಂತ್ರಣಕ್ಕೆ ಗುರಿಯಾಗಿದೆ. ಅದರ ಜೊತೆಗೆ ಅದು ನಮ್ಮ ಆಲೋಚನೆಯ ಚರಿತ್ರೆಯನ್ನು ಹೇಳುತ್ತದೆ. ಇದನ್ನು ಅತ್ಯಂತ ವಿವರವಾಗಿ ದ ಆರ್ಕಿಯಾಲಜಿ ಆಫ್ ನಾಲೆಜ್ ಕೃತಿಯಲ್ಲಿ ಫುಕೋ ಹೇಳುತ್ತಾನೆ.

ಸ್ಥಳ ಮತ್ತು ಅದರ ಜ್ಞಾನ ರೂಪಗಳು ನಮಗೆ ಒಂದು ವಿಧವಾಗಿದೆ. ಅದನ್ನು ಪ್ರಯೋಗ ಮತ್ತು ಪರೀಕ್ಷೆ ಎನ್ನುವ ಅರ್ಥದಲ್ಲಿ ಹೇಳಲು ಆಗುವುದಿಲ್ಲ. ನಾವು ಜ್ಞಾನ ಮತ್ತು ನೆನಪುಗಳನ್ನು ಇಲ್ಲಿ ಇಲ್ಲಿ ಯೋಚನೆ ಮಾಡಬೇಕು: ಯಾವ ಕೌಶಲವು ನಮಗೆ ನೆನಪಿನಲ್ಲಿ ಇರುತ್ತದೆಯೋ ಅದನ್ನು ನಾವು ಒಪ್ಪುತ್ತೇವೆ. ನೆನಪು ಎನ್ನುವುದು ಒಂದು ಸಮಾಜದಲ್ಲಿ ಅಗತ್ಯವಿದ್ದಾಗ ಮಾತ್ರವೇ ಚಾಲ್ತಿಗೆ ಬರುತ್ತದೆ. ಒಂದು ಹೊಸದಾದ ಜ್ಞಾನವು ಚಾಲ್ತಿಗೆ ಬಂದಾಗ ಹಳೆಯ ಜ್ಞಾನವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವುದೂ ಅಷ್ಟೇ ನಿಜ. ಹಾಗೆ ನೋಡಿದರೆ ನಾವು ಕಳೆದುಹೋದ ಜ್ಞಾನದ ರೂಪಗಳನ್ನು ಅಗತ್ಯವಿದ್ದಾಗ ಮತ್ತೆ ಹುಡುಕುತ್ತೇವೆ. ಅದು ನಮಗೆ ಅತ್ಯಂತ ಅಗತ್ಯವಾಗುತ್ತದೆ. ಸ್ಥಳ ಮತ್ತು ಜ್ಞಾನರೂಪಗಳು ಆಯಾ ಸಂದರ್ಭದಲ್ಲಿ ಬೇರೆಯಾಗುತ್ತವೆ. ಅದರಲ್ಲಿ ಅರ್ಥವೂ ಇರುತ್ತವೆ. ಸೈದ್ಧಾಂತಿಕವಾದ

ಜ್ಞಾನ ಮತ್ತು ಅದರ ಸ್ವರೂಪಕ್ಕೂ ಸ್ಥಳ ಮತ್ತು ಜ್ಞಾನಕ್ಕೂ ವ್ಯತ್ಯಾಸವು ಇರುವ ಸಾಧ್ಯತೆಯು ಇರುತ್ತದೆ. ಒಂದು ರೀತಿಯಿಂದ ಈವತ್ತು ನಾವು ಯಾವುದನ್ನು ವಂಶಾನುಕ್ರಮವಾಗಿ ಬಂದಿರುವ ಜ್ಞಾನ ಎಂದು ಹೇಳುತ್ತೇವೆಯೋ ಅದರ ರೂಪವನ್ನು ತೀರಾ ವೈಜ್ಞಾನಿಕ ಎಂದು ಹೇಳಲು ಬರುವುದಿಲ್ಲ. ಅನುಭವ ಮತ್ತು ಅದು ಕಟ್ಟಿಕೊಡುವ ಜ್ಞಾನಕ್ಕೆ ವಿವಿಧ ಆಯಾಮಗಳು ಇರುತ್ತವೆ ಇದರ ಬಗ್ಗೆ ಅನೇಕ ಕಡೆಗೆ ಫುಕೋ ಮಾತಾಡಿದ್ದಾನೆ. ಪ್ರಭುತ್ವ ಎನ್ನುವುದು ತನಗೆ ಬೇಕಾದ ಜ್ಞಾನವನ್ನು ಹುಟ್ಟು ಹಾಕುವುದು ಕೂಡಾ ಇದೇ ಕಾರಣಕ್ಕೆ.

ನಮಗೆ ಈಗ ಇರುವ ಅತ್ಯಂತ ಮಹತ್ವದ ಸಮಸ್ಯೆ ಎಂದರೆ ಸಾಹಿತ್ಯವನ್ನು ಅನುಸಂಧಾನ ಮಾಡುವಾಗ ಅದನ್ನು ನಾವು ವಿಜ್ಞಾನ ಎಂದು ಹೇಳುವುದೇ ಅಥವಾ ಬೇರೆ ಎಂದು ಹೇಳುವುದೇ? ಇದು ನಮಗೆ ಸಮಸ್ಯೆ ಮಾತ್ರವೇ ಅಲ್ಲ. ಇದರಿಂದ ನಾವು ಒಂದು ಕೃತಿಯನ್ನು ಅನ್ವಯ ಮಾಡುವಾಗ ಅದರಲ್ಲಿ ವಿಷಯ ನಿಷ್ಠವಾದ ಧೋರಣೆಯು ನಮಗೆ ಕಾಣಿಸಬಹುದು. ಇದನ್ನು ನಾವು ಸಂಜ್ಞಾ ಶಾಸ್ತ್ರವನ್ನು ನೆನಪು ಮಾಡಿಕೊಂಡು ಹೇಳಬಹುದು. ಸಂಕೇತಶಾಸ್ತ್ರವನ್ನು ಈವತ್ತು ಮತ್ತೊಂದು ದಿಕ್ಕನ್ನು ಪ್ರವೇಶ ಮಾಡಿದೆ. ಅದು ಮಹತ್ವದ ದಾರಿಯೂ ಆಗುತ್ತದೆ. ಇದರ ಬೆಳವಣಿಗೆಯನ್ನು ನೋಡಿದರೆ ಇದರಲ್ಲಿ ಬೇರೆ ಬೇರೆ ದಾರಿಗಳು ಹುಟ್ಟಿವೆ. ಅದನ್ನು ಮರೆಯಬಾರದು. ವಿಜ್ಞಾನ ಮತ್ತು ಅದರ ಪ್ರಶ್ನೆಗಳನ್ನು ಇಲ್ಲಿ ಎತ್ತಿಕೊಂಡದ್ದು ಬೇರೆ ಕಾರಣಕ್ಕೆ. ಈವತ್ತು ಮಾನವಿಕ ವಿಜ್ಞಾನದಲ್ಲಿ ಈ ಪ್ರಶ್ನೆಗಳು ಹೆಚ್ಚು ತೀವ್ರವಾಗಿದೆ. ಇಲ್ಲಿ ನಾವು ಮತ್ತೆ ಮನೋವಿಜ್ಞಾನ ಮತ್ತು ಮಾರ್ಕ್ಸ್‌ವಾದವನ್ನು ಕೈಗೆ ಎತ್ತಿಕೊಳ್ಳಬೇಕು. ಅವೆರಡೂ ಈವತ್ತು ಅತ್ಯಂತ ಮಹತ್ವದ ಪ್ರಶ್ನೆಗಳನ್ನು ಎತ್ತಿಕೊಂಡಿವೆ. ಅವುಗಳನ್ನು ಈವತ್ತು ನಾವು ಮತ್ತೆ ಗಮನಿಸಲೇಬೇಕಾಗಿದೆ. ಇವು ಈವತ್ತು ನಮಗೆ ಮತ್ತೆ ಮತ್ತೆ ಅನ್ವಯವಾಗುವ ಸಂಗತಿಗಳೂ ಆಗಿದೆ. ಅವುಗಳನ್ನು ನಾವು ನೇರವಾಗಿ ಅನ್ವಯ ಮಾಡುತ್ತಿದ್ದೇವೆ ಎಂದು ಅರ್ಥವಲ್ಲ. ಒಂದು ಉದಾಹರಣೆಯನ್ನು ಇಲ್ಲಿ ಗಮನಿಸಬೇಕು: ವೇತನಗಳು ಮತ್ತು ಅದರ ತಾರತಮ್ಯಗಳು ಹೇಗೆ ಕೆಲಸವನ್ನು ಮಾಡುತ್ತವೆ ಎಂದು ಗಮನಿಸಿದರೆ ನಮಗೆ ಮಾರ್ಕ್ಸ್‌ವಾದ ಮತ್ತು ಅದರ ಅಗತ್ಯಗಳು ನಮಗೆ ಅರ್ಥವಾಗುತ್ತವೆ.

ಮನುಷ್ಯರು ಮತ್ತು ಅವರ ಮನೋಸ್ಥಿತಿಯು ಈವತ್ತು ಹೇಗೆ ಪಲ್ಲಟವಾಗುತ್ತಿವೆ ಮತ್ತು ಅದರ ಸ್ಥಿತಿಯು ಏನು ಎನ್ನುವುದನ್ನು ಅರ್ಥಮಾಡಿಕೊಳ್ಳಲು ನಮಗೆ ಮನೋವಿಜ್ಞಾನ ಬಿಟ್ಟು ಬೇರೆ ಯಾವುದೇ ಶಿಸ್ತು ಸಹಾಯವನ್ನು ಮಾಡಲಾರದು. ನಾವು ಅದರ ಬಗ್ಗೆ ಯಾವ ಜ್ಞಾನವನ್ನು ಹೊಂದಿದ್ದೇವೆ ಎನ್ನುವುದರ ಆಧಾರದ ಮೇಲೆ ಅದನ್ನು ನಿರ್ಧಾರ ಮಾಡುತ್ತೇವೆ. ನಮಗೆ ಯಾವ ಜ್ಞಾನವು ಇದೆಯೋ

ಅದಕ್ಕೆ ಅನುಗುಣವಾಗಿ ನಾವು ಸಮಾಜವನ್ನು ಗ್ರಹಿಸುತ್ತೇವೆ. ಮನೋವಿಜ್ಞಾನ ಮತ್ತು ಮಾರ್ಕ್ಸ್‌ವಾದವನ್ನು ನಾವು ಅನ್ವಯ ಮಾಡುವಾಗ ನಮಗೆ ಅದರ ರಚನೆಗಳು ಸಾಂದರ್ಭಿಕವಾಗಿ ಬೇರೆಯಾಗಬಹುದು. ಅದರ ವಿಜ್ಞಾನ ರೂಪಗಳು ಭಿನ್ನವಾಗಬಹುದು. ಆದರೆ ಅವುಗಳು ಪ್ರತ್ಯೇಕವಾದ ಒಂದು ರಚನೆ ಮತ್ತು ಜ್ಞಾನ ಎಂದು ಭಾವಿಸಬೇಕಾಗಿಲ್ಲ. ವಿಜ್ಞಾನಕ್ಕೆ ಸಾಹಿತ್ಯವನ್ನು ನಿರಾಕರಿಸುವ ಹಕ್ಕು ಇಲ್ಲ. ನಾವು ಯಾವುದನ್ನು ಕುರಿತು ಮಾತಾಡುತ್ತಿದ್ದೇವೆ ಎನ್ನುವುದು ನಮ್ಮ ಸಂಕಥನಗಳನ್ನು ಹೇಳುತ್ತವೆ. ಲೋಕಾಭಿರಾಮದ ನಮ್ಮ ಸಂಕಥನಗಳು ಒಂದು ಬಗೆಯಲ್ಲಿ ಇರುತ್ತವೆ. ಅದರಲ್ಲಿ ನಾವು ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾವನೆ ಮಾಡುತ್ತೇವೆ. ಲೋಕದ ಪಂಚಾಯಿತಿಕೆ ಎನ್ನುವುದು ನಮಗೆ ಸಂಬಂಧಗಳ ಸ್ವರೂಪವು ಹೌದು. ಯಾವುದು ನಮಗೆ ಜ್ಞಾನ ಮಾದರಿಯು ಆಗಿದೆಯೋ ಅದನ್ನು ನಾವು ಈವತ್ತು ಒಂದು ಕಟ್ಟು ಎಂದು ಭಾವಿಸಬೇಕಾಗಿಲ್ಲ. ವಿಜ್ಞಾನ ಮತ್ತು ಸಂಕಥನಗಳು ಒಂದನ್ನು ಹೇಳುತ್ತವೆ. ಹಾಗೆ ನೋಡಿದರೆ ವಿಜ್ಞಾನಿಗಳು ನಮಗಿಂತ ಬೇರೆ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ನಾವು ಯಾವುದರ ಕುರಿತು ಮಾತಾಡುತ್ತೇವೆ. ಅದು ಒಂದು ಬಗೆಯಲ್ಲಿ ನಿರ್ದಿಷ್ಟವಾದ ಸಂಕಥನವೂ ಹೌದು. ನಾನು ಹೇಳುತ್ತಿದ್ದೇನೆ ಎನ್ನುವುದು ಒಂದು ಕ್ರಮ. ನಾನು ಹೇಳುತ್ತಿರುವುದು ವೈಜ್ಞಾನಿಕವಾದ ವಿಷಯಗಳನ್ನು ಎನ್ನುವುದು ಮತ್ತೊಂದು ಕ್ರಮ. 'ಜ್ಞಾನ ಮತ್ತು ಅಧಿಕಾರಗಳು ನಮಗೆ ಇವತ್ತು ಸಮಾಜವನ್ನು ಕುರಿತು ಹೇಳಲು ಒಂದು ಸಾಧ್ಯತೆಯು ಆಗಿದೆ' ಎಂದು ಫುಕೋ ಹೇಳುತ್ತಾನೆ.

ನಾನು ವಿಜ್ಞಾನಿ ಎಂದು ಹೇಳುವುದು ಬೇರೆ ಪದ್ಧತಿ. ಇವುಗಳು ಹೀಗೆ ಬೇರೆ ಬೇರೆ ಆಗುವಾಗ ಅದರ ಅರ್ಥವೂ ಬೇರೆಯಾಗುತ್ತದೆ. ಅದರ ಜೊತೆಗೆ ಅವುಗಳು ರೂಪಿಸುವ ಸಂಕಥನಗಳೂ ವಿಭಿನ್ನವಾಗುತ್ತವೆ. ಇವುಗಳು ಬರೀ ಮಾತುಗಳು ಮಾತ್ರವೇ ಅಲ್ಲ, ಅದರ ಜೊತೆಗೆ ಇವುಗಳು ಒಂದು ನಿರ್ದಿಷ್ಟವಾದ ವಿಷಯವನ್ನು ಹೇಳುತ್ತವೆ. ನಾನು ವಿಜ್ಞಾನಿ ಎಂದರೆ ಅದರಲ್ಲಿ ನನ್ನ ವ್ಯಕ್ತಿತ್ವ ಎನ್ನುವುದು ಮುಂದೆ ಬರುತ್ತದೆ. ಅಷ್ಟೇ ಅಲ್ಲ ಅದರಲ್ಲಿ ಜ್ಞಾನವು ಮುಂದೆ ಬರುತ್ತದೆ. ವಿಜ್ಞಾನಿ ಅಂದರೆ ನಾನು ವಿಜ್ಞಾನದಲ್ಲಿ ಹೆಚ್ಚು ಪರಿಣಿತಿಯನ್ನು ಹೊಂದಿದ್ದೇನೆ ಎಂದು ಅರ್ಥ. ಮಾರ್ಕ್ಸ್‌ವಾದ ಎನ್ನುವುದು ಒಂದು ಸತ್ಯ ಎಂದು ಹೇಳಿದರೆ ಅದರ ಅರ್ಥ ಅದು ಸತ್ಯವನ್ನು ನಿರೂಪಿಸುತ್ತದೆ ಎಂದು ಮಾತ್ರ. ಅದು ಒಂದು ವೈಚಾರಿಕವಾದ ರಚನೆಯು ಆಗಿದೆ. ಅಷ್ಟೇ ಅಲ್ಲ ಅದರಲ್ಲಿ ಒಂದು ಪ್ರಮೇಯವೂ ಇದೆ. ಅದು ಜಗತ್ತನ್ನು ನೋಡಲು ಕಲಿಸುತ್ತದೆ. ಉತ್ಪಾದನೆ ಮತ್ತು ಅದರ ಸಂಗತಿಗಳನ್ನು ಅದು ಹೇಳುತ್ತದೆ. ಮಾರ್ಕ್ಸ್‌ವಾದವು ಒಂದು ಬಗೆಯಲ್ಲಿ ನಿರ್ದಿಷ್ಟವಾದ ಸಂಕಥನವೂ ಆಗಿದೆ. ಮಾರ್ಕ್ಸ್‌ವಾದದ ಅತ್ಯಂತ ಮುಖ್ಯವಾದ ಸಂಗತಿಯೆಂದರೆ ಅದು ಪ್ರಭುತ್ವವನ್ನು

ಕುರಿತು ಚರ್ಚೆ ಮಾಡುವುದು. 'ಅಧಿಕಾರ ಎನ್ನುವುದು ಒಂದು ಶ್ರೇಣೀಕರಣವನ್ನು ಹೇಳುತ್ತದೆ. ಅದರ ಜೊತೆಗೆ ಅದು ಕೆಲವನ್ನು ನಿರ್ಮಾಣ ಮಾಡುತ್ತದೆ. ಇಲ್ಲಿ ಅನೇಕ ಪರಂಪರೆಗಳ ಜ್ಞಾನಗಳು ಸ್ಥಳವನ್ನು ಆಧರಿಸಿಕೊಂಡು ರೂಪುಗೊಳ್ಳುತ್ತವೆ' ಎಂದು ಡೆಲ್ಯೂಜ್ ಹೇಳುತ್ತಾನೆ. ಅದನ್ನು ಅವನು ಶ್ರೇಣೀಕರಣದಲ್ಲಿ ಕಿರುವಾದ ಒಂದು ಪರಂಪರೆಯನ್ನು ರೂಪಿಸಿಕೊಂಡು ಅಸ್ತಿತ್ವದಲ್ಲಿ ಇರುತ್ತವೆ ಎಂದು ಅವನು ಪ್ರತಿಪಾದಿಸುತ್ತಾನೆ. ಜ್ಞಾನ ಮತ್ತು ಅದರ ತಾರತಮ್ಯಗಳಿಗೆ ಇದು ಒಂದು ಕಾರಣ ಎನ್ನುವುದನ್ನು ಅವನು ಒಪ್ಪುತ್ತಾನೆ. ಆದರೆ ಯಾವುದೇ ಜ್ಞಾನ ಮತ್ತು ಅದರ ಪರಂಪರೆಗೆ ಅದರದೇ ಆದ ಶಕ್ತಿಯು ಇರುತ್ತದೆ. ಅದರ ಜೊತೆಗೆ ಅದು ನಿರ್ದಿಷ್ಟವೂ ಆಗಿರುತ್ತದೆ. ಅದರಲ್ಲಿ ಒಂದು ವಿಶಿಷ್ಟವಾದ ಸಂಕಥನವೂ ಇರುತ್ತದೆ. ಸ್ಥಳ ಮತ್ತು ಅದರ ಸಂಕಥನವು ನಮಗೆ ನಿರ್ದಿಷ್ಟವಾದ ವಿಧಾನವನ್ನು ಹೇಳುತ್ತದೆ. ಸ್ಥಳ ಮತ್ತು ಅದರ ಸಂಕಥನವನ್ನು ಆ ಸ್ಥಳವನ್ನು ಹೊರತುಪಡಿಸಿಕೊಂಡು ಇರಲು ಸಾಧ್ಯವೇ ಇಲ್ಲ. ಆದರೆ ಇಲ್ಲಿ ನಮಗೆ ಜ್ಞಾನ ಎನ್ನುವುದು ಒಂದು ವಲಯವನ್ನು ಹೇಳುತ್ತದೆ ಎಂದು ಗೊತ್ತಿರಬೇಕು. ಆದರೆ ಯಾವುದೇ ಜ್ಞಾನವು ಅನೇಕ ರೀತಿಯ ಬದಲಾವಣೆಯನ್ನು ಮಾಡಿಕೊಳ್ಳುತ್ತದೆ. ತನಗೆ ಬೇಕಾದ ಅನ್ವಯವನ್ನು ಮಾಡುತ್ತದೆ. ಮೊದಲು ಹೇಗೆ ಇತ್ತೋ ಅದೇ ರೀತಿಯಲ್ಲಿ ಈವತ್ತು ಒಂದು ಜ್ಞಾನವು ಇರಲು ಸಾಧ್ಯವೇ ಇಲ್ಲ. ಜ್ಞಾನವು ಸಮಗ್ರವಲ್ಲ. ಅದು ಅನೇಕ ಬಿಡಿಯಾದ ಅಂಶಗಳನ್ನು ಹೊಂದಿರುತ್ತದೆ. ಈಗ ಏನಾಗಿದೆ ಎಂದರೆ ಹತ್ತು ವರ್ಷದ ಹಿಂದೆ ಇದ್ದ ಜ್ಞಾನವು ಈವತ್ತು ಇಲ್ಲವಾಗಿದೆ. ಅನೇಕ ಜ್ಞಾನಮಾದರಿಗಳು ಒಂದಕ್ಕೊಂದು ಸಂಧಿಸುತ್ತವೆ. ಬದಲಾವಣೆಗಳನ್ನು ಹೊಂದುತ್ತವೆ.

ಒಂದು ಜ್ಞಾನಕ್ಕೆ ಯಾವುದು ಆಕರವು ಆಗುತ್ತದೆ ಎಂದು ಊಹಿಸುವುದು ಅತ್ಯಂತ ಕಷ್ಟ. ಜ್ಞಾನಗಳು ನಮಗೆ ಬೇರೆ ಬೇರೆ ಆಯಾಮವನ್ನು ನೀಡುತ್ತದೆ ಎನ್ನುವುದು ಸತ್ಯ. ಅದು ಏಕೈಕ ಮಾದರಿಯಾಗಿಯೂ ರೂಪುಗೊಳ್ಳುತ್ತದೆ. ಅನೇಕ ಜ್ಞಾನಗಳು ಕಾಲಕ್ರಮೇಣ ಭೇದಗೊಳ್ಳುತ್ತವೆ. ಜ್ಞಾನಕ್ಕೆ ಮತ್ತು ಅಧಿಕಾರಕ್ಕೆ ಒಂದು ಸಂಬಂಧವು ಇದೆ. ಅದರ ಜೊತೆಗೆ ಅಧಿಕಾರವು ಜ್ಞಾನವನ್ನು ಬಳಸುತ್ತದೆ. ಅವುಗಳ ಸಂಬಂಧವು ಅತ್ಯಂತ ವಿಶಿಷ್ಟವಾಗಿದೆ. ಜ್ಞಾನಕ್ಕೆ ಒಂದು ಅನನ್ಯತೆಯು ಇರುವುದು ಸತ್ಯ. ಜ್ಞಾನ ಎನ್ನುವುದು ಬೆಳೆದು ಬರುವಾಗ ಅದರಲ್ಲಿ ಅನೇಕವು ಸೇರಿಕೊಳ್ಳುತ್ತದೆ. ಜ್ಞಾನವು ಅನೇಕ ರೀತಿಯ ಪಂಥಾಹ್ವಾನವನ್ನು ಎದುರಿಸುತ್ತದೆ. ಅದು ಸಂಘರ್ಷವನ್ನು ಎದುರಿಸುತ್ತದೆ. ಅನೇಕ ಸಂಸ್ಥೆಗಳು ಜ್ಞಾನದ ಪರಿಕರಗಳು ಮಾತ್ರವೇ ಆಗಿರುತ್ತವೆ. ಆದ್ದರಿಂದ ನಾವು ಯಾವ ಜ್ಞಾನವನ್ನು ಪಡೆಯಬೇಕು ಮತ್ತು ಅದರ ಪಾತ್ರವು ಏನು ಎನ್ನುವುದನ್ನು ಅನೇಕ ಬಾರಿ ಅಧಿಕಾರವೇ ನಿರ್ಧಾರ ಮಾಡುತ್ತದೆ. ಆದರೆ

ಅಧಿಕಾರ ಎಂದರೆ ಅದು ಅತ್ಯಂತ ಸಾಮಾನ್ಯವಾದ ಒಂದು ರೂಪದಲ್ಲಿ ಇರುತ್ತದೆ ಎಂದು ಹೇಳಲು ಬರುವುದಿಲ್ಲ. ಅದು ಅನೇಕ ಬಾರಿ ಒಂದು ಅಸಂಗತವಾದ ನಾಟಕದಂತೆಯೂ ಇರಬಹುದು. ಪ್ರಭುತ್ವ ಮತ್ತು ಅದರ ಪರಿಣಾಮವು ಅತ್ಯಂತ ಭೀಕರವಾಗಿಯೂ ಇರಬಹುದು. ಅಧಿಕಾರವು ಜನರನ್ನು ನಾಶ ಮಾಡಬಲ್ಲುದು ಎನ್ನುವುದೂ ಅಷ್ಟೇ ನಿಜ. ಹಾಗಿದ್ದರೆ ಅಧಿಕಾರ ಎಂದರೆ ಏನು ಎನ್ನುವ ಪ್ರಶ್ನೆಯನ್ನು ನೋಡುವುದು ಅಗತ್ಯ. ಮೂಲಭೂತವಾದವು ಮುಂದೆ ಬಂದ ಮೇಲೆ ಅಧಿಕಾರ ಮತ್ತು ಅದರ ವ್ಯಾಖ್ಯೆಗಳು ಬೇರೆಯಾಗಿವೆ. ಅದರ ಸೈದ್ಧಾಂತಿಕವಾದ ಪ್ರಶ್ನೆಗಳು ಬೇರೆಯಾಗಿವೆ. ಅದರ ತಂತ್ರಗಳು ಬೇರೆ ರೀತಿಯಲ್ಲಿ ಇರುತ್ತವೆ. ಅದು ಸಮಾಜವನ್ನು ನಿಯಂತ್ರಣ ಮಾಡುವ ಕ್ರಮಗಳೂ ಬೇರೆ. ಸಮಾಜವನ್ನು ಅದು ಒಂದೇ ರೀತಿಯಲ್ಲಿ ನಿಯಂತ್ರಣ ಮಾಡುತ್ತದೆ ಎಂದು ಅರ್ಥವಲ್ಲ. ಅಧಿಕಾರ ಎನ್ನುವುದು ಒಂದು ಆರ್ಥಿಕತೆ ಮತ್ತು ಒಂದು ಪರಿಕರವನ್ನು ಹೊಂದಿರುವ ವ್ಯವಸ್ಥೆ ಅಲ್ಲ ಎನ್ನುವುದನ್ನು ಮನದಟ್ಟು ಮಾಡಿಕೊಳ್ಳಬೇಕು. ಆದರೆ ಉದಾರವಾದಿ ರಾಜಕಾರಣವು ಹೇಗೆ ಕೆಲಸವನ್ನು ಮಾಡುತ್ತದೆ ಎನ್ನುವುದು ಅನೇಕರಿಗೆ ತಿಳಿದಿದೆ. ಅದರ ಅಧಿಕಾರ ಮತ್ತು ಅದರ ಸ್ವರೂಪವು ಬೇರೆ ಇರುತ್ತದೆ. ಅಧಿಕಾರವನ್ನು ಅದು ವ್ಯಾಖ್ಯಾನ ಮಾಡುವ ಕ್ರಮಗಳು ಬೇರೆ ಇವೆ. ಹದಿನೆಂಟನೆಯ ಶತಮಾನದ ಅನೇಕರು ಉದಾರವಾದಿ ರಾಜಕಾರಣವು ಅತ್ಯಂತ ಮುಖ್ಯವೆಂದು ಭಾವಿಸಿದ್ದರು. ಕೆಲವು ಸಂಗತಿಗಳು ಅತ್ಯಂತ ಸಾಮಾನ್ಯ ಎಂದು ಅವರು ಭಾವಿಸಿದ್ದರು. ಆದರೆ ಇಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು: ಅಧಿಕಾರ ಮತ್ತು ಅರ್ಥಶಾಸ್ತ್ರಕ್ಕೆ ಯಾವ ಸಂಬಂಧವು ಇದೆ ಎಂದು ಮಾರ್ಕ್ಸ್‌ವಾದಿಗಳು ಹೇಳಿದರು. ವಸ್ತು ಮತ್ತು ಅದರ ಮೇಲೆ ನಾವು ಸ್ಥಾಪಿಸುವ ಅಧಿಕಾರವನ್ನು ಈ ದೃಷ್ಟಿಯಿಂದ ಬೇರೆ ಥರ ನೋಡಬೇಕು ಎಂದು ಅವರು ವಾದಿಸಿದರು. ನ್ಯಾಯ ಸಮ್ಮತವಾಗಿ ಒಂದು ವಸ್ತುವಿನ ಮೇಲೆ ಹಿಡಿತವನ್ನು ಸ್ಥಾಪಿಸುವುದನ್ನು ನಾವು ಒಂದು ಥರ ನೋಡುತ್ತೇವೆ. ಆದರೆ ನಮಗೆ ನಮ್ಮ ಶಕ್ತಿಯಿಂದ ಸಾಧಿತವಾದ ವಸ್ತುವನ್ನು ಬೇರೆ ತಂತ್ರಗಳ ಮೂಲಕ ಅಧಿಕಾರವನ್ನು ಸಾಧಿಸಿದರೆ ಆಗ ಅಲ್ಲಿ ಒಂದು ಪರಕೀಯತೆಯು ಪ್ರಾರಂಭವಾಗುತ್ತದೆ. ಅದನ್ನು ಪ್ರತ್ಯೇಕತೆ ಎಂದೂ ಭಾವಿಸುತ್ತೇವೆ. ಅಲ್ಲಿಯೂ ಅಧಿಕಾರವನ್ನು ರಚನೆ ಮಾಡಲಾಗುತ್ತದೆ. ಅದರಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ರಾಜಕೀಯ ಅಧಿಕಾರ ಎನ್ನುವುದು ಒಂದು ಸಂಪನ್ಮೂಲದ ಮೇಲೆ ಹಿಡಿತವನ್ನು ಇಟ್ಟುಕೊಳ್ಳುತ್ತದೆ. 'ಅಧಿಕಾರ, ಸಂಪತ್ತು ಮತ್ತು ವಿನಿಮಯ ಹಾಗೂ ಮನುಷ್ಯರ ಭೌತಿಕವಾದ ಅಗತ್ಯಗಳ ಮೇಲೆ ಹಿಡಿತವನ್ನು ಹೊಂದಿದ ಅನಂತರ ಉಳಿದ ಪ್ರಶ್ನೆಗಳು ಅತ್ಯಂತ ಗೌಣವಾಗುತ್ತದೆ' ಎನ್ನುವುದು ಫುಕೋನ ನಿಲವು.

ಅಧಿಕಾರ ಮತ್ತು ಸಂಪತ್ತಿನ ಹಂಚಿಕೆಯನ್ನು ಒಂದು ನಿರ್ದಿಷ್ಟವಾದ ತಳಹದಿಯ ಮೇಲೆ ರೂಪಿಸುತ್ತದೆ. ಆರ್ಥಿಕವಾದ ಕ್ರಿಯೆಗಳು ಹೇಗೆ ಒಂದು ಅಧಿಕಾರವನ್ನು ಹೇಳುತ್ತದೆ ಎನ್ನುವುದು ಅದರ ಪ್ರಮುಖವಾದ ತಾತ್ವಿಕವಾದ ನಿಲುವು, ಆರ್ಥಿಕತೆಗೆ ಒಂದು ಸಮಾಜದಲ್ಲಿ ಈ ದೃಷ್ಟಿಯಿಂದ ಅತ್ಯಂತ ಮಹತ್ವವು ಇದೆ ಎನ್ನುವುದು ಅದರ ನಿಲುವು. ಉತ್ಪಾದನೆ ಮತ್ತು ಮರು ಉತ್ಪಾದನೆ ಹೇಗೆ ಸಮಾಜದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದು ಅವನ ನಿಲುವು. ಒಂದು ವರ್ಗವು ಅತ್ಯಂತ ಮುಖ್ಯವಾಗಿ ಇನ್ನೊಂದು ವರ್ಗವನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದರಿಂದ ಅದರಲ್ಲಿ ಅಧಿಕಾರ ಮತ್ತು ಅದರ ರಚನೆಗಳು ಬೇರೆಯಾಗುತ್ತವೆ. ವಿನಿಮಯ ಎನ್ನುವುದು ಹೇಗೆ ಇಲ್ಲಿ ಮುಖ್ಯವಾದ ಒಂದು ಪಾತ್ರವನ್ನು ವಹಿಸುತ್ತದೆ ಸಮಾಜದಲ್ಲಿ ವಸ್ತು ಮತ್ತು ಅದರ ವಿನಿಮಯಕ್ಕೆ ಚರಿತ್ರೆಯು ಒಂದು ಕಾರಣವೂ ಆಗಿರುತ್ತದೆ. ಯಾವುದು ಕೆಲಸವನ್ನು ಮಾಡುತ್ತದೆ ಅದು ಸಮಾಜದಲ್ಲಿ ಅತ್ಯಂತ ಮುಖ್ಯವಾಗುತ್ತದೆ. ಯಾವುದು ನಮಗೆ ಹೆಚ್ಚು ಮುಖ್ಯ ಅಧಿಕಾರವೇ ಅಥವಾ ಅರ್ಥಶಾಸ್ತ್ರವೇ ಎನ್ನುವುದು ಇಲ್ಲಿ ಮುಖ್ಯ. ಅನೇಕ ಸಂದರ್ಭದಲ್ಲಿ ಹಣದ ಹಿಂದೆ ಅಧಿಕಾರವು ಬರುತ್ತದೆ. ಆದ್ದರಿಂದ ಅಧಿಕಾರದ ಮತ್ತು ಅರ್ಥಶಾಸ್ತ್ರದ ಪ್ರಶ್ನೆಯು ಬೇರೆಯಾಗುತ್ತದೆ. ಅರ್ಥಶಾಸ್ತ್ರವನ್ನು ನಾವು ಬೇರೆ ಮಾಡಿಕೊಂಡು ಅಧಿಕಾರವನ್ನು ನೋಡುವುದು ಸಾಧ್ಯವಾಗದ ಸಂಗತಿ. ಆದ್ದರಿಂದ ಇವುಗಳ ಜೊತೆಗೆ ನಾವು ನಿರ್ದಿಷ್ಟವಾದ ಅನುಸಂಧಾನವನ್ನು ಮಾಡಬೇಕಾಗುತ್ತದೆ. ಈ ಎರಡೂ ನಮಗೆ ವಿಭಿನ್ನವಾದ ಚಟುವಟಿಕೆಯನ್ನು ಹೇಳುತ್ತವೆ.

ಅಧಿಕಾರದ ಸಂಬಂಧ ಎಂದರೆ ಅದು ಒಂದು ಬಗೆಯ ಒತ್ತಡವೂ ಆಗಿರುತ್ತದೆ. ಯಾವುದು ಒತ್ತಡವಾಗಿದೆಯೋ ಅದನ್ನು ನಾವು ಈ ದೃಷ್ಟಿಯಿಂದ ಸಾಮಾಜಿಕ ಜೀವನ ಮತ್ತು ಅದರ ಸಂಬಂಧಗಳು ಎಂದೂ ಹೇಳಬೇಕಾಗುತ್ತದೆ. ಅಧಿಕಾರವು ಹೇರುವ ಒತ್ತಡವನ್ನು ನಾವು ನಿಸರ್ಗ, ಮನುಷ್ಯ ಸ್ವಭಾವ, ಸಂಸ್ಕೃತಿ, ಕುಟುಂಬ ಮುಂತಾದವುಗಳಲ್ಲಿ ನಾವು ಕಾಣಬಹುದು. ಅದು ಸಂಘರ್ಷ ರಹಿತವಾದ ಸಂಗತಿಯೂ ಅಲ್ಲ. ಅಧಿಕಾರದ ಕೇಂದ್ರಗಳಿಗೆ ಮತ್ತು ಯುದ್ಧಗಳಿಗೆ ಒಂದು ಸಂಬಂಧವು ಇರುತ್ತದೆ. ಒಂದು ನಾಗರಿಕವಾದ ಸಮಾಜದಲ್ಲಿ ಅಧಿಕಾರವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎನ್ನುವುದೂ ಅಷ್ಟೇ ನಿಜ. ಯಾವುದೇ ಒಂದು ಪ್ರಭುತ್ವವು ಜನರಲ್ಲಿ ಒಂದು ಸಮಾನವಾದ ನಿಲುವನ್ನು ಹೊಂದುತ್ತದೆ ಎಂದು ಹೇಳಲು ಬರುವುದಿಲ್ಲ. ಅದು ಕೆಲವೊಮ್ಮೆ ಕೆಲವು ಜನರ ಪಕ್ಷಪಾತಿಯಾಗಿ ನಿಲ್ಲುತ್ತದೆ. ಯಾವುದೇ ಒಂದು ಸಮಾಜದಲ್ಲಿ ಅಧಿಕಾರವು ಅತ್ಯಂತ ಪ್ರಧಾನವಾದ ಒಂದು ತಾತ್ವಿಕತೆಯನ್ನು ತಳೆಯುತ್ತದೆ. ಆದ್ದರಿಂದ ಅಧಿಕಾರವನ್ನು ನಾವು ವಿಶ್ಲೇಷಣೆ

ಮಾಡಲು ನಮಗೆ ನಿರ್ದಿಷ್ಟವಾದ ಪರಿಕರವೂ ಬೇಕಾಗುತ್ತದೆ. ಅಧಿಕಾರವು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ವ್ಯಾಖ್ಯೆಗಳಿಗೆ ಗುರಿಯಾಗುತ್ತದೆ. ಅದರ ಅಳತೆಗೋಲಿಗೂ ಭಿನ್ನತೆಯು ಇರುತ್ತದೆ. ಇದನ್ನು ನಾವು ಬೇರೆ ಬೇರೆ ಕಾನೂನುಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬಹುದು. ಯಾವುದೇ ಕಾನೂನು ಸುಮ್ಮನೆ ಬಂದಿಲ್ಲ. ಅದು ಬೇರೆ ಬೇರೆ ಥರ ಬಂದಿದೆ. ಅದರಲ್ಲಿ ಕಾಲದ ಪ್ರಭಾವವೂ ಇದೆ. ಕಾನೂನುಗಳು ಮನುಷ್ಯರನ್ನು ಒತ್ತಡಕ್ಕೆ ಗುರಿ ಮಾಡುವುದೂ ಸತ್ಯ. ಈ ಒತ್ತಡಗಳು ಹೇಗೆ ಇರುತ್ತವೆ ಎಂದು ಹೇಳಲು ಸಾಧ್ಯವೇ ಇಲ್ಲ. ಉದಾಹರಣೆಗೆ ಈವತ್ತು ನಾವು ಲೈಂಗಿಕ ಸಂಬಂಧಗಳು ಮತ್ತು ಅದರ ನಿರ್ವಹಣೆಯನ್ನು ಬೇರೆ ಥರ ನೋಡುತ್ತೇವೆ. ಈ ವಿಷಯದಲ್ಲಿ ಅಧಿಕಾರವು ತಂತ್ರವನ್ನು ಬಳಸುತ್ತದೆ. ಅದರ ಜೊತೆಗೆ ಅದು ಕೆಲವು ಒತ್ತಡವನ್ನು ಹೇರುತ್ತದೆ. ಆದ್ದರಿಂದ ಇದರ ಅರ್ಥವ್ಯಾಪ್ತಿಯು ಬೇರೆಯಾಗುತ್ತದೆ. ಜನಾಂಗವಾದ ಮತ್ತು ಅದರ ಪರಿಣಾಮವೂ ಇದೇ ರೀತಿಯಲ್ಲಿ ಇರುತ್ತದೆ. ಆದ್ದರಿಂದ ಈವತ್ತು ನಮ್ಮ ಗ್ರಹಿಕೆಗಳು ಬೇರೆಯಾಗಬೇಕಾಗುತ್ತದೆ. (ವಿವರಗಳಿಗೆ ನೋಡಿ: ದ ಹಿಸ್ಟ್ರಿ ಆಫ್ ಸೆಕ್ಷುವಾಲಿಟಿ ಮತ್ತು ದ ಆಡರ್ರ್ ಆಫ್ ಥಿಂಗ್ಸ್)

ಹಾಗೆ ನೋಡಿದರೆ ಬರಹ ಎನ್ನುವುದು ಒಂದು ಸಮಾಜದಲ್ಲಿ ತನ್ನದೇ ಆದ ಒಂದು ನಿರ್ದಿಷ್ಟವಾದ ಪಾತ್ರವನ್ನು ವಹಿಸುತ್ತದೆ. ಬರಹವು ಎಷ್ಟರ ಮಟ್ಟಿಗೆ ಸ್ವಾಯತ್ತವಾಗಿದೆ ಎನ್ನುವ ಪ್ರಶ್ನೆಗಳು ಇದ್ದೇ ಇವೆ. ಬರೆಯಲು ನಮಗೆ ತಿಳಿಯುತ್ತದೆ ಎಂದಾದರೆ ಅದು ಒಂದು ಬಗೆಯ ಅಧಿಕಾರವೇ ಆಗಿರುತ್ತದೆ. ಬರಹವು ಒಂದು ಅರ್ಥದಲ್ಲಿ ನಮಗೆ ಸಾಂಸ್ಕೃತಿಕವಾದ ಶಕ್ತಿ. ರಾಜಕೀಯವಾದ ಅಧಿಕಾರವು ಬೇರೆ ಬೇರೆ ಪರಿಕರವನ್ನು ಬಳಸುತ್ತದೆ. ಯುದ್ಧ ಹೋರಾಟ, ಸಂಘರ್ಷಗಳು ಅದರ ಅತ್ಯಂತ ಮುಖ್ಯವಾದ ಪರಿಭಾಷೆಗಳೂ ಆಗಿವೆ. ಅದನ್ನು ಪೂರೈಸಲು ಅದು ತಂತ್ರವನ್ನು ಬಳಸುತ್ತದೆ. ಅಧಿಕಾರವು ಸೈನ್ಯವನ್ನು ಬಳಸುತ್ತವೆ. ಸೈನ್ಯವನ್ನು ಅಧಿಕಾರವು ಬಳಸುವುದು ಸತ್ಯ. ಹದಿನೇಳನೆಯ ಶತಮಾನದವರೆಗೆ ಸೈನ್ಯವು ಅತ್ಯಂತ ಶಕ್ತಿಯುತವಾಗಿತ್ತು. ಅದರ ಜೊತೆಗೆ ಅದು ಈವತ್ತಿನವರೆಗೆ ವಿಭಿನ್ನವಾದ ಬೇರೆ ಅಧಿಕಾರವನ್ನು ಅಂಗೀಕರಿಸಿದ್ದು ಸತ್ಯ. ಅದಕ್ಕೆ ಒಂದು ಚೌಕಟ್ಟು ಕೂಡಾ ಇದೆ. ಸೈನ್ಯವು ಅತ್ಯಂತ ಶಿಸ್ತುಬದ್ಧವಾಗಿ ಕೆಲಸವನ್ನು ಮಾಡುತ್ತದೆ. 1970 ಮತ್ತು 71ರಲ್ಲಿ ಏನಾಗಿತ್ತು ಎನ್ನುವುದನ್ನು ಫುಕೋ ವಿವರಿಸುತ್ತಾನೆ: 'ಅಧಿಕಾರ ಬದ್ಧವಾದ ಒಂದು ಚಟುವಟಿಕೆಯ ಒಳಗೆ ಅಧಿಕಾರವನ್ನು ರೂಪಿಸುವುದು ಒಂದು ವಿಧಾನ. ಮತ್ತೊಂದು ಅಧಿಕಾರವನ್ನು ಮತ್ತೆ ಮತ್ತೆ ಪುನರ್ ನಿರ್ಮಾಣ ಮಾಡಲು ಬೇಕಾದ ಒಂದು ಸನ್ನಿವೇಶವನ್ನು ನಿರ್ಮಾಣ ಮಾಡುವುದು. ಆದ್ದರಿಂದ ಅದರಲ್ಲಿ ಒಂದು ತ್ರಿಕೋನವು ಇರುತ್ತದೆ. ಸತ್ಯ, ಹಕ್ಕು, ಅಧಿಕಾರವನ್ನು ಅದು

ಸಂಯೋಜನೆ ಮಾಡುತ್ತದೆ. ಅದರ ಮೂಲಕ ಅದು ಒಂದು ಸಂಕಥನವನ್ನು ರೂಪಿಸುತ್ತದೆ. ಇವುಗಳು ರಾಜಕೀಯವಾದ ತತ್ವಜ್ಞಾನವೂ ಆಗುತ್ತದೆ. ಮತ್ತೊಂದು ಕಡೆಯಿಂದ ಇದು ಪರಂಪರೆಯನ್ನೂ ಸೂಚಿಸುತ್ತದೆ. ಯಾಕೆಂದರೆ ಅದರಲ್ಲಿ ಒಂದು ನಿರ್ದಿಷ್ಟವಾದ ಒಂದು ಹಿನ್ನೆಲೆಯೂ ಇರುತ್ತದೆ. ಅಧಿಕಾರವು ತನ್ನ ಹಕ್ಕನ್ನು ಸ್ಥಾಪಿಸುತ್ತದೆ. ಹಾಗಿದ್ದರೆ ಅಧಿಕಾರವು ಯಾವ ರೀತಿಯಲ್ಲಿ ಇರುತ್ತದೆ ಮತ್ತು ಅದರ ಲಕ್ಷಣವು ಏನು ಎನ್ನುವುದನ್ನು ಅನೇಕರು ಕೇಳುತ್ತಾರೆ. ಯಾರು ಅಧಿಕಾರವನ್ನು ಉತ್ಪಾದನೆ ಮಾಡುತ್ತಾರೆ ಎನ್ನುವುದೂ ನಮ್ಮ ಮುಂದೆ ಇದೆ. ಯಾವುದು ನಮಗೆ ಅಧಿಕಾರಿಗಳು ಎಂದು ಅನಿಸುತ್ತಾರೆಯೋ ಅವರನ್ನು ನಾವು ಅವರ ಅಧಿಕಾರದ ಕಾರಣಕ್ಕೆ ಗೌರವಿಸುತ್ತೇವೆ. ಅಧಿಕಾರದ ಶಕ್ತಿಯು ಆ ಬಗೆಯದು. ಅದು ರೂಪಿಸಿದ ಕಾನೂನು ಅದನ್ನು ಹೆಚ್ಚು ಎಂದು ಹೇಳುತ್ತದೆ. ಅದರ ಅಧಿಕಾರವು ಕೂಡಾ ವಿಭಿನ್ನವಾದ ನೆಲೆಗಳನ್ನು ಹೇಳುತ್ತದೆ. ಅದಕ್ಕೆ ಅನೇಕ ಮಾದರಿಯ ಸಂಬಂಧಗಳು ಇರುತ್ತವೆ. ಸಮಾಜದಲ್ಲಿ ಅದರ ಪಾತ್ರವೂ ಅತ್ಯಂತ ದೊಡ್ಡದು. ಹಾಗೆ ನೋಡಿದರೆ ಅಧಿಕಾರವು ಸತ್ಯದ ಸಂಹಿತೆಗಳು ಒಂದು ನಿರ್ದಿಷ್ಟವಾದ ಪರಿಕಲ್ಪನೆಯನ್ನು ನಮ್ಮ ಮುಂದೆ ಇಡುತ್ತದೆ. ಸತ್ಯವು ಕೂಡಾ ಇದರ ಮೂಲಕವೇ ಕೆಲಸವನ್ನು ಮಾಡುತ್ತದೆ. ಎಲ್ಲಾ ಸಮಾಜಗಳಲ್ಲಿ ಇದು ಇರುತ್ತದೆ. ಅಧಿಕಾರದ ಜೊತೆಗೆ ಯಾವುದೇ ಸಂಬಂಧವನ್ನು ಹೊಂದದೆ ನಾವು ಇರಲಾರೆವು.'

ಅಧಿಕಾರ ಎನ್ನುವುದು ಅದರದೇ ಉದ್ದ ಮತ್ತು ಅಗಲವನ್ನು ಹೊಂದಿರುತ್ತದೆ. ಅದರದೇ ಆದ ಕ್ರಿಯೆಯನ್ನು ಕೂಡಾ ರಚನೆ ಮಾಡುತ್ತದೆ. ಅದು ನಮಗೆ ಕೆಲವು ಸತ್ಯಗಳನ್ನು ಹೇಳಲು ಒಂದು ಒತ್ತಾಯವನ್ನು ಹೇರುತ್ತದೆ. ಸತ್ಯವೇ ಅತ್ಯಂತ ಅಗತ್ಯವೆಂದು ಪ್ರತಿಪಾದಿಸುತ್ತದೆ. ಯಾವುದು ಅಧಿಕಾರದ ಪ್ರಮಾಣ ಎಂದು ಕೇಳಿದರೆ ನಮಗೆ ಸಿಗುವುದು ದಾಖಲೆಗಳು ಮಾತ್ರವೇ. ಅದು ನಮಗೆ ಕೇಳುವುದು ಕೆಲವು ಪ್ರಶ್ನೆಗಳನ್ನು ಮಾತ್ರವೇ. ಅದರಲ್ಲಿ ಅನುಮಾನವು ಇಲ್ಲ. ಆಗ ನಾವು ಅದಕ್ಕೆ ಬೇಕಾದ ಪುರಾವೆಗಳನ್ನು ಒದಗಿಸಬೇಕಾಗುತ್ತದೆ. ಅಧಿಕಾರವು ಉತ್ಪಾದಿತವಾಗುತ್ತದೆ. ಸತ್ಯವೂ ಉತ್ಪಾದಿತವಾಗುತ್ತದೆ. ಆದ್ದರಿಂದ ಸತ್ಯದ ಜೊತೆಗೆ ಒಂದು ಸಂಕಥನವು ಉಂಟಾಗುತ್ತದೆ. ನಿಯಮಗಳ ಜೊತೆಗೆ ಒಂದು ಮಾತುಕತೆಯು ಪ್ರಾರಂಭವಾಗುತ್ತದೆ. ಅಷ್ಟೇ ಅಲ್ಲ ಅಧಿಕಾರವು ರೂಪಿಸುವ ಕಾನೂನು ಈ ದೃಷ್ಟಿಯಿಂದ ಅತ್ಯಂತ ಮಹತ್ವದ್ದೂ ಹೌದು. ವಾಸ್ತವವಾಗಿ ಹಕ್ಕು ಮತ್ತು ಕರ್ತವ್ಯವನ್ನು ಹೇಳುವುದು ಕೂಡಾ ಇದುವೇ. ಆದರೆ ಇಲ್ಲಿ ಹಕ್ಕನ್ನು ಅದು ಯಾಕೆ ಹೇಳುತ್ತದೆ ಎಂದರೆ ಅದರ ಮೂಲಕ ವ್ಯಕ್ತಿಗೆ ನಿಶ್ಚಿತವಾದ ಸ್ಥಾನಮಾನವನ್ನು ನೀಡುತ್ತದೆ. ಅದರ ಜೊತೆಗೆ ವ್ಯಕ್ತಿಯು ಹೇಗೆ ಒಂದು ನಾಗರಿಕವಾದ ಸಮಾಜದಲ್ಲಿ ವ್ಯವಹಾರವನ್ನು ಮಾಡಬೇಕು

ಎಂದು ನಿರೂಪಿಸುವುದು ಅಧಿಕಾರವೇ. ಆದ್ದರಿಂದ ಇಲ್ಲಿ ಸರಕಾರಗಳು ಹೇಗೆ ನಿರ್ವಹಣೆ ಮಾಡುತ್ತವೆ ಎನ್ನುವುದೂ ಇಲ್ಲಿ ಗಮನಿಸಬೇಕಾದ ವಿಚಾರವೂ ಆಗಿದೆ.

ಇಲ್ಲಿ ಮತ್ತೊಂದು ಸಂಗತಿಯನ್ನು ನೋಡಬೇಕು: ಈ ಜಗತ್ತಿನಲ್ಲಿ ಎಷ್ಟೆಲ್ಲಾ ಕಾನೂನುಗಳು ಇವೆ. ಒಂದು ಎರಡು ಎಂದು ಅವುಗಳನ್ನು ವರ್ಗೀಕರಿಸಲು ಸಾಧ್ಯವೇ ಇಲ್ಲ. ಗ್ರೀಕರ ನ್ಯಾಯ ಮತ್ತು ರೋಮನ್ ಕಾನೂನು ಇತ್ಯಾದಿ. ಮಧ್ಯಯುಗ ಅನೇಕ ಕಾನೂನುಗಳನ್ನು ರೂಪಿಸಿದ್ದು ಕೂಡಾ ನಿಜ. ಅದರಲ್ಲಿ ಇತಿಹಾಸವೂ ಇತ್ತು. ಕೆಲವು ಮಾರ್ಗದರ್ಶನ ಸೂತ್ರವನ್ನು ಅದು ಹೊಂದಿತ್ತು. ಅದನ್ನು ಅನಂತರದ ಕಾನೂನುಗಳು ಮುಂದುವರಿಸಿದವು. ಅದರ ಅನಂತರ ಅನೇಕ ಕಾನೂನುಗಳು ಪುನರ್ ರಚನೆಯಾದವು. ಆದರೆ ಪ್ರಭುತ್ವವನ್ನು ರೂಪಿಸಿದ್ದು ಸತ್ಯ. ಪ್ರಭುತ್ವವು ಅಧಿಕಾರವನ್ನು ತನಗೆ ಬೇಕಾದ ರೀತಿಯಲ್ಲಿ ನಿರ್ವಚನ ಮಾಡಿತು. ಇದರಲ್ಲಿ ನ್ಯಾಯಾಂಗ ಎನ್ನುವುದು ಒಂದು ವ್ಯವಸ್ಥೆ ಮಾತ್ರ. ಅದರಲ್ಲಿ ಕಾನೂನು ಎನ್ನುವುದು ನಮಗೆ ಒಂದು ಭಾಗ. ಆದರೆ ಕಾನೂನು ಎನ್ನುವುದು ನಮಗೆ ನಿಯಂತ್ರಣವಾಗಿರುತ್ತದೆ. ಪಶ್ಚಿಮ ಕಾನೂನು ಅಂಗೀಕಾರವನ್ನು ಮಾಡಿಕೊಳ್ಳುವಾಗ ಅದು ಅನೇಕ ರೂಪಾಂತರವನ್ನು ಮಾಡಿತ್ತು. ಅದರಲ್ಲಿ ಕೆಲವು ಅತ್ಯಂತ ಸಾಮಾನ್ಯವಾದ ನಿಯಮಗಳೂ ಇವೆ.

ಒಂದು ಅಂಶವನ್ನು ನಾವು ಇಲ್ಲಿ ನೋಡಬೇಕು: ಅರಸುತನ ಎನ್ನುವುದು ಒಂದು ವ್ಯವಸ್ಥೆ ಎಂದು ಅಂಗೀಕಾರವಾದರೆ ರಾಜನು ಹೇಳಿದ್ದೂ ಒಂದು ಕಾನೂನು ಆಗುತ್ತದೆ. ಅದರಲ್ಲಿ ಅವನ ವೈಯಕ್ತಿಕವಾದ ತೀರ್ಮಾನವಾದರೆ ಆಗ ಅದರ ಅರ್ಥವು ಬೇರೆಯಾಗುತ್ತದೆ. ಕಾನೂನು ಮತ್ತು ಅದರ ವ್ಯವಸ್ಥೆ ಎನ್ನುವುದು ನಮಗೆ ಬಂಧನವಾಗುವುದು ಆಗ ಭಿನ್ನವಾಗುತ್ತದೆ. ರಾಜನು ತನಗೆ ಬೇಕಾದ ತೀರ್ಪನ್ನು ನೀಡುತ್ತಾನೆ. ಅದರ ಜೊತೆಗೆ ಅವನಿಗೆ ಸಹಾಯವನ್ನು ಮಾಡುವವರು ಅವನ ಮಂತ್ರಿಮಂಡಲ. ಅದರಲ್ಲಿ ರಾಜ ಮತ್ತು ಅವನ ಅಧಿಕಾರವು ತನ್ನ ಪರಿಕರವನ್ನು ಬಳಸುವಾಗ ತನ್ನದೇ ಆದ ಒಂದು ನಿರ್ಣಯವನ್ನು ಹೊಂದುತ್ತದೆ. ಅದರಲ್ಲಿ ಎರಡು ಮಾತು ಇಲ್ಲ. ಅಧಿಕಾರವು ಇಲ್ಲಿ ನಿರಂಕುಶವಾಗಿರುತ್ತದೆ. ಹಾಗೆಂದು ರಾಜ ಮತ್ತು ಅವನ ಅಧಿಕಾರವು ಸ್ವಂತವಾಗಿತ್ತು ಎಂದು ಭಾವಿಸುವುದು ಸರಿಯಾದ ಕ್ರಮವಲ್ಲ. ರಾಜನು ಬದಲಾದಾಗ ಅವನು ನಿರ್ಣಯ ಮಾಡುವ ಕ್ರಮಗಳು ಕೂಡಾ ಬದಲಾದವು. ತಂತ್ರಗಳು ಬದಲಾಗುತ್ತವೆ ಅದೇ ರೀತಿಯಲ್ಲಿ ಶಿಕ್ಷೆ ಮತ್ತು ಅದರ ವಿಧಾನವು ಭಿನ್ನವಾಗುತ್ತವೆ. ಯಾವಾಗ ಯಜಮಾನಿಕೆಯು ತನಗೆ ಬೇಕಾದ ಒಂದು ಮುಖವಾಡವನ್ನು ಧರಿಸುತ್ತದೆಯೋ ಆಗ ಅದರ ಅರ್ಥವು ಬೇರೆಯಾಗುತ್ತದೆ. ಈವತ್ತು ಕೋರ್ಟುಗಳು ನಮಗೆ ಕಾನೂನು ಮತ್ತು ಶಿಕ್ಷೆಯನ್ನು

ವಿಧಿಸುವಾಗ ಅದು ಯಜಮಾನಿಕೆಯನ್ನು ಹೇಗೆ ಅನ್ವಯವನ್ನು ಮಾಡುವುದು ಬರೀ ಒಂದು ಭಾವನೆಯನ್ನು ಆಧರಿಸಿಕೊಂಡು ಎಂದು ಭಾವಿಸುವುದು ಸರಿಯಲ್ಲ. ನ್ಯಾಯ ಎನ್ನುವುದು ನಮಗೆ ನೀತಿ ಸಂಹಿತೆಯು ಆಗುತ್ತದೆಯೋ ಇಲ್ಲವೋ ಎನ್ನುವುದು ಈವತ್ತು ನಮಗೆ ಅತ್ಯಂತ ಮುಖ್ಯವಾದ ಒಂದು ಪ್ರಶ್ನೆ. ಮಧ್ಯಯುಗದ ಕಾನೂನು ಹೇಗೆ ಇತ್ತು ಮತ್ತು ಅದರ ಪರಿಣಾಮವು ಏನಾಗಿತ್ತು ಎನ್ನುವುದು ನಮಗೆ ಅರ್ಥವಾಗಬೇಕು. ಆಗ ಯಜಮಾನಿಕೆಯು ಬೇರೆ ಇತ್ತು. ಅದರಲ್ಲಿ ಒಂದು ಕ್ರೌರ್ಯವೂ ಇತ್ತು. ಅದರ ಜೊತೆಗೆ ಅದು ಅನೇಕ ರೀತಿಯ ಕೆಡುಕುಗಳನ್ನು ಹೊಂದಿತ್ತು. ಅಷ್ಟೇ ಅಲ್ಲ ಅದು ಕೆಲವು ಗುಪ್ತವಾದ ಅಂಶಗಳನ್ನು ಹೊಂದಿದ್ದವು. ಪ್ರಭುತ್ವ ಮತ್ತು ಅದರ ಶಕ್ತಿಯು ಹೇಗೆ ಇತ್ತು ಮತ್ತು ಅದರ ಸ್ವರೂಪವು ಏನು ಎನ್ನುವುದನ್ನು ಆಗ ಬೇರೆ ಥರ ವ್ಯಾಖ್ಯಾನ ಮಾಡಲಾಗಿತ್ತು ಎನ್ನುವುದೂ ಅಷ್ಟೇ ಸತ್ಯ. ರಾಜನು ಕೇಂದ್ರವಾದರೆ ಆಗ ಜನರು ಮತ್ತು ಅವರ ನಡೆಗಳು ಬೇರೆ ಇರುತ್ತವೆ. ಸ್ಥಳ, ಅಧಿಕಾರ ಮತ್ತು ಸಮಾಜದ ಸ್ವರೂಪಗಳು ಇದನ್ನು ಹೇಳಿದವು. ನಮಗೆ ಮತ್ತು ಜೀವನಕ್ಕೆ ಹಾಗೂ ಪ್ರಭುತ್ವಕ್ಕೆ ಒಂದು ಅರ್ಥದಲ್ಲಿ ಸರಿಯಾದ ಹೊಂದಾಣಿಕೆಯು ಇಲ್ಲ ಎಂದು ಫುಕೋ ಹೇಳುತ್ತಾನೆ. (ಸೊಸೈಟಿ ಮಸ್ಟ್ ಬಿ ಡಿಪೆಂಡೆಂಟಿಡ್) ಹತ್ತೊಂಬತ್ತನೆಯ ಶತಮಾನದ ತರುವಾಯ ನಮ್ಮನ್ನು ಬೇರೆ ಮಾದರಿಯ ಪ್ರಭುತ್ವವು ಆಳಲು ಶುರು ಮಾಡಿತು. ಮನುಷ್ಯನ ಜೀವನ ಮತ್ತು ಅದರ ನಿರ್ವಹಣೆಯ ಸ್ವರೂಪವು ಬದಲಾಯಿತು ಎಂದು ಹೇಳುತ್ತಾನೆ.

ಯಾವುದು ನಮ್ಮ ಹಕ್ಕುಗಳು ಮತ್ತು ಯಾವುದು ನಮ್ಮ ಇರುವಿಕೆಯನ್ನು ನಿಯಂತ್ರಣ ಮಾಡುತ್ತವೆ ಎನ್ನುವುದು ಅತ್ಯಂತ ಮುಖ್ಯ. ಹಾಗೆ ನೋಡಿದರೆ ನಮ್ಮ ಹಕ್ಕುಗಳು ಮತ್ತು ನಮ್ಮ ಮೇಲೆ ನಡೆಯುತ್ತಿರುವ ನಿಯಂತ್ರಣಗಳು ಒಂದೇ ಮಾದರಿಯಲ್ಲಿ ಇರುತ್ತದೆ ಎಂದು ಅರ್ಥವಲ್ಲ. ಯಜಮಾನಿಕೆಯನ್ನು ಉಳಿಸಿಕೊಳ್ಳಲುಬೇಕಾದ ಪರಿಕರವನ್ನು ಅದು ಹೊಂದಿರುತ್ತದೆ. ಪ್ರಭುತ್ವವು ತನಗೆ ಅಗತ್ಯವಾದ್ದನ್ನು ಚಾಲ್ತಿಗೆ ತರುತ್ತದೆ. ಪ್ರಭುತ್ವದ ಪ್ರಮುಖವಾದ ಒಂದು ಪರಿಕರವು ಕಾನೂನು ನಿರ್ವಹಣೆಯಲ್ಲಿ ಇದೆ. ಅದನ್ನು ನಾವು ಅನೇಕ ಸಂದರ್ಭದಲ್ಲಿ ಸ್ಥಳೀಯತೆಯಲ್ಲಿ ಕೂಡಾ ನೋಡಬಹುದು. ಸಂಸ್ಥೆಗಳ ಮೂಲಕ ಗ್ರಹಿಸಬಹುದು. ಕಾನೂನನ್ನು ಚಾಲ್ತಿಗೆ ತರಲು ಅದು ಮಧ್ಯವರ್ತಿಗಳನ್ನು ರಚನೆ ಮಾಡುತ್ತದೆ. ಯಾವುದು ಈ ರಚನೆಗಳ ನಿಜವಾದ ಅಂತಃಸ್ಸತ್ವ ಎನ್ನುವುದು ಮಾತ್ರವೇ ಇಲ್ಲಿ ಮುಖ್ಯ. ಮನುಷ್ಯನು ಹೇಗೆ ವ್ಯವಹಾರವನ್ನು ಮಾಡಬೇಕು ಮತ್ತು ಅವನು ಹೇಗೆ ಇರಬೇಕು, ನಾಗರಿಕರ ಜೊತೆಗೆ ಅವನು ಹೇಗೆ ವರ್ತನೆ ಮಾಡಬೇಕು ಎನ್ನುವುದನ್ನು ಪ್ರಭುತ್ವವು ಹೇಳುತ್ತದೆ. ಒಂದು ಅರ್ಥದಲ್ಲಿ ಪ್ರಭುತ್ವವೇ ಅನೇಕ ನಿರ್ಧಾರಗಳನ್ನು ಮಾಡುತ್ತದೆ ಎನ್ನುವುದೂ ನಿಜ.

ಯಜಮಾನಿಕೆ ಎನ್ನುವುದು ಒಂದು ಅರ್ಥದಲ್ಲಿ ಸಮೂಹಕ್ಕೆ ಅನ್ವಯವಾಗುತ್ತದೆ. ಒಂದು ಇನ್ನೊಂದನ್ನು ನಿಯಂತ್ರಣ ಮಾಡುವುದು ಇಲ್ಲಿ ಅತ್ಯಂತ ಮುಖ್ಯ. ಈ ನಿಯಂತ್ರಣವು ತನ್ನದೇ ಆದ ಒಂದು ಬಲೆಯನ್ನು ನೇಯುತ್ತದೆ. ಇದನ್ನು ನಾವು ಕೇವಲ ದೇಹ ಮತ್ತು ಅದರ ನಿಯಂತ್ರಣ ಎಂದು ಭಾವಿಸಬೇಕಾಗಿಲ್ಲ. ಅಧಿಕಾರ ಮತ್ತು ಅದರ ಕ್ರಿಯೆಗಳನ್ನು ನಾವು ನೇರವಾಗಿ ಅಂಗೀಕರಿಸುತ್ತೇವೆ ಎಂದು ಅರ್ಥವಲ್ಲ. ಅದು ಅನೇಕ ರೀತಿಯ ಕೊಂಡಿಯನ್ನು ಹೊಂದಿರುತ್ತದೆ. ಹಾಗಿದ್ದರೆ ಅಧಿಕಾರವು ಹೇಗೆ ಮುಂದುವರಿಯುತ್ತದೆ ಎಂದು ಕೇಳಿದರೆ ಅದರ ಉತ್ತರವು ಅತ್ಯಂತ ಸುಲಭ ಎಂದು ಭಾವಿಸಬೇಕಾಗಿಲ್ಲ. ಅದು ಅನೇಕ ಸಂದರ್ಭದಲ್ಲಿ ವ್ಯಕ್ತಿಯ ಮೂಲಕವೂ ಹೆಚ್ಚು ಚಲಾವಣೆಗೆ ಗುರಿಯಾಗಬಹುದು. ಹೀಗೆ ಚಲಾವಣೆಯಾಗುವ ಸಂದರ್ಭದಲ್ಲಿ ವ್ಯಕ್ತಿಯು ಗುರಿಯೂ ಆಗುತ್ತಾನೆ. ಮೂಲತಃ ವ್ಯಕ್ತಿ ಮತ್ತು ಅವನ ದೇಹವೂ ಅನೇಕ ರೀತಿಯು ಅಧಿಕಾರವನ್ನು ಹೊಂದಿರುತ್ತದೆ. ಅಧಿಕಾರ ಎನ್ನುವುದು ಒಂದು ಬಗೆಯ ಅಭಿವ್ಯಕ್ತಿಯೂ ಹೌದು. ಅದರಲ್ಲಿ ಕೆಲವು ಲಕ್ಷಣವು ಇರುವುದು ನಿಜ. ಅದರ ಜೊತೆಗೆ ಒಮ್ಮೊಮ್ಮೆ ಅಧಿಕಾರ ಎನ್ನುವುದು ಸ್ಥಳಾಂತರವು ಆಗುತ್ತದೆ. ಯಜಮಾನನಾಗುವುದು ಅಂದರೆ ಅದರಲ್ಲಿ ಬೇರೆ ಬೇರೆ ಚಹರೆಗಳು ಇರುತ್ತವೆ. ಅಧಿಕಾರವು ಸಂಜ್ಞೆಗಳು, ಅದು ದೇಹದ ಒಂದು ಅಭಿವ್ಯಕ್ತಿ, ಅದು ಒಂದು ಬಗೆಯ ಸಂಕಥನವೂ ಆಗಿರುತ್ತದೆ. ವ್ಯಕ್ತಿಯು ತನ್ನ ಅಧಿಕಾರವನ್ನು ವಿಸ್ತಾರ ಮಾಡಲು ಯತ್ನವನ್ನು ಮಾಡುತ್ತಾನೆ. ಯಾವುದು ತನ್ನ ಅಧಿಕಾರವು ಆಗಿದೆಯೋ ಅದನ್ನು ವ್ಯಕ್ತಿಯು ಸೂಚಿಸುವಾಗ ಅದರಲ್ಲಿ ಒಂದು ಸಮಾಜದ ಅಂಶವೂ ಇರುತ್ತದೆ. ಆದರೆ ಈಗ ಇಲ್ಲಿ ಇನ್ನೊಂದು ಪ್ರಕ್ರಿಯೆ ನಡೆಯುತ್ತದೆ. ನಾವು ಇದನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಬೇಕು: ತಂತ್ರಜ್ಞಾನ ಎನ್ನುವುದು ಹೇಗೆ ಮುಂಚೂಣಿಗೆ ಬಂದಿದೆ ಮತ್ತು ಅದರ ಪರಿಣಾಮವಾಗಿ ನಾವು ಹೇಗೆ ಅದರ ಅಡಿಯಾಳಾಗಿದ್ದೇವೆ. ಅಧಿಕಾರವು ಹೇಗೆ ತಂತ್ರಜ್ಞಾನವನ್ನು ಬಳಸುತ್ತದೆ ಮತ್ತು ಅದರಲ್ಲಿ ಯಾವ ಅಂಶಗಳು ಸೇರಿವೆ ಎಂದು ನೋಡಬೇಕು. ಅಧಿಕಾರವು ನಮಗೆ ತಂತ್ರವೂ ಹೌದು. ಅದರ ಜೊತೆಗೆ ಅದು ಒಂದು ಆಟವೂ ಹೌದು. ಕೆಲವು ಸಂದರ್ಭದಲ್ಲಿ ಒಂದು ಸಂವಾದಿಯಾದ ಪಾತ್ರವನ್ನು ವಹಿಸುತ್ತದೆ. ಇದು ಈವತ್ತು ಒಂದು ಜಾಗತಿಕವಾದ ಸಂಗತಿಯೂ ಹೌದು. ಹದಿನಾರು ಮತ್ತು ಹದಿನೇಳನೆಯ ಶತಮಾನದಲ್ಲಿ ಬೂರ್ಜ್ವಾವರ್ಗವು ಆಳುವ ವರ್ಗದ ಪ್ರಾತಿನಿಧಿಕ ರೂಪವೂ ಆದವು. ಆಗಲೇ ಹುಚ್ಚುತನದ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಬಂದವು. ಯಾರನ್ನು ನಾವು ಹುಚ್ಚರು ಎಂದು ಹೇಳುತ್ತೇವೆಯೋ ಅವರು ಕೈಗಾರಿಕೆಗೆ ಹೆಚ್ಚು ಉಪಯುಕ್ತವಾಗಿಲಿಲ್ಲ. ಅದೇ ಬೂರ್ಜ್ವಾವರ್ಗವು ತನ್ನ ಹಿತಾಸಕ್ತಿಗಾಗಿ ಅನೇಕವನ್ನು ಜಾರಿಗೆ ತಂದಿತು.

ವಾಸ್ತವವಾಗಿ ಈವತ್ತು ಕೈಗಾರಿಕೆ ಮತ್ತು ಅದರ ಶಕ್ತಿಯು ಬೇರೆಯಾಗಿದೆ. ಹಾಗೆಂದು ಹದಿನಾರು ಮತ್ತು ಹದಿನೇಳನೆಯ ಶತಮಾನದಲ್ಲಿ ಇದರ ಸ್ವರೂಪವು ಬೇರೆ ಇತ್ತು ಎನ್ನುವುದೂ ಅಷ್ಟೇ ಸತ್ಯ. ವಾಸ್ತವವಾಗಿ ಇದು ನಮಗೆ ಬೇರೆ ಅರ್ಥವನ್ನು ಸೂಚಿಸಿದೆ. ಅದನ್ನು ಹೀಗೆ ಹೇಳಬಹುದು: ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ವ್ಯಕ್ತಿ ಮತ್ತು ಅವನ ದೇಹದ ಚರ್ಚೆಗಳು ಭಿನ್ನವಾದವು. ದೇಹವನ್ನು ನಾವು ಈವತ್ತು ಹೇಗೆ ನೋಡಿಕೊಂಡಿದ್ದೇವೆ ಎನ್ನುವುದು ಒಂದು ನೆಲೆಯಾದರೆ ಮತ್ತೊಂದು ನೆಲೆಯು ನಾವು ನಮ್ಮ ದೇಹವನ್ನು ನೋಡಿದ ಚರಿತ್ರೆಯು ಯಾವುದು ಎಂದು ಗ್ರಹಿಸುವುದು. ಇದು ನಮಗೆ ಅತ್ಯಂತ ಅಗತ್ಯ. ದೇಹ ಎನ್ನುವುದು ನಮಗೆ ಉತ್ಪಾದನೆಗೆ ಇರುವ ಒಂದು ಮಹತ್ವದ ದಾರಿ ಎನ್ನುವುದೂ ನಿರ್ಧಾರವಾದದ್ದು ಈ ಕಾಲದಲ್ಲಿ. ದೇಹ ಕೆಲಸ ಮತ್ತು ಅದರಿಂದ ಉಂಟಾಗುವ ಲಾಭ ಎನ್ನುವುದು ಒಂದು ವಿಶಿಷ್ಟವಾದ ಪರಿಕಲ್ಪನೆಯಾಗಿತ್ತು. ಆಗಿನ ಬೂರ್ಜ್ವಾವರ್ಗದ ತಾತ್ವಿಕತೆಯು ಹೇಗೆ ಇತ್ತು ಎಂದರೆ ಅದು ಒಂದು ಹಂತದಲ್ಲಿ ಮನುಷ್ಯ ಮತ್ತು ಅವನ ಲೈಂಗಿಕವಾದ ಬಯಕೆಯನ್ನು ಅದು ಪ್ರಚೋದನೆ ಮಾಡತೊಡಗಿತು.

ಉತ್ಪಾದನೆ ಮತ್ತು ಉತ್ಪಾದನೆ ರಹಿತ ಎನ್ನುವುದು ಹೇಗೆ ಕೆಲಸವನ್ನು ಮಾಡುತ್ತದೆ ಹಾಗೂ ಅದು ಜನ ಸ್ವಂತಿಕೆಯನ್ನು ಹೇಗೆ ನಾಶ ಮಾಡುತ್ತದೆ ಎಂದು ನೋಡಲು ನಮಗೆ ಆ ಕಾಲದ ಇತಿಹಾಸವು ಅತ್ಯಂತ ಮುಖ್ಯವಾಗುತ್ತದೆ. ಆದರೆ ನಮಗೆ ಇರುವ ಮತ್ತೊಂದು ಪ್ರಮುಖವಾದ ಅಂಶವೆಂದರೆ ಉತ್ಪಾದನೆಗೆ ಮತ್ತು ಮನುಷ್ಯರಿಗೆ ಇರುವ ಅತ್ಯಂತ ಮುಖ್ಯವಾದ ಒಂದು ಸಂಬಂಧ. ಜನರು ಹೆಚ್ಚು ಇದ್ದಷ್ಟು ಕೆಲಸವನ್ನು ಮಾಡಲು ಜನರು ಸಿಗುತ್ತಾರೆ ಮತ್ತು ಹೆಚ್ಚು ಜನರು ಇದ್ದರೆ ಅವರಿಗೆ ನಾವು ಕೊಡುವ ಕೂಲಿಯೂ ಅತ್ಯಂತ ಕಡಿಮೆಯಾಗುತ್ತದೆ. ಆದರಿಂದ ಹೆಚ್ಚು ಜನರನ್ನು ಉತ್ಪಾದನೆ ಮಾಡಬೇಕು. ಹೆಚ್ಚು ಜನರನ್ನು ಉತ್ಪಾದನೆ ಮಾಡುವುದು ಅಂದರೆ ಲೈಂಗಿಕವಾದ ಸಂಬಂಧಗಳು ಹೆಚ್ಚು ಆಗಬೇಕು. ಅದರ ಜೊತೆಗೆ ಜನರು ಮತ್ತು ಅವರ ಸಂಖ್ಯೆಗೆ ಯಾವುದೇ ಮಿತಿಯು ಇರಬಾರದು. ಉತ್ಪಾದನೆ ಮತ್ತು ಅದರ ಸಾಧ್ಯತೆ ಎನ್ನುವುದು ಮುಂದುವರಿಸಬೇಕಾದರೆ ಅದರಲ್ಲಿ ಜನರ ಸಂಖ್ಯೆಗೆ ಪ್ರಾಶಸ್ತ್ಯ ಇರಬೇಕಾಗುತ್ತದೆ. ಅದನ್ನು ಸಾಧಿಸಲು ಜನರಿಗೆ ಲೈಂಗಿಕವಾದ ತರಬೇತಿಯನ್ನು ನೀಡಬೇಕಾಯಿತು. ಯಾವುದು ಬೂರ್ಜ್ವಾ ಯಜಮಾನಿಕೆ ಆಗಿದೆಯೋ ಅದರ ರೂಪವನ್ನು ನಾವು ನಿರ್ದಿಷ್ಟವಾಗಿ ಒಂದು ವರ್ಗದ ಮೂಲಕ ನಾವು ಗುರುತಿಸಲು ಸಾಧ್ಯವಿದೆ. ಲೈಂಗಿಕತೆಗೆ ಮತ್ತು ಉತ್ಪಾದನೆಗೆ ಹೇಗೆ ಸಂಬಂಧವು ಕಲ್ಪಿತವಾಯಿತು ಎನ್ನುವುದು ನಮಗೆ ಇದರಿಂದ ತಿಳಿಯುತ್ತದೆ. ಚರಿತ್ರೆ ಮತ್ತು ಆದರ ಆಯಾಮಗಳು ಹೇಗೆ ಒಂದು ನಿರ್ದಿಷ್ಟವಾದ ಕೆಲಸವನ್ನು ಮಾಡಿತು ಎನ್ನುವುದಕ್ಕೆ ಇದು ಒಂದು ದೃಷ್ಟಾಂತವಾಗಿದೆ.

ಆದರೆ ಇದರ ಜೊತೆಗೆ ಬೇರೆ ಬೇರೆ ಒತ್ತಡಗಳು ಹೇಗೆ ಕೆಲಸವನ್ನು ಮಾಡಿದವು ಎನ್ನುವುದನ್ನು ಫುಕೋ ವಿವರಿಸುತ್ತಾನೆ. ಲೈಂಗಿಕ ಸಂಬಂಧಗಳು ಮತ್ತು ಅವುಗಳ ಚಾರಿತ್ರಿಕವಾದ ಒತ್ತಡಗಳು ಹೇಗೆ ಕೆಲಸವನ್ನು ಮಾಡುತ್ತದೆ ಎನ್ನುವುದು ನಮಗೆ ಇದರಿಂದ ತಿಳಿಯುತ್ತದೆ. ಬೂರ್ಜ್ವಾಗಳು ಒಂದು ಹಂತದಲ್ಲಿ ಪ್ರಭುತ್ವದ ಪರವಾಗಿ ಹೇಗೆ ಕೆಲಸವನ್ನು ಮಾಡಿತು ಎಂದೂ ಇದರ ಮೂಲಕ ನಾವು ತಿಳಿಯಬೇಕು. ಅಧಿಕಾರ ಮತ್ತು ಅದರ ಪರಿವರ್ತನೆಗೆ ಇದು ಒಂದು ಕಾರಣವಾಗಿದೆ. ಹಾಗೆ ನೋಡಿದರೆ ಬೂರ್ಜ್ವಾವರ್ಗ ಮತ್ತು ಅದರ ಹಿತಾಸಕ್ತಿಗಳು ಬೇರೆ ಇರುತ್ತವೆ. ಆ ವರ್ಗ ಮತ್ತು ಅದರ ಹಿತಾಸಕ್ತಿಯು ಹೇಗೆ ಇರುತ್ತದೆ ಎಂದರೆ ಅದರಲ್ಲಿ ಒಂದು ನಿರ್ದಿಷ್ಟವಾದ ಆಶಯವು ಇರುವುದೂ ಇಲ್ಲ. ಸಮಾಜವು ನಮಗೆ ಕೆಲವು ವಿಧಿಗಳನ್ನು ಯಾಕೆ ಹೇರುತ್ತಾರೆ ಎಂದೂ ನೋಡಬೇಕು. ಬೂರ್ಜ್ವಾವರ್ಗವು ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದು ಹೇಗೆ ಎಂದು ಯೋಚನೆಯನ್ನು ಮಾಡುತ್ತದೆ. ಒಂದು ಹಂತದಲ್ಲಿ ಅದು ನಮಗೆ ವಿವಿಧ ನಿಯಮಾವಳಿಯನ್ನು ರೂಪಿಸಿತು ಇದು ಹೇಗೆ ಮುಂದುವರಿಯಿತು ಎಂದರೆ ಒಂದು ಹಂತದಲ್ಲಿ ಕುಟುಂಬ ಮತ್ತು ಅದರ ಸ್ವರೂಪವನ್ನು ನಿರ್ಧಾರ ಮಾಡಿತು. ಈವತ್ತು ಕುಟುಂಬ ಎನ್ನುವುದು ನಮಗೆ ಒಂದು ವ್ಯವಸ್ಥೆಯು ಆಗಿದೆ. ಲೈಂಗಿಕ ಕಾಮನೆ ಎನ್ನುವುದಕ್ಕೂ ಅದರದೇ ಆದ ಕೆಲವು ತಾರ್ಕಿಕತೆಯು ಇರುತ್ತದೆ. ಕುಟುಂಬ ಎನ್ನುವುದು ಹೊಸದಾದ ಮೌಲ್ಯವನ್ನು ಅಂಗೀಕರಿಸಿದಾಗ ಅದರ ಅರ್ಥವು ಬೇರೆಯಾಗುತ್ತದೆ. ಅಧಿಕಾರ ಮತ್ತು ಅದರ ತಂತ್ರಗಳು ಹೇಗೆ ಬದಲಾದವೋ ಅದೇ ರೀತಿಯಲ್ಲಿ ಒಂದು ರಾಜಕೀಯ ಮತ್ತು ಪ್ರಭುತ್ವ ಎನ್ನುವ ಪರಿಕಲ್ಪನೆಗೆ ಕುಟುಂಬ ಮತ್ತು ಅದರ ಸದಸ್ಯರು, ಸಮಾಜದಲ್ಲಿ ವೈದ್ಯರು, ಕಾನೂನು ತಜ್ಞರು, ಶೈಕ್ಷಣಿಕವಾದ ವ್ಯವಸ್ಥೆ ಮತ್ತು ಪಾಲಕರು ಸಹಾಯವನ್ನು ಮಾಡಿದರು. ಆದರೆ ಇಲ್ಲಿ ನಾವು ವೈದ್ಯಕೀಯ ಕ್ಷೇತ್ರ ಎನ್ನುವುದು ಹೇಗೆ ಮುಖ್ಯವಾದ ಶಿಸ್ತು ಆಯಿತು ಎಂದೂ ಗಮನಿಸಬೇಕು. ಅದಕ್ಕೂ ಲೈಂಗಿಕ ಸಂಬಂಧಗಳಿಗೂ ಒಂದು ಕೊಂಡಿಯು ಇದೆ. ಒಂದು ವ್ಯವಸ್ಥೆಯ ಒಳಗೆ ಹೇಗೆ ಪ್ರವೇಶ ಮಾಡುತ್ತದೆ ಎನ್ನುವುದು ಅತ್ಯಂತ ಕುತೂಹಲದಾಯಕ.

ಈವತ್ತು ಜಾಗತಿಕ ವಿದ್ಯಮಾನವು ಬದಲಾಗಿದೆ. ಅದರಿಂದಾಗಿ ಈವತ್ತು ನಮ್ಮ ಮುಂದೆ ಇರುವ ಆಧುನಿಕ ಅಧಿಕಾರವು ಪಲ್ಲಟವಾಗುತ್ತದೆ. ಪ್ರಭುತ್ವಕ್ಕೆ ಎರಡು ಮಾದರಿಯ ಅಧಿಕಾರವು ಇರುವುದು ನಮ್ಮ ಗಮನಕ್ಕೆ ಬರುತ್ತಿದೆ. ಒಂದು ಶಿಸ್ತುಬದ್ಧವಾದ ಅಧಿಕಾರ. ಅದು ನಮ್ಮ ಮೇಲೆ ಒತ್ತಡವನ್ನು ಹೇರುತ್ತದೆ. ಅದಕ್ಕಾಗಿ ಅದು ತನ್ನದೇ ಆದ ತಂತ್ರವನ್ನು ಹೂಡುತ್ತದೆ. ಮತ್ತೊಂದು ನೇರವಾದ ಭೌತಿಕವಾದ ಅಧಿಕಾರ. ಇದರಲ್ಲಿ ದೈಹಿಕವಾದ ನಿಯಂತ್ರಣವು ಇರುತ್ತದೆ. ಇದನ್ನು ಮೊದಲು ಹೇಳಲಾಗಿದೆ. ಪ್ರಭುತ್ವದ ಕಣ್ಣಿನಲ್ಲಿ ಮನುಷ್ಯರು ಒಂದು ಪ್ರಭೇದ ಮಾತ್ರ. ಇದರಲ್ಲಿ

ಮನುಷ್ಯನು ಸಮಾಜದಲ್ಲಿ ಹೇಗೆ ಜೀವಿಸಬೇಕು, ಯಾವ ರೀತಿಯಲ್ಲಿ ವರ್ತಿಸಬೇಕು ಎಂದು ಹೇಳಲಾಗುತ್ತದೆ.

ಯಾವುದು ನಮಗೆ ಅತ್ಯಂತ ಮುಖ್ಯವಾದ ಒಂದು ಆರ್ಥಿಕವಾದ ಪರಿವರ್ತನೆ ಎಂದು ಅನಿಸುತ್ತದೆಯೋ ಅದರ ಹಿಂದೆ ಅನೇಕ ವ್ಯವಹಾರಗಳು ಇರುತ್ತವೆ. ನಮ್ಮ ಬೆನ್ನ ಹಿಂದೆ ಇರುವ ಆರ್ಥಿಕತೆಗೆ ಬೇರೆ ಬೇರೆ ಆಯಾಮಗಳು ಇರುತ್ತವೆ ಎನ್ನುವುದೂ ಅಷ್ಟೇ ಸತ್ಯ. ಯಾರು ಈ ಸನ್ನಿವೇಶದಲ್ಲಿ ಲಾಭವನ್ನು ಮಾಡುತ್ತಾರೆ ಎನ್ನುವುದು ಮುಖ್ಯ. ಆದ್ದರಿಂದ ಒಂದು ವರ್ಗವು ಲಾಭವನ್ನು ಮಾಡುತ್ತದೆ. ಮತ್ತೊಂದು ವರ್ಗವು ಲಾಭವು ಇಲ್ಲದೆ ನರಳುತ್ತದೆ. ಇಷ್ಟೇ ಅಲ್ಲ. ಬೂರ್ಜ್ವಾವರ್ಗವು ಜನರನ್ನು ವರ್ಗೀಕರಣವನ್ನು ಮಾಡುತ್ತದೆ. ಅದರಲ್ಲಿ ಅದು ಕೆಲವರನ್ನು ಮಾನ್ಯ ಮಾಡುತ್ತದೆ. ಮತ್ತೆ ಕೆಲವರನ್ನು ಅದು ದೂರ ಇಡುತ್ತದೆ. ಲಾಭಕ್ಕೆ ಬೇಕಾದ ಜನರನ್ನು ಅದು ಆಯ್ಕೆ ಮಾಡುತ್ತದೆ. ಅವರಿಗೆ ಕೆಲವು ಕೌಶಲವನ್ನು ಹೇಳುತ್ತದೆ. ಅದನ್ನು ಅವರು ಅನುಸರಿಸಬೇಕಾಗುತ್ತದೆ. ಹುಚ್ಚರನ್ನು, ಅಸಹಜ ವ್ಯಕ್ತಿಗಳನ್ನು ಅದು ದೂರ ಇಡುತ್ತದೆ. ಆದರೆ ಕುತೂಹಲದಾಯಕ ಅಂಶವೆಂದರೆ ಅದಕ್ಕೂ ಅಸಹಜ ವ್ಯಕ್ತಿಗಳ ಬಗ್ಗೆ ಆಸಕ್ತಿಯು ಇರುತ್ತದೆ. ಅವರನ್ನು ಅದು ನಿಯಂತ್ರಣ ಮಾಡುತ್ತದೆ. ವ್ಯಕ್ತಿ ಮತ್ತು ಅವನ ಬಯಕೆಗಳನ್ನು ಪ್ರಭುತ್ವವು ನಿಯಂತ್ರಣ ಮಾಡುವುದು ಅಷ್ಟೇ ಸತ್ಯ. ಅಧಿಕಾರ ಮತ್ತು ಅದರ ವಿವಿಧ ರೂಪಗಳು ಜೊತೆಗೆ ಅಸ್ತಿತ್ವದಲ್ಲಿ ಇರುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವು ಇದೆ- ಅದನ್ನು ನಾವು ಹೀಗೆ ಗುರುತಿಸಬಹುದು. ಪಾರ್ಲಿಮೆಂಟ್ ಮಾದರಿಯ ಅಧಿಕಾರ ಮತ್ತು ಅದರ ಸ್ವರೂಪವು ಒಂದು ಥರ ಇರುತ್ತದೆ. ವಂಶಾಡಳಿತದ ಪ್ರಭುತ್ವವು ಮತ್ತೊಂದು ಮಾದರಿಯನ್ನು ಹೇಳುತ್ತದೆ. ಅವುಗಳ ರೂಪಗಳು ಬೇರೆ ಬೇರೆ. ಮಾದರಿಗಳು ಬದಲಾಗುತ್ತಾ ಹೋದಂತೆ ಅವುಗಳ ಕಾರ್ಯ ಮತ್ತು ಅವುಗಳ ಸ್ವರೂಪವು ಬೇರೆಯಾಗುತ್ತದೆ. ಅವುಗಳು ರೂಪಿಸುವ ಜ್ಞಾನ ರೂಪಗಳೂ ಬೇರೆಯಾಗುವ ಸಾಧ್ಯತೆಯು ಇರುತ್ತದೆ. ಆದರೆ ಇಲ್ಲಿ ನೋಡಬೇಕಾದ್ದು ಯಾವ ಅಧಿಕಾರವು ಯಾವುದನ್ನು ಸೂಚಿಸುತ್ತದೆ ಎನ್ನುವುದು ಮಾತ್ರವೇ. ಅವುಗಳ ತಾತ್ವಿಕತೆಗೆ ವಿವಿಧ ಆಯಾಮಗಳು ಇರುವುದರಿಂದ ಅವುಗಳನ್ನು ನಾವು ಪರಿಕರಗಳ ಹಿನ್ನೆಲೆಯಲ್ಲಿಯೂ ನೋಡಬೇಕಾಗುತ್ತದೆ. ಪ್ರಭುತ್ವವು ತನಗೆ ಅಗತ್ಯವೇ ಇಲ್ಲದ ಜ್ಞಾನವನ್ನು ನಿರಾಕರಿಸುತ್ತದೆ. ಮನುಷ್ಯನ ಚರಿತ್ರೆಯಲ್ಲಿ ಮೂರು ಅಂಶಗಳು ಅತ್ಯಂತ ಮುಖ್ಯ. ಹುಟ್ಟು, ಮಕ್ಕಳನ್ನು ಮಾಡು ಮತ್ತು ಸಾಯುವುದು. ಇದು ಫುಕೋ ಹೇಳುವ ಬಯೋಪಾಲಿಟಿಕ್ಸ್‌ಗೆ ಸಂಬಂಧ ಪಡುತ್ತದೆ.

ಅಧಿಕಾರ ಮತ್ತು ನಮ್ಮ ಭೌತಿಕವಾದ ರೂಪಗಳಿಗೆ ಒಂದು ಸಂಬಂಧವು ಇದೆ. ಸ್ಥಳ ಮತ್ತು ಅಗತ್ಯಗಳು ಇದರಲ್ಲಿ ಮುಖ್ಯವಾದ ಅಂಶಗಳಾಗಿವೆ. ಆದರೆ ಇಲ್ಲಿ

ಇದರ ಇನ್ನೊಂದು ಮುಖವನ್ನು ನಾವು ಗಮನಿಸಬೇಕು: ಯಾವುದನ್ನು ನಾವು ರೋಮನ್ ಕಾನೂನು ಎಂದು ಹೇಳುತ್ತೇವೆಯೋ ಅದರ ಕೇಂದ್ರವಿರುವುದು ರಾಜಸತ್ತೆಯಲ್ಲಿ. ಏಕಛತ್ರಾಧಿಪತ್ಯವನ್ನು ಅದು ಸೂಚಿಸುತ್ತದೆ. ಅದರ ಚಾರಿತ್ರಿಕವಾದ ರೂಪವು ಆ ಬಗೆಯದು. ಆದರೆ ಜಮೀನ್ದಾರಿ ಪದ್ಧತಿಯಲ್ಲಿ ಆಳುವುದು ಮತ್ತು ಆಳಿಸಿಕೊಳ್ಳುವುದು ಎನ್ನುವುದಕ್ಕೆ ವ್ಯತ್ಯಾಸವೂ ಇದೆ. ನಾವು ಇದನ್ನು ಹದಿನಾರು ಮತ್ತು ಹದಿನೇಳನೆಯ ಶತಮಾನದ ಚರಿತ್ರೆಯಲ್ಲಿ ನೋಡಬಹುದು. ಧರ್ಮ ಮತ್ತು ಪ್ರಭುತ್ವವು ಜೊತೆಗೆ ಸೇರಿದರೆ ಅದರ ರೂಪವು ಬೇರೆಯಾಗುತ್ತದೆ. ಪಶ್ಚಿಮದಲ್ಲಿ ಕ್ಯಾಥೋಲಿಕ್ ಮತ್ತು ಪ್ರಾಟಸ್ಟೆಂಟ್‌ರ ಚರಿತ್ರೆಯು ಇದನ್ನು ಹೇಳುತ್ತದೆ. ಪ್ರಾಟಸ್ಟೆಂಟ್‌ರ ಉದಾರತೆಗೆ ಈ ದೃಷ್ಟಿಯಿಂದ ಮಹತ್ವವು ಇದೆ. ಅದಕ್ಕೆ ಕೆಲವು ವಿಶಿಷ್ಟವಾದ ಪರಿಭಾಷೆಗಳೂ ಇದ್ದವು ಎನ್ನುವುದೂ ಸತ್ಯ. ಫ್ರೆಂಚಿನಲ್ಲಿ ಪಾರ್ಲೆಲ್ ಎನ್ನುವುದು ಪಾರ್ಲಿಮೆಂಟ್ ಎನ್ನುವುದನ್ನು ಹೇಳುತ್ತದೆ. ಅದು ಮಾತನ್ನು ಸೂಚಿಸುತ್ತದೆ. ಮಾತಾಡುವುದಕ್ಕೆ ಇರುವ ಜಾಗ ಎನ್ನುವುದು ಇದರ ಅರ್ಥವಾದರೂ ಕಾಲದ ಅನಂತರ ಇದರ ಸ್ವರೂಪವು ಬದಲಾಯಿತು. ಜಮೀನ್ದಾರಿ ಪದ್ಧತಿಯಲ್ಲಿ ಮನುಷ್ಯರ ನಡುವಣ ಸಂಬಂಧವು ಇತ್ಯಾತ್ಮಕವಾಗಿತ್ತು. ಅದನ್ನು ನಾವು ನಿರ್ದಿಷ್ಟವಾಗಿಯೂ ನೋಡಲು ಸಾಧ್ಯವಿದೆ. ಅದರ ಲಕ್ಷಣಗಳು ಬೇರೆಯಾಗಿವೆ. ಅದು ತನ್ನ ಅಧಿಕಾರವನ್ನು ನಿರೂಪಣೆ ಮಾಡುವುದು ಬೇರೆ ಥರ. ಆದರೆ ಬಂಡವಾಳವಾದ ಮತ್ತು ಆ ಮಾದರಿಯ ಸಮಾಜದಲ್ಲಿ ವ್ಯಕ್ತಿ ಮತ್ತು ಸಮಾಜದ ಸಂಬಂಧಗಳು ಬೇರೆ ಥರ ಇರುತ್ತವೆ.

ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಹೊಸ ರೀತಿಯ ಅಧಿಕಾರದ ಕಲ್ಪನೆಯು ಬಂತು. ಅದಕ್ಕೆ ಕೆಲವು ಹೊಸದಾದ ಪರಿಕರಗಳು ಬಂದವು. ಆಧುನಿಕ ಅಧಿಕಾರ ಮತ್ತು ಅದರ ಸಿದ್ಧಾಂತಗಳು ಈ ದೃಷ್ಟಿಯಲ್ಲಿ ಬೇರೆಯಾಗಿವೆ. ಅದರಲ್ಲಿ ಹೊಸದಾದ ಕೆಲವು ನಿಯಮಗಳೂ ಬಂದವು. ಮನುಷ್ಯ ಮತ್ತು ಅವನ ದೇಹದ ಕಲ್ಪನೆಗಳು ಬದಲಾದವು. ಇದರಿಂದ ಭೂಮಿ ಮತ್ತು ಮನುಷ್ಯರ ಸಂಬಂಧಗಳ ನಿರ್ವಚನವೂ ಬೇರೆಯಾದವು. ಇಲ್ಲಿ ಪ್ರಭುತ್ವವು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿತು. ಮನುಷ್ಯ ಮತ್ತು ಭೂಮಿ ಎನ್ನುವ ಕಲ್ಪನೆಯೂ ಇಲ್ಲಿ ಭಿನ್ನವಾದದ್ದು ಅತ್ಯಂತ ಕುತೂಹಲಕಾರಕವಾದ ಅಂಶವೂ ಹೌದು. ಕಾಲ ಮತ್ತು ಕಾರ್ಮಿಕ, ವಸ್ತು ಮತ್ತು ಸಂಪತ್ತು, ಎನ್ನುವ ಪರಿಕಲ್ಪನೆಗಳಲ್ಲಿ ವ್ಯತ್ಯಾಸವು ಕಾಣಿಸಿತು. ಭೂಮಿ ಮತ್ತು ಕಂದಾಯ ಎನ್ನುವುದರ ಸಂಬಂಧದಲ್ಲಿ ಭಿನ್ನತೆಯು ಕಂಡು ಬಂತು. ದೈಹಿಕ ಅಧಿಕಾರ ಮತ್ತು ಮಾನಸಿಕವಾದ ಅಧಿಕಾರ ಎನ್ನುವುದು ಬೇರೆ ಬೇರೆ ರೂಪಗಳು. ಇದೇ ಕಾಲದಲ್ಲಿ ಪ್ರಭುತ್ವ ಮತ್ತು ಅದರ ವ್ಯಾಖ್ಯೆಗಳು ಭಿನ್ನವಾದದ್ದು


ಇಲ್ಲಿ ಉಲ್ಲೇಖನೀಯ. ಅದರ ಜೊತೆಗೆ ಅಧಿಕಾರ ಮತ್ತು ಅದರ ಸ್ಥಾನಾಂತರಗಳು ಹೇಗೆ ಬದಲಾದವೋ ಅದೇ ರೀತಿಯಲ್ಲಿ ಅಧಿಕಾರ ಮತ್ತು ಅದರ ತಾತ್ವಿಕತೆಯೂ ಬದಲಾಗುತ್ತದೆ.

ಆಧುನಿಕ ಅಧಿಕಾರ ಸಂಪತ್ತನ್ನು ಗಮನಿಸಿದ ಬಗೆಯು ಬೇರೆಯಾಗುತ್ತದೆ. ಅದು ಕೆಲವು ನಂಬಿಕೆಗಳನ್ನು ಹುಟ್ಟು ಹಾಕುತ್ತದೆ. ಅದರ ಜೊತೆಗೆ ಅದು ಕೆಲವನ್ನು ಹೆಚ್ಚು ಮುಖ್ಯವೆಂದು ಹೇಳುತ್ತದೆ. ಹತ್ತೊಂಬತ್ತನೆಯ ಶತಮಾನದ ಅನಂತರ ಪ್ರಭುತ್ವದ ಕುರಿತಾದ ನಮ್ಮ ನಂಬಿಕೆಗಳು ಬೇರೆಯಾದವು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಭುತ್ವದ ಚಹರೆಗಳು ಬದಲಾದದ್ದು ಅತ್ಯಂತ ಗಮನಾರ್ಹ. ಮತ್ತೊಂದು ವಾದವು ಆಗ ಚಾಲ್ತಿಗೆ ಬಂತು: ಒಂದು ಸಮಾಜದಲ್ಲಿ ಶಿಸ್ತು ಬರಬೇಕಾದರೆ ಅಲ್ಲಿ ಪ್ರಭುತ್ವವು ಇರಬೇಕು. ನ್ಯಾಯ ಸಮ್ಮತವಾದ ಒಂದು ವ್ಯವಸ್ಥೆಯು ಬಂದಾಗ ಮಾತ್ರವೇ ಒಂದು ಸಮಾಜವು ಸರಿಯಾಗಿ ಇರಬಲ್ಲುದು. ಇದರಿಂದ ನ್ಯಾಯಾಂಗ ಮತ್ತು ಅದರ ವ್ಯವಸ್ಥೆಯು ಪ್ರಬಲವಾಯಿತು. ಶಿಸ್ತು ಎನ್ನುವುದು ಹೇಗೆ ಒಂದು ಮಹತ್ವದ ಹೆಜ್ಜೆಯಾಯಿತು ಎನ್ನುವುದನ್ನು ನೋಡಲು ನಮಗೆ ಚರಿತ್ರೆಯು ಒಂದೇ ಆಧಾರವಾಗಿದೆ. ಪ್ರಭುತ್ವವು ಸಮಾಜ ಮತ್ತು ಅದರ ನಿಯಂತ್ರಣಕ್ಕೆ ಬೇಕಾದ ಒಂದು ಯತ್ನವನ್ನು ಮಾಡುತ್ತದೆ. ಅದಕ್ಕೆ ಶಾಸನಾಂಗವು ಅತ್ಯಂತ ಮುಖ್ಯವಾಗಿತ್ತು. ಇದರ ಜೊತೆಗೆ ಈ ಸಮಸ್ಯೆಗಳಿಗೆ ಬೇರೆ ಆಯಾಮವೂ ಇದೆ. ಶಿಸ್ತು ಎನ್ನುವುದು ಮನುಷ್ಯನಿಗೆ ಅಗತ್ಯವೇ ಅಥವಾ ಮನುಷ್ಯನು ತನ್ನ ಪಾಡಿಗೆ ತಾನು ಬದುಕುವುದು ಸಾಧ್ಯವೇ ಎನ್ನುವುದು ಇಲ್ಲಿ ಅತ್ಯಂತ ಮುಖ್ಯವಾದ ಒಂದು ಪ್ರಶ್ನೆ. ಇದನ್ನು ಹತ್ತೊಂಬತ್ತನೆಯ ಶತಮಾನದ ಚರಿತ್ರೆಯು ಕೇಳಿದೆ.

ಸಮಾಜ ಮತ್ತು ಪ್ರಭುತ್ವ ಎನ್ನುವುದು ಜೊತೆಗೆ ಹೋದರೆ ಆಗ ಅದರ ಅರ್ಥವನ್ನು ಸಾಮಾನ್ಯನಾದ ಮನುಷ್ಯನು ನಿರ್ಧಾರ ಮಾಡುವುದು ಕಷ್ಟ. ಪ್ರಭುತ್ವವು ಕಾನೂನು ರೂಪಿಸುವಾಗ ಅದು ಎಷ್ಟರ ಮಟ್ಟಿಗೆ ಬಹುತ್ವವನ್ನು ಕಾಪಾಡುತ್ತದೆ ಎನ್ನುವುದೂ ಒಂದು ಪ್ರಶ್ನೆ ಆಧುನಿಕ ಸಮಾಜದಲ್ಲಿ ಪ್ರಭುತ್ವ ಕೆಲವು ಆಟಗಳನ್ನು ಆಡುತ್ತದೆ ಎನ್ನುವುದೂ ನಿಜ. ಈ ಅರ್ಥದಲ್ಲಿ ಶಿಸ್ತು ಎನ್ನುವುದೂ ನಮಗೆ ಒಂದು ಪರಿಕಲ್ಪನೆಯನ್ನು ರೂಪಿಸುತ್ತದೆ. ಇದರಿಂದ ಮನುಷ್ಯ ಮತ್ತು ಅವನ ಜ್ಞಾನ ಮಾದರಿಗಳು ಅದಕ್ಕೆ ಅನುಗುಣವಾಗಿ ವಿಶಿಷ್ಟವಾದ ಸಂಕಥನವನ್ನು ರೂಪಿಸುತ್ತದೆ. ಒಂದು ಹಂತದಲ್ಲಿ ಶಿಸ್ತು ಕೂಡಾ ಮನುಷ್ಯರನ್ನು ವಸಾಹತುವನ್ನಾಗಿ ಮಾಡುತ್ತದೆ. ನಿಜವಾದ ನಮ್ಮ ಜೀವನ ಎಂದರೆ ಶಿಸ್ತುಬದ್ಧವಾಗಿ ರೂಪಿಸುವುದು ಎಂದು ಭಾವಿಸುತ್ತೇವೆ. ಆದ್ದರಿಂದಲೇ ನಮಗೆ ಒಂದು ಒತ್ತಡವು ಉಂಟಾಗುತ್ತದೆ ಎನ್ನುವುದು ಸತ್ಯ. ಆದರೆ ಒಂದು ವಿಷಯವನ್ನು ಅರ್ಥಮಾಡಿಕೊಳ್ಳಬೇಕು:

ಒತ್ತಡವು ನಮಗೆ ಬರೀ ಕಾನೂನು ಮಾತ್ರವೇ ಅಲ್ಲ, ಅದು ನಮ್ಮನ್ನು ನಾಶ ಮಾಡುವುದೂ ಹೌದು. ಪ್ರಭುತ್ವದ ಕಾನೂನು ಎಲ್ಲಿಯವರೆಗೆ ಮುಂದುವರಿದಿದೆ ಎಂದರೆ ಜನನ ನಿಯಂತ್ರಣವು ಅದರ ಪಾಲಿಸಿಗಳಲ್ಲಿ ಒಂದು. ಆದರೆ ಸಾವು ಎನ್ನುವುದು ಖಾಯಂ ಆಗಿರುತ್ತದೆ.

1. ಫುಕೋ – ದ ಆರ್ಕಿಯಾಲಜಿ ಆಫ್ ನಾಲೆಜ್
2. ಫುಕೋ – ಹಿಸ್ಟ್ರಿ ಆಫ್ ಸೆಕ್ಷುಯಾಲಟಿ
3. ಫುಕೋ – ಅಬ್‌ನಾರ್ಮಲ್
4. ಫುಕೋ – ದ ಆರ್ಡರ್ ಆಫ್ ಥಿಂಗ್ಸ್.



ನಾವು ಪಡೆದುಕೊಳ್ಳುವ ಜ್ಞಾನ ಮತ್ತು ಅದರ ದೃಷ್ಟಿಕೋನವು ನೀತಿಯನ್ನು ಸೂಚಿಸುತ್ತದೆ. ನಾವು ಪಡೆಯುವ ಜ್ಞಾನ ಮತ್ತು ನೀತಿಗಳು ನಮಗೆ ಬೇರೆ ಬೇರೆ ಬೋಧನೆಯನ್ನು ಮಾಡುತ್ತವೆ. ಹೇಗಿರಬೇಕು ಮತ್ತು ಹೇಗಿರಬಾರದು ಎಂದು ಹೇಳುತ್ತವೆ. ಹಾಗೆ ನೋಡುವುದಿದ್ದರೆ ಯಾವುದೇ ನೀತಿಯು ನಮಗೆ ಇನ್ನೊಬ್ಬನನ್ನು ಅರ್ಥ ಮಾಡಿಕೊಳ್ಳಲು ಅವಕಾಶವನ್ನು ಮಾಡುತ್ತದೆ. ಜ್ಞಾನ ಮತ್ತು ಶಿಸ್ತು ಇರುವುದೇ ನಮ್ಮ ಜೀವನವನ್ನು ರೂಪಿಸಲು. ಜ್ಞಾನವೇ ನಮಗೆ ಕೆಲವು ವಿವೇಕಗಳನ್ನು ಸೂಚಿಸುತ್ತದೆ. ಮತ್ತು ಅದುವೇ ನಮಗೆ ಸ್ವಯಂ ವಿಮರ್ಶೆಗೆ ಕಾರಣವಾಗುತ್ತದೆ. ಈ ಜಗತ್ತಿನಲ್ಲಿ ಯಾವುದೇ ನೈತಿಕತೆಯು ಒಬ್ಬ ವ್ಯಕ್ತಿಯಿಂದ ರೂಪುಗೊಂಡಿಲ್ಲ. ನೀತಿಯನ್ನು ನೋಡುವಾಗ ನಾವು ಅದೂ ಕೂಡಾ ಒಂದು ಸನ್ನಿವೇಶದಿಂದ ರಚಿತವಾಗಿದೆ ಎಂದೇ ಭಾವಿಸಬೇಕಾಗುತ್ತದೆ. ಜೀವನದ ಒಳ್ಳೆಯ ಅಂಶಗಳು ನಮ್ಮ ಜೀವನ ಮತ್ತು ಅದರ ಹವ್ಯಾಸಗಳ ಪರಿಣಾಮಗಳೇ ಆಗಿವೆ. ಅವುಗಳು ನಮ್ಮ ಮನಸ್ಸು ಮತ್ತು ಸನ್ನಿವೇಶಗಳನ್ನು ಸೂಚಿಸುತ್ತದೆ. ನಮ್ಮ ಚಟುವಟಿಕೆಗಳು ನಮ್ಮ ಮನೋಸ್ಥಿತಿಯ ರೂಪಗಳೂ ಹೌದು. ನಮ್ಮ ಕ್ರಿಯಾಶೀಲತೆಗೂ ನಮ್ಮ ಜೀವನ ನಮ್ಮ ನೈತಿಕ ಗ್ರಹಿಕೆಗೂ ಒಂದು ಸಂಬಂಧವಿದೆ. ಅದು ಒಂದನ್ನು ಬಿಟ್ಟು ಮತ್ತೊಂದು ಇರುವುದು ಸಾಧ್ಯವೇ ಇಲ್ಲ. ನಮ್ಮ ಕ್ರಿಯಾಶೀಲತೆ ಮತ್ತು ಅದರ ಪರಿಣಾಮಗಳೂ ಜೀವನದ ಅರ್ಥವಂತಿಕೆಯನ್ನು ಸೂಚಿಸುತ್ತದೆ. ನೈತಿಕತೆ ಮತ್ತು ಅದರ ಪರಿಣಾಮಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವನ್ನು ನಿಯಂತ್ರಿಸುತ್ತದೆ. ಒಂದು ವಾಸ್ತವವನ್ನು ನಾವು ನಮ್ಮ ಜೀವನದಲ್ಲಿ ಹೇಗೆ ನೋಡುತ್ತೇವೆ ಮತ್ತು ಅದರ ಸ್ವರೂಪವು ಯಾವ ಬಗೆಯದು ಎನ್ನುವುದೂ ಕುತೂಹಲದ ಪ್ರಶ್ನೆಗಳೇ ಆಗಿವೆ. ಅದು ಜ್ಞಾನ ಮತ್ತು ವಾಸ್ತವದ ಸಮಸ್ಯೆಯೂ ಹೌದು. ನಮ್ಮ ದೈನಂದಿನ ಜೀವನ ಮತ್ತು ನೈತಿಕ ಚರಿತ್ರೆಗೆ ಸಂಬಂಧವಿದೆ. ಯಾವುದೇ ನಿಜವಾದ ಅರಿವು ಇಲ್ಲದೇ ಹೋದರೆ ನಾವು ನಮ್ಮ ಜೀವನವನ್ನು ಸಮರ್ಥವಾಗಿ ಎದುರಿಸಲಾರೆವು. ಇದನ್ನು ಇಲ್ಲಿಯ ಲೇಖನಗಳು ಹೇಳುತ್ತವೆ.

ಪ್ರಗತಿ ಪ್ರಕಾಶನ

ISBN 978-81-979088-2-8

9 788197 908828 >